ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಶುಕ್ರವಾರ, 10 ಏಪ್ರಿಲ್ 2026
ಸಂಪುಟ 16, ಸಂಚಿಕೆ 16, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ಕದನ ವಿರಾಮ ಇನ್ನೂ ಅಸ್ಥಿರ

ಪುಟ ೩

ಕಿರುಸುದ್ದಿ

ಖುಷಿ ಸಾಧನೆ



◆**ಧಾರವಾಡ:** ಜನತಾ ಶಿಕ್ಷಣ ಸಮಿತಿಯ ಆರ್.ಎಸ್.ಎಚ್. ಪದವಿಪೂರ್ವ ಕಾಲೇಜಿನ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಖುಷಿ ಎಂ ಉಪಾಧ್ಯೆ ಶೇ.89.67ರಷ್ಟು ಅಂಕಗಳ ಸಾಧನೆ ಮಾಡಿದ್ದಾಳೆ. ಇವಳ ಸಾಧನೆಗೆ ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಪ್ರಾಚಾರ್ಯೆ ಭಾರತಿ ಶಾನಭಾಗ, ಮಹಾವೀರ ಉಪಾಧ್ಯೆ ಹರ್ಷವ್ಯಕ್ತಪಡಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

◆**ಹುಬ್ಬಳ್ಳಿ:** ಕುಂದಗೋಳ ಉಪ-ವಿಭಾಗದ ವ್ಯಾಪ್ತಿಗೆ ಬರುವ ಕುಂದಗೋಳ ಮತ್ತು ಸಂಶಿ ಶಾಖೆಗಳ ವ್ಯಾಪ್ತಿಯ 33 ಕೆ.ವಿ.ಎ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ 11 ಕೆ.ವಿ.ಎ ಮಾರ್ಗಗಳು ಹಾಗೂ 220 ಕೆ.ವಿ ಸ್ವೀಕರಣಾ ಕೇಂದ್ರ ಹುಬ್ಬಳ್ಳಿದಿಂದ ಹೊರಡುವ 33 ಕೆ.ವ್ಹಿ.ಎ ಮಾರ್ಗಗಳ 1 ನೇ ತ್ರೈಮಾಸಿಕ ತುರ್ತು ನಿರ್ವಹಣಾ ಕಾರ್ಯದ ನಿಮಿತ್ತ ಏ.10ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ. ಅಂದು ಬೆಳಗ್ಗೆ 10 ರಿಂದ ಸಂಜೆ 5ರ ವರೆಗೆ ಕುಂದಗೋಳ ಪಟ್ಟಣದ ಕುಡಿಯುವ ನೀರಿನ ಪ್ರದೇಶ, ಕುಂದಗೋಳ ಪಟ್ಟಣ ಮತ್ತು ಸುತ್ತಮುತ್ತಲಿನ ಪ್ರದೇಶ, ಯರಗುಪ್ಪಿ, ಮುಳ್ಳೊಳ್ಳಿ, ಚಿಕ್ಕನೆರ್ತಿ, ಹಿರೇನರ್ತಿ, ಬಸಾಪೂರ, ಬೆನಕನಹಳ್ಳಿ, ಚಾಕಲಬ್ಬಿ, ಕೊಂಕನಕೊರಹಟ್ಟಿ, ಅಲ್ಲಾಪೂರ, ಕಡಪಟ್ಟಿ, ಗುಡೇನಕಟ್ಟಿ, ಯರಿನಾರಾಯಣಪೂರ, ರೊಟ್ಟಿಗವಾಡ, ಎ.ಪಿ.ಎಂ.ಸಿ ಯಾರ್ಡ್, ಅಗ್ನಿಶಾಮಕದಳ, ಮಸಾರಿಪ್ಲಾಟ್, ದೇವನೂರು, ಬಿಳೇಬಾಳ, ಹಂಚಿನಾಳ, ಕುಬಿಹಾಳ, ಯಲಿವಾಳ, ಇನಾಮಕೊಪ್ಪ,ಬೆಟದೂರು,ಹೊಸಳ್ಳಿ, ಭರದ್ವಾಡ, ಕೊಡ್ಲಿವಾಡ, ಯರೇಬುದಿಹಾಳ, ಪಶುಪತಿಹಾಳ, ಹಿರೇಗುಂಜಳ, ಚಿಕ್ಕಗುಂಜಳ, ಭಾಗವಾಡ, ಚಿಕ್ಕಹರಕುಣಿ, ಹಿರೇಹರಕುಣಿ, ಭುತರ್ಲಫಟ್ಟ, ಭುಕೊಪ್ಪ, ನೆಲಗುಡ್ಡ, ಇಂಗಳಗಿ, ಹಿರೇಬುದಿಹಾಳ, ಮತ್ತಿಗಟ್ಟಿ, ಹನುಮನಹಳ್ಳಿ , ರಾಮಾಪುರ, ಸಂಶಿ ಗ್ರಾಮ,ಶಿರೂರ, ಕಮಡೊಳ್ಳಿ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಶ್ರೇಷ್ಠ ಸಾಧನೆ



◆**ಹುಬ್ಬಳ್ಳಿ:** ನಗರದ ಉಣಕಲ್ ಪ್ರದೇಶದಲ್ಲಿರುವ ಚೇತನ ಪಿಯು ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಶ್ರೇಷ್ಠ ಫಲಿತಾಂಶ ಗಳಿಸುವ ಮೂಲಕ ಅಭೂತಪೂರ್ವ ಸಾಧನೆ ಮಾಡಿರುವುದು ಹೆಮ್ಮೆಯ ವಿಷಯವಾಗಿದೆ. ವಿದ್ಯಾರ್ಥಿನಿ ವಿದ್ಯಾ ನೀಲಣ್ಣವರ ಅವರು ಶೇ.97.50 ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಗಳಿಸಿದ್ದಾರೆ. ಕಾರ್ತಿಕ್ ಗಾಣಿಗೇರ್ ಅವರು ಶೇ.97.16 ಅಂಕಗಳನ್ನು ಪಡೆದು ದ್ವಿತೀಯ ಸ್ಥಾನದಲ್ಲಿದ್ದಾರೆ. ರಾಜೇಶ್ವರಿ ಬುರ್ಜಿ ಅವರು ಶೇ.92.16 ಹಾಗೂ ರಿಜ್ವಾನಾ ಬಾನು ಆರಳಿಕಟ್ಟಿ ಅವರು ಶೇ.92.00 ಅಂಕಗಳನ್ನು ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆವಿದ್ಯಾರ್ಥಿಗಳು ವ್ಯವಹಾರ ಅಧ್ಯಯನ ಮತ್ತು ಸಂಖ್ಯಾಶಾಸ್ತ್ರ ವಿಷಯಗಳಲ್ಲಿ 100ಕ್ಕೆ 100 ಅಂಕಗಳನ್ನು ಪಡೆದು ವಿಶಿಷ್ಟ ಸಾಧನೆ ಮಾಡಿದ್ದಾರೆ. ಈ ಸಾಧನೆಗೆ ಸಂಸ್ಥೆಯ ಕಾರ್ಯದರ್ಶಿ ಡಾ. ವಿಶ್ವನಾಥ ಎಂ. ಕೊರವಿ, ಪ್ರಾಚಾರ್ಯರಾದ ಡಾ. ಅಶೋಕ್ ವಡಕಣ್ಣವರ, ಡಾ. ಕೆ.ಸಿ. ವಾಂಗಿ ಹಾಗೂ ಪಿಯುಸಿ ವಿಭಾಗದ ಮುಖ್ಯಸ್ಥೆ ಪ್ರೊ. ಸ್ವಾತಿ ಕ್ಯಾತಣ್ಣವರ ಹರ್ಷವ್ಯಕ್ತಪಡಿಸಿದ್ದಾರೆ.

ಬೈಕ್ ಕಳ್ಳತನ: ಬಂಧನ

◆**ಧಾರವಾಡ:** ನಗರದ ವಿವಿಧೆಡೆ ಬೈಕ್ ಕಳ್ಳತನ ಮಾಡುತ್ತಿದ್ದ ಆರೋಪಿ ಬಂಧಿಸಿದ ಧಾರವಾಡ ಶಹರ ಠಾಣೆ ಪೊಲೀಸರು, ಬಂಧಿತನಿಂದ ರೂ.2.35 ಲಕ್ಷ ಮೌಲ್ಯದ ಏಳು ಬೈಕ್ ವಶಕ್ಕೆ ಪಡೆದಿದ್ದಾರೆ. ಧಾರವಾಡದ ಕಮಲಾಪುರ ದ್ಯಾಮವ್ವನಗುಡಿ ಓಣಿ ನಿವಾಸಿ ಶಿವಾನಂದ ಅರ್ಜುನ ಮಾನೆ(33) ಬಂಧಿತ ಆರೋಪಿ. ಶಹರ ಠಾಣೆ ವ್ಯಾಪ್ತಿ ಎರಡು, ಉಪನಗರ ಠಾಣೆ ವ್ಯಾಪ್ತಿ ಒಂದು ಮತ್ತು ಇತರೆಡೆ ನಾಲ್ಕು ಬೈಕ್ ಕಳ್ಳತನ ಮಾಡಿದ್ದು ಆರೋಪಿ ಒಪ್ಪಿಕೊಂಡಿದ್ದಾನೆ. ಸದ್ಯ ಬಂಧಿತ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ನಿಧನ ಸುದ್ದಿ

ಸುರೇಶ ವೆರ್ಣೇಕರ



◆**ಹುಬ್ಬಳ್ಳಿ:** ದೇಶಪಾಂಡೆ ನಗರದ ದೈವಜ್ಞ ಸಮಾಜದ ಮಾಜಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಸದಸ್ಯ ಸುರೇಶ ಪುರುಷೋತ್ತಮ ವೆರ್ಣೇಕರ (88) ನಿಧನರಾದರು. ಮೃತರಿಗೆ ಪತ್ನಿ, ಪುತ್ರ ಹಾಗೂ ಮೂರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವಿದೆ.

ಸಂಜು ಸಾವಳಗಿ



◆ **ಹುಬ್ಬಳ್ಳಿ:** ಇಲ್ಲಿನ ಅರವಿಂದನಗರ ನಿವಾಸಿ ಸಂಜು ಮೋಹನ ಸಾವಳಗಿ (45) ಮಂಗಳವಾರ ನಿಧನರಾದರು. ಮೃತರಿಗೆ ತಾಯಿ, ಅಣ್ಣ, ಅಕ್ಕ, ತಂಗಿ ಸೇರಿದಂತೆ ಅಪಾರ ಬಂಧು ಬಳಗವಿದೆ.



ಕಲಘಟಗಿ: ಪಟ್ಟಣದ ಚಿತ್ರಗಾರ ಓಣಿಯಲ್ಲಿ, ಮನೆಯ ಹತ್ತಿರ ಆಟವಾಡುತ್ತಿದ್ದ ಸಂದರ್ಭದಲ್ಲಿ, ಸಿಕ್ಕ ದುಬಾರಿ ವೆಚ್ಚದ ಮೊಬೈಲ್ ಅನ್ನು ಸಮೃದ್ಧಿ ಶ್ರೀಧರ ಸಾಹುಕಾರ ಎಂಬ ಪುಟ್ಟ ಬಾಲಕಿ ಕಲಘಟಗಿ ಪೊಲೀಸ್ ಠಾಣೆಗೆ ಹಸ್ತಾಂತರಿಸಿದಳು. ಸಿಪಿಐ ಶ್ರೀಶೈಲ ಕೌಜಲಗಿ ಹಾಗೂ ಸಿಬ್ಬಂದಿ ಬಾಲಕಿಯ ಪ್ರಾಮಾಣಿಕತೆಯನ್ನು ಶ್ಲಾಘಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಖಂಡನೆ



◆**ಧಾರವಾಡ:** ರಾಜಕಾರಣದಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯ ಸಹಜ. ಆದರೆ ಬಿಜೆಪಿ ಹಾಗೂ ಆರೆಸ್ಸೆಸ್ ವಿಷಪೂರಿತ ಹಾವು ಎಂದು ಅಸಂವಿಧಾನಿಕ ಪದ ಬಳಸಿದ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಯನ್ನು ಬಿಜೆಪಿ ವಕ್ತಾರ ಮೋಹನ ರಾಮದುರ್ಗ ಖಂಡಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ಸಂಸತ್ತಿನ ಒಳಗೆ ಮತ್ತು ಹೊರಗೆ ಸಂಯಮದಿಂದ ವರ್ತಿಸಬೇಕು. ಬಿಜೆಪಿ ಮತ್ತು ಆರೆಸ್ಸೆಸ್ ವಿಷಪೂರಿತ ಹಾವು ಎಂಬ ಪದ ಬಳಕೆ ಅವರ ಘನತೆಗೆ ಶೋಭೆ ತರಲ್ಲ ಎಂದು ಹೇಳಿದ್ದಾರೆ. ಸರ್ಕಾರದ ಯೋಜನೆಗಳು ಹಾಗೂ ಸೈದ್ಧಾಂತಿಕ ನಿಲುವು ವಿಮರ್ಶಿಸುವ ಹಕ್ಕು ವಿಪಕ್ಷಕ್ಕಿದೆ. ಆದರೆ ಟೀಕಿಸುವ ಬರದಲ್ಲಿ ಸಿದ್ಧಾಂತ ಮರೆಯಬಾರದು. ಪ್ರಾಣಿಗಳಿಗೆ ಹೋಲಿಕೆ ಜತೆ ಹೀಯಾಳಿಸುವುದು ಕೆಳಮಟ್ಟದ ರಾಜಕಾರಣ ಸೂಚಿಸಲಿದೆ ಎಂದು ಎಚ್ಚರಿಸಿದ್ದಾರೆ.

ಬಿಜೆಪಿ ಒಂದು ರಾಷ್ಟ್ರೀಯ ಪಕ್ಷ ಹಾಗೂ ಆರೆಸ್ಸೆಸ್ ದೇಶಭಕ್ತಿ ಸಂಘಟನೆ. ಇಂಥ ಸಂಘಟನೆಗಳ ವಿರುದ್ಧ ಮಲ್ಲಿಕಾರ್ಜುನ ಖರ್ಗೆ ಅವರಿಂದ ಅಸಂವಿಧಾನಿಕ ಪದಗಳ ಬಳಕೆ ಸಲ್ಲ. ತಕ್ಷಣವೇ ಕ್ಷಮೆಯಾಚಿಸುವ ಜೊತೆ ತಮ್ಮ ಹೇಳಿಕೆ ಹಿಂಡೆಯುವಂತೆ ಆಗ್ರಹಿಸಿದ್ದಾರೆ.



ಕುಂದಗೋಳ: ಇಲ್ಲಿನ ಯಲ್ಲಮ್ಮ ದೇವಿ ಜಾತ್ರೆ ಹಾಗೂ ಪರಶುರಾಮ ದೇಗುಲ ನೂತನ ಗೋಪುರ ಲೋಕಾರ್ಪಣೆ ಮಹೋತ್ಸವ ಅಂಗವಾಗಿ ನಡೆದ ಧರ್ಮಸಭೆಯಲ್ಲಿ ಸಿಮೆಂಟ್ ಕಲಾ ಕೆಲಸಗಾರ ಮೈಲಾರಪ್ಪ ಮುಶಣ್ಣವರ್, ಗೌಂಡಿ ಮೇಸ್ತ್ರಿಗಳಾದ ಅಲ್ಲಾಸಾಬ್ ಕಳಿಮನಿ ಹಾಗು ರೆಹಮಾನಸಾಬ್ ಕಳ್ಳಿಮನಿ ಸೇರಿದಂತೆ ಅನೇಕರನ್ನು ಸನ್ಮಾನಿಸಲಾಯಿತು.

ಪಿಯುಸಿಯಲ್ಲಿ ವಿದ್ಯಾಕಾಶಿ ಉತ್ತಮ ಸಾಧನೆ

◆**ಧಾರವಾಡ:** ಕಳೆದ ಮಾರ್ಚ್ ತಿಂಗಳಲ್ಲಿ ನಡೆದ 2025-26ನೇ ಸಾಲಿನ ಪದವಿಪೂರ್ವ ಶಿಕ್ಷಣ ಇಲಾಖೆ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ವಿದ್ಯಾಕಾಶಿ ಧಾರವಾಡ ಜಿಲ್ಲೆ ರಾಜ್ಯ ಪಟ್ಟಿಯಲ್ಲಿ ಕಳೆದ ಬಾರಿಗಿಂತ ಒಂದು ಸ್ಥಾನ ಮೇಲಕ್ಕೇರಿದೆ.

ಕಳೆದ ವರ್ಷ ಶೇ.72.3ರಷ್ಟು ಸಾಧನೆ ಮಾಡಿ, 17ನೇ ಸ್ಥಾನದಲ್ಲಿದ್ದ ಧಾರವಾಡ ಜಿಲ್ಲೆಯು ಈ ಬಾರಿ ಶೇ.83.13ರಷ್ಟು (ಶೇ.11.1 ಹೆಚ್ಚಿನ) ಸಾಧನೆ ಮಾಡುವ ಮೂಲಕ 16ನೇ ಸ್ಥಾನಕ್ಕೆ ತೃಪ್ತಿಪಟ್ಟಿದೆ.

ವಿಜ್ಞಾನ ವಿಭಾಗದಲ್ಲಿ ಹುಬ್ಬಳ್ಳಿಯ ಪ್ರೇರಣಾ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿ ಚೈತ್ರ ರಡ್ಡೇರ 600ಕ್ಕೆ 596 ಅಂಕ ಪಡೆದು ವಿಜ್ಞಾನ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಹುಬ್ಬಳ್ಳಿಯ ಓರಿಯಂಟಲ್ ಕಾಲೇಜಿನ ವಿದ್ಯಾರ್ಥಿನಿ ಪ್ರಜ್ಞಾ ಹುರಳಿಕೊಪ್ಪಿ ಹಾಗೂ ವಿದ್ಯಾನಿಕೇತನ ಕಾಲೇಜಿನ ಸ್ಥಾವನ್ ಇನಾಮದಾರ ತಲಾ 595 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ. ಹುಬ್ಬಳ್ಳಿಯ ಬೇಸ್ ಪಿಯು ಕಾಲೇಜಿನ ಲಕ್ಷ್ಮೀ ಜ್ಯೋತಿ 593 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾಳೆ.

ವಾಣಿಜ್ಯ ವಿಭಾಗದಲ್ಲಿ ಹುಬ್ಬಳ್ಳಿಯ ಕಾಲೇಜುಗಳು ಪಾರಮ್ಯ ಪಡೆದಿದ್ದು, ಫಾತಿಮಾ ಕಾಲೇಜಿನ ಐನಾಜ್ ಅಥೋನಿ, ಕೆಎಲ್‌ಇ ವಾಣಿಜ್ಯ ಕಾಲೇಜಿನ ಹರ್ಷಿತಾ ಹಾಗೂ ಜೆಜೆಪಿಯು ಕಾಲೇಜಿನ ದಿವ್ಯ ಡಂಬಳ ತಲಾ 594 ಅಂಕ ಪಡೆದು ವಾಣಿಜ್ಯ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಚಿನ್ಮಯಿ ಪಿಯು ಕಾಲೇಜಿನ ಸಿದ್ಧಿ ಗೋಖಲೆ 592 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ.

ಕಲಾ ವಿಭಾಗದಲ್ಲಿ ಧಾರವಾಡ ಜೆಎಸ್ಸೆಸ್ ಕಲಾ ಕಾಲೇಜಿನ ಶ್ರಾವಣಿ ಪಾಟೀಲ 595 ಅಂಕ ಪಡೆದು ರಾಜ್ಯಕ್ಕೆ 2ನೇ ಸ್ಥಾನ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಕರ್ನಾಟಕ ಕಾಲೇಜಿನ ಲಾಲಯ್ಯ 592 ಅಂಕ ಪಡೆದು ದ್ವಿತೀಯ, ಸಾಧನಾ ತೋರಗಲ್‌ಮಠ 591 ಅಂಕ ಪಡೆದು ತೃತೀಯ ಹಾಗೂ ಕರ್ನಾಟಕ ಕಾಲೇಜಿನ ಅಪೂರ್ವ ಕರಡಿಗುದ್ದಿ 590 ಅಂಕ ಪಡೆದು 4ನೇ ಸ್ಥಾನ ಪಡೆದಿದ್ದಾರೆ.

> **ರಾಜ್ಯಮಟ್ಟದ 10 ಸ್ಥಾನದ ಫಲಿತಾಂಶ ಪಟ್ಟಿಯಲ್ಲಿ ಪ್ರಯತ್ನ ನಡೆಸಿತ್ತು. ಆದರೂ 16ನೇ ಸ್ಥಾನ ಪಡೆದು ಕಳೆದ ವರ್ಷಕ್ಕಿಂತ ಒಂದು ಸ್ಥಾನ ಮೇಲಕ್ಕೇರಿದೆ. ಮುಂದಿನ ವರ್ಷ ಈ ಪ್ರಯತ್ನ ಮತ್ತಷ್ಟು ಹೆಚ್ಚಿಸಲಿದೆ.**
> ■ ತೇಜಸ್ವಿನಿ ನಾರಾಯಣ

ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟ: ಶ್ರಾವಣಿ ಪ್ರಥಮ



◆**ಧಾರವಾಡ:** ಕಳೆದ ಮಾರ್ಚ್ ತಿಂಗಳಲ್ಲಿ ನಡೆದ 2025-26ನೇ ಸಾಲಿನ ಪದವಿಪೂರ್ವ ಶಿಕ್ಷಣ ಇಲಾಖೆಯ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು, ವಿದ್ಯಾಕಾಶಿ ಧಾರವಾಡ ಜಿಲ್ಲೆ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಕಲಾ ವಿಭಾಗದಲ್ಲಿ ಜೆಎಸ್ಸೆಸ್‌ನ ವಿದ್ಯಾರ್ಥಿನಿ ಶ್ರಾವಣಿ ಪಾಟೀಲ, ಕರ್ನಾಟಕ ಕಾಲೇಜಿನ ಲಾಲಯ್ಯ ಗುತ್ತೇದಾರ, ಆರ್.ಎನ್. ಶೆಟ್ಟಿ ಕಾಲೇಜಿನ ಸಾಧನಾ ತೋರಗಲ್‌ಮಠ ಜಿಲ್ಲೆಗೆ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದು ಕೀರ್ತಿ ತಂದಿದ್ದಾರೆ.

ಮೂಲತಃ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಮದರಕಿ ಗ್ರಾಮದ ನಿವಾಸಿ ಲಾಲಯ್ಯ 600 ಅಂಕಗಳಿಗೆ 592 ಅಂಕ ಪಡೆದು ಜಿಲ್ಲೆಗೆ ದ್ವಿತೀಯ ಬಂದಿದ್ದು, ಕನ್ನಡ, ಇತಿಹಾಸ, ಅರ್ಥಶಾಸ್ತ್ರ ಭೂಗೋಳಶಾಸ್ತ್ರ ವಿಷಯದಲ್ಲಿ 100 ಅಂಕಗಳು ಗಳಿಸಿದ್ದಾರೆ.

ಜಿಲ್ಲೆಗೆ ತೃತೀಯ ಸ್ಥಾನ ಪಡೆದ ಸರ್ಕಾರಿ ಪಿಯು ಕಾಲೇಜಿನ ವಿದ್ಯಾರ್ಥಿನಿ ಮತ್ತು ಅಮ್ಮಿನಬಾವಿಯ ಸಾಧನಾ ತೋರಗಲ್‌ಮಠ ಬಡತನದಲ್ಲಿ ಉತ್ತಮ ಸಾಧನೆ ಮಾಡಿದ್ದು, ಇವಳ ತಂದೆ ಎಪಿಎಂಸಿಯ ದಲಾಲ್ ಅಂಗಡಿಯಲ್ಲಿ ಕಾರಕೂನ್ ಕೆಲಸಗಾರ. ಸರ್ಕಾರಿ ಆದರ್ಶ ಶಾಲೆಯಲ್ಲಿ ಕಲಿತು ಪಿಯುಸಿಯಲ್ಲಿ 600 ಅಂಕಗಳಿಗೆ 591 ಅಂಕ ಪಡೆದಿದ್ದು, ಇತಿಹಾಸ, ರಾಜ್ಯಶಾಸ್ತ್ರದಲ್ಲಿ 100ಕ್ಕೆ 100 ಅಂಕ ಬಂದಿದ್ದು, ಕನ್ನಡ 98, ಇಂಗ್ಲಿಷ್ 95, ಅರ್ಥಶಾಸ್ತ್ರ 99 ಹಾಗೂ ಸಮಾಜಶಾಸ್ತ್ರ 99 ಅಂಕ ಪಡೆದಿದ್ದಾಳೆ.

> **ಯಾದಗಿರಿಯಿಂದ ಬಂದ ನಾನು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿಯೊಂದಿಗೆ ಪಿಯುಸಿ ಪರೀಕ್ಷೆ ಬರೆದಿದ್ದು, ಉತ್ತಮ ಫಲಿತಾಂಶ ಬಂದಿದೆ. ಐಎಎಸ್ ಆಗುವ ಕನಸ್ಸಿದೆ.**
> ■ ಲಾಲಯ್ಯ ಗುತ್ತೇದಾರ, ದ್ವಿತೀಯ ಸ್ಥಾನ

> **ತಂದೆಗೆ ಮೂರು ಜನ ಹೆಣ್ಣು ಮಕ್ಕಳು. ಅಪ್ಪನ ಕನಸಿನಂತೆ ನಾನು ರ್‍ಯಾಂಕ್ ಬಂದಿದ್ದು, ಎಲ್‌ಎಲ್‌ಬಿ ಮೂಲಕ ಸಮಾಜದ ಬಡಜನಕ್ಕೆ ಸಹಾಯ ಮಾಡುವ ಮಹದಾಸೆ ಹೊಂದಿದ್ದೇನೆ.**
> ■ ಸಾಧನಾ ತೋರಗಲ್‌ಮಠ, ತೃತೀಯ

ವಿಶ್ವ ಶಾಂತಿಗೆ ಅಹಿಂಸೆ ಅಸ್ತ್ರ



◆**ಧಾರವಾಡ:** ಪ್ರಸ್ತುತ ಜಗತ್ತಿನಲ್ಲಿ ಅಶಾಂತಿ ತಾಂಡವಾಡುತ್ತಿದೆ. ವಿಶ್ವದ ಶಾಂತಿಗೆ ಜೈನ ಧರ್ಮದ ಅಹಿಂಸೆ ಮಂತ್ರ ಪ್ರಮುಖವಾಗಿದೆ ಎಂದು ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ಇಲ್ಲಿನ ಜನತಾ ಶಿಕ್ಷಣ ಸಮಿತಿಯ ಉತ್ಸವ ಭವನದಲ್ಲಿ ಧಾರವಾಡ ಜೈನ್ ಮಿಲನ್ ವಿಶ್ವ ನವೋಕಾರ ಮಂತ್ರ ದಿವಸ ಅಂಗವಾಗಿ ಹಮ್ಮಿಕೊಂಡ 108 ನವೋಕಾರ ಮಂತ್ರ ಪಠ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸದ್ಯ ಜಗತ್ತು ಪ್ರಭಾವಶಾಲಿ ಅಸ್ತ್ರಗಳ ಮೂಲಕ ಯುದ್ಧದ ಜ್ವಾಲೆಯಲ್ಲಿ ಸಿಲುಕಿದೆ. ಆದರೆ, ಭಾರತ ಮಾತ್ರವೇ ಸುರಕ್ಷಿತವಾಗಿರಲು ಸತ್ಯ ಮತ್ತು ಅಹಿಂಸೆ ಮಂತ್ರಗಳೇ ಕಾರಣ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜೈನ ಧರ್ಮದ ನವೋಕಾರ ಮಂತ್ರವು ಮನಸ್ಸಿನ ಕಲ್ಮಶ ದೂರ ಮಾಡುವ ಜತೆ ಶಾಂತಿ ದೊರೆಯುವಂತೆ ಮಾಡುವ ಶಕ್ತಿಯೂ ಹೊಂದಿದೆ. ಹೀಗಾಗಿ ಅಹಿಂಸೆ ಪಾಲನೆ ಮಾಡಬೇಕು ಎಂದು ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿ ಡಾ.ಜಿನದತ್ತ ಹಡಗಲಿ ನವೋಕಾರ ಮಂತ್ರದ ಮಹತ್ವದ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಅಶೋಕಾ ಬಾಳಿಕಾಯಿ, ವಾಣಿಶ್ರೀ ಪ್ರಸಾದ, ಭರಮಪ್ಪ ಭಾವಿ, ಸಂಗೀತಾ ಉಪಾಧ್ಯೆ, ವೈಶಾಲಿ ಕುಂದಗೋಳ, ಸುನಂದಾ ವರೂರ ಅನೇಕರು ಪಾಲ್ಗೊಂಡಿದ್ದರು.

ಜೈನ ಮಿಲನ್ ಅಧ್ಯಕ್ಷ ಜಿನ್ನಪ್ಪ ಕುಂದಗೋಳ ಸ್ವಾಗತಿಸಿದರು. ಜೈನ್ ಮಿಲನ್ ಕಾರ್ಯದರ್ಶಿ ರತ್ನಾಕರ ಹೋಳಗಿ ನಿರೂಪಿಸಿದರು. ಪ್ರಾಚಾರ್ಯ ಮಹಾವೀರ ಉಪಾಧ್ಯೆ ವಂದಿಸಿದರು.

200 ವರ್ಷಗಳ ಹಿಂದಿನ ಪ್ರಾಚೀನ ವಸ್ತುಗಳ ಪ್ರದರ್ಶನ

◆**ಹುಬ್ಬಳ್ಳಿ:** ನಗರದ ಉತ್ತರಾಧಿಮಠದಲ್ಲಿ ಶ್ರೀರಾಮ ಸೇವಾ ಪರಿಷತ್ ವತಿಯಿಂದ ಏರ್ಪಡಿಸಿದ್ದ ಧಾರ್ಮಿಕ ಶಿಕ್ಷಣ ಶಿಬಿರದಲ್ಲಿ ಕೆ.ಬಿ. ದ್ವಾರಪಾಲಕ ಕುಟುಂಬದವರು ಸಂಗ್ರಹಿಸಿದ ಸುಮಾರು 200 ವರ್ಷಗಳ ಹಿಂದಿನ ಪ್ರಾಚೀನ ವಸ್ತುಗಳ ಪ್ರದರ್ಶನ ನಡೆಯಿತು. ಪಂಡಿತ ಜಯತೀರ್ಥ ಆಚಾರ್ಯ ಹುಂಡೇಕರ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿ, ಮಕ್ಕಳು ಧಾರ್ಮಿಕ ಶಿಕ್ಷಣ ಪಡೆದು ದೇವರ ನಾಮಸ್ಮರಣೆ ಮಾಡುವುದರ ಜೊತೆಗೆ ವಿದ್ಯಾವಂತರಾಗಿ. ತಂದೆ ತಾಯಿಗಳ ಗೌರವ ಹೆಚ್ಚಿಸುವ ಕಾರ್ಯವನ್ನು ಮಾಡಬೇಕು. ಜೊತೆಗೆ ಪ್ರಾಚೀನ ಕಾಲದ ವಸ್ತುಗಳ ಪ್ರದರ್ಶನ ಈ ಧಾರ್ಮಿಕ ಶಿಕ್ಷಣ ಶಿಬಿರದಲ್ಲಿ ಮಕ್ಕಳಿಗಾಗಿ ಕೆ.ಬಿ. ದ್ವಾರಪಾಲಕ ಕುಟುಂಬದವರ ಏರ್ಪಡಿಸಿದ್ದ ಕಾರ್ಯ ಶ್ಲಾಘನೀಯ ಎಂದರು.

ಈ ವಸ್ತು ಪ್ರದರ್ಶನದಲ್ಲಿ ಬೆಳ್ಳಿ ನಾಣ್ಯಗಳು, ತಾಮ್ರದ ನಾಣ್ಯಗಳು, ಹಳೆಯ ಸ್ಟಾಂಪ್, ಬಾಂಡ್, ವಿದೇಶಿ ಕರನ್ಸಿ ನೋಟ್ ಗಳು ಮನೆಯ ಅಂದಿನ ಕಾಲದ ದಿನ ನಿತ್ಯ ಉಪಯೋಗಿಸುವ ಪರಿಕರಗಳು ಪ್ರಾಚೀನ ಲಿಪಿಗಳು ಹಾಗೂ ಗ್ರಂಥಗಳು ಇನ್ನೂ ಹಲವಾರು ವಸ್ತುಗಳು ಪ್ರದರ್ಶನದಲ್ಲಿ ಇದ್ದವು.

ಈ ಕಾರ್ಯಕ್ರಮದಲ್ಲಿ ಪಂಡಿತ ಸುಜಯಿಂದ್ರ ಆಚಾರ್ಯ ಮನಗೂಳಿ, ಪಂಡಿತ ಶ್ರೀನಿಧಿ ಆಚಾರ್ಯ ಬಲ್ಲರವಾಡ, ಪಂಡಿತ ಕೃಷ್ಣಾಚಾರ್ಯ, ಎಸ್ .ಬಿ.ದ್ವಾರಪಾಲಕ, ಸಂಜಯ ಸಂಗಮ, ವಾದಿರಾಜ ಕುಲಕರ್ಣಿ, ವಿಷ್ಣುತೀರ್ಥ ತಡಸ, ಪವನ ದೇಸಾಯಿ, ಕೌಸ್ತುಭ ದ್ವಾರಪಾಲಕ, ಡಾ.ಉಪನಿಷತ್ ಉಪಾಧ್ಯಾ ಇದ್ದರು.



ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ



◆**ಹುಬ್ಬಳ್ಳಿ:** ನಗರದ ಕೆಎಲ್‌ಇ ವಾಣಿಜ್ಯ ಪದವಿ ಪೂರ್ವ ಕಾಲೇಜ್ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಗಳು ಶೇ. 100 ಫಲಿತಾಂಶದೊಂದಿಗೆ ಅಭೂತಪೂರ್ವ ಸಾಧನೆ ಮಾಡಿದ್ದಾರೆ. ಒಟ್ಟು ಪರೀಕ್ಷೆಗೆ ಹಾಜರಾದ 289 ವಿದ್ಯಾರ್ಥಿಗಳಲ್ಲಿ 179 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 94 ವಿದ್ಯಾರ್ಥಿಗಳು ಪ್ರಥಮ ದರ್ಜೆ, 15 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ. ಹರ್ಷಿತಾ ನಾಸ್ಯಾಡ ಅವರು ಶೇ. 99 ರಷ್ಟು ಅಂಕಗಳಿಸುವ ಮೂಲಕ ರಾಜ್ಯಕ್ಕೆ 7 ನೇ ಸ್ಥಾನ ಹಾಗೂ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಟವಟೆ 98.50% ರಾಜ್ಯಕ್ಕೆ 10ನೇ ರ್‍ಯಾಂಕ್ ಮತ್ತು ಕಾಲೇಜಿಗೆ ದ್ವಿತೀಯ ಸ್ಥಾನ, ಸ್ವಾತಿ ಹಂದಿಗೋಳ್ 98.33% ಕಾಲೇಜಿಗೆ ತೃತಿಯ ಸ್ಥಾನ ಪಡೆದಿದ್ದಾರೆ.

ಸಾಕ್ಷಿ ಜೈನ್ 98.17%, ತನಿಷಾ ಹನುಮಸಾಗರ 98.17%, ಭಾವಿಕಾ ಸೇಟಿಯಾ 98%, ಮೇಹಕ್ ತೋತ್ರೆ 98%, ದರ್ಶಿಲ್ ರಾಠೋಡ 97.83%, ಶ್ರೀಶೈಲ್ ಸಜ್ಜನ ಶೇ. 97.83% ಅದರಲ್ಲಿ ಹಿಂದಿ ವಿಷಯದಲ್ಲಿ 4 ವಿದ್ಯಾರ್ಥಿಗಳು ಅರ್ಥಶಾಸ್ತ್ರದಲ್ಲಿ 17 ವಿದ್ಯಾರ್ಥಿಗಳು, ವ್ಯವಹಾರ ಅಧ್ಯಯನದಲ್ಲಿ 32 ವಿದ್ಯಾರ್ಥಿಗಳು, ಲೆಕ್ಕಶಾಸ್ತ್ರದಲ್ಲಿ 7 ವಿದ್ಯಾರ್ಥಿಗಳು ಮತ್ತು ಸಂಖ್ಯಾಶಾಸ್ತ್ರ ವಿಷಯದಲ್ಲಿ 17 ವಿದ್ಯಾರ್ಥಿಗಳು 100 ಕ್ಕೆ 100 ಅಂಕಗಳನ್ನು ಪಡೆದಿರುತ್ತಾರೆ.

ಕಾಲೇಜಿಗೆ ಕೀರ್ತಿತಂದ ಈ ಎಲ್ಲ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಅಮಿತ ಕೋರೆ, ಆಡಳಿತ ಮಂಡಳಿ ಎಂ.ಎಂ.ಕವಟಗಿಮಠ, ಶಂಕರಣ್ಣ ಮುನವಳ್ಳಿ, ಮಂಜುನಾಥ ಮುನವಳ್ಳಿ ಹಾಗೂ ಸರ್ವಸದಸ್ಯರು ಕಾಲೇಜಿನ ಪ್ರಾಚಾರ್ಯ ಡಾ.ಸುಪ್ರಿತಾ ಎಂ.ಲಗಳಿ ಹಾಗೂ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

ಮೂಲ ಸೌಕರ್ಯಗಳಿಗೆ ಆಗ್ರಹಿಸಿ ನಿವಾಸಿಗಳಿಂದ ಕಲಘಟಗಿ ರಸ್ತೆ ತಡೆ



◆**ಧಾರವಾಡ:** ಮೂಲಭೂತ ಸೌಕರ್ಯಗಳು ಕಲ್ಪಿಸಲು ಒತ್ತಾಯಿಸಿ ಲೋಹಿಯಾ ನಗರ ನಿವಾಸಿಗಳು ನಗರದ ಪೊಲೀಸ್ ತರಬೇತಿ ಕೇಂದ್ರದ ಮುಂದೆ ಗುರುವಾರ ಕಲಘಟಗಿ ರಸ್ತೆ ಸಂಚಾರ ತಡೆಸಿದರು.

ಲೋಹಿಯಾ ನಗರಕ್ಕೆ ಕಳೆದ 10 ವರ್ಷಗಳಿಂದ ಮೂಲಭೂತ ಸೌಕರ್ಯಗಳು ಕಲ್ಪಿಸುತ್ತಿಲ್ಲ. ಈ ಕುರಿತು ಅಧಿಕಾರಿಗಳಿಗೆ ಅನೇಕ ಸಲ ಮನವಿ ನೀಡಿದರೂ ಸಹ ಸ್ಪಂದಿಸಿಲ್ಲ ಎಂದು ಆರೋಪ ಮಾಡಿದರು. ಲೋಹಿಯಾ ನಗರದಲ್ಲಿ 200 ಕುಟುಂಬಗಳ ವಾಸ ಮಾಡುತ್ತಿವೆ. ಡಾಂಬರ್,ಕಾಂಕ್ರೀಟ್ ಭಾಗ್ಯ ಕಾಣದ ಕಚ್ಚಾ ರಸ್ತೆಯಲ್ಲಿ ಓಡಾಡಬೇಕಿದೆ. ಮಳೆಗಾಲದಲ್ಲಿ ಕೆಸರು ತುಂಬುತ್ತದೆ ಎಂದು ದೂರಿದರು. ವಿದ್ಯುತ್ ದ್ವೀಪಗಳು, ಕುಡಿಯುವ ನೀರಿನ ಸೌಲಭ್ಯ ಇಲ್ಲ, ಸತ್ತ ಪ್ರಾಣಿಗಳನ್ನೂ ಕೂಡ ಇಲ್ಲಿಯೇ ಎಸೆಯಾಗುತ್ತಿದೆ. ದುರ್ವಾಸನೆಯಿಂದ ಜನರ ಜೀವನ ನೆಮ್ಮದ ಹಾಳಾದ ಬಗ್ಗೆ ಅಳಲು ತೋಡಿಕೊಂಡರು. ತಕ್ಷಣವೇ ಲೋಹಿಯಾ ನಗರಕ್ಕೆ ಮೂಲಭೂತ ಸೌಕರ್ಯಗಳು ಕಲ್ಪಿಸಬೇಕು. ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲಿ ತೀವ್ರ ಹೋರಾಟ ಮಾಡುವುದಾಗಿಯೂ ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಮೀನಾಕ್ಷಿ ಭಜಂತ್ರಿ, ಲಕ್ಷ್ಮೀ ಪಾಟೀಲ, ಸಾಧಿಕ್ ಮುಲ್ಲಾ, ಈರಪ್ಪ ನಾಯ್ಕರ, ಸಂದೀಪ ಭಜಂತ್ರಿ, ಸುರೇಶ ವಡ್ಡಿನ್ ಅನೇಕರು ಪಾಲ್ಗೊಂಡಿದ್ದರು.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ



◆**ಧಾರವಾಡ:** ನಗರದ ಶ್ರೀ ಸಾಯಿ ಪದವಿಪೂರ್ವ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಕಾಲೇಜಿನ ಒಟ್ಟು ಫಲಿತಾಂಶ ಶೇ.100ರಷ್ಟು ದಾಖಲಾಗಿದೆ. ವಿಜ್ಞಾನ ವಿಭಾಗದಲ್ಲಿ ವೀರೇಶ ಪಾಟೀಲ ಶೇ.97, ಸುದೀಪ ಮೇಟಿ ಶೇ.96, ರೋಹಿತ್ ಬಿ. 96.2 ಶೇ., ಅಶ್ವಿನಿ ಮಾಸನಕಟ್ಟಿ ಶೇ.96, ಸುಕನ್ಯಾ ಶೇ.96., ಅರವಿಂದ ಶೆಟ್ಟರ್ ಶೇ.95.6, ಮೆಹಬೂಬ್ ಖಾನ್ ಶೇ.95.5, ಕೀರ್ತಿ ಕಟ್ಟಿ ಶೇ.95, ಹರ್ಷಿತ್ ಹೂಗಾರ ಶೇ.94, ಹನುಮಂತ ಸೂರ್ಯವಂಶಿ ಶೇ.90 ಅಂಕಗಳನ್ನು ಗಳಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಮಹೇಶ್ ಶೀಲವಂತ ಶೇ.96.4, ಅಕ್ಷಯ ತಂಬ್ರಳ್ಳಿ ಶೇ.93, ನಿತಿನ್ ಕಿವಡನವರ ಶೇ.92, ಚೇತನ ಶೇ.92.2, ನೇತ್ರ ಹಡಪದ ಶೇ.91.3, ಆಕಾಶ್ ಪಾಟೀಲ ಶೇ.90.9, ಲಕ್ಷ್ಮೀ ಶೇ.90.5, ಸುಪ್ರೀತ್ ಕಾಳೆ ಶೇ.90.3, ಪವಿತ್ರ ಹಿರೇಮಠ ಶೇ.90.2, ಅಂಕಗಳನ್ನು ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷೆ ಡಾ.ವೀಣಾ ಬಿರಾದಾರ, ಪ್ರಾಚಾರ್ಯ ನಾಗರಾಜ ಶಿರೂರು, ಉಪನ್ಯಾಸಕರು ಹಾಗೂ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಹಿರೇಮಲ್ಲೂರ ಈಶ್ವರನ್ ಕಾಲೇಜಿನ ವಿದ್ಯಾರ್ಥಿಗಳ ವಿಶೇಷ ಸಾಧನೆ




◆**ಧಾರವಾಡ:** ಕಲ್ಯಾಣನಗರದಲ್ಲಿರುವ ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಅಂಗಸಂಸ್ಥೆಯಾದ ಹಿರೇಮಲ್ಲೂರ ಈಶ್ವರನ್ ಪ.ಪೂ. ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ದ್ವಿತೀಯ ಪಿ.ಯು. ವಾರ್ಷಿಕ ಪರೀಕ್ಷೆಯಲ್ಲಿ ಸಾಧಿಸಿದ್ದಾರೆ. ವಿಜ್ಞಾನ ವಿಭಾಗದಲ್ಲಿ 37 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 80 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 16 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಗಣಿತಶಾಸ್ತ್ರದಲ್ಲಿ 2, ವ್ಯವಹಾರ ಅಧ್ಯಯನ 2, ಸಂಸ್ಕೃತದಲ್ಲಿ 01 100/100 ಅಂಕಗಳನ್ನು ಗಳಿಸಿದ್ದಾರೆ ಹಾಗೂ ವಾಣಿಜ್ಯ ವಿಭಾಗದಲ್ಲಿ 7 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 16 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ , 2 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಸಾಗರ ಗಡೆಣ್ಣವರ 575 (ಶೇ.95.83) , ವಾಣಿಜ್ಯ ವಿಭಾಗದಲ್ಲಿ ಅನಿಲ ಭಾವಿ 572 (ಶೇ.95.33) ಅಂಕಗಳನ್ನು ಗಳಿಸಿ ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ. ವಿದ್ಯಾರ್ಥಿಗಳಾದ ಭಾರತಿ ದೇವಗುಂಡಿ 569 (ಶೇ.94.83), ಸೌಭಾಗ್ಯಲಕ್ಷ್ಮೀ ಗುಡ್ಡದಮಠ 562 (ಶೇ.93.67), ಲಕ್ಷ್ಮೀ ಕಲ್ಲೋಣಿ 558 (ಶೇ.93), ಚೇತನ 556 (ಶೇ.92.67), ಓಂಕಾರ ಜಾಧವ 556 (ಶೇ.92.67), ಕಾರ್ತಿಕ 554 (ಶೇ.92.33), ನಂದನನಂದಿಹಳ್ಳಿ 553 (ಶೇ.92.17), ದೀಪಾ ಬೆಳಗಾವಿ 555 (ಶೇ.92.5) ಸಮರ್ಥ ಬಾಗೇವಾಡಿ 555 (ಶೇ.92.5), ಪ್ರಿಯಾ ಎಸ್. 551(ಶೇ.91.83), ಅಮೂಲ್ಯ ಮಠಪತಿ 549(ಶೇ.91.5), ಹರ್ಷಿತಾ ಮಂಗೋಡಿ 549(ಶೇ.91.5), ಕೃತಿಕಾ ಅಡಿಕಿ 546(ಶೇ.91) ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕಗಳನ್ನು ಗಳಿಸಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಕಾರ್ಯದರ್ಶಿ ಪ್ರೊ. ಶಿವಾನಂದ ಪಟ್ಟಣಶೆಟ್ಟಿ, ಮಹಾವಿದ್ಯಾಲಯದ ಪ್ರಾಚಾರ್ಯ ಶಶಿಧರ ತೋಡಕರ, ಕಾಲೇಜಿನ ಆಡಳಿತ ಮಂಡಳಿ ಮತ್ತು ಅಧ್ಯಾಪಕ ವೃಂದ ಹರ್ಷವ್ಯಕ್ತಪಡಿಸಿದೆ.

ಚೈತ್ರಾ ರಡ್ಡೇರ್ ರಾಜ್ಯಕ್ಕೆ ಮೂರನೇ ಸ್ಥಾನ



◆**ಹುಬ್ಬಳ್ಳಿ:** ತಾಲೂಕಿನ ಕೊಟ್ಟಗುಂಡಹುಣಸಿ ಗ್ರಾಮದಲ್ಲಿರುವ ಕೆಎಲ್‌ಇ ಸಂಸ್ಥೆಯ ಪ್ರೇರಣಾ ರೆಸಿಡೆನ್ಷಿಯಲ್ ಪಿಯು ಕಾಲೇಜಿನ ವಿದ್ಯಾರ್ಥಿನಿ ಚೈತ್ರಾ ರಡ್ಡೇರ್ ಅವರು ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿದ್ದಾರೆ. ಕುಂದೋಳ ತಾಲ್ಲೂಕಿನ ಹಿರೇಬೂದಿಹಾಳದ ಚೈತ್ರಾ ಅವರು ಭೌತಿವಿಜ್ಞಾನ, ರಸಾಯನ ವಿಜ್ಞಾನ, ಗಣಿತ, ಕಂಪ್ಯೂಟರ್ ಸೈನ್ಸ್, ಹಿಂದಿಯಲ್ಲಿ ತಲಾ 100 ಮತ್ತು ಇಂಗ್ಲಿಷ್‌ನಲ್ಲಿ 96 ಅಂಕಗಳನ್ನು ಗಳಿಸಿದ್ದಾರೆ.

ಈ ಕುರಿತು ಮಾಧ್ಯಮದರೊಂದಿಗೆ ಮಾತನಾಡಿದ ಅವರು, ದಿನಕ್ಕೆ 10-12 ಗಂಟೆ ಓದುತ್ತಿದ್ದೆ. ಕಾಲೇಜಿನಲ್ಲಿ ಆಯೋಜಿಸುತ್ತಿದ್ದ ಅಣಕು, ಪೂರ್ವಸಿದ್ಧತಾ ಪರೀಕ್ಷೆಗಳನ್ನು ಎದುರಿಸಿದ್ದರಿಂದ ಅನುಕೂಲವಾಯಿತು. ಎಲ್ಲ ಉಪನ್ಯಾಸಕರು, ಮನೆಯವರ ಸಹಕರದಿಂದ ಈ ಸಾಧನೆ ಮಾಡಲು ಸಾಧ್ಯವಾಯಿತು ಎಂದರು. ಶೇ 99ಕ್ಕಿಂತ ಹೆಚ್ಚು ಅಂಕಗಳನ್ನು ನಿರೀಕ್ಷಿಸಿದ್ದೆ. ಅದಕ್ಕೆ ತಕ್ಕಂತೆ ಅಂಕಗಳು ಬಂದಿರುವುದಕ್ಕೆ ಖುಷಿಯಾಗಿದೆ. ಇಂಗ್ಲಿಷ್‌ನಲ್ಲಿ 100 ಅಂಕಗಳನ್ನು ನಿರೀಕ್ಷಿಸಿದ್ದೆ. ಆದರಲ್ಲಿ ನಿರೀಕ್ಷಿಸಿದಷ್ಟು ಅಂಕಗಳು ಬಂದಿಲ್ಲ, ಹೀಗಾಗಿ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುತ್ತೇನೆ ಎಂದರು. ನನ್ನ ತಂದೆ ಕೃಷಿಕರು, ತಾಯಿ ಗೃಹಿಣಿ. ಎಸ್‌ಎಸ್‌ಎಲ್‌ಸಿಯಲ್ಲಿ ಶೇ 98.72ರಷ್ಟು ಫಲಿತಾಂಶ ಬಂದಿತ್ತು. ವೈಮಾನಿಕ ಎಂಜಿನಿಯರ್ ಆಗಬೇಕು ಎಂಬುದು ನನ್ನ ಕನಸು ಎಂದು ಹೇಳಿದರು. ಕೆಎಲ್‌ಇ ಸಂಸ್ಥೆಯ ನಿರ್ದೇಶಕ ಮಹಾಂತೇಶ ಕವಟಗಿಮಠ ಮಾತನಾಡಿ, ಕೆಎಲ್‌ಇ ಸಂಸ್ಥೆಯ ಅಡಿ ಕರ್ನಾಟಕ, ಮಹಾರಾಷ್ಟ್ರ, ದೆಹಲಿಯಲ್ಲಿ 317 ಶಿಕ್ಷಣ ಸಂಸ್ಥೆಗಳಿವೆ. ರಾಜ್ಯದಲ್ಲಿ 36 ಪಿಯು ಕಾಲೇಜುಗಳಿವೆ. ಅದರಲ್ಲಿ 102 ವಿದ್ಯಾರ್ಥಿಗಳು 585ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ ಎಂದರು. ಕಾಲೇಜಿನ ಪ್ರಾಂಶುಪಾಲ ಶ್ರೀನಿವಾಸ ಲಕ್ಕಿ ಮಾತನಾಡಿದರು. ಕೆಎಲ್‌ಇ ಸಂಸ್ಥೆಯ ನಿರ್ದೇಶಕರಾದ ಜಯಾನಂದ ಮುನವಳ್ಳಿ, ಎ.ಸಿ.ಕೊಳ್ಳಿ, ಅವಂತಿ ಸಂಸ್ಥೆಯ ಬಿಸಿನೆಸ್ ಡೆವಲಪ್‌ಮೆಂಟ್ ಮುಖ್ಯಸ್ಥ ಶಿವ ಜವಳಿ, ಅವಂತಿ ಮುಖ್ಯಸ್ಥ ಪ್ರದೀಪ್ ಶೆಟ್ಟಿ ಇದ್ದರು.



ಹುಬ್ಬಳ್ಳಿ
ಶುಕ್ರವಾರ, 10 ಏಪ್ರಿಲ್ 2026
ಸಂಪುಟ 16, ಸಂಚಿಕೆ 16, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಪೊಲೀಸ್ ಹುದ್ದೆಗಳಿಗೆ ನೇಮಕ ಶೀಘ್ರ |೦೮ | ಸಂಸದರಾಗಿ ಇಂದು ನಿತೀಶ್ ಪ್ರಮಾಣ |೦೭ | ಸುನೇತ್ರಾ ಪವಾರ್ ಅವಿರೋಧ ಆಯ್ಕೆ? |೦೭

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ :ಅಷ್ಟಮಿ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ನಿಜವಾದ ವಿವೇಕಿಯು ಸದಾ ಶಾಂತ ಸ್ವಭಾವದವನಾಗಿರುತ್ತಾನೆ.
▲ ಚಾಣಕ್ಯ

ಇರಾನ್ ಸಮರದಿಂದ ಬಯಲಾದ ಮಿಥ್ಯೆಗಳು !

◆ ಉತ್ಪಲ್ ಕುಮಾರ್

◆ ಪುಟ ೬

ಕಿರುಸುದ್ದಿ

ಅರ್ಚಕರ ನೇಮಕ ಧಾರ್ಮಿಕ ವಿಷಯ: ಕೇಂದ್ರ

◆ **ಹೊಸದಿಲ್ಲಿ:** ದೇವಾಲಯಗಳಲ್ಲಿ ಅರ್ಚಕರ ನೇಮಕಾತಿ ಸರ್ಕಾರದ ಮಂಡಳಿಗಳ ನಿಯಂತ್ರಣಕ್ಕೆ ಒಳಪಡುವ ಲೌಕಿಕ ಕ್ರಮವಲ್ಲ, ಅದು ಧಾರ್ಮಿಕ ಪರಂಪರೆ ಮತ್ತು ಆಚರಣೆಗಳಿಗೆ ಸಂಬಂಧಿಸಿದ ವಿಷಯವಾಗಿದೆ ಎಂದು ಸುಪ್ರೀಂಕೋರ್ಟ್ ಮುಂದೆ ಕೇಂದ್ರ ಸರ್ಕಾರ ವಾದ ಮಂಡಿಸಿದೆ. ಹಾಗೆಯೇ, ಪಂಥಾಧಾರಿತವಾಗಿ ದೇವಾಲಯ ಪ್ರವೇಶ ನಿರ್ಬಂಧಿಸಿದರೆ ಹಿಂದೂಧರ್ಮವೇ ಹಾನಿಗೊಳಗಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿದ ಪ್ರಸಂಗವೂ ನಡೆಯಿತು.

◆ ಪುಟ ೭

ಎಲ್‌ಪಿಜಿ ಟ್ಯಾಂಕರ್ ಗ್ರೀನ್ ಆಶಾ ಭಾರತಕ್ಕೆ ಆಗಮನ

◆ **ಮುಂಬೈ:** ಭಾರತದ ಧ್ವಜ ಹೊಂದಿರುವ ಗ್ರೀನ್ ಆಶಾ ನೌಕೆ, ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿದ್ದು, 15,000 ಟನ್‌ಗಳಿಗಿಂತ ಹೆಚ್ಚು ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹೊತ್ತು ಗುರುವಾರ ಜವಾಹರಲಾಲ್ ನೆಹರು ಬಂದರು ಪ್ರಾಧಿಕಾರ ತಲುಪಿದೆ.

ಇಂದು ಸಿಎಂ ದಿಲ್ಲಿಗೆ: ಸಂಪುಟ ವಿಸ್ತರಣೆ ಚರ್ಚೆ

◆ ಪುಟ ೮

ಸಂಸ್ಕೃತಿಗೆ ವಿರುದ್ಧವಾದ ಸ್ಥಳದ ಹೆಸರು ಬದಲು

◆ ಪುಟ ೭

ಮಿಸ್ರಿ ಅಮೆರಿಕ ಭೇಟಿ: ಒಪ್ಪಂದಗಳ ಬಗ್ಗೆ ಚರ್ಚೆ

◆ ಪುಟ೭

ಕರಾವಳಿ ರಾಜ್ಯದಿಂದ ಸವಾಲು ಅವಕಾಶಗಳಾಗಿ ಪರಿವರ್ತನೆ

◆ ಪುಟ ೭

3 ಮಕ್ಕಳನ್ನು ಹೊಂದಬೇಕು: ಹಿಂದುಗಳಿಗೆ ಸೀಮಾ ಹೈದರ್

◆ ಪುಟ ೭

ಅಮ್ಮನ ಅಗಲಿಕೆ ನೋವಲ್ಲೂ ಗುರಿ ಸಾಧಿಸಿದ ದಿಶಾ

▸ ನಂದಿನಿ ಎನ್.

◆ **ಬೆಂಗಳೂರು :** ದ್ವಿತೀಯ ಪಿಯುಸಿ ಪರೀಕ್ಷೆ ನಡೆಯುತ್ತಿರುವಾಗಲೇ ತನ್ನ ತಾಯಿಯನ್ನು ಕಳೆದುಕೊಂಡ ನೋವಿನಲ್ಲೂ ಧೃತಿಗೆಡದೆ ತನ್ನ ಸಾಧನೆಯನ್ನೇ ಗುರಿಯಾಗಿಸಿಕೊಂಡು, ಪರೀಕ್ಷೆಯಲ್ಲಿ 600ಕ್ಕೆ 600 ಅಂಕಗಳನ್ನು ಪಡೆದುಕೊಂಡು ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆಯ ಆಳ್ವಾಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ದಿಶಾ ಅವರು ಕರ್ನಾಟಕದ ಕೀರ್ತಿಗೆ ಪಾತ್ರರಾಗಿದ್ದಾರೆ.

ಫೆ.28ರಂದು ದ್ವಿತೀಯ ಪಿಯುಸಿ ಆರಂಭಗೊಂಡಿದ್ದು, ಪರೀಕ್ಷೆ ಆರಂಭವಾಗಿ ಕೇವಲ ಮೂರು ದಿನಗಳಾಗಿತ್ತು. ದಿಶಾ ತಾಯಿ ಮೃತಪಟ್ಟಿದ್ದರು. ತಾಯಿಯನ್ನು ಕಳೆದುಕೊಂಡ ನೋವಿನಲ್ಲೂ ಪರೀಕ್ಷೆಗಳನ್ನು ಬರೆದು, ವಾಣಿಜ್ಯ ವಿಭಾಗದಲ್ಲಿ ಎಲ್ಲ ವಿಷಯಗಳಿಂದ 600ಕ್ಕೆ 600 ಅಂಕಗಳನ್ನು ಪಡೆದು ರಾಜ್ಯಕ್ಕೆ



ನಂಬರ್ 1 ಸ್ಥಾನ ಪಡೆದಿದ್ದಾರೆ.

ಮೂರು ಪರೀಕ್ಷೆ ಮುಗಿದಿತ್ತು. ಮುಂದಿನ ಗಣಿತ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದರು. ಆದರೆ, ದಿಶಾ ಜೀವನದ ಪರೀಕ್ಷೆಯಲ್ಲಿ ಸಿಡಿಲು ಬಡಿದಂತಾಯಿತು. ಅಮ್ಮ ಬಿಟ್ಟು ಹೋದರು ಎಂಬ ದುಃಖ ಒಂದೆಡೆಯಾದರೆ, ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಬೇಕೆಂಬ ಛಲ ಮತ್ತೊಂದೆಡೆ. ಅದೇ ರೀತಿ ತನ್ನ ಛಲವನ್ನು ಬಿಡದೆ ಸಾಧಿಸಿ ತೋರಿಸಿದ್ದಾರೆ.

ದ್ವಿತೀಯ ಪಿಯುಸಿ ಪರೀಕ್ಷೆ ಮೂರು ಪರೀಕ್ಷೆ ಮುಗಿದಿದ್ದವು ಅಷ್ಟೇ. ಮನೆಯಲ್ಲಿ ನಾನು ಮತ್ತು ನನ್ನ ತಂಗಿ ಕೊಠಡಿಯಲ್ಲಿ ಓದಿಕೊಳ್ಳುತ್ತಿದ್ದೆವು. ಹೊರಗಿನಿಂದ ಏಕಾಏಕಿ ಕೆಳಗೆ ಬಿದ್ದ ನನ್ನ ತಾಯಿ ಸವಿತಾ ಅವರಿಗೆ ಪ್ರಜ್ಞೆ ಇಲ್ಲದಂತಾಯಿತು. ಅಂದು ಪರೀಕ್ಷೆಗೆ ಹೋಗಬೇಕಿತ್ತು. ನನ್ನ ಆತಂಕವನ್ನು ಗಮನಿಸಿದ ತಂದೆ ದಿನೇಶ್ ಕೊಟಿಯಾನ್ ಅವರು, ಸವಿತಾರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆಂದು ಪರೀಕ್ಷೆ ಬರೆಯಲು ಧೈರ್ಯ ನೀಡಿದ್ದರು. ಹಾಗಾಗಿ ಅಮ್ಮನ ಈ ಭಯದ ಜತೆಗೆ ಪರೀಕ್ಷೆ ಬರೆದೆ.

➡ ಪುಟ ೪

- ▸▸ 3 ಪರೀಕ್ಷೆ ಮುಗಿದು, ಗಣಿತ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದಾಗ ಅಮ್ಮನ ಸಾವು
- ▸▸ ದುಃಖ ಮೀರಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ
- ▸▸ ಮನೆಯಲ್ಲಿ ತೀವ್ರ ಸಂಕಷ್ಟಗಳ ನಡುವೆ 600ಕ್ಕೆ 600 ಅಂಕ

> ಆಳ್ವಾಸ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ದಿಶಾ ಅವರ ಈ ಸಾಧನೆ ನಮಗೆ ಅತ್ಯಂತ ಸಂತೋಷ ತಂದಿದೆ. ಆಕೆಗೆ ನಾನು ಮತ್ತು ನಮ್ಮ ಸಂಸ್ಥೆ ಸಂಪೂರ್ಣ ಬೆಂಬಲ ನೀಡುತ್ತಿದ್ದೇವೆ. ಮುಂದೆಯೂ ನೀಡಲಿದ್ದೇವೆ. ಆಕೆಯ ಈ ಯಶಸ್ವಿನ ಹಿನ್ನೆಲೆ 3 ಲಕ್ಷ ರೂ. ಗಳನ್ನು ಬಹುಮಾನವಾಗಿ ನೀಡುತ್ತೇವೆ.
>
> ■ **ಮೋಹನ್ ಆಳ್ವ**, ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ಮೂಡುಬಿದಿರೆ)

ಪಿಯು ಪರೀಕ್ಷೆ-1ರ ಫಲಿತಾಂಶ ಪ್ರಕಟ, ಶೇ.81 ವಿದ್ಯಾರ್ಥಿಗಳು ಉತ್ತೀರ್ಣ

ದಾಖಲೆ ಫಲಿತಾಂಶ

◆ **ಬೆಂಗಳೂರು:** 2026ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು, ಶೇ.81.58ರಷ್ಟು ಫಲಿತಾಂಶ ದಾಖಲಾಗಿದೆ. ಕಳೆದ ಸಾಲಿಗಿಂತ ಶೇ.11.42ರಷ್ಟು ಹೆಚ್ಚಳವಾಗಿದೆ. ಪರೀಕ್ಷೆಗೆ ಹಾಜರಾದ ಒಟ್ಟು 6,94,545 ವಿದ್ಯಾರ್ಥಿಗಳ ಪೈಕಿ 5,66,608 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಉಡುಪಿ ಜಿಲ್ಲೆ ಪ್ರಥಮ ಸ್ಥಾನ ಪಡೆದರೆ, ದಕ್ಷಿಣ ಕನ್ನಡ ದ್ವಿತೀಯ, ತೃತೀಯ ಕೊಡಗು ಹಾಗೂ ಯಾದಗಿರಿ ಕೊನೆಯ ಸ್ಥಾನದಲ್ಲಿದೆ.

ದ್ವಿತೀಯ ಪಿಯುಸಿ ಪರೀಕ್ಷೆ-1ರ ಫಲಿತಾಂಶ ಗುರುವಾರ ಪ್ರಕಟವಾಗಿದ್ದು, ಶೇ.81.58ರ ದಾಖಲೆಯ ಫಲಿತಾಂಶ ಪ್ರಕಟವಾಗಿದೆ. 2023-24ನೇ ಸಾಲಿನಲ್ಲಿ ಒಟ್ಟಾರೆ ಫಲಿತಾಂಶ ಶೇ.81.15 ದಾಖಲಾಗಿದ್ದು, ಈ ವರೆಗಿನ ದಾಖಲೆಯಾಗಿತ್ತು. ಪ್ರಸಕ್ತ ವರ್ಷ ಪರೀಕ್ಷೆ -1 ಬರೆದಿದ್ದ ಒಟ್ಟು 6,94,545 ವಿದ್ಯಾರ್ಥಿಗಳ ಪೈಕಿ 5,66,608 ಮಂದಿ ಉತ್ತೀರ್ಣರಾಗಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಎಲ್ಲರನ್ನೂ ಉತ್ತೀರ್ಣಗೊಳಿಸಿದ್ದನ್ನು ಹೊರತುಪಡಿಸಿದರೆ, ಇದು ಐತಿಹಾಸಿಕ ಫಲಿತಾಂಶ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಬಣ್ಣಿಸಿದ್ದಾರೆ. ಈ ಬಾರಿ ಪರೀಕ್ಷೆ ಬರೆದಿದ್ದ ಹೊಸಬರು ಶೇ.86.48 ಮಂದಿ ಉತ್ತೀರ್ಣರಾಗಿದ್ದು, ಇದು ಸಹ ದಾಖಲೆಯೇ. 2023-24ರಲ್ಲಿ ಹೊಸಬರ ಫಲಿತಾಂಶ ಶೇ.84.59ರಷ್ಟು ಬಂದಿದ್ದು, ಈ ವರೆಗಿನ ದಾಖಲೆಯಾಗಿತ್ತು. ಕಳೆದ ಶೈಕ್ಷಣಿಕ ವರ್ಷ (2024-25)ದ ಪರೀಕ್ಷೆ-1ರ ಫಲಿತಾಂಶಕ್ಕೆ ಹೋಲಿಸಿದರೆ ಈ ಬಾರಿ ಶೇ.11.42ರಷ್ಟು ಫಲಿತಾಂಶ ಜಿಗಿತ ಕಂಡಿದೆ.

➡ ಪುಟ ೪






ಇಬ್ಬರಿಗೆ 600ಕ್ಕೆ 600 ಅಂಕ

ವಾಣಿಜ್ಯ ವಿಭಾಗದಲ್ಲಿ ಬೆಂಗಳೂರಿನ ಎಸ್.ಬಿ.ಮಹಾವೀರ ಜೈನ್ ಪಿಯು ಕಾಲೇಜಿನ ಅಧಿತಿ ಎ. ಬಾಪು ಮತ್ತು ಮೂಡುಬಿದಿರೆಯ ಆಳ್ವಾಸ್ ಪಿಯು ಕಾಲೇಜಿನ ದಿಶಾ 600ಕ್ಕೆ 600 ಅಂಕ, ಕಲಾ ವಿಭಾಗದಲ್ಲಿ ಬಳ್ಳಾರಿಯ ಇಂದು ಪಿಯು ಕಾಲೇಜಿನ ಅರ್ಚನಾ ಡಿ.ಎಂ. 598, ಸಂಗೀತಾ 598, ಎಸ್‌ಎಂಟಿ ವಿಜಿ ಪಿಯು ಕಾಲೇಜಿನ ಶ್ರುತಿ 598, ವಿಜ್ಞಾನ ವಿಭಾಗದಲ್ಲಿ ಮಂಗಳೂರಿನ ದಿ ಲರ್ನಿಂಗ್ ಸೆಂಟರ್ ಪಿಯು ಕಾಲೇಜಿನ ಪ್ರಿಸಿಲ್ಲಾ ಕಾರ್ಡೋಜಾ 599 ಅಂಕಗಳೊಂದಿಗೆ ಆಯಾ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.




ಜಿಲ್ಲೆಗಳ ಶೇಕಡಾವಾರು ಉತ್ತೀರ್ಣ ಫಲಿತಾಂಶ

ಜಿಲ್ಲೆ	2026ರ ಉತ್ತೀರ್ಣ
ಉಡುಪಿ	96.39
ದಕ್ಷಿಣ ಕನ್ನಡ	96.35
ಕೊಡಗು	92.34
ಉತ್ತರ ಕನ್ನಡ	91.78
ಬೆಂಗಳೂರು ಗ್ರಾಮಾಂತರ	91.00

➡ ಪುಟ ೫

ಪುದುಚೇರಿ: ದಾಖಲೆಯ ಶೇ.90 ಮತ

ಕೇರಳ, ಅಸ್ಸಾಂನಲ್ಲಿ ಭರ್ಜರಿ ಮತದಾನ

◆ **ತಿರುವನಂತಪುರಂ/ಗುವಾಹಟಿ:** ಅಸ್ಸಾಂ ಮತ್ತು ಕೇರಳ ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಮತದಾನ ದಾಖಲಾಗಿದ್ದು, ಅಸ್ಸಾಂನಲ್ಲಿ ಶೇ.85ಕ್ಕೂ ಹೆಚ್ಚು ಮತದಾನವಾಗಿದ್ದರೆ, ಕೇರಳದಲ್ಲಿ ಶೇ.78ಕ್ಕೂ ಹೆಚ್ಚು ಮತದಾನ ನಡೆದಿದೆ ಎಂದು ಚುನಾವಣಾ ಆಯೋಗದ ಪ್ರಾಥಮಿಕ ಅಂಕಿ-ಅಂಶಗಳು ತಿಳಿಸಿವೆ. ಈ ಎರಡೂ ರಾಜ್ಯಗಳಲ್ಲಿ ಆಡಳಿತದಲ್ಲಿರುವ ಸರ್ಕಾರಗಳು ಮೂರನೇ ಅವಧಿಗೆ ಅಧಿಕಾರ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿವೆ.

ಅಸ್ಸಾಂನಲ್ಲಿ ಭಾರೀ ಮತದಾನ: ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಈ ಬಾರಿ ನಡೆದ ಮತದಾನವನ್ನು ಐತಿಹಾಸಿಕ ಎಂದು ಬಣ್ಣಿಸಿದ್ದಾರೆ. ಜನರ ಮುಖಗಳಲ್ಲಿ ಕಂಡುಬರುವ ಭರವಸೆ, ಹೆಮ್ಮೆ ಮತ್ತು ಸಂತೋಷವೇ ಈ ಚುನಾವಣೆಯ ಫಲಿತಾಂಶವನ್ನು ಈಗಲೇ ಸೂಚಿಸುತ್ತಿದೆ ಎಂದು ಅವರು ಹೇಳಿದರು. ಇನ್ನೊಂದೆಡೆ, ಕಾಂಗ್ರೆಸ್ ನಾಯಕ ಗೌರವ್ ಗೋಗೊಯಿ ಅವರು ಈ ಭಾರೀ ಮತದಾನವು ಹೊಸ ಮತ್ತು ಉತ್ತಮ ಅಸ್ಸಾಂ ನಿರ್ಮಾಣದ ಸಂಕೇತವಾಗಿದೆ ಎಂದು ಅಭಿಪ್ರಾಯಪಟ್ಟರು. ಮತ ಎಣಿಕೆ ಪ್ರಕ್ರಿಯೆ ಸರಿಯಾಗಿ ನಡೆಯುವಂತೆ ಮತ್ತು ಇವಿಎಂಗಳ ಭದ್ರತೆ ಕಾಪಾಡುವಂತೆ ಚುನಾವಣಾ ಆಯೋಗಕ್ಕೆ ಅವರು ಮನವಿ ಮಾಡಿದರು.

➡ ಪುಟ ೪



ಅಸ್ಸಾಂನ ತಮುಲ್ಪುರ ಮತಗಟ್ಟೆಯಲ್ಲಿ ಮತ ಚಲಾಯಿಸಿದ ಬೋಡೋ ಬುಡಕಟ್ಟು ಮಹಿಳೆ

ಉಪ ಚುನಾವಣೆ ಶೇ.68 ಮತದಾನ

ದಾವಣಗೆರೆ/ಬಾಗಲಕೋಟೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಶೇ.68.55, ಬಾಗಲಕೋಟೆ ಕ್ಷೇತ್ರದಲ್ಲಿ ಶೇ.68.73 ಮತದಾನವಾಗಿದ್ದು, ಮತದಾನ ಬಹುತೇಕ ಶಾಂತಿಯುತವಾಗಿ ಮುಕ್ತಾಯ ಗೊಂಡಿತು.

➡ ಪುಟ ೪

ಲೆಬನಾನ್ ವಿಷಯದಲ್ಲಿ ಭಿನ್ನಾಭಿಪ್ರಾಯ

ಕದನ ವಿರಾಮವಿನ್ನೂ ಅಸ್ಥಿರ

◆ **ದುಬೈ:** ತಾತ್ಕಾಲಿಕ ಕದನ ವಿರಾಮ ಒಪ್ಪಂದವು ಮಧ್ಯಪ್ರಾಚ್ಯದಲ್ಲಿ ಬೂದಿಮುಚ್ಚಿದ ಕೆಂಡದಂತಿದೆ. ಈ ಮಧ್ಯೆ ಬೈರೂತ್ ಮೇಲೆ ಇಸ್ರೇಲ್ ನಡೆಸಿದ ಬಾಂಬ್ ದಾಳಿ, ಹಾರ್ಮುಜ್ ಜಲಸಂಧಿಯ ಮೇಲೆ ಇರಾನ್‌ನ ಹಿಡಿತ ಹಾಗೂ ಶನಿವಾರ ನಡೆಯಲಿರುವ ಸಂಧಾನ ಮಾತುಕತೆಗಳ ಬಗ್ಗೆ ಇರುವ ಅನಿಶ್ಚಿತತೆ ಸೇರಿ ಈ ಪರಿಸ್ಥಿತಿಯನ್ನು ಗಂಭೀರಗೊಳಿಸಿವೆ. ಕದನ ವಿರಾಮದ ಬಳಿಕ ಯುದ್ಧದಲ್ಲಿ ನಮ್ಮದೇ ಜಯ ಎಂದು ಇರಾನ್ ಮತ್ತು ಅಮೆರಿಕ ಘೋಷಿಸಿಕೊಂಡಿದ್ದು, ಉದ್ವಿಗ್ನತೆ ಮುಂದುವರಿದಿದೆ. ಇರಾನ್‌ನ ಸರ್ಕಾರಿ ಮಾಧ್ಯಮಗಳು ಹಾರ್ಮುಜ್ ಜಲಸಂಧಿಯಲ್ಲಿ ಸಮುದ್ರ ಮೈನ್‌ಗಳನ್ನು ಇರಿಸಲಾಗಿದೆ ಎಂದು ಹೇಳಿವೆ. ಈ ಜಲಸಂಧಿ ಜಾಗತಿಕ ತೈಲ ಸಾಗಣೆಯಲ್ಲಿ ಅತ್ಯಂತ ಪ್ರಮುಖವಾಗಿದೆ.

➡ ಪುಟ ೪





ದಾಳಿ ನಿಂತರೆ ಮಾತ್ರ ಹಾರ್ಮುಜ್ ಮುಕ್ತ!

ಇರಾನ್ ಉಪ ವಿದೇಶಾಂಗ ಸಚಿವ ಸಯೀದ್ ಖತೀಬ್ ಜಾದೆಹ್ ಮಾತನಾಡಿ, ಅಮೆರಿಕ ತನ್ನ ಆಕ್ರಮಣ ನಿಲ್ಲಿಸಿದ ಬಳಿಕ ಹಾಗೂ ಇಸ್ರೇಲ್ ಲೆಬನಾನ್ ಮೇಲೆ ದಾಳಿಗಳನ್ನು ನಿಲ್ಲಿಸಿದರೆ ಮಾತ್ರ ಹಡಗುಗಳಿಗೆ ಹಾರ್ಮುಜ್ ಜಲಸಂಧಿ ಮೂಲಕ ಮುಕ್ತ ಸಂಚಾರಕ್ಕೆ ಅವಕಾಶ ನೀಡಲಾಗುತ್ತದೆ ಎಂದಿದ್ದಾರೆ. ಈ ಪರಿಸ್ಥಿತಿಯಿಂದ ಜಾಗತಿಕ ತೈಲ ಬೆಲೆ ಗಗನಕ್ಕೇರಿದೆ.

ಪಾಕ್ ವಿಶ್ವಾಸಾರ್ಹವಲ್ಲ

◆ ಪುಟ ೪

ಪ.ಬಂಗಾಳಕ್ಕೆ 6 ಗ್ಯಾರಂಟಿ ಘೋಷಿಸಿದ ಮೋದಿ

◆ **ಹಲ್ದಿಯಾ:** ಪಶ್ಚಿಮ ಬಂಗಾಳದಲ್ಲಿ ಕ್ರೂರ ಸರ್ಕಾರ ನಡೆಯುತ್ತಿದೆ ಎಂದು ಆಡಳಿತದಲ್ಲಿರುವ ತೃಣಮೂಲ ಕಾಂಗ್ರೆಸ್(ಟಿಎಂಸಿ) ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿಯವರು. ಬಂಗಾಳವನ್ನು ಅಭಿವೃದ್ಧಿಯ ಹಾದಿಯಿಂದ ಹಿಂದಕ್ಕೆಳೆಯಲಾಗುತ್ತಿದೆ ಎಂದು ಟೀಕಿಸಿದರು. ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಶುಕ್ರವಾರ ಹಲ್ದಿಯಾ ನಗರದಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಆರು ಗ್ಯಾರಂಟಿಗಳನ್ನು ಘೋಷಿಸಿದರು. ಮೊದಲನೆಯದಾಗಿ, ಟಿಎಂಸಿ ಸರ್ಕಾರದ ಭಯದ ಆಡಳಿತವನ್ನು ವಿಶ್ವಾಸದ ಆಡಳಿತ ವಾಗಿ ಬದಲಿಸುವುದಾಗಿ ಹೇಳಿದರು. ಎರಡನೆಯದಾಗಿ, ಆಡಳಿತ ವ್ಯವಸ್ಥೆಯನ್ನು ಸುಧಾರಿಸಿ ಸರ್ಕಾರಿ ಅಧಿಕಾರಿಗಳನ್ನು ಜನತೆಗೆ ಉತ್ತರದಾಯಕರನ್ನಾಗಿಸಲಾಗುವುದು ಎಂದು ಭರವಸೆ ನೀಡಿದರು.

➡ ಪುಟ ೪



- ▸▸ ರಾಜ್ಯದಲ್ಲಿ ಮಮತಾ ನೇತೃತ್ವದಲ್ಲಿ ಕ್ರೂರ ಸರ್ಕಾರ: ಪ್ರಧಾನಿ ತೀವ್ರ ವಾಗ್ದಾಳಿ

ಬಿಜೆಪಿ ಅಧಿಕಾರಕ್ಕೆ ಬಂದರೆ ವಿಶ್ವಾಸದ ವಾತಾವರಣ

◆ ಪುಟ ೪

ಶ್ರೀನಂದಾ ಪತ್ತೆಗೆ ವ್ಯಾಪಕ ಶೋಧ

◆ **ಚಿಕ್ಕಮಗಳೂರು:** ಕೇರಳದ ಪಾಲಕ್ಕಾಡ್‌ನ 15 ವರ್ಷದ ಬಾಲಕಿ ಶ್ರೀನಂದಾ ನಾಪತ್ತೆ ಪ್ರಕರಣ ದಿನೇ ದಿನೇ ಜಟಿಲಗೊಳ್ಳುತ್ತಿದ್ದು, ಪೊಲೀಸ್ ಇಲಾಖೆ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ಬಾಲಕಿಯ ಪೋಷಕರು, ಸಂಬಂಧಿಕರು ಸಂಕಟದಲ್ಲಿ ಮುಳುಗಿದ್ದಾರೆ. ಏಪ್ರಿಲ್ 7ರಂದು ಸಂಜೆ 5.30ಕ್ಕೆ ದತ್ತಪೀಠದ ಮಾಣಿಕ್ಯಧಾರ ಜಲಪಾತದ ಬಳಿ ತಂದೆಯೊಂದಿಗೆ ರೀಲ್ಸ್ ಮಾಡಿದ್ದ ಬಾಲಕಿ ಮೆಟ್ಟಿಲು ಇಳಿಯುವಾಗ ಮೂರ್‍ನಾಲ್ಕು ನಿಮಿಷದಲ್ಲಿ ಕಾಣೆಯಾಗಿದ್ದಳು.

ನಾಪತ್ತೆ ಹಿಂದೆ ಸಂಚು: ಬಾಲಕಿ ಆಕಸ್ಮಿಕವಾಗಿ ಕಣಿವೆಗೆ ಬಿದ್ದಿರಬಹುದು ಎಂಬ ಸಂಶಯದಲ್ಲೇ ಪೊಲೀಸರು ಶೋಧ ಕಾರ್ಯ ನಡೆಸುತ್ತಿದ್ದರು.

➡ ಪುಟ ೪

- ▸▸ ದತ್ತಪೀಠದ ಮಾಣಿಕ್ಯಧಾರದಲ್ಲಿ ಕೇರಳ ಬಾಲಕಿ ನಾಪತ್ತೆ

ದಾಖಲೆ ಫಲಿತಾಂಶ

ಪುಟ ೧➔ ಕಳೆದ ವರ್ಷ ಕಲಾ ವಿಭಾಗದಲ್ಲಿ ಶೇ. 53,29 ಫಲಿತಾಂಶ ಬಂದಿದ್ದರೆ ಈ ವರ್ಷ ಸುಮಾರು ಶೇ. 20ರಷ್ಟು ಫಲಿತಾಂಶ ಏರಿಕೆ ಕಂಡಿದ್ದು ಶೇ. 72.86 ಫಲಿತಾಂಶ ಬಂದಿದೆ. ಉಳಿದಂತೆ ಈ ಬಾರಿ ವಾಣಿಜ್ಯ ಶೇ.88.04, (ಕಳೆದ ಬಾರಿ ಶೇ. 76.07), ವಿಜ್ಞಾನ ಶೇ.91.69 (ಕಳೆದ ಬಾರಿ ಶೇ.82.54) ಫಲಿತಾಂಶ ಬಂದಿದೆ.

74 ಸರ್ಕಾರಿ ಪ.ಪೂ. ಕಾಲೇಜು, 6 ಅನುದಾನಿತ ಪ.ಪೂ. ಕಾಲೇಜು, 265 ಅನುದಾನ ರಹಿತ ಪ.ಪೂ. ಕಾಲೇಜು, 64 ವಸತಿ ಶಾಲಾ ಪ.ಪೂ. ಕಾಲೇಜಿಗೆ ಶೇ.100ರಷ್ಟು ಫಲಿತಾಂಶ ಬಂದಿದ್ದರೆ, 1 ಸರ್ಕಾರಿ, 7 ಅನುದಾನಿತ, 37 ಅನುದಾನ ರಹಿತ ಹಾಗೂ 2 ವಸತಿ ಶಾಲಾ ಪ.ಪೂ. ಕಾಲೇಜು ಸೇರಿದಂತೆ 47 ಪ.ಪೂ. ಕಾಲೇಜುಗಳಿಗೆ ಶೂನ್ಯ ಫಲಿತಾಂಶ ಲಭ್ಯವಾಗಿದೆ. ನಗರಕ್ಕಿಂತ ಗ್ರಾಮೀಣ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಸ್ ಆಗಿರುವುದು ಈ ಬಾರಿಯ ವಿಶೇಷ. ಈ ಬಾರಿ ಗ್ರಾಮೀಣ ಭಾಗದಲ್ಲಿ ಶೇ. 87.62 ಫಲಿತಾಂಶ ಬಂದಿದ್ದು ನಗರ ಭಾಗದಲ್ಲಿ ಶೇ. 85.95 ಫಲಿತಾಂಶ ದಾಖಲಾಗಿದೆ. ಕಳೆದ ವರ್ಷ ಗ್ರಾಮೀಣ ಭಾಗದಲ್ಲಿ ಶೇ. 69.33 ಫಲಿತಾಂಶ ಬಂದಿದ್ದರೆ, ನಗರ ಭಾಗದಲ್ಲಿ ಶೇ. 74.55 ಫಲಿತಾಂಶ ದಾಖಲಾಗಿತ್ತು.

ಈ ಬಾರಿ ಉತ್ತಮ ಫಲಿತಾಂಶ ಬಂದಿದೆ. ಆದ್ದರಿಂದ ಪರೀಕ್ಷೆ -2 ಮಾತ್ರ ಪರೀಕ್ಷೆ ನಡೆಸಲಿದ್ದು, ಪರೀಕ್ಷೆ-3 ಅನ್ನು ನಡೆಸುವುದಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಮಾಹಿತಿ ನೀಡುತ್ತೇನೆ.
■ ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ

ಜಿಲ್ಲೆಗಳ ಶೇಕಡಾವಾರು ಫಲಿತಾಂಶ

ಜಿಲ್ಲೆ	ಶೇ.
ಉಡುಪಿ	96.39
ದಕ್ಷಿಣ ಕನ್ನಡ	96.35
ಕೊಡಗು	92.34
ಉತ್ತರ ಕನ್ನಡ	91.78
ಬೆಂಗಳೂರು ಗ್ರಾಮಾಂತರ	91.00
ಚಿಕ್ಕಮಗಳೂರು	90.80
ಬೆಂಗಳೂರು ದಕ್ಷಿಣ	90.55
ಚಿಕ್ಕಬಳ್ಳಾಪುರ	90.24
ಬೆಂಗಳೂರು ಉತ್ತರ	90.05
ರಾಮನಗರ	87.90
ಕೋಲಾರ	87.38
ತುಮಕೂರು	86.89
ಕೊಪ್ಪಳ	86.80
ಚಾಮರಾಜನಗರ	84.68
ಮೈಸೂರು	84.80
ಬಾಗಲಕೋಟೆ	84.12
ಬೀದರ್	84.61
ಚಿಕ್ಕೋಡಿ	83.10
ಧಾರವಾಡ	83.31
ಬೆಳಗಾವಿ	80.32
ಮಂಡ್ಯ	88.85
ರಾಮನಗರ	87.90
ಶಿವಮೊಗ್ಗ	87.62
ಹಾವೇರಿ	84.11
ಹಾಸನ	89.71
ದಾವಣಗೆರೆ	81.99
ಕಲಬುರಗಿ	76.97
ಗದಗ	76.65
ಚಿತ್ರದುರ್ಗ	79.12
ಬಳ್ಳಾರಿ	78.69
ರಾಯಚೂರು	74.09
ವಿಜಯಪುರ	92.00
ಯಾದಗಿರಿ	71.21

ವಿದ್ಯಾರ್ಥಿನಿಯರೇ ಮೇಲುಗೈ

ಎಂದಿನಂತೆ ಈ ಬಾರಿಯೂ ವಿದ್ಯಾರ್ಥಿನಿಯರೇ ಹೆಚ್ಚು ಅಂಕಗಳಿಸುವ ಮೂಲಕ ಮೇಲುಗೈ ಸಾಧಿಸಿದ್ದು, ಪರೀಕ್ಷೆ ಎದುರಿಸಿದ 3,53,742 ವಿದ್ಯಾರ್ಥಿನಿಯರಲ್ಲಿ 3,13,770(ಶೇ.88.70) ರಷ್ಟು ಬಾಲಕಿಯರು ಉತ್ತೀರ್ಣರಾಗಿದ್ದಾರೆ. ಅಲ್ಲದೇ 2,78,458 ವಿದ್ಯಾರ್ಥಿಗಳ ಪೈಕಿ 2,32,928 (ಶೇ.83.65)ರಷ್ಟು ಬಾಲಕರು ತೇರ್ಗಡೆಯಾಗಿದ್ದಾರೆ. ಆದರಲ್ಲೂ ಈ ವರ್ಷ ಮೂರು ವಿಭಾಗದಲ್ಲಿಯೂ ಪ್ರಥಮ ರ್‍ಯಾಂಕ್ ಪಡೆದಿರುವುದು ವಿದ್ಯಾರ್ಥಿನಿಯರಾಗಿದ್ದಾರೆ.



ಅಮ್ಮನ ಅಗಲಿಕೆ ನೋವಲ್ಲೂ ಗುರಿ ಸಾಧಿಸಿದ ದಿಶಾ

ಪುಟ ೧➔ ತಂಗಿ ಆಸ್ಪತ್ರೆಯಲ್ಲಿ ಇದ್ದಿದ್ದರಿಂದ ಮುಂದಿನ ಅರ್ಥಶಾಸ್ತ್ರ ಪರೀಕ್ಷೆಗೆ ನಮ್ಮ ಮನೆಯ ವಾಚ್‌ಮ್ಯಾನ್ ಮನೆಯಲ್ಲಿ ಉಳಿದುಕೊಂಡು ಸಿದ್ಧತೆ ನಡೆಸುತ್ತಿದ್ದೆ. ಪರೀಕ್ಷೆ ಬರೆದು ನಾನು ಆಸ್ಪತ್ರೆಗೆ ಹೋಗಿದ್ದೆ, ಅಂದು ರಾತ್ರಿ 9 ಗಂಟೆ ಸುಮಾರಿಗೆ ನನ್ನ ತಾಯಿ ಮೃತಪಟ್ಟಿರುವುದು ದೃಢವಾಯಿತು. ನಂತರ ತಾಯಿಯ ಕಾರ್ಯ ಮುಗಿದ ಬಳಿಕ ನನ್ನ ಕಾಲೇಜಿನ ಶಿಕ್ಷಕರು ಆದರಲ್ಲೂ ವೀಣಾ(ಶಿಕ್ಷಕಿ) ಪರೀಕ್ಷೆಗೆ ಸಮಸ್ಯೆಯಾಗಬಾರದೆಂಬ ನಿಟ್ಟಿನಲ್ಲಿ ನನ್ನನ್ನು ಹಾಗೂ ನನ್ನ ಸಹೋದರಿಯನ್ನು ಅವರ ಮನೆಗೆ ಕರೆದೊಯ್ದರು. ಒಂದನ್ನು ಕಳೆದುಕೊಂಡಾಯಿತು. ಮತ್ತೊಂದನ್ನು ಕಳೆದುಕೊಳ್ಳಬಾರದೆಂದು ಪರೀಕ್ಷೆಯೆಡೆಗೆ ಹೆಚ್ಚು ಗಮನಹರಿಸಿದೆ. ಎರಡು ಪರೀಕ್ಷೆಯನ್ನು ನನ್ನ ಶಿಕ್ಷಕಿ ವೀಣಾ ಮೇಡಂ ಅವರ ಮನೆಯಲ್ಲೇ ಬರೆದಿದ್ದೇನೆ. ಇವೆಲ್ಲ ಸಂಘರ್ಷಗಳೇ ಸಾಧನೆಯ ದಾರಿಯಲ್ಲಿ ಕೈ ಹಿಡಿದು ಮುನ್ನಡೆಸಿತು.

ಸಿ. ಎ. ನನ್ನ ಗುರಿ

ಸಿ.ಎ. ಮಾಡುವ ಗುರಿ ಇದೆ. ಮೇ 14 ರಂದು ಸಿ.ಎ. ಫೌಂಡೇಶನ್ ಪರೀಕ್ಷೆ ಇರುವುದರಿಂದ ಈಗಿನಿಂದಲೇ ಸಿದ್ಧತೆ ನಡೆಸುತ್ತಿದ್ದೇನೆ. ಸಿ.ಎ. ಇಂಟಿಗ್ರೇಟೆಡ್ ಬಿ.ಕಾಂ ತೆಗೆದುಕೊಳ್ಳಲು ಆಸಕ್ತಿ ಇದೆ. ಕಾಲೇಜಿನಲ್ಲಿ ಆಗಾಗ ನಡೆಸುತ್ತಿದ್ದ ಪರೀಕ್ಷೆಗಳು ಉತ್ತಮ ಅಂಕಗಳಿಗೆ ಪೂರಕವಾಗಿವೆ. ಇನ್ನು 1 ತಿಂಗಳಿನಲ್ಲಿ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೇನೆ ಎಂದು ದಿಶಾ ತಿಳಿಸಿದರು.

ದ್ವಿತೀಯ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಸಿಕ್ಕಿದೆ. ಬಹಳ ಸಂತೋಷವಾಗಿದ್ದು, ನನ್ನ ಈ ಸಾಧನೆಗೆ ನನ್ನ ಕಾಲೇಜು ಹಾಗೂ ಶಿಕ್ಷಕರು, ಪ್ರಾಂಶುಪಾಲರು ಮುಖ್ಯ ಕಾರಣರಾಗಿದ್ದಾರೆ. ಶಿಕ್ಷಕರು ಬೇಗ ಸಿಲಬಸ್‌ಗಳನ್ನು ಮುಗಿಸಿ, ಹೆಚ್ಚು-ಹೆಚ್ಚು ಪರೀಕ್ಷೆಗಳನ್ನು ಕೊಡುತ್ತಿದ್ದರು. ತಪ್ಪಿದ್ದರೆ ಸರಿಯಾಗಿ ಹೇಳಿಕೊಡುತ್ತಿದ್ದರು.

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

◈ ಕೇಸರಿ ಯಾವುದೇ ಪಕ್ಷದ ಸೊತ್ತಲ್ಲ, ಅದು ಧರ್ಮವನ್ನು ಪ್ರತಿನಿಧಿಸುವ ಗೌರವದ ಪ್ರತೀಕವಾಗಿದೆ- ಕರಿಂಜೆ
-ಮುಕ್ತಾನಂದ ಸ್ವಾಮೀಜಿ ಧರ್ಮದ ನಿಜವಾದ ಅರ್ಥವನ್ನು ಅರಿಯಲಾರದವರಿಗೆ ಇದು ಅರ್ಥವಾಗಲಾರದು.ಹಾಗಾಗಿ ಕೆಲವರಿಗೆ ಕೇಸರಿ ಕಂಡರೆ ಕಣ್ಣು ಕೆಂಪಾಗುವುದು, ಮೈ ನಡುಗುವುದು!

ದಿನ ಭವಿಷ್ಯ

ಮೇಷ
ನಿಮ್ಮ ಕರ್ತವ್ಯನಿಷ್ಠೆ ಎಲ್ಲರ ಮೆಚ್ಚುಗೆಗೆ ಪಾತ್ರ. ಆದರೆ ಬಸವಳಿಯುವಷ್ಟು ಕೆಲಸ ಮಾಡದಿರಿ. ವಿಶ್ರಾಂತಿಯೂ ಇರಲಿ. ಕೌಟುಂಬಿಕ ಸಮಾಧಾನ

ವೃಷಭ
ಹಿರಿಯರಿಂದ ಒತ್ತಡ ಎದುರಿಸುವಿರಿ. ಕೆಲ ವಿಷಯದಲ್ಲಿ ಅತಿಯಾಗಿ ಚಿಂತಿಸಲು ಹೋಗಬೇಡಿ. ಲಘುವಾಗಿ ಪರಿಗಣಿಸಿ. ಹಿತಾಸಕ್ತಿ ಕಾಯ್ದುಕೊಳ್ಳಿ.

ಮಿಥುನ
ವೃತ್ತಿಯಲ್ಲಿ ನಿಮ್ಮ ಹೊಣೆ ಸರಿಯಾಗಿ ನಿಭಾಯಿಸುವಿರಿ. ಕೆಲ ವಿಷಯದಲ್ಲಿ ನಿಮ್ಮ ಕಾರ್ಯಶೈಲಿ ಬದಲಿಸುವ ಅಗತ್ಯವಿದೆ. ಧನಪ್ರಾಪ್ತಿ.

ಕಟಕ
ಉದ್ಯೋಗದಲ್ಲಿ ಅತೃಪ್ತಿ. ಬದಲಾವಣೆಗೆ ಕಾಲ ಕೂಡಿಬರಲಿದೆ. ಸಾಲ ಪಡೆದಿದ್ದರೆ ಮರುಪಾವತಿ ಸುಲಭವಾಗಲಿದೆ. ಸ್ನೇಹಿತರ ನೆರವು.

ಸಿಂಹ
ಇಂದು ವೈಫಲ್ಯಕ್ಕೆ ಎದೆಗುಂದಬೇಡಿ. ಇದು ನಿಮ್ಮ ಮಂತ್ರವಾಗಲಿ. ಸತತ ಪ್ರಯತ್ನದಿಂದ ಯಶ ಸಾಧಿಸುವಿರಿ. ಆಪ್ತರ ಜತೆ ಮುನಿಸು ನಿವಾರಣೆ.

ಕನ್ಯಾ
ಅಭಿವೃದ್ಧಿಯ ಪಥ ನಿಮ್ಮ ಮುಂದಿದೆ. ಎಡವದೆ ಮುಂದರಿಯಿರಿ. ಆಪ್ತರ ಜತೆ ತುಸು ಕಾಲ ಕಳೆಯಿರಿ. ಅವರನ್ನು ಕಡೆಗಣಿಸಬೇಡಿ.

ತುಲಾ
ಉತ್ಸಾಹದ ದಿನ. ಉದ್ದೇಶಿತ ಕಾರ್ಯ ಸಫಲ. ನಿಮ್ಮ ನೇರ ಮಾತು ಕೆಲವರಿಗೆ ಅಸಮಾಧಾನ ತಂದೀತು. ಮೆದು ಮಾತು ಒಳಿತು.

ವೃಶ್ಚಿಕ
ಹೊಸ ಸವಾಲು. ಮಾನಸಿಕ ಅಸಹನೆ. ಕುಟುಂಬ ಸದಸ್ಯರ ಸಂಗದಲ್ಲಿ ಸಮಾಧಾನ. ನಿರ್ಧಾರದಲ್ಲಿ ಅನಿಶ್ಚಿತತೆ ಬೇಡ, ದೃಢತೆಯಿರಲಿ.

ಧನು
ಆಪ್ತರ ಸಂಗದಲ್ಲಿ ಕಾಲ ಕಳೆಯಿರಿ. ನಿಮ್ಮ ನೋವು, ಸಂಕಷ್ಟ ಮರೆಯಲು ಇದು ಸಹಕಾರಿ. ಬಂಧುಮಿತ್ರರ ಅಸಹಕಾರ ಎದುರಿಸುವಿರಿ.

ಮಕರ
ವೃತ್ತಿ ಸಂಬಂಧಿತ ವಿಷಯವನ್ನು ತಾಳ್ಮೆಯಿಂದ ನಿಭಾಯಿಸಿ. ಬಿಕ್ಕಟ್ಟು ನಿವಾರಿಸಲು ವಿಳಂಬ ಮಾಡಬೇಡಿ. ಕ್ಷಿಪ್ರ ನಿರ್ಧಾರ ಅವಶ್ಯ.

ಕುಂಭ
ದಂಪತಿಗಳು ಹಳೆಯ ವಿಚಾರ ಬಿಟ್ಟು ವ್ಯವಹರಿಸಿ. ಕಲಹ ಶಮನಕ್ಕೆ ಇದು ಅಗತ್ಯ. ವೃತ್ತಿಯಲ್ಲಿ ಕೆಲವರ ಟೀಕೆ ಎದುರಾಗಬಹುದು.

ಮೀನ
ಕೌಟುಂಬಿಕವಾಗಿ ಸಮಾಧಾನಕರ ಸ್ಥಿತಿ. ಆರೋಗ್ಯಕ್ಕೆ ಗಮನ ಕೊಡಿ. ನೆಗೆಟಿವ್ ಚಿಂತನೆ ಬದಿಗಿಡಿ. ಸಕಾರಾತ್ಮಕ ಭಾವನೆ ಬೆಳೆಸಿಕೊಳ್ಳಿ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00
ಅದೃಷ್ಟ ಸಂಖ್ಯೆ : 6,0,4,

ಸೃಷ್ಟಿ ಮಲ್ಲಿನಾಥ, ಅರ್ಚನ ದೊಡ್ಡಮನಿ, ಸಂಗೀತಾ ಅದ್ಭುತ ಸಾಧನೆ

ಕಲಾ ವಿಭಾಗದಲ್ಲಿ ಪ್ರಥಮ

•ಕಲಬುರಗಿ/ ಕೊಟ್ಟೂರು: 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ಇಂದು ಪಿಯು ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು 600ಕ್ಕೆ 598 ಅಂಕ ಪಡೆದು ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾರೆ.





ಕಲಬುರಗಿಯ ವೀರಮ್ಮ ಗಂಗಸಿರಿ (ವಿಜಿ) ಮಹಿಳಾ ಪಿಯು ಕಾಲೇಜಿನ ವಿದ್ಯಾರ್ಥಿನಿ ಸೃಷ್ಟಿ ಮಲ್ಲಿನಾಥ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾಳೆ.

600 ಅಂಕಗಳಲ್ಲಿ 598 ಅಂಕಗಳನ್ನು ಗಳಿಸಿರುವ ಸೃಷ್ಟಿ, ಕನ್ನಡದಲ್ಲಿ 100, ಇಂಗ್ಲಿಷ್‌ನಲ್ಲಿ 99, ಇತಿಹಾಸದಲ್ಲಿ 99, ಅರ್ಥಶಾಸ್ತ್ರದಲ್ಲಿ 100, ಸಮಾಜ ಶಾಸ್ತ್ರದಲ್ಲಿ 100 ಹಾಗೂ ರಾಜಕೀಯ ಶಾಸ್ತ್ರದಲ್ಲಿ 100 ಅಂಕಗಳನ್ನು ಪಡೆದು ರಾಜ್ಯದ ಶ್ರೇಷ್ಠ ಸ್ಥಾನಕ್ಕೇರಿದ್ದಾಳೆ. ಈ ಸಾಧನೆಯ ಮೂಲಕ ಕಾಲೇಜು, ಪಾಲಕರು ಹಾಗೂ ಜಿಲ್ಲೆಯ ಹೆಸರು ಬೆಳಗಿಸಿದ್ದಾಳೆ. ವಿದ್ಯಾರ್ಥಿನಿಯ ಈ ಸಾಧನೆಗೆ ಕಠಿಣ ಪರಿಶ್ರಮವೇ ಪ್ರಮುಖ ಕಾರಣ ಎಂದು ಕಾಲೇಜಿನ ಆಡಳಿತ ಮಂಡಳಿ ಹರ್ಷ ವ್ಯಕ್ತಪಡಿಸಿದೆ.

ಕೊಟ್ಟೂರು ಪಟ್ಟಣದ ಇಂದು ಪಿಯು ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ಕಲಾ ವಿಭಾಗದ ದ್ವಿತೀಯ ಪಿಯುನಲ್ಲಿ 600ಕ್ಕೆ 598 ಅಂಕ ಪಡೆದು ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾರೆ. ಈ ಇಬ್ಬರು ವಿದ್ಯಾರ್ಥಿನಿಯರು ಗ್ರಾಮೀಣ ಭಾಗದಲ್ಲಿನ ಕೃಷಿಕರ ಮಕ್ಕಳು ಎಂಬುದು ವಿಶೇಷ.

ಹರಪನಹಳ್ಳಿ ತಾಲೂಕಿನ ಬಳಿಗಾನೂರು ಗ್ರಾಮದ ಅರ್ಚನ ದೊಡ್ಡಮನಿ (598) ಮತ್ತು ಕೊಪ್ಪಳ ಜಿಲ್ಲೆ ಕುಕನೂರು ತಾಲೂಕಿನ ಮಂಗಳೂರು ಗ್ರಾಮದ ಸಂಗೀತಾ (598) ಟಾಪ್ ಒಂದನೇ ಸ್ಥಾನದಲ್ಲಿ ತೇರ್ಗಡೆಯಾಗಿದ್ದಾರೆ. ಕಾಲೇಜಿನ ಹಾಸ್ಟೆಲ್‌ನಲ್ಲಿದ್ದ ಸಂಗೀತ, ಬಳಿಗಾನೂರಿನಿಂದ ದಿನವೂ ಬಸ್‌ನಲ್ಲಿ ಕಾಲೇಜಿಗೆ ಬರುತ್ತಿದ್ದ ಅರ್ಚನ ದೊಡ್ಡಮನಿ, ರಾಜ್ಯವೇ ಗಮನ ಸೆಳೆಯುವಂತಹ ಸಾಧನೆ ಮಾಡುವ ಮೂಲಕ ಇಂದು ಪಿಯು ಕಾಲೇಜಿನ ರ್‍ಯಾಂಕ್ ನಾಗಲೋಟವನ್ನು ಮುಂದುವರಿಸಿದ್ದಾರೆ. ಇಂದು ಪಿಯು ಕಾಲೇಜು ದ್ವಿತೀಯ ಪಿಯು ಫಲಿತಾಂಶದಲ್ಲಿ ಸತತವಾಗಿ 11ನೇ ವರ್ಷದಲ್ಲಿಯೂ ತನ್ನ ಉನ್ನತ ಸ್ಥಾನ ಪಡೆವ ಸಾಧನೆಯನ್ನು ಮಾಡಿದೆ. ಕನ್ನಡದಲ್ಲಿ 100ಕ್ಕೆ 98 ಅಂಕ ಪಡೆದ ಅರ್ಚನ ದೊಡ್ಡಮನಿ, ಸಂಸ್ಕೃತ, ಐಚ್ಛಿಕ ಕನ್ನಡ, ಇತಿಹಾಸ, ರಾಜ್ಯ ಶಾಸ್ತ್ರ, ಶಿಕ್ಷಣದಲ್ಲಿ ತಲಾ 100 ಅಂಕ ಪಡೆದಿದ್ದಾರೆ.ಸಂಗೀತಾ ಅವರು ಕನ್ನಡ, ಸಂಸ್ಕೃತ, ಐಚ್ಛಿಕ ಕನ್ನಡ, ರಾಜ್ಯ ಶಾಸ್ತ್ರ ಶಿಕ್ಷಣದಲ್ಲಿ 100 ಅಂಕಗಳನ್ನು, ಇತಿಹಾಸದಲ್ಲಿ 99 ಅಂಕಗಳನ್ನು ಪಡೆದಿದ್ದಾರೆ.

ಎರಡು ವರ್ಷದ ಪ್ರಯತ್ನಕ್ಕೆ ಫಲ

ಕಲಬುರಗಿಯ ವೀರಮ್ಮ ಗಂಗಸಿರಿ (ವಿಜಿ) ಮಹಿಳಾ ಪಿಯು ಕಾಲೇಜಿನ ಮುಖ್ಯಗುರುಗಳಾದ ಡಾ.ಮೋಹನ್ ರಾಜ್ ಪತ್ತಾರ ಮಾತನಾಡಿ, ಸೃಷ್ಟಿಯ ಸಾಧನೆ ನಮ್ಮ ಕಾಲೇಜಿಗೆ ಮಾತ್ರವಲ್ಲದೆ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ. ಕಳೆದ ಎರಡು ವರ್ಷಗಳಿಂದ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆಯಬೇಕು ಎಂಬ ಉದ್ದೇಶದಿಂದ ನಿರಂತರ ಪ್ರಯತ್ನ ಮಾಡುತ್ತಿದ್ದೇವೆ. ಕಳೆದ ವರ್ಷ 587 ಅಂಕಗಳೊಂದಿಗೆ ಟಾಪ್ 10ರಲ್ಲಿ ಸ್ಥಾನ ಪಡೆದಿದ್ದೇವೆ. ಈ ಬಾರಿ ಸೃಷ್ಟಿ ನಮ್ಮ ಕನಸನ್ನು ನನಸಾಗಿಸಿದ್ದಾಳೆ ಎಂದು ಸಂತೋಷ ವ್ಯಕ್ತಪಡಿಸಿದರು. ಪಾಲಕರ ಪ್ರೋತ್ಸಾಹ ಮತ್ತು ಶಿಕ್ಷಕರ ನಿರಂತರ ಮಾರ್ಗದರ್ಶನ ವಿದ್ಯಾರ್ಥಿನಿಯ ಸಾಧನೆಗೆ ಮುಖ್ಯ ಕಾರಣವಾಗಿದ್ದು, ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶಶೀಲ್ ನಮೋಶಿ, ಉಪಾಧ್ಯಕ್ಷ ರಾಜಾ ಭೀಮಳ್ಳಿ ಸೇರಿದಂತೆ ಮಂಡಳಿಯ ಸದಸ್ಯರ ಸಹಕಾರವೂ ಮಹತ್ವದ್ದಾಗಿದೆ ಎಂದು ಅವರು ಹೇಳಿದರು.



“ರಾಜ್ಯಕ್ಕೆ ಪ್ರಥಮವಾಗಿ ಬರುತ್ತೇನೆ ಎಂದು ಅನ್ಕೊಂಡೆ ಇರಲಿಲ್ಲ. ಒಮ್ಮೆಯಾದರೂ ರಾಜ್ಯಕ್ಕೆ ಪ್ರಥಮ ಬಂದು ತಂದೆ ತಾಯಿ, ಕಲಿಸಿದ ಶಿಕ್ಷಕರ ಹೆಸರು ಎತ್ತರಕ್ಕೆ ಕೊಂಡೊಯ್ಯಬೇಕು ಎಂಬ ಆಸೆಯಿತ್ತು. ಇದೀಗ ಆ ಆಸೆ ಈಡೇರಿದೆ.
■ ಸೃಷ್ಟಿ ಮಲ್ಲಿನಾಥ, ವಿದ್ಯಾರ್ಥಿನಿ

ಅರ್ಜಿ ಸಲ್ಲಿಸಲು ಏ.15ರವರೆಗೆ ಅವಕಾಶ

ಡಿಜಿಲಾಕರ್‌ನಲ್ಲಿ ಅಂಕಪಟ್ಟಿ

•ಬೆಂಗಳೂರು: ದ್ವಿತೀಯ ಪಿಯುಸಿ ಅಂಕಪಟ್ಟಿಯನ್ನು ಎನ್‌ಎಡಿ ಡಿಜಿಲಾಕರ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳು ತಮ್ಮ ಉತ್ತರ ಪತ್ರಿಕೆಯ ಛಾಯ ಪ್ರತಿ ಹಾಗೂ ಮರು ಮೌಲ್ಯಮಾಪನಕ್ಕೆ ವೆಬ್‌ಸೈಟ್ https://kseab.karnataka.gov.inನಲ್ಲಿ ಲಭ್ಯವಿದೆ.



ಜೊತೆಗೆ ಕರ್ನಾಟಕ ಒನ್ ಮೊಬೈಲ್ ಆ್ಯಪ್‌ನಲ್ಲಿ ಸಲ್ಲಿಸಬಹುದು. ಉತ್ತರ ಪತ್ರಿಕೆಯ ಛಾಯಾ ಪ್ರತಿಗೆ ಅರ್ಜಿ ಸಲ್ಲಿಸಲು ಏ.15ರವರೆಗೆ ಸಮಯವಕಾಶ ನೀಡಲಾಗಿದೆ. ಉತ್ತರ ಪತ್ರಿಕೆಯ ಛಾಯಾ ಪ್ರತಿ ಡೌನ್‌ಲೋಡ್ ಮಾಡಿಕೊಳ್ಳಲು ಏ.12ರಿಂದ 17ರವರೆಗೆ, ಮರು ಮೌಲ್ಯಮಾಪನಕ್ಕಾಗಿ ಹಾಗೂ ಮರು ಎಣಿಕೆಗಾಗಿ ಅರ್ಜಿ ಸಲ್ಲಿಸಲು ಏ. 13 ರಿಂದ 19ರವರೆಗೆಸಮಯನೀಡಲಾಗಿದೆ.ಛಾಯಾ ಪ್ರತಿ ಪಡೆಯಲು ಶುಲ್ಕ ಪ್ರತಿ ವಿಷಯಕ್ಕೆ 530 ರೂ., ಮರು ಮೌಲ್ಯಮಾಪನದ ಶುಲ್ಕ ಪ್ರತಿ ವಿಷಯಕ್ಕೆ 1,670 ರೂ. ನಿಗದಿಪಡಿಸಲಾಗಿದೆ. ಹಾಗೆಯೇ ಅಭ್ಯರ್ಥಿಗಳು ಪರೀಕ್ಷೆ -2ಕ್ಕೆ ಅರ್ಜಿ ಸಲ್ಲಿಸಲು ಮರು ಮೌಲ್ಯಮಾಪನದ ಫಲಿತಾಂಶಕ್ಕಾಗಿ ಕಾಯಬೇಕಾಗಿಲ್ಲ, ಮರು ಮೌಲ್ಯಮಾಪನದಲ್ಲಿ ಗಳಿಸಿದ ಅಂಕಗಳನ್ನೇ ಪರೀಕ್ಷೆ-1 ರ ಅಂಕಗಳೆಂದು ಪರಿಗಣಿಸಲಾಗುವುದು, ಮೇಲ್ಮನವಿಗೆ ಅವಕಾಶವಿಲ್ಲ, ಅಂಕಗಳ ಮರು ಎಣಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ ಎಂದು ಪರೀಕ್ಷಾ ಮಂಡಳಿ ತಿಳಿಸಿದೆ.

ಅರ್ಜಿ ಸಲ್ಲಿಸಲು ಏ.17 ಕೊನೆ ದಿನ

ಪರೀಕ್ಷೆ-2ಕ್ಕೆ ಅರ್ಜಿ ಸಲ್ಲಿಸಲು ಏ.17 ಕೊನೆಯ ದಿನವಾಗಿದ್ದು, ಅಭ್ಯರ್ಥಿಗಳು ಪರೀಕ್ಷಾ ಮಂಡಳಿಯ ವೆಬ್‌ಸೈಟ್ kseab.karnataka.gov.in ಮೂಲಕ ನೋಂದಾಣಿ ಮಾಡಿಕೊಳ್ಳಬಹುದು. ಪರೀಕ್ಷೆ -1ರಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷೆ ಶುಲ್ಕ ಇರುವುದಿಲ್ಲ, ಆದರೆ, ಪರೀಕ್ಷೆ -1ರ ಫಲಿತಾಂಶ ಸುಧಾರಿಸಲು ಪರೀಕ್ಷೆ ಬರೆಯುವ ವಿದ್ಯಾರ್ಥಿಗೆ ಒಂದು ವಿಷಯ (ಪ್ರಥಮ ಬಾರಿಗೆ)ಕ್ಕೆ 175, ಒಂದು ವಿಷಯಕ್ಕೆ (ಎರಡನೇ ಬಾರಿಗೆ) 350 ರೂ.ನಿಗದಿ ಪಡಿಸಲಾಗಿದೆ ಎಂದು ಮಧು ಬಂಗಾರಪ್ಪ ಹೇಳಿದರು.

ಕದನ ವಿರಾಮವಿನ್ನೂ ಅಸ್ಥಿರ

ಪುಟ ೧➔ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಒಪ್ಪಂದವನ್ನು ಇರಾನ್ ಪಾಲಿಸದಿದ್ದರೆ ಹಿಂದಿಗಿಂತ ಹೆಚ್ಚು ಭೀಕರ ದಾಳಿ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮಾತನಾಡಿ, ಲೆಬನಾನ್ ನಮ್ಮ ಒಪ್ಪಂದದಲ್ಲಿ ಇರಲಿಲ್ಲ ಎಂದಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

ಲೆಬನಾನ್ ಮೇಲೆ ದಾಳಿ: ಕದನ ವಿರಾಮ ಒಪ್ಪಂದದಲ್ಲಿ ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವಿನ ಹೋರಾಟ ನಿಲ್ಲಿಸುವ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು ಮತ್ತೊಂದು ಪ್ರಮುಖ ಸಮಸ್ಯೆಯಾಗಿದೆ. ಇಸ್ರೇಲ್ ಬೈರೂತ್ ಮೇಲೆ ಭಾರೀ ವಾಯು ದಾಳಿಗಳನ್ನು ನಡೆಸಿದೆ. ಇದು ಫೆ.28ರಿಂದ ಆರಂಭವಾದ ಯುದ್ಧದಲ್ಲಿ ಲೆಬನಾನ್‌ನಲ್ಲಿ ಒಂದೇ ದಿನದಲ್ಲಿ ಕಂಡ ಅತ್ಯಂತ ಭೀಕರ ದಾಳಿಯಾಗಿದೆ. ಈ ದಾಳಿಯಲ್ಲಿ ಕನಿಷ್ಠ 203 ಮಂದಿ ಮೃತಪಟ್ಟಿದ್ದು, 1,000ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇಸ್ರೇಲ್ ಈ ದಾಳಿಗಳು ಹೆಜ್ಬೊಲ್ಲಾ ಗುರಿಯಾಗಿವೆ ಎಂದು ಹೇಳಿದೆ.

ಇರಾನ್ ಪ್ರತಿದಾಳಿ ಎಚ್ಚರಿಕೆ: ಇಸ್ರೇಲ್ ದಾಳಿಗಳು ಮುಂದುವರಿದರೆ ಬಲವಾದ ಪ್ರತಿಕ್ರಿಯೆ ನೀಡಲಾಗುತ್ತದೆ ಎಂದು ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಘರ್ ಖಾಲಿಬಾಫ್ ಎಚ್ಚರಿಸಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಾತನಾಡಿ, ಹೆಜ್ಬೊಲ್ಲಾ ವಿರುದ್ಧ ದಾಳಿಯನ್ನು ಬಲ, ನಿಖರತೆ ಮತ್ತು ದೃಢನಿಶ್ಚಯದಿಂದ ಮುಂದುವರಿಸುತ್ತೇವೆ ಎಂದಿದ್ದಾರೆ.

ಇರಾನ್ ಪರಮಾಣು ಭವಿಷ್ಯ ಇನ್ನೂ ಅನಿಶ್ಚಿತ: ಯುದ್ಧದ ಮೂಲ ಕಾರಣವಾದ ಇರಾನ್‌ನ ಅಣು ಮತ್ತು ಕ್ಷಿಪಣಿ ಕಾರ್ಯಕ್ರಮದ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ. ಅಮೆರಿಕ ಮತ್ತು ಇಸ್ರೇಲ್, ಇರಾನ್ ಅಣ್ವಸ್ತ್ರಗಳನ್ನು ಅಭಿವೃದ್ಧಿಪಡಿಸಬಾರದು ಎಂದು ಒತ್ತಾಯಿಸುತ್ತಿವೆ. ಆದರೆ ಇರಾನ್ ತನ್ನ ಅಣು ಕಾರ್ಯಕ್ರಮ ಶಾಂತಿಯುತವಾಗಿದೆ ಎಂದು ಹೇಳುತ್ತಿದೆ. ಇರಾನ್ ಅಣು ಸಂಸ್ಥೆಯ ಮುಖ್ಯಸ್ಥ ಮೊಹಮ್ಮದ್ ಎಸ್ಲಾಮಿ, ಯುರೇನಿಯಂ ಸಂವರ್ಧನೆ ಹಕ್ಕು ಇರಾನ್‌ಗೆ ಅಗತ್ಯವಿದೆ ಎಂದು ಹೇಳಿದ್ದಾರೆ.

ಮುಂದಿನ ಮಾತುಕತೆಗಳ ಮೇಲೆ ನಿರೀಕ್ಷೆ: ಇಸ್ಲಾಮಾಬಾದ್‌ನಲ್ಲಿ ಶನಿವಾರ ನಡೆಯಲಿರುವ ಮಾತುಕತೆಗಳಲ್ಲಿ ಈ ಎಲ್ಲಾ ವಿಷಯಗಳು ಚರ್ಚೆಯಾಗಲಿವೆ. ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳಿಗೆ ಶುಲ್ಕ ವಿಧಿಸುವ ವಿಚಾರವೂ ಪ್ರಮುಖವಾಗಲಿದೆ. ಇದು ದಶಕಗಳಿಂದ ಇದ್ದ ಉಚಿತ ಸಾಗಣೆ ವ್ಯವಸ್ಥೆಯನ್ನು ಬದಲಾಯಿಸಬಹುದು. ಒಟ್ಟಿನಲ್ಲಿ, ಯುದ್ಧ ವಿರಾಮ ಒಪ್ಪಂದವು ಅಸ್ಥಿರವಾಗಿದ್ದು, ಮುಂದಿನ ದಿನಗಳಲ್ಲಿ ನಡೆಯುವ ಮಾತುಕತೆಗಳು ಮಧ್ಯಪ್ರಾಚ್ಯದ ಭವಿಷ್ಯವನ್ನು ನಿರ್ಧರಿಸಬಹುದು.

ಪಾಕ್ ವಿಶ್ವಾಸಾರ್ಹವಲ್ಲ

•ಹೊಸದಿಲ್ಲಿ: ಅಮೆರಿಕ ಮತ್ತು ಇರಾನ್ ನಡುವೆ ಕದನ ವಿರಾಮಕ್ಕೆ ಮಧ್ಯಸ್ಥಿಕೆ ವಹಿಸಿದ ಪಾಕಿಸ್ತಾನದ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸಿದ ಇಸ್ರೇಲ್ ರಾಯಭಾರಿ, ಅಮೆರಿಕದ ನಡೆ ಅಚ್ಚರಿ ತಂದಿದೆ ಎಂದಿದ್ದಾರೆ. ಭಾರತಕ್ಕೆ ಇಸ್ರೇಲ್ ರಾಯಭಾರಿಯಾಗಿರುವ ರೂವೆಲ್ ಅಜರ್ ಅವರು, ಇಸ್ರೇಲ್ ಯಾವತ್ತೂ ಪಾಕಿಸ್ತಾನವನ್ನು ಒಂದು ವಿಶ್ವಾಸಾರ್ಹ ದೇಶ ಎಂದು ಪರಿಗಣಿಸುವುದೇ ಇಲ್ಲ. ಅಮೆರಿಕ, ಪಾಕಿಸ್ತಾನದ ಮಧ್ಯಸ್ಥಿಕೆಯನ್ನು ಒಪ್ಪಿಕೊಳ್ಳಲು ತನ್ನದೇ ಆದ ಕಾರಣಗಳನ್ನು ಹೊಂದಿರಬಹುದು. ಆದರೆ, ಇಸ್ರೇಲ್ ಪಾಕಿಸ್ತಾನವನ್ನು ಯಾವತ್ತೂ ನಂಬಿಕೆಗೆ ಯೋಗ್ಯವಾದ ದೇಶ ಎಂದು ನಂಬುವುದೇ ಇಲ್ಲ ಎಂದಿದ್ದಾರೆ.

ಶ್ರೀನಂದಾ ಪತ್ತೆಗೆ ವ್ಯಾಪಕ ಶೋಧ

ಪುಟ ೧➔ ಆದರೆ ಗುರುವಾರ ಬಾಲಕಿಯ ತಾಯಿ ರೋಹಿಣಿ ಅವರು ನನ್ನ ಮಗಳನ್ನು ಯಾರೋ ಸಂಚು ರೂಪಿಸಿ ಕರೆದೊಯ್ದಿದ್ದಾರೆ. ಆಕೆ ಆಕಸ್ಮಿಕವಾಗಿ ಎಲ್ಲಿಯೋ ಬಿದ್ದಿರಲು ಸಾಧ್ಯವಿಲ್ಲ ಎಂದು ನೀಡಿರುವ ಹೇಳಿಕೆಯು ತನಿಖೆಯ ದಿಕ್ಕನ್ನೇ ಬದಲಿಸುವಂತೆ ಮಾಡಿದೆ. ಶ್ರೀನಂದಾ ಒಬ್ಬಳೇ ಇದ್ದ ಸಮಯವನ್ನು ನೋಡಿ, ಯಾವುದೋ ಮಾದಕ ದ್ರವ್ಯ ನೀಡಿ ಅಥವಾ ಬಲವಂತವಾಗಿ ಕರೆದೊಯ್ದಿದ್ದಾರೆ ಎಂದು ರೋಹಿಣಿ ಕಣ್ಣೀರು ಹಾಕುತ್ತಾ ಆರೋಪಿಸಿದ್ದಾರೆ. ಈ ಹೇಳಿಕೆಯು ಸ್ಥಳೀಯ ಪೊಲೀಸರು ಹಾಗೂ ಶೋಧನಾ ತಂಡಗಳಲ್ಲಿ ಗೊಂದಲದ ಜತೆಗೆ ಒತ್ತಡವನ್ನೂ ಹೆಚ್ಚಿಸಿದೆ.

ಇದರ ಜತೆಯಲ್ಲೇ ಶೋಧ ಕಾರ್ಯದಲ್ಲಿ ತೊಡಗಿರುವ ಕೆಲವು ಸಿಬ್ಬಂದಿ ಸೇರಿದಂತೆ ಸಾರ್ವಜನಿಕರು ಸಹ ಮಾಣಿಕ್ಯಧಾರದಲ್ಲಿ ಬಾಲಕಿ ನಾಪತ್ತೆಯಾಗಿರುವ ಸಾಧ್ಯತೆ ತೀರಾ ಕಡಿಮೆ ಇದೆ. ಪ್ರಕರಣದ ಹಿಂದೆ ಬೇರೇನೋ ಇದೆ ಎಂದು ಸಂಶಯ ವ್ಯಕ್ತಪಡಿಸುತ್ತಿರುವುದರಿಂದ ಪೊಲೀಸರು ತನಿಖೆಯ ಆಯಾಮವನ್ನು ಬದಲಿಸುವ ಬಗ್ಗೆ ಆಲೋಚಿಸುವಂತೆ ಮಾಡಿದೆ. ಬಾಲಕಿ ಶ್ರೀನಂದಾ ಮತ್ತವರ ಕುಟುಂಬ ಏಪ್ರಿಲ್ 7ರಂದು ಹಂಪಿಗೆ ಭೇಟಿ ನೀಡಿದ್ದು, ಅಲ್ಲಿಂದ ನೇರವಾಗಿ ದತ್ತಪೀಠಕ್ಕೆ ಆಗಮಿಸಿತ್ತು. ಆದರೆ ಬಾಲಕಿ ನಾಪತ್ತೆಯಿಂದ ಕುಟುಂಬದ ಸಂತೋಷದ ಕ್ಷಣಗಳು ಮಾಯವಾಗಿ ಮೌನ ಆವರಿಸಿಕೊಂಡಿದೆ.

ಮುಂದುವರಿದ ಶೋಧಕಾರ್ಯ: ಬಾಲಕಿಯ ಪತ್ತೆಗಾಗಿ ಮೂರನೇ ದಿನವೂ ಶೋಧ ಕಾರ್ಯ ತೀವ್ರಗೊಂಡಿದೆ. ಗಿರಿ, ಶಿಖರಗಳ ನಡುವೆ ಕಂದಕ, ಕೊರಕಲುಗಳನ್ನೆಲ್ಲಾ ಜಾಲಾಡಲಾಗುತ್ತಿದೆ. ಶೋಧ ಕಾರ್ಯಕ್ಕೆ ಶ್ವಾನದಳವನ್ನೂ ಬಳಸಿಕೊಳ್ಳಲಾಗಿದೆ.

ಪಶ್ಚಿಮ ವಲಯ ಐಜಿಪಿ ಭೇಟಿ: ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಅವರು ಗುರುವಾರ ಮಾಣಿಕ್ಯಧಾರಕ್ಕೆ ಭೇಟಿ ನೀಡಿದ್ದಾರೆ. ನಂತರ ನಗರದಲ್ಲಿ ಎಸ್ಪಿ ಮತ್ತಿತರರೆ ಸಿಬ್ಬಂದಿಗಳಿಂದ ಮಾಹಿತಿ ಪಡೆದು, ತನಿಖೆ ಸಂಬಂಧ ಸಲಹೆಯನ್ನೇ ನೀಡಿದ್ದಾರೆ.

ಸದ್ಯ ಸ್ಥಳದಲ್ಲಿ ಅರಣ್ಯ ಇಲಾಖೆ, ಪೊಲೀಸ್ ಹಾಗೂ ಅಗ್ನಿಶಾಮಕ ದಳ, ಎಸ್‌ಡಿಆರ್‌ಎಫ್‌ನ 100ಕ್ಕೂ ಹೆಚ್ಚು ಸಿಬ್ಬಂದಿ ಸತತವಾಗಿ ಶೋಧ ಕಾರ್ಯದಲ್ಲಿ ತೊಡಗಿದ್ದಾರೆ. ಶೋಧಕ್ಕಾಗಿ ಡಾಗ್ ಸ್ಕ್ವಾಡ್, ಡ್ರೋನ್ ಹಾಗೂ ಥರ್ಮಲ್ ಡ್ರೋನ್‌ಗಳನ್ನು ಬಳಸಲಾಗುತ್ತಿದೆ.

ಅರಣ್ಯ ಸಚಿವರ ಆದೇಶ: ಶೋಧ ಕಾರ್ಯಾಚರಣೆಗೆ ಪೊಲೀಸರೊಂದಿಗೆ ಕೈಜೋಡಿಸುವಂತೆ ಅರಣ್ಯ ಇಲಾಖೆಗೆ ಸಚಿವ ಈಶ್ವರ ಬಿ. ಖಂಡ್ರೆ ಅವರು ಸೂಚನೆ ನೀಡಿದ್ದಾರೆ. ಜಿಲ್ಲಾಡಳಿತ ಮತ್ತು ಪೊಲೀಸ್ ಪಡೆಗೆ ನೆರವು ನೀಡಲು ನುರಿತ ಅರಣ್ಯ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸುವಂತೆ ಸೂಚಿಸಿದ್ದಾರೆ. ಚಂದ್ರದ್ರೋಣ ಪರ್ವತ ಪ್ರದೇಶವು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರದಿದ್ದರೂ ಸಹ, ಆ ಪ್ರದೇಶವು ಕಡಿದಾದ ಗುಡ್ಡಗಳು ಮತ್ತು ದಟ್ಟವಾದ ಗಿಡಗಂಟೆಗಳಿಂದ ಕೂಡಿರುವ ಕಾರಣ ಬಾಲಕಿಯ ಸುರಕ್ಷತೆಯ ದೃಷ್ಟಿಯಿಂದ ಅರಣ್ಯ ಇಲಾಖೆಯ ಬೆಂಬಲ ಅತ್ಯಗತ್ಯ ಎಂದು ಸಚಿವರು ತಿಳಿಸಿದ್ದಾರೆ. ಬಾಲಕಿಯನ್ನು ಶೀಘ್ರವಾಗಿ ಪತ್ತೆ ಹಚ್ಚಲು ಥರ್ಮಲ್ ಡ್ರೋನ್ ಸೇರಿದಂತೆ ಅತ್ಯಾಧುನಿಕ ಉಪಕರಣಗಳನ್ನು ಬಳಸುವಂತೆ ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ರಕ್ಷಣಾ ಕಾರ್ಯಾಚರಣೆಯನ್ನು ಚುರುಕುಗೊಳಿಸುವಂತೆ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಸಚಿವರು ಆದೇಶ ನೀಡಿದ್ದಾರೆ.

ಪ.ಬಂಗಾಳಕ್ಕೆ 6 ಗ್ಯಾರಂಟಿ ಘೋಷಿಸಿದ ಮೋದಿ

ಪುಟ ೧➔ ಮೂರನೆಯದಾಗಿ, ಭ್ರಷ್ಟಾಚಾರ ಹಾಗೂ ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳ ಎಲ್ಲಾ ದಾಖಲೆಗಳನ್ನು ಮರು ಪರಿಶೀಲಿಸಲಾಗುವುದು ಎಂದು ಹೇಳಿದರು.

ನಾಲ್ಕನೆಯ ಭರವಸೆಯಲ್ಲಿ, ಭ್ರಷ್ಟಾಚಾರದಲ್ಲಿ ತೊಡಗಿರುವ ಯಾರೇ ಆಗಿರಲಿ ಕಾನೂನಿನಲ್ಲಿ ಶಿಕ್ಷೆಗೆ ಒಳಗಾಗುವಂತೆ ಕ್ರಮ ಕೈಗೊಳ್ಳಲಾಗುವುದು ಎಂದರು. ಐದನೆಯದಾಗಿ, ಕಾನೂನಾತ್ಮಕವಾಗಿ ಭಾರತದಲ್ಲಿ ಆಶ್ರಯ ಪಡೆದವರಿಗೆ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು. ಜತೆಗೆ ನುಸುಳುವವರನ್ನು ದೇಶದಲ್ಲಿ ಉಳಿಯಲು ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಆರನೆಯದಾಗಿ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ರಾಜ್ಯ ಸರ್ಕಾರಿ ನೌಕರರು ಮತ್ತು ಶಿಕ್ಷಕರಿಗೆ 7ನೇ ವೇತನ ಆಯೋಗವನ್ನು ಜಾರಿಗೆ ತರುವುದಾಗಿ ಹೇಳಿದರು.

ಮತಬ್ಯಾಂಕ್ ರಾಜಕಾರಣ: ಟಿಎಂಸಿ ಧರ್ಮ ಆಧಾರಿತ ಮೀಸಲಾತಿ ನೀತಿಯನ್ನು ಅನುಸರಿಸಿ, ಮತಬ್ಯಾಂಕ್ ರಾಜಕಾರಣ ನಡೆಸುತ್ತಿದೆ ಎಂದು ಟೀಕಿಸಿದ ಮೋದಿ, ರಾಜ್ಯದ ಅಭಿವೃದ್ಧಿಗಾಗಿ ಡಬಲ್ ಎಂಜಿನ್ ಸರ್ಕಾರ ಅಗತ್ಯವಿದೆ ಎಂದರು. ಪ್ರಧಾನಿ ಮತ್ತು ಮುಖ್ಯಮಂತ್ರಿ ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ರಾಜ್ಯಕ್ಕೆ ಪ್ರಯೋಜನವಾಗುತ್ತದೆ ಎಂದು ಹೇಳಿದರು.

ಕೊನೆಯಲ್ಲಿ ಸಬ್ಕಾ ಸಾಥ್, ಸಬ್ಕಾ ವಿಕಾಸ್ ಎಂಬ ಕೇಂದ್ರ ಸರ್ಕಾರದ ನೀತಿಯನ್ನು ಪುನರುಚ್ಚರಿಸಿ, ಬಂಗಾಳವನ್ನು ದೋಚಿದ ಎಲ್ಲರೂ ಕಾನೂನಿನ ಮುಂದೆ ಉತ್ತರಿಸಬೇಕಾಗುತ್ತದೆ ಎಂದು ಮೋದಿ ಹೇಳಿದರು.



ಬಿಜೆಪಿ ಅಧಿಕಾರಕ್ಕೆ ಬಂದರೆ ವಿಶ್ವಾಸದ ವಾತಾವರಣ

ಪುಟ ೧➔ ರಾಜ್ಯದಲ್ಲಿ ಭಯದ ವಾತಾವರಣವಿದ್ದು ಹೂಡಿಕೆಗಳು ಕುಂಠಿತಗೊಂಡಿವೆ . ಭಯದ ವಾತಾವರಣದಲ್ಲಿ ಹೂಡಿಕೆ ಸಾಧ್ಯವಿಲ್ಲ, ವಿಶ್ವಾಸ ನಿರ್ಮಾಣವಾದಾಗ ಮಾತ್ರ ಅಭಿವೃದ್ಧಿ ಸಾಧ್ಯ. ಬಿಜೆಪಿ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ವಿಶ್ವಾಸದ ವಾತಾವರಣವನ್ನು ನಿರ್ಮಿಸುತ್ತೇವೆ ಎಂದು ಅವರು ಭರವಸೆ ನೀಡಿದರು.ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಆಡಳಿತವನ್ನು ಟೀಕಿಸಿದ ಅವರು, ದೇಶದ ಇತರ ರಾಜ್ಯಗಳು ಅಭಿವೃದ್ಧಿಯತ್ತ ಸಾಗುತ್ತಿರುವಾಗ ಬಂಗಾಳ ಮಾತ್ರ ಹಿಂದುಳಿದಿದೆ ಎಂದರು. ವಿಕಸಿತ ಬಂಗಾಳಕ್ಕಾಗಿ ಟಿಎಂಸಿ ಸರ್ಕಾರವನ್ನು ಕೆಳಗಿಳಿಸುವುದು ಅನಿವಾರ್ಯ ಎಂದು ಮೋದಿ ಕರೆ ನೀಡಿದರು.

ಕೇರಳ, ಅಸ್ಸಾಂನಲ್ಲಿ ಭರ್ಜರಿ ಮತದಾನ

ಪುಟ ೧➔ ಈ ಚುನಾವಣೆಯಲ್ಲಿ 126 ಕ್ಷೇತ್ರಗಳಿಂದ ಒಟ್ಟು 722 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದು, ಸುಮಾರು 2.5 ಕೋಟಿ ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. 2021ರ ಚುನಾವಣೆಯಲ್ಲಿ ಅಸ್ಸಾಂನಲ್ಲಿ ಶೇ.82.04 ಮತದಾನ ದಾಖಲಾಗಿತ್ತು.

ಕೇರಳದಲ್ಲಿ ಹೆಚ್ಚಿದ ಮತದಾನ ಪ್ರಮಾಣ: ಮತದಾನ ಪ್ರಮಾಣ ಶೇ.90 ತಲುಪುವ ಸಾಧ್ಯತೆ ಇದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ರಥನ್ ಯು. ಕೆಲ್ಕರ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. 2021ರಲ್ಲಿ ಕೇರಳದಲ್ಲಿ ಶೇ.74.06 ಮತದಾನ ದಾಖಲಾಗಿತ್ತು. ಕೇರಳದಲ್ಲಿ ಸಾಂಪ್ರದಾಯಿಕವಾಗಿ ಎಡಪಕ್ಷದ ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ನಡುವಿನ ಸ್ಪರ್ಧೆ ಹೆಚ್ಚು ತೀವ್ರವಾಗಿದ್ದು, ಈ ಬಾರಿ 140 ಕ್ಷೇತ್ರಗಳಿಂದ 883 ಅಭ್ಯರ್ಥಿಗಳು ಕಣಕ್ಕಿಳಿದಿದ್ದಾರೆ. ಒಟ್ಟು 2.71 ಕೋಟಿ ಮತದಾರರು ಇದ್ದಾರೆ. ಸಿಪಿಐ(ಎಂ) ನಾಯಕ ಸಿ.ಎನ್. ಮೋಹನನ್ ಅವರು ಮತದಾನ ಪ್ರಮಾಣ ಹೆಚ್ಚಿರುವುದು ಎಲ್‌ಡಿಎಫ್‌ಗೆ ಲಾಭಕರ ಎಂದು ಹೇಳಿದ್ದಾರೆ. ಬಿಜೆಪಿ ನಾಯಕ ಕೆ.ಎಸ್. ಶೈಜು ಅವರು ಮಹಿಳಾ ಮತದಾರರ ಹೆಚ್ಚಿನ ಭಾಗವಹಿಸುವಿಕೆಯೇ ಮತದಾನ ಪ್ರಮಾಣ ಏರಿಕೆಗೆ ಕಾರಣ ಎಂದು ಹೇಳಿದ್ದಾರೆ. ಕಾಂಗ್ರೆಸ್ ನಾಯಕ ದೀಪ್ತಿ ಮೇರಿ ವರ್ಗೀಸ್ ಅವರು ಮತದಾನ ಪ್ರಮಾಣ ಏರಿಕೆಗೆ ಕಾರಣಗಳನ್ನು ವಿವರವಾಗಿ ವಿಶ್ಲೇಷಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮುಂದಿನ ಹಂತದ ಚುನಾವಣೆ: ಈ ಚುನಾವಣೆಯು ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಮೊದಲ ಹಂತವಾಗಿದೆ. ಪಶ್ಚಿಮ ಬಂಗಾಳದಲ್ಲಿ ಏ.23 ಮತ್ತು 29ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ. ತಮಿಳುನಾಡಿನಲ್ಲಿ ಏ.23 ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಎಲ್ಲಾ ರಾಜ್ಯಗಳ ಮತ ಎಣಿಕೆ ಮೇ 4ರಂದು ನಡೆಯಲಿದೆ.

ಉಪ ಚುನಾವಣೆ ಶೇ.68 ಮತದಾನ

ಪುಟ ೧➔ ಬೆಳಿಗ್ಗೆಯಿಂದಲೇ ಮತಗಟ್ಟೆಗಳ ಮುಂದೆ ಮಹಿಳೆಯರು, ಯುವಜನರು ಹಾಗೂ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಆಗಮಿಸಿ ಹುಮ್ಮಸ್ಸಿನಿಂದ ಮತದಾನ ಮಾಡಿದರು. ಬಾಗಲಕೋಟೆ ಕ್ಷೇತ್ರ ಉಪಚುನಾವಣೆ ಹಿನ್ನೆಲೆಯಲ್ಲಿ ಗೋವಾ ಹಾಗೂ ಮಂಗಳೂರು ಕಡೆ ದುಡಿಯಲು ಹೋದವರು ಬಸ್‌ನಲ್ಲಿ ಬಂದು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು.

ಪುದುಚೇರಿಯಲ್ಲಿ ಶೇ.90 ಮತದಾನ

•ಬೆಂಗಳೂರು: ಪುದುಚೇರಿ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಗುರುವಾರ ನಡೆದಿದ್ದು, ಶೇ.90ರಷ್ಟು ಮತ ಚಲಾವಣೆಯಾಗಿದೆ. ಇದರಿಂದ ಬಿಜೆಪಿ ಮತ್ತೆ ಅಧಿಕಾರಕ್ಕೇರುವ ನಿರೀಕ್ಷೆ ಗರಿಗೆದರಿದೆ. ಚುನಾವಣೆಗೆ ಇನ್ನೂ ಎರಡು ವರ್ಷಗಳಿರುವಾಗ ಬಿಜೆಪಿ ರಾಷ್ಟ್ರೀಯ ನಾಯಕತ್ವವು ನಿರ್ಮಲ್ ಕುಮಾರ್ ಸುರಾಣ ಅವರನ್ನು ಪುದುಚೇರಿಯ ಪಕ್ಷದ ಉಸ್ತುವಾರಿಯಾಗಿ ನಿಯೋಜಿಸಿತ್ತು. ನಿರ್ಮಲ್ ಕುಮಾರ್ ಸುರಾಣ ಕಾಲಿಗೆ ಚಕ್ರ ಕಟ್ಟಿದಂತೆ ಅಲ್ಲಿ ಓಡಾಡಿ ಕಾರ್ಯತಂತ್ರ ರೂಪಿಸಿದ್ದರು. ಅವರ ಪರಿಶ್ರಮದ ಪರಿಣಾಮವಾಗಿಯೇ 2021ರಲ್ಲಿ ಅಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಏರಿತ್ತು. ಸಣ್ಣ ರಾಜ್ಯವಾಗಿದ್ದರೂ ಪುದುಚೇರಿಯಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದ್ದವು. ಆದ್ದರಿಂದ ಅಲ್ಲಿ ಬಿಜೆಪಿ ಅಗತ್ಯವೇನು ಎಂಬುದನ್ನು ಪಕ್ಷದ ಕಾರ್ಯಕರ್ತರು ಮತ್ತು ಅವರ ಮೂಲಕ ಜನ ಸಾಮಾನ್ಯರಿಗೆ ಅರ್ಥ ಮಾಡಿಸಲಾಯಿತು. ಈ ಬಾರಿಯ ಚುನಾವಣೆಯಲ್ಲಿ ಎಐಎನ್‌ಆರ್‌ಸಿ ಜತೆ ಬಿಜೆಪಿ ಮೈತ್ರಿ ಮಾಡಿಕೊಳ್ಳುವಲ್ಲಿಯೂ ಸುರಾಣ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ.

ಕಿರುಸುದ್ದಿ

ಪ್ರೇರಣಾ ಕಾಲೇಜ್ ವಿದ್ಯಾರ್ಥಿಗಳ ಸಾಧನೆ



ಹುಬ್ಬಳ್ಳಿ: ಇಲ್ಲಿಯ ವಿದ್ಯಾನಗರ ಕೆಎಲ್ಇ ಸಂಸ್ಥೆಯ ಪ್ರೇರಣಾ ಪದವಿ ಪೂರ್ವ ವಿಜ್ಞಾನ ಕಾಲೇಜ್ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಒಟ್ಟು 250 ವಿದ್ಯಾರ್ಥಿಗಳಲ್ಲಿ 149 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 99 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 2 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 22 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ 100ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ. ಭೌತಶಾಸ್ತ್ರದಲ್ಲಿ 14 ವಿದ್ಯಾರ್ಥಿಗಳು, ಗಣಿತಶಾಸ್ತ್ರದಲ್ಲಿ 5 ವಿದ್ಯಾರ್ಥಿಗಳು, ಜೀವಶಾಸ್ತ್ರದಲ್ಲಿ 1, ಗಣಕಶಾಸ್ತ್ರ 5 ಸಂಖ್ಯಾಶಾಸ್ತ್ರದಲ್ಲಿ-02 ವಿದ್ಯಾರ್ಥಿಗಳು, ಕನ್ನಡದಲ್ಲಿ 3 ವಿದ್ಯಾರ್ಥಿಗಳು, ಸಂಸ್ಕೃತದಲ್ಲಿ 2 ವಿದ್ಯಾರ್ಥಿಗಳು, 100ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ. ಶ್ರೀರಕ್ಷಾ ಅವಟಗಿ 588 ಅಂಕಗಳನ್ನು ಪಡೆದುಕೊಂಡು ಮಹಾವಿದ್ಯಾಲಯಕ್ಕೆ ಪ್ರಥಮ ಪಡೆದಿದ್ದಾಳೆ. ಅಲ್ಲದೆ ವಿವಿಧ ವಿಷಯಗಳಲ್ಲಿ ಒಟ್ಟು 38 ವಿದ್ಯಾರ್ಥಿಗಳು 99 ಅಂಕಗಳನ್ನು ಗಳಿಸಿ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ. ಸಂಸ್ಥೆಯ ಗೌರವ ಚೇರಮನ್ ಡಾ.ಪ್ರಭಾಕರ ಕೋರೆ ಸಂಸ್ಥೆಯ ಚೇರಮನ್ ಅಮಿತ್ ಕೋರೆ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕ ಹಾಗೂ ಸದಸ್ಯರು, ಕೆಎಲ್ಇ ಸಂಸ್ಥೆಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರೊಚಾನ್ಸಲರ್ ಡಾ.ಅಶೋಕ ಶೆಟ್ಟರ, ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಕುಮಾರಸ್ವಾಮಿ ಮೇವುಂಡಿಮಠ, ಎಲ್ಲಾ ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳನ್ನು ಅಭಿನಂದಿಸಿರುತ್ತಾರೆ.

ಸೌಮ್ಯ ಸುಣದಾಳ ಕಾಲೇಜಿಗೆ ಪ್ರಥಮ



ಬೀಳಗಿ: ತಾಲೂಕಿನ ಕುಂದರಗಿ ಗ್ರಾಮದ ಶ್ರೀ ರಾಮಲಿಂಗೇಶ್ವರ ವಿದ್ಯಾ ವರ್ಧಕ ಸಂಘದ ರಾಮಲಿಂಗೇಶ್ವರ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಾಣಿಜ್ಯ ವಿಭಾಗದಲ್ಲಿ ಶೇ.94.12, ಕಲಾ ವಿಭಾಗದಲ್ಲಿ ಶೇ.71.11 ರಷ್ಟು ಉತ್ತೀರ್ಣರಾಗಿರುವರು. ವಾಣಿಜ್ಯ ವಿಭಾಗದಲ್ಲಿ ಸೌಮ್ಯ ಮಲ್ಲಪ್ಪ ಸುಣದಾಳ 579 (ಶೇ.96.50) ಅಂಕಗಳನ್ನು ಪಡೆದು ಪ್ರಥಮ ಸ್ಥಾನ, ಸುಶ್ಮಿತಾ ಗೋವಿಂದಪ್ಪ ಜಡೆಮ್ಮನ್ನವರ 558 (ಶೇ.93) ಅಂಕಗಳನ್ನು ಗಳಿಸಿ ದ್ವಿತೀಯ ಸ್ಥಾನ ಪಡೆದು ಉತ್ತಮ ಸಾಧನೆ ಮಾಡಿರುವರೆಂದು ಪ್ರಭಾರ ಪ್ರಾಚಾರ್ಯ ಕೆ. ಪಿ. ರಾಜಮನಿ ತಿಳಿಸಿದ್ದಾರೆ. ರಾಮಲಿಂಗೇಶ್ವರ ವಿದ್ಯಾ ವರ್ಧಕ ಸಂಘದ ಅಧ್ಯಕ್ಷ ವೀರಸಂಗಮೇಶ್ವರ ಶಿವಾಚಾರ್ಯರು, ಚೇರಮನ್ ಬಸವರಾಜ ಖೋತ ಮತ್ತು ಆಡಳಿತ ಮಂಡಳಿ ಸದಸ್ಯರು ಸಾಧನೆಗೈದ ವಿದ್ಯಾರ್ಥಿಗಳಿಗೆ ಶುಭ ಕೋರಿದ್ದಾರೆ.

ರಾಮಲಿಂಗೇಶ್ವರ ಕಾಲೇಜಿನ ಫಲಿತಾಂಶ ಉತ್ತಮ

ದಿಶಾ ಇಂಟರ್‌ನ್ಯಾಷನಲ್ ಪಿಯು ಕಾಲೇಜಿನ ಸಾಧನೆ



ಶಿಗ್ಗಾಂವ: ಪಟ್ಟಣದ ಪ್ರತಿಷ್ಠಿತ ದಿಶಾ ಇಂಟರ್‌ನ್ಯಾಷನಲ್ ಪಿಯುಸಿ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಶೇ.100ರಷ್ಟು ಫಲಿತಾಂಶ ದಾಖಲಿಸುವ ಮೂಲಕ ತಾಲೂಕಿಗೆ ಮೊದಲಿಗರೆನಿಸಿಕೊಂಡಿದ್ದಾರೆ. ಒಟ್ಟು 50 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, ಮೂರು ವಿದ್ಯಾರ್ಥಿಗಳು ಶೇ.95ಕ್ಕೂ ಹೆಚ್ಚು, 18 ವಿದ್ಯಾರ್ಥಿಗಳು ಶೇ.90ಕ್ಕೂ ಹೆಚ್ಚು ಹಾಗೂ 29 ವಿದ್ಯಾರ್ಥಿಗಳು ಶೇ.85ಕ್ಕೂ ಹೆಚ್ಚು ಫಲಿತಾಂಶ ದಾಖಲು ಮಾಡಿದ್ದಾರೆ. ಶೈನಾಜ್ ಖಾನಮ್ ಖಾಜಿಖಾನ ಶೇ.98(588) ಫಲಿತಾಂಶದೊಂದಿಗೆ ಮೊದಲ ಸ್ಥಾನ, ಗಂಗಾಧರಯ್ಯ ಹಿರೇಮಠ ಶೇ.96.13 (577) ಅಂಕದೊಂದಿಗೆ ದ್ವಿತೀಯ ಸ್ಥಾನ ಹಾಗೂ ರುಖಿಯಾ ಅಣ್ಣಾವರ ಶೇ.95.5 (573) ಫಲಿತಾಂಶದೊಂದಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಉತ್ತಮ ಸಾಧನೆ ತೋರಿದ ಮಕ್ಕಳಿಗೆ ಸಂಸ್ಥೆಯ ಅಧ್ಯಕ್ಷ ಸೋಮಣ್ಣ ಬೇವಿನಮರದ ಮತ್ತು ಕಾರ್ಯದರ್ಶಿ ರಾಘವೇಂದ್ರ ಬೇವಿನಮರದ ಹಾಗೂ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಪಿಯುಸಿಯಲ್ಲಿ ಜೆಎಸ್ಸೆಸ್‌ಗೆ ಶೇ.95.95ರಷ್ಟು ಫಲಿತಾಂಶ



ಧಾರವಾಡ: ಜನತಾ ಶಿಕ್ಷಣ ಸಮಿತಿಯ ಆರ್.ಎಸ್. ಹುಕ್ಕೇರಿಕರ ಪದವಿಪೂರ್ವ ಕಾಲೇಜು 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದೆ. ಪರೀಕೆ ಬರೆದ 701 ಮಕ್ಕಳ ಪೈಕಿ 667 ಮಕ್ಕಳು ಪಾಸಾಗಿ, ಶೇ.95.95ರಷ್ಟು ಫಲಿತಾಂಶ ದಾಖಲಿಸಿದೆ.

ಕಲಾ ವಿಭಾಗದಲ್ಲಿ ಪರೀಕ್ಷೆ ಬರೆದ 72 ಮಕ್ಕಳ ಪೈಕಿ 69 ಮಕ್ಕಳು ಪಾಸಾಗಿದ್ದು, ಶೇ.95.83ರಷ್ಟು, ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆ ಬರೆದ 119 ಮಕ್ಕಳಲ್ಲಿ 116 ಮಕ್ಕಳು ಉತ್ತೀರ್ಣರಾಗಿ, 97.47ರಷ್ಟು, ವಿಜ್ಞಾನ ವಿಭಾಗದಲ್ಲಿ ಪರೀಕ್ಷೆ ಬರೆದ 510 ಮಕ್ಕಳ ಪೈಕಿ 482 ಮಕ್ಕಳು ಉತ್ತೀರ್ಣರಾಗಿ 94.50ಷ್ಟು ಫಲಿತಾಂಶ ದಾಖಲಾಗಿದೆ.

ಕಲಾ ವಿಭಾಗ: ಕಲಾ ವಿಭಾಗದಲ್ಲಿ ನಿಧಿ ಚಿಕ್ಕೆರೂರ ಶೇ.97.33, ಶ್ರುತಿ ಹೆಬಸೂರ ಶೇ.97, ಅಚ್ಯುತ್ ಜೋಶಿ ಶೇ.96.67, ಜಾಹ್ನವಿ ಶೆಟ್ಟಿ 96.67, ಸನಂದನ್ ದೇಶಪಾಂಡೆ ಶೇ.96.33, ಹರ್ಷಿತಾ ತಿಮ್ಮರಸ 96.33, ಸಮೃದ್ಧಿ ಛಬ್ಬಿ ಶೇ.96, ಸಾಕ್ಷಿ ಬಿಜಾಪುರ ಶೇ.95.83, ಮೊಹ್ಮದ್ ಅತ್ತಾರ 95.83, ಬಸವರಾಜ ಲಕ್ಕಮ್ಮನವರ ಶೇ.95.50ರಷ್ಟು ಅಂಕ ಗಳಿಸಿದ್ದಾರೆ.

ವಾಣಿಜ್ಯ ವಿಭಾಗ: ವಿಜಯಲಕ್ಷ್ಮಿ ಕುಂಬಾರ ಶೇ.98.67, ಅನುಷ್ಕಾ ಶೂರಪಾಲಿ ಶೇ.98.67, ಕೃಷ್ಣಾ ವ್ಯಾಪಾರಿ ಶೇ.98.50, ಸಮೃದ್ಧಿ ಗೋಯರ್ ಶೇ.98.50, ಸಲೋನಿ ಪೈಲವಾನವಾಲೆ ಶೇ.97.50, ನೇಹಾ ಸಾಲಿಮಠ ಶೇ.97.50, ಅನಿರುದ್ಧ ಕುಲಕರ್ಣಿ ಶೇ.97.50, ಮೈತಾಲಿ ವರ್ಣೇಕರ್ ಶೇ.97, ಮಹಾಂತೇಶ ಅರಳಿಗಿಡ ಶೇ.97 ರಷ್ಟು ಅಂಕ ಗಳಿಸಿದ್ದಾರೆ.

ಕಲಾ ವಿಭಾಗ: ಅಂಕಿತಾ ಕ್ಯಾವಟರ ಶೇ.96.67, ಭಾಗ್ಯಶ್ರೀ ಬಿ ಶೇ.95.83 ಹಾಗೂ ದೀಪಾ ಹೊರಕೇರಿ ಶೇ.95.67, ಶಿವನಾಗಯ್ಯ ಹಿರೇಮಠ ಶೇ.95.50, ಸಮಿತ್ ಪರೇಟ್ ಶೇ.94ರಷ್ಟು ಅಂಕ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಕಾಲೇಜಿಗೆ ಪ್ರಥಮ: ಕಲಾ ವಿಭಾಗದಲ್ಲಿ ಅಂಕಿತಾ ಕ್ಯಾವಟರ ಶೇ.96.67, ವಾಣಿಜ್ಯ ವಿಭಾಗದಲ್ಲಿ ವಿಜಯಲಕ್ಷ್ಮಿ ಕುಂಬಾರ ಹಾಗೂ ಅನುಷ್ಕಾ ಶೂರಪಾಲಿ ಶೇ.98.67 ಹಾಗೂ ವಿಜ್ಞಾನ ವಿಭಾಗದಲ್ಲಿ ನಿಧಿ ಚಿಕ್ಕೆರೂರ ಶೇ.97.33ರಷ್ಟು ಅಂಕಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಒಟ್ಟು 65 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ನೂರಕ್ಕೆ ನೂರರಷ್ಟು ಅಂಕಗಳು ಗಳಿಸಿದ್ದಾರೆ. ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಉಡುಪಿ ಪೇಜಾವರ ವಿಶ್ವಪ್ರಸನ್ನ ತೀರ್ಥರು, ಕಾರ್ಯಾಧ್ಯಕ್ಷರಾದ ಡಾ.ಡಿ.ವೀರೇಂದ್ರ ಹೆಗ್ಗಡೆ, ಕಾರ್ಯದರ್ಶಿಗಳಾದ ಡಾ.ಅಜಿತ ಪ್ರಸಾದ, ಪ್ರಾಚಾರ್ಯರಾರದ ಭಾರತಿ ಶಾನಭಾಗ ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

ಶ್ರೀ ಶಾರದಾ ಪಿಯು ಕಾಲೇಜಿಗೆ ನೂರಕ್ಕೆ ನೂರು ಫಲಿತಾಂಶ





ಕೊಪ್ಪಳ: ನಗರದ ಪ್ರತಿಷ್ಠಿತ ಶ್ರೀ ಶಾರದಾ ಪದವಿ ಪೂರ್ವ ಕಾಲೇಜು (ಕಿಡದಾಳ), 2025-26ರ ಸಾಲಿನ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ.100ರಷ್ಟು ಫಲಿತಾಂಶ ದಾಖಲಿಸುವ ಮೂಲಕ ಜಿಲ್ಲೆಯಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ.

ಎಸ್.ಪಿ.ರಶ್ಮಿಶ್ರೀ 590/600 (98.33%), ಮೈತ್ರಿ 97.33, ವಿಕ್ರಮ್ ರಾಥೋಡ್ 97.33, ಯರಗೊನೆಪ್ಪನವರ ರಂಗನಾಥ 97.00, ಅಸ್ಮಾ ಇಲಕಲ್ 96.33, ತರುಣ್ ಬಿ.95.67, ವಿದ್ಯಾ 95.17, ರಿಜುಲಾ ಗಜೇಶ್ ಸಂಚೇತಿ 95.00, ತರುಣ್ ಕುಮಾರ್ 95.00 ಅಂಕ ಪಡೆದಿದ್ದಾರೆ.

ಗಣಿತ (06), ಗಣಕ ವಿಜ್ಞಾನ (03), ಭೌತಶಾಸ್ತ್ರ (02) ಮತ್ತು ಜೀವಶಾಸ್ತ್ರ (01) ವಿಷಯಗಳಲ್ಲಿ ನಮ್ಮ ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಗಳಿಸಿದ್ದಾರೆ.

ಈ ಅಮೋಘ ಸಾಧನೆಗೆ ಕಾರಣರಾದ ವಿದ್ಯಾರ್ಥಿಗಳನ್ನು, ಪೋಷಕರನ್ನು ಹಾಗೂ ಸಿಬ್ಬಂದಿ ವರ್ಗವನ್ನು ಶ್ರೀ ಶಾರದಾ ಫೌಂಡೇಶನ್ ಟ್ರಸ್ಟ್ (ರಿ) ನ ಅಧ್ಯಕ್ಷ ವ್ಹಿ.ಆರ್ ಪಾಟೀಲ ಹಾಗೂ ಕಾರ್ಯದರ್ಶಿಗ ಎಸ್.ಆರ್. ಪಾಟೀಲ ಅವರು ಹಾರ್ದಿಕವಾಗಿ ಅಭಿನಂದಿಸಿದ್ದಾರೆ.

ಕಾಲೇಜಿನ ಶೇ.50ರಷ್ಟು ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಪಡೆದಿರುವುದು ನಮ್ಮ ಶೈಕ್ಷಣಿಕ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ. ಪ್ರತಿಯೊಬ್ಬ ಉಪನ್ಯಾಸಕರ ಪರಿಶ್ರಮ ಮತ್ತು ವಿದ್ಯಾರ್ಥಿಗಳ ದೃಢ ಸಂಕಲ್ಪಕ್ಕೆ ಸಂದ ಜಯವಾಗಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ಶಾರದಾ ಪದವಿ ಪೂರ್ವ ಕಾಲೇಜು ಕಿಡದಾಳ ಮೊ.ನಂ.9538288888 ಸಂಪರ್ಕಿಸಬಹುದು.

ಎಕ್ಸಲಂಟ್ ವಿಜ್ಞಾನ ಪಿಯು ಕಾಲೇಜ್ ಅಮೋಘ ಸಾಧನೆ



ವಿಜಯಪುರ: ಪ್ರಸಕ್ತ ಸಾಲಿನ ಬಹು ನಿರೀಕ್ಷಿತ ಪಿಯುಸಿ ದ್ವಿತೀಯ ವರ್ಷದ ಫಲಿತಾಂಶ ಪ್ರಕಟಗೊಂಡಿದ್ದು, ನಗರದ ಪ್ರತಿಷ್ಠಿತ ಎಕ್ಸಲಂಟ್ ಪದವಿ ಪೂರ್ವ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಪಡೆದುಕೊಳ್ಳುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳಾದ ಅನುಷ್ಕಾ ಮಹಿಶಾಳೆ 600ಕ್ಕೆ 588 ಅಂಕಗಳನ್ನು ಪಡೆಯುವುದರೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನ ಪಡೆದರೆ, ನಿಖಿಲ ಕಿತ್ತೂರ 585 ಅಂಕಗಳೊಂದಿಗೆ ದ್ವಿತೀಯ ಸ್ಥಾನ, ಪ್ರತೀಕ ಚವ್ಹಾಣ ಹಾಗೂ ಅಂಜನಾ ಹೊನ್ನುಂಗುರ 584 ಅಂಕಗಳನ್ನು ಪಡೆದುಕೊಳ್ಳುವ ಮೂಲಕ ತೃತೀಯ ಸ್ಥಾನ ಪಡೆದಿದ್ದಾರೆ.

ಇನ್ನುಳಿದ ವಿದ್ಯಾರ್ಥಿಗಳಾದ ಮಲ್ಲಿಕಾರ್ಜುನ ಮುಚ್ಚಂಡಿ (582), ಅಕ್ಷತಾ ದೊಡ್ಡಮನಿ (582), ರಕ್ಷಿತಾ ಬಿರಾದಾರ (582), ಅಮನ್ ಮದಭಾವಿ (581), ಶ್ರೇಯಾ ಗಂಗರಗೊಂಡ (581) ಶ್ರೇಯಾ ಮುರುಗುಂಡೆ (580), ಸಹನಾ ಮಾವಿನಗಿಡದ (579), ಅಮರ್ ಇರಕಲ್ (579), ಧರಣಿ ಜೋಶಿ (579), ಸಾವಿತ್ರಿ ಸುನೀಲ್ ಪಾಟೀಲ (579), ಅನುಶ್ರೀ ಬಿರಾದಾರ (578), ಸುದೀಪ ದೊರನಳ್ಳಿ (578), ವೈಷ್ಣವಿ ಚಿಮ್ಮಲಗಿ (578), ಶ್ರೇಯಾ ತೋಪಲಕಟ್ಟಿ (577), ಗಣೇಶ ಕನ್ನೊಳ್ಳಿ (577), ಮದನಗೌಡ ರುಳಕಿ (577), ಸುಜನ್ ಮಾಂಡವಕರ್ (576), ಅಂಜಲಿ ಹಟ್ಟಿ (576), ಸೌಜನ್ಯ ಸುನೀಲ್ ಪ್ರಕಾಶ (576), ಸ್ಫೂರ್ತಿ ಬಿರಾದಾರ (576), ಅರ್ಪನೂರ್ ಕರ್ಜಗಿ (576) ಸೇರಿದಂತೆ ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ.

ಗುಣಮಟ್ಟದ ಶಿಕ್ಷಣದ ಮೂಲಕ ಗುರುತಿಸಿಕೊಂಡಿರುವ ಕಾಲೇಜಿನಿಂದ ಪರೀಕ್ಷೆಗೆ ಹಾಜರಾಗಿದ 718 ವಿದ್ಯಾರ್ಥಿಗಳಪೈಕಿ 715 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಅದರಲ್ಲಿ 438 ಡಿಸ್ಟಿಂಗ್ಷನ್, 273 ಪ್ರಥಮ ದರ್ಜೆ ಹಾಗೂ 4 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದು ಒಟ್ಟು 99.58 ಪ್ರತಿಷತ ಫಲಿತಾಂಶವನ್ನು ದೊರೆತಿರುತ್ತದೆ. ಗಣಿತದಲ್ಲಿ 79, ಭೌತಶಾಸ್ತ್ರದಲ್ಲಿ 12, ಕಂಪ್ಯೂಟರ್ ಸೈನ್ಸನಲ್ಲಿ 39, ಜೀವಶಾಸ್ತ್ರದಲ್ಲಿ 5, ಕನ್ನಡದಲ್ಲಿ 5 ಹಾಗೂ ಸಂಸ್ಕೃತದಲ್ಲಿ ಒಟ್ಟು ಸೇರಿದಂತೆ ಹೆಚ್ಚಿನ ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕಗಳನ್ನು ಪಡೆದುಕೊಂಡು ಅತ್ಯತ್ತಮ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಹರ್ಷ ವ್ಯಕ್ತಪಡಿಸಿದ ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ್ ಕೌಲಗಿ, ಈ ಪರೀಕ್ಷೆಯ ನಂತರದಲ್ಲಿ ಎದುರಾಗುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ಮೂಲಕ ಮಕ್ಕಳು ಇನ್ನೂ ಹೆಚ್ಚಿನ ಸಾಧನೆಯನ್ನು ಮಾಡಿ ಹೆತ್ತರವರ ಕನಸನ್ನು ಈಡೇರಿಸಬೇಕು ಎಂದರು.

ಮಕ್ಕಳ ಈ ಸಾಧನೆಗೆ ಕಾಲೇಜಿನ ಪ್ರಾಂಶುಪಾಲ ಮಂಜುನಾಥ ಜುನಗೊಂಡ ಸೇರಿದಂತೆ ಆಡಳಿತ ಮಂಡಳಿಯ ಸರ್ವ ಸದಸ್ಯರು, ಸರ್ವ ಬೋಧಕ ಬೋಧಕೇತರ ಸಿಬ್ಬಂದಿಗಳು ಶುಭ ಹಾರೈಸಿದ್ದಾರೆ.

ಚಿನ್ಮಯ ಕಾಲೇಜು ಶೇ.100ರಷ್ಟು ಫಲಿತಾಂಶ



ಹುಬ್ಬಳ್ಳಿ: ಚಿನ್ಮಯ ಪದವಿ ಪೂರ್ವ ವಿಜ್ಞಾನ ಮತ್ತು ವಾಣಿಜಸ್ಯ ಮಹಾವಿದ್ಯಾಲಯ, ಹುಬ್ಬಳ್ಳಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶ ಮಾಡಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ: 105 ವಿದ್ಯಾರ್ಥಿಗಳಲ್ಲಿ 43 ಉನ್ನತ ಶ್ರೇಣಿಯಲ್ಲಿ, 57 ಪ್ರಥಮ ಶ್ರೇಣಿಯಲ್ಲಿ, 05 ದ್ವಿತೀಯ ದರ್ಜೆಯಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸಿದ್ಧಿ ಗೋಖಲೆ ಶೇ.98.66, ಕಾಲೇಜಿಗೆ ಪ್ರಥಮ, ಮೋಕ್ಷ ಜೈನ ಶೇ.98.16, ಮತ್ತು ಭೂಮಿಕಾ ಎಸ್ ಶೇ. 97.5, ಸಹನಾ ಗಂಡೋಲಕರ ಶೇ.97.16, ವಿಘ್ನೇಶ ಅಗರವಾಲ್ ಶೇ.96.83. ಆರುಷ ಪಡಿಯಾರ ಶೇ.96.83, ವರ್ಷಿಣಿ ಗಂಗಣ್ಣವರ ಶೇ.96.66, ಸಂಜನಾ ಹಳ್ಳದ ಶೇ.96.5, ಬನಶ್ರೀ ಗುಣಾರಿ ಶೇ.96.33, ಮನೀಷಾ ಪಿಸೆ ಶೇ.96.16.

ವಿಜ್ಞಾನ ವಿಭಾಗದಲ್ಲಿ: 8 ವಿದ್ಯಾರ್ಥಿಗಳಲ್ಲಿ 40 ಉನ್ನತ ಶ್ರೇಣಿಯಲ್ಲಿ, 61 ಪ್ರಥಮ ಶ್ರೇಣಿಯಲ್ಲಿ, 3 ದ್ವಿತೀಯ ಶ್ರೇಣಿಯಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸನ್ನಿ ಕಾಮತ್ ಶೇ.97.5, ಆಶಿಷ ನಾಯಕ ಶೇ.96.66, ಅಮಿತ್ ಕೆಲಗೇರಿ ಶೇ.96.66, ಗಂಗಿಶೆಟ್ಟಿ ಚಂದನ ಶೇ.95.5, ಪಿ. ಶ್ರೇಯಾ ರಾವ್ ಶೇ.95.16, ಗಗನ್ ಮಾಳವದೆ ಶೇ.94.66, ಸಿರಿ ಗುತ್ತಲ ಶೇ.94.33, ಪ್ರಣೀತ ಪೂಜಾರಿ ಶೇ.94.16, ಕೀರ್ತನ ಕುಲಕರ್ಣಿ ಶೇ.94, ಮೋಕ್ಷ ಬಾಗರೇಚಾ ಶೇ.93.16 ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

100ಕ್ಕೆ 100 ಅಂಕ ಪಡೆದ ವಿದ್ಯಾರ್ಥಿಗಳು: ಕನ್ನಡ- ಪ್ರತೀಕ್ಷಾ ಸಾವಳಗಿಮಠ, ಹಿಂದಿ- ಸಿದ್ಧಿ ಗೋಖಲೆ, ಸನ್ನಿ ಕಾಮತ

ಗಣಿತ- ಆಶೀಶ್ ನಾಯ್ಕ, ಅರ್ಥಶಾಸ್ತ್ರ: ಬನಶ್ರೀ ಗುಣಾರಿ, ಭೂಮಿಕಾ ಎಸ್, ಮೋಕ್ಷ ಜೈನ, ಸಿದ್ಧಿ ಗೋಖಲೆ, ವ್ಯವಹಾರ ಅಧ್ಯಯನ: ರಿತಿಕಾ ಅಥಣಿ, ಮನೀಷಾ ಪಿಸೆ, ಸಂಜನಾ ಹಳ್ಳದ, ವರ್ಷಿಣಿ ಗಂಗಣ್ಣವರ, ಸಹನಾ ಗಂಡೋಲಕರ

ಲೆಕ್ಕಶಾಸ್ತ್ರ: ಸಿದ್ಧಿ ಗೋಖಲೆ, ಗಣಕಯಂತ್ರ: ಗಂಗಿಶೆಟ್ಟಿ ಚಂದನ, ಸಂಖ್ಯಾಶಾಸ್ತ್ರ: ಗಗನ ಕಲಬುರ್ಗಿ, ಬನಶ್ರೀ ಗುಣಾರಿ, ಸಂಜನಾ ಹಳ್ಳದ, ವಿಘ್ನೇಶ ಅಗರವಾಲ್, ಸಹನಾ ಗಂಡೋಲಕರ, ಸಿದ್ಧಿ ಗೋಖಲೆ.

ಈ ವಿದ್ಯಾರ್ಥಿಗಳ ಸಾಧನೆಗೆ ಚಿನ್ಮಯ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ, ಪ್ರಾಚಾರ್ಯರು ಹಾಗೂ ಬೋಧಕ- ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಸ್ವಾಮಿ ವಿವೇಕಾನಂದ ಪಿಯು ಕಾಲೇಜಿನ ಫಲಿತಾಂಶ ಉತ್ತಮ

ನಿಂಗಮ್ಮ ಬಿಸ್ಸಗೊಂಡ ರಾಜ್ಯಕ್ಕೆ 8ನೇ ರ್‍ಯಾಂಕ್



ಬೀಳಗಿ: ಪಟ್ಟಣದ ಸ್ವಾಮಿ ವಿವೇಕಾನಂದ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ 2025-26ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಒಟ್ಟು 436 ವಿದ್ಯಾರ್ಥಿಗಳಲ್ಲಿ 187 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 222 ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದರೆ 21 ವಿದ್ಯಾರ್ಥಿಗಳು ದ್ವಿತೀಯ ಸ್ಥಾನದಲ್ಲಿ ಉತ್ತೀರ್ಣರಾಗಿದ್ದಾರೆ.

ಪ್ರತಿ ವರ್ಷವು ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯು ತನ್ನದೇಯಾದ ಕೊಡುಗೆ ನೀಡುತ್ತಾ ಪರೀಕ್ಷಾ ಫಲಿತಾಂಶದಲ್ಲಿ ಮುನ್ನಡೆ ಸಾಧಿಸುತ್ತಾ ಬಂದಿರುತ್ತಾರೆ.

ವಿಜ್ಞಾನ ವಿಭಾಗ: ನಿಂಗಮ್ಮ ಬಿಸ್ಸಗೊಂಡ ಶೇ.98.66 ಪ್ರಥಮ ಸ್ಥಾನ ಮತ್ತು ರಾಜ್ಯಕ್ಕೆ 8ನೇ ರ್‍ಯಾಂಕ್ ಹಾಗೂ ಕಾರ್ತಿಕ ಬಡಗೌಡರ ಶೇ.98.33 ದ್ವಿತೀಯ ಸ್ಥಾನ ಮತ್ತು ರಾಜ್ಯಕ್ಕೆ 10ನೇ ರ್‍ಯಾಂಕ್ ಪಡೆದಿದ್ದು, ಸಹನಾ ಸಜ್ಜನ ಶೇ.97.83 ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ವಾಣಿಜ್ಯ ವಿಭಾಗ: ಶ್ಲೋಕ್ ಗಜರಗಾವಕರ ಶೇ. 97.50 ಕಾಲೇಜಿಗೆ ಪ್ರಥಮ ಸ್ಥಾನ ಹಾಗೂ ತಾಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡಿರುತ್ತಾನೆ. ಬೋರಮ್ಮ ಕಾಗಲ ಶೇ.96.17 ದ್ವಿತೀಯ ಸ್ಥಾನ, ಸುಧಾ ಕೋಲಾರ ಶೇ.96 ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಈ ವಿದ್ಯಾರ್ಥಿಗಳಿಗೆ ಸಂಸ್ಥೆಯ ಸಂಸ್ಥಾಪಕ ಎಂ.ಎನ್.ಪಾಟೀಲ, ಆಡಳಿತಾಧಿಕಾರಿ ವಿ.ಎಸ್.ಮೇಟಿ, ಆಡಳಿತ ಮಂಡಳಿ ಸದಸ್ಯರು, ಪ್ರಾಚಾರ್ಯರಾದ ಜಿ.ಆರ್. ಪಾಟೀಲ, ಎಂ.ಬಿ.ವೆಂಕಟಾಪೂರ ಮತ್ತು ಉಪನ್ಯಾಸಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

ಎಸ್.ಎಸ್.ಪಿಯು ಕಾಲೇಜಿನ ವಿದ್ಯಾರ್ಥಿಗಳ ಸಾಧನೆ



ವಿಜಯಪುರ: ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ನಗರದ ಪ್ರತಿಷ್ಠಿತ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಎಸ್.ಪಿಯು ಕಾಲೇಜಿನ ಮೂರು ಜನ ವಿದ್ಯಾರ್ಥಿಗಳು ರಾಜ್ಯಕ್ಕೆ ದ್ವಿತೀಯ, ತೃತೀಯ ಮತ್ತು ನಾಲ್ಕನೇ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿನಿ ಸಾನಿಕಾ ಮೆಟಗಾರ ಕಲಾ ವಿಭಾಗದಲ್ಲಿ 595 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದರೆ, ಅಕ್ಷತಾ ಚವ್ಹಾಣ 594 ಅಂಕ ಪಡೆದು ರಾಜ್ಯಕ್ಕೆ ತೃತೀಯ ಹಾಗೂ ಯುವರಾಜ ಬಗಲಿ 593 ಅಂಕ ಪಡೆದು ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ. ಬಿ.ಪಾಟೀಲ, ಪ್ರಧಾನ ಕಾರ್ಯದರ್ಶಿ, ವಿಧಾನ ಪರಿಷತ ಸದಸ್ಯ ಸುನೀಲಗೌಡ ಪಾಟೀಲ, ಆಡಳಿತಾಧಿಕಾರಿ ಐ.ಎಸ್. ಕಾಳಪ್ಪನವರ, ಕಾಲೇಜಿನ ಪ್ರಾಚಾರ್ಯ ಜಿ.ಡಿ.ಅಕಮಂಚಿ ಮತ್ತು ಸಿಬ್ಬಂದಿ ಅಭಿನಂದನೆ ಸಲ್ಲಿಸಿ, ವಿದ್ಯಾರ್ಥಿಗಳ ಮುಂದಿನ ಶಿಕ್ಷಣಕ್ಕೆ ಶುಭ ಹಾರೈಸಿದರು.

ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಫಸ್ಟ್



ಕೊಪ್ಪಳ: 2ನೇ ವರ್ಷದ ಪದವಿ ಪೂರ್ವ ಕಾಲೇಜಿನ ಫಲಿತಾಂಶ ಪ್ರಕಟವಾಗಿದ್ದು, ಕೊಪ್ಪಳ ಜಿಲ್ಲೆಯ ವಿದ್ಯಾರ್ಥಿನಿ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಫಸ್ಟ್ ಆಗಿದ್ದಾಳೆ.

ಕುಕನೂರು ತಾಲೂಕು ಮಂಗಳೂರ ಗ್ರಾಮದ ವಿದ್ಯಾರ್ಥಿನಿ ಸಂಗೀತಾ ಪೊಲೀಸ್ ಪಾಟೀಲ್ ಒಟ್ಟೂ 600ಕ್ಕೆ 598 ಅಂಕ (ಶೇ. 98.66) ಪಡೆದು ಇಡೀ ರಾಜ್ಯಕ್ಕೆ ಪ್ರಥಮ ಪಡೆದಿದ್ದು, ಜಿಲ್ಲೆಯ ಹೆಮ್ಮೆ ಎನ್ನಿಸಿಕೊಂಡಿದ್ದಾಳೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮಂಗಳೂರು ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್ ನಲ್ಲೇ ಮುಗಿಸಿದ್ದಾಳೆ. ಇದೇ ಶಾಲೆಯಲ್ಲೇ 10ನೇ ತರಗತಿ ಓದಿರುವ ಸಂಗೀತ ವಿಜಯನಗರ ಜಿಲ್ಲೆ ಕೊಟ್ಟೂರು ಪಟ್ಟಣದ ಇಂದು ಪಿಯು ಕಾಲೇಜು ವಿದ್ಯಾರ್ಥಿನಿ. ತಂದೆ ಸಾಮಾನ್ಯ ರೈತರಾಗಿದ್ದು, ತಾಯಿ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದಾರೆ. ಬಡತದಲ್ಲಿಯೂ ಸಂಗೀತ ಸಾಧನೆ ಮಾಡಿದ್ದಾಳೆ. ಸಂಸ್ಕೃತ ಭಾಷೆಯಲ್ಲಿಯು ಸಹ ಅತಿ ಹೆಚ್ಚು ಅಂಕ ಪಡೆದಿದ್ದು ವಿಶೇಷ. ರಾಜ್ಯಕ್ಕೆ ಮೊದಲು ಬಂದ ವಿಷಯ ತಿಳಿದು ಸಂಗೀತಾ ಪಾಟೀಲ್ ಗೆ ಕುಟುಂಬಸ್ಥರು ಸಿಹಿ ತಿನಿಸಿ ಸಂಭ್ರಮಿಸಿದರು.

ಕಲ್ಯಾಣ ಕರ್ನಾಟಕ ಶಿಕ್ಷಣದಲ್ಲಿ ತೀರಾ ಹಿಂದುಳಿದ ಪ್ರದೇಶ ಎಂಬ ಹಣೆಪಟ್ಟಿ ಇತ್ತು. ಸಂಗೀತ ತನ್ನ ಸಾಧನೆಯ ಮೂಲಕ ಇದನ್ನು ಸುಳ್ಳಾಗಿಸಿದ್ದಾಳೆ. ನಮ್ಮ ತಂದೆ ತಾಯಿಯವರು ನನ್ನ ಸಾಧನೆಗೆ ಸ್ಫೂರ್ತಿಯಾಗಿದ್ದಾರೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂಗಳೂರಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಪೂರ್ಣಗೊಳಿಸಿದ್ದೇನೆ. ನನಗೆ ಓದಿಗೆ ಪ್ರೌಢ ಶಾಲೆಯ ಶಿಕ್ಷಕರ ಮಾರ್ಗದರ್ಶನ ಸಹಕಾರಿಯಾಗಿದೆ. ಸಂಸ್ಕೃತ ಭಾಷೆಯಲ್ಲಿಯು ಉತ್ತಮ ಅಂಕ ಬಂದಿದ್ದು ತುಂಬಾ ಖುಷಿಯಾಗಿದೆ. ಮುಂದೆ ವಕೀಲೆಯಾಗುವ ಬಯಕೆ ಇದೆ ಎಂದು ವಿದ್ಯಾರ್ಥಿನಿ ಸಂತಸ ಹಂಚಿಕೊಂಡಳು.

ಕೃಷಿಕರ ಮಕ್ಕಳಿಬ್ಬರು ಕಲಾ ವಿಭಾಗಕ್ಕೆ ಟಾಪರ್



ಕೊಟ್ಟೂರು: ಪಟ್ಟಣದ ಇಂದು ಪಿಯು ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ಕಲಾ ವಿಭಾಗದ ದ್ವಿತೀಯ ಪಿಯುನಲ್ಲಿ 600ಕ್ಕೆ 598 ಅಂಕ ಪಡೆದು ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾರೆ. ಈ ಇಬ್ಬರು ವಿದ್ಯಾರ್ಥಿನಿಯರು ಗ್ರಾಮೀಣ ಭಾಗದಲ್ಲಿನ ಕೃಷಿಕರ ಮಕ್ಕಳು ಎಂಬುದು ವಿಶೇಷ.

ಹರಪನಹಳ್ಳಿ ತಾಲೂಕಿನ ಬಳಿಗಾನೂರು ಗ್ರಾಮದ ಅರ್ಚನ ದೊಡ್ಡಮನಿ (598) ಮತ್ತು ಕೊಪ್ಪಳ ಜಿಲ್ಲೆ ಕುಕನೂರು ತಾಲೂಕಿನ ಮಂಗಳೂರು ಗ್ರಾಮದ ಸಂಗೀತ (598) ಟಾಪ್ ಒಂದನೇ ಸ್ಥಾನದಲ್ಲಿ ತೇರ್ಗಡೆಯಾಗಿದ್ದಾರೆ.

ಕಾಲೇಜಿನ ಹಾಸ್ಟೆಲ್‌ನಲ್ಲಿದ್ದ ಸಂಗೀತ, ಬಳಗಾನೂರಿನಿಂದ ದಿನವೂ ಬಸ್‌ನಲ್ಲಿ ಕಾಲೇಜಿಗೆ ಬರುತ್ತಿದ್ದ ಅರ್ಚನ ದೊಡ್ಡಮನಿ, ರಾಜ್ಯವೇ ಗಮನ ಸೆಳೆಯುವಂತಹ ಸಾಧನೆ ಮಾಡುವ ಮೂಲಕ ಇಂದು ಪಿಯು ಕಾಲೇಜಿನ ರ್‍ಯಾಂಕ್ ನಾಗಲೋಟವನ್ನು ಮುಂದುವರಿಸಿದ್ದಾರೆ.

ಇಂದು ಪಿಯು ಕಾಲೇಜು ದ್ವಿತೀಯ ಪಿಯು ಫಲಿತಾಂಶದಲ್ಲಿ ಸತತವಾಗಿ 11ನೇ ವರ್ಷದಲ್ಲಿಯೂ ತನ್ನ ಉನ್ನತ ಸ್ಥಾನ ಪಡೆವ ಸಾಧನೆಯನ್ನು ಮುಂದುವರಿಸುವ ಮೂಲಕ ರಾಜ್ಯದ ಇತರೆ ಕಾಲೇಜುಗಳು ಹುಬ್ಬೇರಿಸುವಂತೆ ಮಾಡಿದೆ. ಕನ್ನಡದಲ್ಲಿ 100ಕ್ಕೆ 98 ಅಂಕ ಪಡೆದ ಅರ್ಚನ ದೊಡ್ಡಮನಿ, ಸಂಸ್ಕೃತ, ಐಚ್ಛಿಕ ಕನ್ನಡ, ಇತಿಹಾಸ, ರಾಜ್ಯ ಶಾಸ್ತ್ರ ಶಿಕ್ಷಣದಲ್ಲಿ ತಲಾ 100 ಅಂಕ ಪಡೆದಿದ್ದಾರೆ. ಸಂಗೀತಾ ಅವರು ಕನ್ನಡ, ಸಂಸ್ಕೃತ, ಐಚ್ಛಿಕ ಕನ್ನಡ, ರಾಜ್ಯ ಶಾಸ್ತ್ರ, ಶಿಕ್ಷಣದಲ್ಲಿ 100 ಅಂಕಗಳನ್ನು, ಇತಿಹಾಸದಲ್ಲಿ 99 ಅಂಕಗಳನ್ನು ಪಡೆದಿದ್ದಾರೆ.

ಬಳಿಗಾನೂರು ಗ್ರಾಮದ ಕೃಷಿಕ ಹನುಮಂತಪ್ಪ, ರೇಣುಕಮ್ಮ ದಂಪತಿಯ ಮೂರನೇ ಮಗಳು ಅಶ್ವಿನಿ ದೊಡ್ಡಮನಿ, 10ನೇ ತರಗತಿಯನ್ನು ಹಗರಿ ಗಜಾಪುರ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದಿದ್ದಳು. ಕೊಟ್ಟೂರಿನ ಇಂದು ಕಾಲೇಜಿನ ಪಿಯುಗೆ ಸೇರಿದ್ದ ಈಕೆ, ದಿನಾಲೂ ಗ್ರಾಮದಿಂದ ಬಸ್‌ನಲ್ಲಿ ದಿನಾಲೂ ಬಂದು ಶಿಕ್ಷಣ ಪಡೆದಿದ್ದಾಳೆ. ಆರ್ಥಿಕ ದುಸ್ಥಿಯಿಂದ 10ನೇ ತರಗತಿಗೆ ಶಿಕ್ಷಣ ಮೊಟಕುಗೊಳಿಸಿದ್ದ 5 ಎಕರೆಯ ಕೃಷಿಯನ್ನು ನೆಚ್ಚಿರುವ ಹನುಮಂತಪ್ಪ, ತನ್ನಂತೆ ಮಕ್ಕಳು ಶಿಕ್ಷಣದಿಂದ ವಂಚಿತರಗಬಾರದೆಂಬ ಉದ್ದೇಶದಿಂದ ನಾಲ್ಕು ಮಕ್ಕಳನ್ನು ಇದೇ ಕಾಲೇಜಿಗೆ ಸೇರಿಸಿದ್ದಾರೆ. ಇದೇ ಕಾಲೇಜಿನಲ್ಲಿ ಶಿಕ್ಷಣ ಪಡೆದಿದ್ದ ಮಕ್ಕಳಾದ ಪ್ರದೀಪ, ಅಶ್ವಿನಿ ಇಬ್ಬರೂ ಗ್ರಾಮ ಲೆಕ್ಕಿಗರಾಗಿದ್ದಾರೆ.

ಪತ್ರಿಕೆಗೆ ಪ್ರತಿಕ್ರಿಯಿಸಿದ ಅಶ್ವಿನಿ ದೊಡ್ಡಮನಿ ಅರ್ಚನ ದೊಡ್ಡಮನಿ, ನಾನು ರ್‍ಯಾಂಕ್ ಬರಬೇಕೆಂಬುದು ಅಪ್ಪ ಅಮ್ಮನ ಆಸೆಯಾಗಿತ್ತು. ಅಕ್ಕ ಅಣ್ಣರಂದು ನೌಕರಿ ಪಡೆಯಬೇಕೆಂಬ ಗುರಿ ಇದೆ. ಅಪ್ಪನದು ವ್ಯವಸಾಯ, ಡಬ್ಬ ಅಂಗಡಿ ಇದ್ದರೂ ಎಂದಿಗೂ ನನಗೆ ಅದರಲ್ಲಿ ಹಾಗೂ ಮನೆಯಲ್ಲಿ ಅಪ್ಪ ಅಮ್ಮ ಕೆಲಸಕ್ಕೆ ಹಚ್ಚದೆ, ರಜೆಯಲ್ಲಿ ಎಲ್ಲಿಗೂ ಕಳಿಸದೇ ದಿನಾಲೂ ಓದುಲು ಪ್ರೇರೇಪಿಸುತ್ತಿದ್ದರು.

ಕಾಲೇಜಿನ ಆಡಳಿತ ಮಂಡಳಿಯವರು, ಪ್ರಾಚಾರ್ಯರು, ಉಪನ್ಯಾಸಕರು ನೀಡಿದ ಪ್ರೋತ್ಸಾಹವೇ ರ್‍ಯಾಂಕ್‌ಗೆ ಕಾರಣವಾಯಿತು. ಕೆ.ಎ.ಎಸ್. ಆಗುವ ಗುರಿ ಇದೆ. ಇದೇ ಕಾಲೇಜಿನಲ್ಲಿ ಬಿಎ ಶಿಕ್ಷಣ ಪಡೆಯುವೆ ಎಂದು ತಿಳಿಸಿದರು.

ನೇಕಾರನ ಮಗಳಿಗೆ ಶೇ.95.16 ಅಂಕ



ಕೆರೂರ: ಪಟ್ಟಣದ ಹೊಸಪೇಟೆಯ ನೇಕಾರನ ಮಗಳಾದ ಗೌರಿ ಚಿದಾನಂದ ಅಂಕದ ದ್ವಿತೀಯ ಪಿಯುಸಿ ಪರೀಕ್ಷೆಯ ವಿಜ್ಞಾನ ವಿಭಾದಲ್ಲಿ 95.16 ಅಂಕ ಪಡೆದು ಸಾಧನೆ ಮಾಡಿದ್ದಾಳೆ.

ಗೌರಿ ಪ್ರಸ್ತುತ ಜಮಖಂಡಿಯ ತುಂಗಳ ಕಾಲೇಜಿನಲ್ಲಿ ಓದಿ ನಿರಂತರ ಅಭ್ಯಾಸ ಮೂಲಕ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಜರುಗಿದ ದ್ವಿತೀಯ ಪಿಯುಸಿ ಪರೀಕ್ಷೆಯ-1ರ ವಿಜ್ಞಾನ ವಿಭಾಗದಲ್ಲಿ 600ಕ್ಕೆ 571 ಅಂಕ(ಶೇ.95.16) ಗಳಿಸಿ ಬಡತನ ಪ್ರತಿಭೆಗೆ ಅಡ್ಡಿಯಾಗದು ಎಂದು ಸಾಧಿಸಿದ್ದಾಳೆ. ಬಾಲಕಿಯ ಈ ಸಾಧನೆಗೆ ಅಜ್ಜ ಡಾ.ಪಾಂಡಪ್ಪ ಅಂಕದ, ದೇವಾಂಗ ಸಮಾಜದ ಮಾಜಿ ಅಧ್ಯಕ್ಷ ದಶರಥಪ್ಪ ಅಂಕದ ಸೇರಿದಂತೆ ಕುಟುಂಬ ವರ್ಗದವರು, ಶಿಕ್ಷಣ ಪ್ರೇಮಿಗಳು ಹಾಗೂ ಪುರ ಜನರು ಹರ್ಷ ವ್ಯಕ್ತಪಡಿಸಿದ್ದಾರೆ.

ಸಂಪಾದಕೀಯ

ಪ್ರಜಾಪ್ರಭುತ್ವದ ಹಬ್ಬಕ್ಕೆ ಮತದಾರನ ಮುದ್ರೆ

ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಏಪ್ರಿಲ್ 9 ಮಹತ್ವದ ದಿನವಾಗಿ ದಾಖಲಾಗಿದೆ. ದಕ್ಷಿಣದ ಕೇರಳ, ಪುದುಚೇರಿ ಮತ್ತು ಈಶಾನ್ಯದ ಅಸ್ಸಾಂ ರಾಜ್ಯಗಳಲ್ಲಿ ನಡೆದ ವಿಧಾನಸಭೆ ಚುನಾವಣೆಗಳು ಮತದಾರರ ಉತ್ಸಾಹಕ್ಕೆ ಸಾಕ್ಷಿಯಾಗಿವೆ. ಮತಗಟ್ಟೆಗಳ ಮುಂದೆ ಕಂಡುಬಂದ ಸುದೀರ್ಘ ಸಾಲುಗಳು ಭಾರತೀಯರು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಇಟ್ಟಿರುವ ಅಚಲ ನಂಬಿಕೆಯನ್ನು ಮತ್ತೊಮ್ಮೆ ಜಗತ್ತಿಗೆ ಸಾರಿದೆ. ವಿಶೇಷವೆಂದರೆ, ಎಸ್ಐಆರ್ ಮುಗಿದ ಮೇಲೆ ಈ ರಾಜ್ಯಗಳಲ್ಲಿ ಮತದಾನವಾಗಿದ್ದು, ಎಸ್ಐಆರ್‌ನ ಪ್ರಭಾವವೂ ಇಲ್ಲಿ ಗೊತ್ತಾಗಿದೆ. ಅಂದರೆ, ಕೇಂದ್ರ ಚುನಾವಣಾ ಆಯೋಗವು ಈಗಾಗಲೇ ನಕಲಿ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕಿದ ಪರಿಣಾಮ ನೈಜ ಮತದಾರರಷ್ಟೇ ಪಟ್ಟಿಯಲ್ಲಿ ಉಳಿದಿದ್ದಾರೆ. ಹೀಗಾಗಿ, ಮತದಾನವೂ ಚೆನ್ನಾಗಿ ಆಗಿದೆ. ಎಸ್ಐಆರ್ ಅನ್ನು ಟೀಕಿಸುತ್ತಿದ್ದವರಿಗೆ ಈ ಚುನಾವಣೆ ತಕ್ಕ ಪಾಠವನ್ನೇ ಕಲಿಸಿದೆ. ಎಲ್ಲೂ ತಮ್ಮ ಹೆಸರು ಮತದಾರರ ಪಟ್ಟಿಯಿಂದ ನಾಪತ್ತೆಯಾಗಿದೆ ಎಂಬ ಕೂಗು ಕೇಳಿಸಿಲ್ಲ ಎಂಬುದು ವಿಶೇಷ.



ಪ್ರಾಥಮಿಕ ವರದಿಗಳ ಪ್ರಕಾರ, ಪುದುಚೇರಿಯಲ್ಲಿ ಶೇ. 89ಕ್ಕೂ ಹೆಚ್ಚು ದಾಖಲೆ ಮತದಾನವಾಗಿದ್ದರೆ, ಅಸ್ಸಾಂನಲ್ಲಿ ಶೇ. 85 ಹಾಗೂ ಕೇರಳದಲ್ಲಿ ಶೇ. 77ಕ್ಕೂ ಹೆಚ್ಚು ಮತದಾನವಾಗಿದೆ. ಅಸ್ಸಾಂನಲ್ಲಿ ಹಿಮಂತ ಬಿಸ್ವ ಶರ್ಮಾ ನೇತೃತ್ವದ ಬಿಜೆಪಿ ಸರ್ಕಾರದ ಆಡಳಿತದ ಅಳಿವು-ಉಳಿವು ನಿರ್ಧಾರವಾಗಬೇಕಿದ್ದರೆ, ಕೇರಳದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಎಡರಂಗದ ಭವಿಷ್ಯ ಅಡಗಿದೆ. ಈ ಬಾರಿ ಅಸ್ಸಾಂನಲ್ಲಿ ಅಲ್ಲಲ್ಲಿ ಸಣ್ಣಪುಟ್ಟ ಹಿಂಸಾಚಾರದ ಘಟನೆಗಳು ವರದಿಯಾಗಿದ್ದರೂ, ಒಟ್ಟಾರೆಯಾಗಿ ಮತದಾನ ಪ್ರಕ್ರಿಯೆ ಶಾಂತಿಯುತವಾಗಿ ಸಾಗಿರುವುದು ಸಮಾಧಾನದ ಸಂಗತಿ. ಅಸ್ಸಾಂನ ಮತದಾರರು ಭೂಮಿ ಮತ್ತು ಅಸ್ಮಿತೆಯ ರಕ್ಷಣೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಹೊರಬಂದಿರುವುದು ಗಮನಾರ್ಹ. ಕೇರಳದಲ್ಲಿ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು, ಸಾಂಪ್ರದಾಯಿಕ ಎಡರಂಗ(ಎಲ್‌ಡಿಎಫ್) ಮತ್ತು ಕಾಂಗ್ರೆಸ್ ನೇತೃತ್ವದ (ಯುಡಿಎಫ್) ಮೈತ್ರಿಕೂಟಗಳ ನಡುವೆ ಬಿಜೆಪಿ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳುವ ಪ್ರಯತ್ನ ನಡೆಸಿದೆ. ಪುದುಚೇರಿಯಲ್ಲಿ ಎನ್. ರಂಗಸ್ವಾಮಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಪಾರಮ್ಯವನ್ನು ಎದುರಿಸಲು ಕಾಂಗ್ರೆಸ್-ಡಿಎಂಕೆ ಮೈತ್ರಿಕೂಟ ಹೋರಾಟ ನಡೆಸಿದೆ. ಹಿರಿಯ ನಾಗರಿಕರು ಮತ್ತು ಅಂಗವಿಕಲರಿಗೆ ಮನೆಯಿಂದಲೇ ಮತದಾನ ಮಾಡುವ ಅವಕಾಶ ಹಾಗೂ ಮೊದಲ ಬಾರಿಗೆ ಮತ ಚಲಾಯಿಸುವ ಯುವಕರಿಗೆ ಸಸಿಗಳನ್ನು ನೀಡಿದ ಚುನಾವಣಾ ಆಯೋಗದ ಕ್ರಮಗಳು ಶ್ಲಾಘನೀಯ. ಒಟ್ಟಾರೆಯಾಗಿ, ಈ ಬೃಹತ್ ಮತದಾನವು ಆಡಳಿತ ವಿರೋಧಿ ಅಲೆಯೋ ಅಥವಾ ಆಡಳಿತ ಪರವಾದ ಒಲವೋ ಎಂಬುದು ಮೇ 4ರ ಫಲಿತಾಂಶದಂದು ತಿಳಿಯಲಿದೆ. ಆದರೆ, ಮತದಾನದ ಪ್ರಮಾಣ ಹೆಚ್ಚಾಗಿರುವುದು ಬದಲಾವಣೆಯ ಸಂಕೇತವೋ ಅಥವಾ ಬಲಿಷ್ಠ ಸ್ಥಿರತೆಯ ಬಯಕೆಯೋ ಎಂಬ ಕುತೂಹಲ ರಾಜಕೀಯ ಪಂಡಿತರಲ್ಲಿ ಮನೆಮಾಡಿದೆ. ದೇಶದ ಭವಿಷ್ಯವನ್ನು ನಿರ್ಧರಿಸುವ ಈ ನಿರ್ಣಾಯಕ ಹಂತದಲ್ಲಿ ಮತದಾರರು ನೀಡಿರುವ ತೀರ್ಪು ಇವಿಎಂ ಯಂತ್ರಗಳಲ್ಲಿ ಭದ್ರವಾಗಿದ್ದು, ಹೊಸ ಸರ್ಕಾರದ ಹಾದಿ ಸುಗಮಗೊಳಿಸಲಿದೆ.

ಇರಾನ್ ಸಮರದಿಂದ ಬಯಲಾದ ಮಿಥ್ಯೆಗಳು!

▸ ಉತ್ಪಲ್ ಕುಮಾರ್

ಇರಾನ್ ಯುದ್ಧವು ಎಲ್ಲ ಯುದ್ಧಗಳಂತೆ ಕೊಲ್ಲಿಯಲ್ಲಿ ನಡೆದ ಒಂದು ಸಂಘರ್ಷವಲ್ಲ, ಅದರ ಆಯಾಮ ಇನ್ನೂ ವಿಸ್ತಾರವಾಗಿದೆ. ಮುಖ್ಯವಾಗಿ ಅದು ದಶಕಗಳಿಂದ ಬೆಳೆದುಕೊಂಡು ಬಂದಿದ್ದ ಹಲವಾರು ಮಿಥ್ಯೆಗಳನ್ನು ನಾಶಪಡಿಸಿದೆ. ವ್ಯವಸ್ಥಿತವಾಗಿ ಕಟ್ಟಿದ ಹಲವು ಸುಳ್ಳುಗಳನ್ನು ಬಹಿರಂಗಪಡಿಸಿದೆ. ಈ ಯುದ್ಧವು ಭೌಗೋಳಿಕ ವ್ಯವಸ್ಥೆಯನ್ನೆ ಮರುರೂಪಿಸುವಂತಿದೆ.

'ಅರಬ್ ಏಕತೆ' ಎಂಬ ಕಲ್ಪನೆಯನ್ನೇ ನೋಡೋಣ. ಕಳೆದ ಕೆಲವು ದಶಕಗಳಿಂದ ಅರಬ್ ಏಕತೆಯ ಕುರಿತು ಅತಿರಂಜಿತವಾಗಿ ಹೇಳಲಾಗುತ್ತಿತ್ತು. ಗಮಾಲ್ ಅಬ್ದುಲ್ ನಾಸೀರ್‌ನಿಂದ ಹಿಡಿದು ಸದ್ದಾಂ ಹುಸೇನ್, ಮಹಮ್ಮದ್ ಗಡ್ಡಾಫಿವರೆಗೆ ಎಲ್ಲರೂ 'ಪಾನ್ ಅರಬ್' ಅಥವಾ 'ಪಾನ್ ಖಲೀಫತ್' ಕುರಿತು ಮುಸ್ಲಿಮರಲ್ಲಿ ಕನಸು ಬಿತ್ತಿದ್ದರು. ಆದರೆ ಅದು ಎಂದಿಗೂ ಕಾರ್ಯಸಾಧ್ಯ ಕಲ್ಪನೆಯಾಗಿರಲಿಲ್ಲ. ಮುಸ್ಲಿಮರಲ್ಲಿ ಉನ್ಮಾದ ಸೃಷ್ಟಿಸುವ, ಭಿನ್ನಮತ ಅಳಿಸಿ ಹಾಕುವ ಮತ್ತು ಅಸ್ಥಿರತೆಯ ಮನಸ್ಥಿತಿ ಮರೆಯಾಗಿಸುವ ತಂತ್ರವಾಗಿತ್ತಷ್ಟೆ.

ಇರಾನ್ ಸಮರವು ಈ ಭ್ರಮೆಯನ್ನು ಬೆತ್ತಲುಗೊಳಿಸಿದೆ. ಅರಬ್ ಏಕತೆ ಎಂಬುದು ಅಸ್ತಿತ್ವದಲ್ಲೇ ಇಲ್ಲ ಎಂಬುದು ಸಾಬೀತಾಗಿದೆ. ಇರಾನಿನ ಡ್ರೋಣ್‌ಗಳು ಮತ್ತು ಕ್ಷಿಪಣಿಗಳು ನೆರೆಯ ಅರಬ್ ರಾಷ್ಟ್ರಗಳ ಮೇಲೆಯೇ ಎರಗುತ್ತಿದ್ದರೆ, ಈ ಎಲ್ಲಾ ಅರಬ್ ದೇಶಗಳು ಆತಂಕದಿಂದ ಚಡಪಡಿಸುತ್ತಿದ್ದವು.


'ಅರಬ್ ಸುರಕ್ಷತೆ' ಎಂಬ ಮಿಥ್ಯೆ ಕೂಡ ಈಗ ಚೂರಾಗಿದೆ. ಕೆಲವಾರು ವರ್ಷಗಳಿಂದ ಗಲ್ಫ್ ರಾಷ್ಟ್ರಗಳು ತಮ್ಮ ಶಕ್ತಿ ಇರುವುದೇ ಮೈತ್ರಿ ಕೂಟ ರಚಿಸುವುದರಲ್ಲಿ ಹಾಗೂ ಸುಧಾರಿತ ಶಸ್ತ್ರಾಸ್ತ್ರ ಪಡೆಯುವುದರಲ್ಲಿ ಎಂದು ಭಾವಿಸಿದ್ದವು. ಇದರ ಜತೆಗೇ ಅಮೆರಿಕದ ರಕ್ಷಣಾ ಕೊಡೆಯೂ ಅವುಗಳಿಗಿತ್ತು. ಆದರೆ ಇರಾನ್‌ನ ಕ್ಷಿಪಣಿ ಮತ್ತು ಡ್ರೋನ್‌ಗಳು ಈ ಗಲ್ಫ್ ರಾಷ್ಟ್ರಗಳ ಗುರಿಗಳ ಮೇಲೆ ಬಂದೆರಗಿದವು. ಅಲ್ಲಿಗೆ 'ಗಲ್ಫ್ ಒಂದು ಕೋಟೆ' ಎಂಬ ಭ್ರಮೆ ಛಿದ್ರವಾಯಿತು. ಗಲ್ಫ್ ಪ್ರದೇಶವು ಒಂದು ಗಾಜಿನ ಕೋಟೆ ಎಂಬುದು ಸಾಬೀತಾಯಿತು.

ಗಲ್ಫ್‌ನಲ್ಲಿದ್ದ ಅಮೆರಿಕನ್ ಸೇನಾ ನೆಲೆಗಳ ಸ್ಥಿತಿಯನ್ನೇ ನೋಡಿ. ಅವು ಅಮೆರಿಕದ ಮಿತ್ರರಾದ ಕೊಲ್ಲಿ ರಾಷ್ಟ್ರಗಳನ್ನು ಸಂರಕ್ಷಿಸಲು ಇರುವುದೆಂದು ಭಾವಿಸಲಾಗಿತ್ತು. ವಿಪರ್ಯಾಸವೆಂದರೆ ಅವುಗಳ ಕಾರಣದಿಂದಲೇ ಕೊಲ್ಲಿ ರಾಷ್ಟ್ರಗಳ ಮೇಲೆ ಇರಾನಿನ ಬಾಂಬ್‌ಗಳು ಬಂದು ಬಿದ್ದವು.

ಯುದ್ಧದ ಕಂಪನಗಳು ಕೊಲ್ಲಿ ಪ್ರದೇಶಕ್ಕಷ್ಟೇ ಸೀಮಿತವಾಗಿಲ್ಲ. ಜಾಗತಿಕವಾಗಿ ಪ್ರತಿಯೊಂದು ದೇಶವೂ ಹಾನಿ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಯುದ್ಧವು ಅಂತಾರಾಷ್ಟ್ರೀಯ ಗಮನವನ್ನು ಇನ್ನಿತರ ಕೆಲವು ಸಂಘರ್ಷಗಳಿಂದ ದೂರ ಸೆಳೆದಿದೆ. ಮುಖ್ಯವಾಗಿ ಉಕ್ರೇನ್ ಸಮರವನ್ನು ಜನರು ಮರೆತುಬಿಟ್ಟಿದ್ದಾರೆ. ಇದು ರಷ್ಯಾಕ್ಕೆ ಜಾಗತಿಕವಾಗಿ ತನ್ನ ಸ್ಥಾನಮಾನ ಬಲಪಡಿಸಲು ನೆರವಾಗಿದೆ. ಆದರೆ ಇಲ್ಲೊಂದು ವಿಪರ್ಯಾಸವೂ ಇದೆ. ದುರ್ಬಲಗೊಂಡ ಇರಾನ್ ಪಶ್ಚಿಮ ಏಷ್ಯಾದಲ್ಲಿ ರಷ್ಯಾದ ಸ್ಥಿತಿಯನ್ನೂ ದುರ್ಬಲಗೊಳಿಸುತ್ತದೆ. ಆದ್ದರಿಂದ ರಷ್ಯಾಕ್ಕೆ ಲಾಭದ ಜತೆಗೆ ನಷ್ಟವೂ ಸಂಭವಿಸಿದೆ.

ಇತ್ತ ಚೀನಾ ಕೂಡಾ ಇಕ್ಕಟ್ಟಿನಲ್ಲಿ ಸಿಲುಕಿದೆ. ಅಮೆರಿಕವು ಅನವಶ್ಯ ಯುದ್ಧವೊಂದರಲ್ಲಿ ತೊಡಗಿರುವುದು ಚೀನಾದ ಪಾಲಿಗೆ ಒಂದು ಸುಸಂಧಿಯಾಗಬೇಕಿತ್ತು. ಅದಕ್ಕೆ ತೈವಾನ್ ಜಲಸಂಧಿ ಸೇರಿದಂತೆ ಇನ್ನಿತರ ಪ್ರದೇಶಗಳಲ್ಲಿ ತನ್ನ ಹಿತಾಸಕ್ತಿಯನ್ನು ಬಲಗೊಳಿಸಲು ಅವಕಾಶ ಒದಗಿತ್ತು. ಆದರೆ ಭೌರಾಜಕೀಯವು ಅಷ್ಟು ಸರಳವಲ್ಲ! ಚೀನಾದ ಇಂಧನ ಭದ್ರತೆಗೆ ಇರಾನೇ ಮೂಲ. ಪ. ಏಷ್ಯಾದಲ್ಲಿ ಚೀನಾದ ಮಹತ್ವಾಕಾಂಕ್ಷೆ ಈಡೇರಿಸಲೂ ಇರಾನ್ ಬೇಕು. ದೌರ್ಭಾಗ್ಯವೆಂದರೆ ವೆನೆಜುವೆಲಾದ ಬಳಿಕ ಇರಾನ್ ಕೂಡ ಅಸ್ಥಿರಗೊಂಡಿರುವುದು ಚೀನಾದ ದೀರ್ಘಾವಧಿ ಆಟಕ್ಕೆ ತಡೆ ಹಾಕಿದೆ.

ಈ ಯುದ್ಧದಲ್ಲಿ ನಿಜವಾದ ವಿಜೇತನೆಂದರೆ ಅದು ಇಸ್ರೇಲ್. ಇಸ್ರೇಲ್‌ನ ಪಾಲಿಗೆ ಇರಾನ್ ಅತೀ ದೊಡ್ಡ ಅಪಾಯವಾಗಿತ್ತು. ಇದೀಗ ಇರಾನ್ ದುರ್ಬಲಗೊಳ್ಳುವುದರೊಂದಿಗೆ ಇಸ್ರೇಲ್ ಹೆಚ್ಚು ಸುರಕ್ಷಿತ ಎಂದು ಭಾವಿಸುವಂತಾಗಿದೆ.



ಇರಾನಿನಲ್ಲಿ ಆಡಳಿತ ಬದಲಾವಣೆ ಯುದ್ಧದ ನಿಜವಾದ ಉದ್ದೇಶವೇ ಆಗಿರಲಿಲ್ಲ. ಇರಾನಿನ ಬಲ ಕುಂದಿಸುವುದೇ ಈ ಸಮರದ ಮುಖ್ಯ ಉದ್ದೇಶವಾಗಿತ್ತು. ಅದು ಸಾಧಿಸಲ್ಪಟ್ಟಿದೆ.

ಆದರೆ ಅಮೆರಿಕ ಮಾತ್ರ ಈ ಕಾರ್ಯಸೂಚಿಯಲ್ಲಿ ಎಡವಿದಂತೆ ತೋರುತ್ತಿದೆ. ಇರಾನಿನ ಕೆಲವು ಪ್ರಮುಖ ವ್ಯಕ್ತಿಗಳ ಮೇಲೆ ದಾಳಿ ನಡೆಸುವುದರಿಂದ ಅದು ಆಂತರಿಕವಾಗಿ ಕುಸಿಯಬಹುದೆಂದು ಅಮೆರಿಕ ಲೆಕ್ಕಾಚಾರ ಹಾಕಿತ್ತು. ಇದಕ್ಕೆ ವಿರುದ್ಧವಾಗಿ ಇರಾನ್‌ನಲ್ಲಿ ಅಧಿಕಾರವು ಸೇನೆಯ ಕೈಯಲ್ಲಿ ಹೆಚ್ಚು ಕೇಂದ್ರೀಕೃತಗೊಂಡಿತು. ಇರಾನ್‌ಗೆ ಬರೆ ಬಿದ್ದಿರಬಹುದು. ಆದರೆ ಅದು ಛಿದ್ರವಾಗಿಲ್ಲ. ಅದು ದೀರ್ಘಾವಧಿ ಯುದ್ಧಕ್ಕೆ ಸನ್ನದ್ಧವಾಗಿ ನಿಂತಿದೆ.

ಇವೆಲ್ಲದರ ಮಧ್ಯೆ ಭಾರತದ ವಿದೇಶಾಂಗ ನೀತಿಯು ಶ್ಲಾಘನೀಯ ಪ್ರಬುದ್ಧತೆ ತೋರಿದೆ. ಉಕ್ರೇನ್ ಸಮರದಿಂದಾರಂಭಿಸಿ ಇರಾನ್ ಯುದ್ಧದ ತನಕ ಭಾರತವು ತನ್ನ ಹಳೆಯ ಅಲಿಪ್ತ ನೀತಿಯನ್ನು ಕೈಬಿಟ್ಟು 'ಬಹುಮೈತ್ರಿ'ಯ ನೀತಿಯನ್ನು ಅನುಸರಿಸಿರುವುದು ಹಾಗೂ ಇದು ಉತ್ತಮ ಫಲ ನೀಡಿರುವುದು ಕಂಡುಬರುತ್ತಿದೆ. ಭಾರತದ ವಿದೇಶಾಂಗ ನೀತಿಯು ಈಗ ಹೆಚ್ಚು ಪ್ರಾಯೋಗಿಕ ಮತ್ತು ವಾಸ್ತವಿಕ. ಹೆಚ್ಚು ನಿಖರ ಮತ್ತು ಪ್ರಾಮಾಣಿಕ. ಸ್ಪಷ್ಟವಾಗಿ ಹೇಳಬೇಕೆಂದರೆ ಭಾರತವು ಈಗ ಬೇರಾವ ಪಕ್ಷವನ್ನೂ ವಹಿಸುವುದಿಲ್ಲ, ಬದಲಾಗಿ ತನ್ನದೇ ಪಕ್ಷವನ್ನು ವಹಿಸುತ್ತದೆ. ಸ್ವಂತ ಹಿತಾಸಕ್ತಿಗೇ ಆದ್ಯತೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ವಿದೇಶಾಂಗ ಸಚಿವ ಜೈಶಂಕರ್ ನೇತೃತ್ವದಲ್ಲಿ ಭಾರತವು ಇದನ್ನೊಂದು ಕಲೆಯನ್ನಾಗಿ ರೂಪಿಸಿದೆ. ಯಾರಿಗೂ ಸೇರದೆ, ಪ್ರತಿಯೊಬ್ಬರಲ್ಲೂ ಮಾತುಕತೆ ನಡೆಸುವ, ಸಖ್ಯ ಬೆಳೆಸುವ ಕಲೆಗಾರಿಕೆ ಸಿದ್ಧಿಸಿಕೊಂಡಿದೆ. ಈಗ ಭಾರತವು ಇಸ್ರೇಲಿಗೆ ಹಿಂದಿಗಿಂತ ಹೆಚ್ಚು ಆಪ್ತವಾಗಿದೆ. ಡೊನಾಲ್ಡ್ ಟ್ರಂಪ್‌ರ ವಿಧ್ವಂಸಕ ಕಾರ್ಯಶೈಲಿಯ ಹೊರತಾಗಿಯೂ ಅಮೆರಿಕದೊಂದಿಗಿನ ಸಂಬಂಧ ಗಟ್ಟಿಗೊಂಡಿದೆ. ಇದೇವೇಳೆ ಇರಾನ್ ಕೂಡಾ ಭಾರತವನ್ನು ವಿರೋಧಿ ಎಂದು ಪರಿಗಣಿಸುತ್ತಿಲ್ಲ, ಬದಲಾಗಿ ವಿಶ್ವಾಸಾರ್ಹ ದೇಶವೆಂದು ಭಾವಿಸುತ್ತಿದೆ. ಭಾರತದ ಈ ನೀತಿಯು ಗೋಡೆ ಮೇಲೆ ಕುಳಿತಂತಲ್ಲ, ಇದು ವ್ಯೂಹಾತ್ಮಕ ಸಾರ್ವಭೌಮತೆ.

ಟೀಕಾಕಾರರು, ಅದರಲ್ಲಿ ಮುಖ್ಯವಾಗಿ ಪಾಶ್ಚಿಮಾತ್ಯರು ಭಾರತದ ಈ ವಿದೇಶಾಂಗ ನೀತಿಯನ್ನು ತಪ್ಪರ್ಥಮಾಡಿಕೊಂಡಿದ್ದಾರೆ. ಅವರ ಪ್ರಕಾರ ಜಗತ್ತು ಎರಡೇ ವರ್ಗಗಳಾಗಿ ವಿಭಜನೆಗೊಂಡಿವೆ. ಒಂದೋ ಮಿತ್ರನಾಗಿರಬೇಕು ಇಲ್ಲವೇ ವೈರಿಯಾಗಿರಬೇಕು. ಭಾರತವು ಇಂತಹ ನೀತಿಯನ್ನು ತಿರಸ್ಕರಿಸಿದೆ. ಮೈತ್ರಿ ಎಂದರೆ ಶರಣಾಗತಿಯಲ್ಲ, ಸ್ವಂತ ಹಿತಾಸಕ್ತಿ ಕಾಪಾಡಿಕೊಳ್ಳುವುದು ಮುಖ್ಯ ಎಂದು ಭಾವಿಸಿದೆ.

ಇಂತಹ ನೀತಿಗೂ ಸ್ವಲ್ಪ ಮಟ್ಟಿನ ಬೆಲೆ ತೆರಬೇಕಾಗುತ್ತದೆ ಎಂಬುದು ನಿಜ. ತನ್ನ ವ್ಯೂಹಾತ್ಮಕ ಸಾರ್ವಭೌಮತೆಯನ್ನು ಬಿಟ್ಟುಕೊಡಲು ಒಪ್ಪದ ದೇಶವು ಏಕಾಂಗಿಯಾಗಿ ನಿಲ್ಲಬೇಕಾಗುತ್ತದೆ. ಭಾರತವು ಇಂತಹ ಪರಿಸ್ಥಿತಿಯನ್ನು ಹಿಂದೆ ಎದುರಿಸಿದೆ. ಉಕ್ರೇನ್ ಸಮರದ ವೇಳೆ ಮತ್ತು ಆಪರೇಷನ್ ಸಿಂದೂರ್‌ನ ವೇಳೆ ಭಾರತಕ್ಕೆ ಇಂತಹ ಪರಿಸ್ಥಿತಿಯೊದಗಿದೆ. ಭಾರತವು ಇದನ್ನು ಎದುರಿಸಲು ಸಜ್ಜಾಗಿದೆ. ಹಾಗಾಗಿ 'ಬಹುಮೈತ್ರಿ'ಯ ನೀತಿಯು ತಾಳ್ಮೆ ಮತ್ತು ಅಲ್ಪಕಾಲೀನ ಹಾನಿ ಮತ್ತು ನೋವನ್ನು ಅನುಭವಿಸುವ ಸಹನೆಯನ್ನು ಬೇಡುತ್ತದೆ. ಆದರೆ ಇದರಿಂದ ದೀರ್ಘಾವಧಿಯಲ್ಲಿ ದೊಡ್ಡ ಲಾಭವಿದೆ. ಇದೇವೇಳೆ, ಅಮೆರಿಕವು ಜಾಗತಿಕ ಪಾಲುದಾರಿಕೆಯ ಕುರಿತಾದ ತನ್ನ ನಿಲುವನ್ನು ಬದಲಿಸಬೇಕಾದ ಅಗತ್ಯವಿದೆ. 'ಒಂದೋ ನೀವು ನಮ್ಮೊಂದಿಗಿರಬೇಕು, ತಪ್ಪಿದರೆ ನೀವು ನಮ್ಮ ವೈರಿ' ಎಂಬ ಹಳೆಯ ಸಿದ್ಧಾಂತ ಇನ್ನು ಕೆಲಸಕ್ಕೆ ಬಾರದು. ಮುಖ್ಯವಾಗಿ ಭಾರತಕ್ಕೆ ಸಂಬಂಧಿಸಿ ಇಂಥ ನಿಲುವು ಫಲ ನೀಡದು ಎಂಬುದನ್ನು ಅರಿಯಬೇಕು.

ರಾಜತಾಂತ್ರಿಕತೆಗೆ ಸಂಬಂಧಿಸಿ ಭಾರತದ ವಸ್ತುನಿಷ್ಠ ನಿಲುವು ಪಾಶ್ಚಿಮಾತ್ಯ ದೇಶಗಳಿಗೆ, ಅದರಲ್ಲೂ ಮುಖ್ಯವಾಗಿ ಅಮೆರಿಕಕ್ಕೆ ಅಸಹನೆ ಸೃಷ್ಟಿಸುವುದು ಸಹಜ. ಆದರಿದು ಅನಿವಾರ್ಯ ಪರಿಸ್ಥಿತಿ. ಅಮೆರಿಕದಲ್ಲಿರುವ ಕೆಲವು ನೀತಿ ನಿರೂಪಕರು ಭಾರತ ಕೂಡಾ ಚೀನಾದಂತೆಯೇ ಬೆಳೆಯುತ್ತಿರುವ ರಾಷ್ಟ್ರವಾಗಿದ್ದು, ಅದನ್ನು ನಿಯಂತ್ರಿಸಬೇಕು ಎಂದು ಭಾವಿಸುತ್ತಿದ್ದಾರೆ. ಅವರು ಅರ್ಥ ಮಾಡಿಕೊಳ್ಳಬೇಕಾದುದೆಂದರೆ, ಭಾರತದ ಪ್ರಗತಿಗೆ ಅಮೆರಿಕದ ಸಮ್ಮತಿಯೇನೂ ಬೇಕಾಗಿಲ್ಲ. ಅಮೆರಿಕದ ನೆರವು ಇದ್ದರೂ ಒಂದೆ, ಇಲ್ಲದಿದ್ದರೂ ಒಂದೆ, ಭಾರತವಂತೂ ಬೆಳೆಯುತ್ತಲೇ ಸಾಗುತ್ತದೆ. ಇದು ಪಾಶ್ಚಿಮಾತ್ಯ ಕೇಂದ್ರಿತ ವ್ಯವಸ್ಥೆಯನ್ನು ಬಲಪಡಿಸುವುದೇ ಇಲ್ಲವೇ ಎಂಬುದೇ ಮುಖ್ಯ ಪ್ರಶ್ನೆ. ಚೀನಾ ಕೇಂದ್ರಿತ ನಿರಂಕುಶ ವ್ಯವಸ್ಥೆಗಿಂತ ಭಾರತದ್ದು ಒಳ್ಳೆಯ ವ್ಯವಸ್ಥೆ ಎಂಬುದನ್ನು ಅಮೆರಿಕ ಒಪ್ಪಿಕೊಳ್ಳಬೇಕು. ಚೀನಾವನ್ನು ನಿಯಂತ್ರಿಸುವುದು ಅದರ ಮುಖ್ಯ ಉದ್ದೇಶವಾಗಿದ್ದರೆ ಅದು ಭಾರತದ ಮುಖಾಂತರವೇ ಆಗಬೇಕಾಗುತ್ತದೆ. ಹಾಗೆಂದು ಭಾರತವನ್ನು ತನ್ನ ಅಧೀನ ರಾಷ್ಟ್ರವಾಗಿ ಪರಿಗಣಿಸಿ ಅಲ್ಲ, ಭಾರತಕ್ಕೆ ಒಂದು ಸಾರ್ವಭೌಮ ರಾಷ್ಟ್ರವೆಂಬ ಗೌರವವನ್ನು ನೀಡಿ ಅದನ್ನು ಸಾಧಿಸಬೇಕು.

ಇರಾನ್ ಯುದ್ಧವು ಮತ್ತೂ ಒಂದು ವಿಷಯ ನಿಚ್ಚಳಗೊಳಿಸಿದೆ. ಭಾರತವು ಬೆಳೆಯುತ್ತಿರುವುದು ಇತರ ದೇಶಗಳನ್ನು ಅಸ್ಥಿರಗೊಳಿಸಲಲ್ಲ, ಬದಲಾಗಿ ಸ್ಥಿರತೆಯ ಶಕ್ತಿಯಾಗಿ ಭಾರತವು ಕಾರ್ಯನಿರ್ವಹಿಸುತ್ತಿದೆ. ಈ ಸತ್ಯವನ್ನು ಎಲ್ಲರೂ ಅರಿತುಕೊಳ್ಳಬೇಕು.

ಬಹುಪಕ್ಷೀಯ ರಾಜತಾಂತ್ರಿಕ ತಂತ್ರವನ್ನು ಭಾರತವು ಸಮರ್ಥವಾಗಿ ನಿಭಾಯಿಸಿದೆ. ಬಲಪ್ರಯೋಗ, ಆಕ್ರಮಣ ಮುಂತಾದ ಮಾನದಂಡದಿಂದಲೇ ಒಂದು ರಾಷ್ಟ್ರದ ಜಾಗತಿಕ ಪ್ರಗತಿಯನ್ನು ಅಳೆಯುವ ಈ ಕಾಲಮಾನದಲ್ಲಿ ಭಾರತವು ಯಾವುದೇ ದೇಶವನ್ನು ಅಸ್ಥಿರಗೊಳಿಸದೆ, ಯಾರ ಮೇಲೂ ದಾಳಿ ನಡೆಸದೆ, ಯಾವುದೇ ದೇಶವನ್ನು ಲೂಟಿ ಮಾಡದೆ ಪ್ರಗತಿಯತ್ತ ಸಾಗುತ್ತಿದೆ. ಇದು ಭಾರತದ ವಿಶೇಷತೆ.

ಭಾರತದ ರಾಜತಾಂತ್ರಿಕತೆಯು ಅಪ್ಪಟ 'ಭಾರತೀಯತೆ'ಯನ್ನು ಒಳಗೊಂಡಿರುವುದು ಕೊಲ್ಲಿ ಸಮರದಿಂದ ಸ್ಪಷ್ಟವಾಗಿದೆ. ವಿಭಜಿತ ಜಗತ್ತಿನಲ್ಲಿ ಯಾವುದೇ ಒಂದು ಪಕ್ಷ ವಹಿಸಲು ಭಾರತ ನಿರಾಕರಿಸಿದೆ. ಇದು ಪ್ರಾಯೋಗಿಕ ನೀತಿ, ಆದರೆ ನೈತಿಕತೆಯನ್ನು ಉಲ್ಲಂಘಿಸಿದ್ದಲ್ಲ. ಇದು ಜಗತ್ತಿಗೇ ಬೆಳಕು ತೋರುವಂತಹ ನೀತಿ.


ವಾಸಕ್ಕಿಟ್ಟುಕೊಳ್ಳಬಾರದವರು

ಅಕರ್ಮಶೀಲಂ ಚ ಮಹಾಶನಂ ಚ ಲೋಕದ್ವಿಷ್ಟಂ ಬಹುಮಾಯಾಂ ನೃಶಂಸಮ್।
ಅದೇಶಕಾಲಜ್ಞಮನಿಷ್ಟವೇಷಮ್ ಏತಾನ್ ಗೃಹೇ ನ ಪ್ರತಿವಾಸಯೇತ ।।

–ಹಿತೋಪದೇಶ

ದುಷ್ಕರ್ಮಿ, ಹೊಟ್ಟೆಬಾಕ, ಮಾನವದ್ವೇಷಿ, ಮಹಾಮಾಯಾವಿ, ಕ್ರೂರಿ, ದೇಶಕಾಲಗಳ ಅರಿವಿಲ್ಲದವನು, ಇಷ್ಟವಲ್ಲದವನು ಇಂಥವರನ್ನು ಮನೆಯಲ್ಲಿ ವಾಸಕ್ಕಿಟ್ಟುಕೊಳ್ಳಬಾರದು – ಎಂಬುದು ಶ್ಲೋಕಾರ್ಥ.

ಸನಾತನ ಭಾರತೀಯರ ಆಚಾರವಿಚಾರ, ನಡೆ-ನುಡಿ, ಹೃದಯ ವೈಶಾಲ್ಯ ಸಾಮಾನ್ಯ ಕಲ್ಪನೆಗೆ ನಿಲುಕದ್ದು. ಜಗತ್ತಿನ ಇತರೆಡೆ ಕಾಣದ ವೈಶಿಷ್ಟ್ಯವನ್ನು ಸನಾತನ ಪರಂಪರೆಯಲ್ಲಿ ಕಾಣುತ್ತೇವೆ. ನಮಗೆ ಆಶ್ರಯ ಕೇಳಿ ಬಂದವರಿಗೆ ನಿರಾಶೆಗೊಳಿಸಿ ಗೊತ್ತಿಲ್ಲ. ಹಸಿದವರೊಡನೆ ಹಂಚಿ ತಿನ್ನುವುದನ್ನು ಸನಾತನ ಧರ್ಮವೇ ಕಲಿಸಿದೆ. 'ಅತಿಥಿ ದೇವೋ ಭವ' ಎಂದು ನಂಬಿ ಮನೆಗೆ ಬಂದವರನ್ನು ಗೌರವಾದರಗಳಿಂದ ಸತ್ಕರಿಸುವ ಪರಂಪರೆಯ ಪಾಠ ನಮಗಿದೆ. ಅತಿಥಿ ಎಂದರೆ ಹೇಳದೇ ಕೇಳದೇ ಬರುವವನು.



ಪರಿಚಯವಿಲ್ಲದಿರಲೂಬಹುದು. ಅಪರಿಚಿತರಿಗೂ ಅಶನ, ವಸನ, ವಸತಿ ಕೊಟ್ಟು ಸತ್ಕರಿಸುವುದು ನಮ್ಮ ಜಾಯಮಾನ. ಇದು ಮಾನವತ್ವದ ಶ್ರೇಷ್ಠ ಪರಿಕಲ್ಪನೆಯೆನಿಸಿದರೂ ಬಲ್ಲವರು ಒಂದಿಷ್ಟು ಎಚ್ಚರಿಕೆಯ ಸೂಚನೆಯನ್ನು ನೀಡಿದ್ದಾರೆ. ಮನೆಯಲ್ಲಿ ಇತರರು ನಿಲ್ಲುವುದಕ್ಕೆ ಅವಕಾಶ ಕಲ್ಪಿಸುವುದು ಮಾನವತ್ವದ ಧರ್ಮ ಮುಖ್ಯವೆನಿಸಿದರೂ, ಕೆಲವರಿಗೆ ಅವಕಾಶ ಕಲ್ಪಿಸಬಾರದು ಎಂಬ ನಿಯಮವಿದೆ. ಯಾರನ್ನೆಲ್ಲ ಮನೆಯಲ್ಲಿ ವಾಸಕ್ಕೆ ಇಟ್ಟುಕೊಳ್ಳಬಾರದು ಎಂಬುದನ್ನು ಪ್ರಕೃತ ಶ್ಲೋಕದಲ್ಲಿ ನಿರೂಪಿಸಲಾಗಿದೆ. ದುಷ್ಕರ್ಮಿಗೆ ಅವಕಾಶ ಕಲ್ಪಿಸಬಾರದು. ಮೊದಲೇ ದುಷ್ಕರ್ಮಿ. ಯಾವ ಬಗೆಯ ಕೆಡುಕನ್ನೆಸಗುವುದಕ್ಕೂ ಹೇಸುವುದಿಲ್ಲ, ಇಂಥವನಿಂದ ಕೇಡು ತಪ್ಪಿದ್ದಲ್ಲ, ಮನೆಗೆ ಮಾರಿ ಹೊಕ್ಕಂತಾಗುವುದರಿಂದ ಆಶ್ರಯವನ್ನು ನೀಡಬಾರದು. ವಿದೇಶಿ ನುಸುಳುಕೋರರು ನಮ್ಮ ದೇಶದಲ್ಲಿ ಎಂತೆಂತಹ ಅನ್ಯಾಯವೆಸಗುತ್ತಿದ್ದಾರೆ ಎಂಬುದನ್ನು ಗಮನಿಸಿದಾಗ ಈ ಹೇಳಿಕೆ ಅರ್ಥವಾಗುತ್ತದೆ.

ಹೊಟ್ಟೆಬಾಕನನ್ನು ಮನೆಯೊಳಗೆ ಸೇರಿಸಬಾರದು. ಇವನಿಂದಾಗಿ ಇತರರು ಉಪವಾಸ ಬೀಳಬೇಕಾದೀತು. ಅವನು ತಿನ್ನುವ ಪರಿ ಮನೆಯನ್ನೇ ಮಸಣ ಮಾಡುವ ಸಾಧ್ಯತೆಯಿರುವುದರಿಂದ ಇಂಥವರಿಗೆ ಅವಕಾಶವಿರಬಾರದು. ಮಾನವದ್ವೇಷಿಗೆ ಆಶ್ರಯವಿತ್ತರೆ ಅನಾಹುತ ತಪ್ಪಿದ್ದಲ್ಲ, ಆಶ್ರಯ ಕೊಟ್ಟವರು ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗಿಬರಬಹುದು. ಆದ್ದರಿಂದ ಇವರನ್ನು ದೂರವಿರಿಸಬೇಕು.

ಮಹಾಮೋಸಗಾರ, ವಂಚಕ, ಕ್ರೂರಿ ಇವರಿಗಂತೂ ಆಶ್ರಯ ಕಲ್ಪಿಸಬಾರದು. ಇವರಿಂದ ಅಪಾಯವೆಂದೂ ತಪ್ಪಿದ್ದಲ್ಲ, ಇಂದಲ್ಲದಿದ್ದರೆ ನಾಳೆಯಾದರೂ ವಂಚಿಸಿ ಪರಾರಿಯಾಗುತ್ತಾರೆ. ಕೃತಜ್ಞತೆಯ ಗಂಧವಿಲ್ಲದ ಇಂಥವರಿಗೆ ಆಶ್ರಯವನ್ನು ನಿರಾಕರಿಸಬೇಕು. ದೇಶ-ಕಾಲಗಳ ಅರಿವಿಲ್ಲದವನಿಗೆ ವಾಸಕ್ಕೆ ಅವಕಾಶ ಕಲ್ಪಿಸಿದರೆ ಮನೆಯ ವ್ಯವಹಾರವೇ ಅಸ್ತವ್ಯಸ್ತವಾದೀತು. ಮನೆಯೇ ಕುರುಕ್ಷೇತ್ರವಾಯಿತು.

ಕೊನೆಯದಾಗಿ ನಮಗೆ ಇಷ್ಟವಲ್ಲದವನಿಗೆ ಆಶ್ರಯ ನೀಡಬಾರದು. ಒಂದೊಮ್ಮೆ ಆಶ್ರಯವಿತ್ತರೆ ಮನೆಯ ನೆಮ್ಮದಿ ಹಾಳಾಗುತ್ತದೆ. ಇಷ್ಟವಿಲ್ಲದಿದ್ದರೂ ಅವನ ವ್ಯವಹಾರವನ್ನು ಒಪ್ಪಿಕೊಳ್ಳಬೇಕಾಗಿ ಬರುತ್ತದೆ. ಇದರಿಂದ ಮನೆಯ ವಾತಾವರಣವೇ ಕಲುಷಿತಗೊಳ್ಳುತ್ತದೆ. ಇಂಥವರಿಗೆ ಆಶ್ರಯವಿತ್ತು ನೆಮ್ಮದಿಯ ಬದುಕನ್ನು ಹಾಳು ಮಾಡಿಕೊಳ್ಳುವುದರ ಬದಲು ಆಶ್ರಯ ನೀಡದಿರುವುದೇ ಒಳ್ಳೆಯದು.

ಆಸಿಯಾ ಅಂದ್ರಾಬಿ– ಈಕೆ ಕಾಶ್ಮೀರಿಗರಿಗೇ ಶತ್ರು!

ಕಾಶ್ಮೀರದ ಜನತೆಯ ಅತ್ಯಂತ ದೊಡ್ಡ ವೈರಿಗಳೆಂದರೆ ಆಸಿಯಾ ಅಂದ್ರಾಬಿ ಮತ್ತು ಆಕೆಯ ಸಹಚರರೇ ಆಗಿದ್ದಾರೆ.

▸ ಒಮರ್ ಫಾಜಿ

'ಅಸಹಾಯಕ ವೃದ್ಧೆಯಾದ, ಮಕ್ಕಳ ತಾಯಿಯಾಗಿರುವ, ಓರ್ವ ಮಹಿಳೆಯಾದ 66ರ ಹರಯದ ಆಸಿಯಾ ಅಂದ್ರಾಬಿಯನ್ನು ಕಠೋರ ಕಾನೂನುಬಾಹಿರ ಚಟುವಟಿಕೆ ನಿರ್ಬಂಧ ಕಾನೂನಿನಡಿಯಲ್ಲಿ ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಗಿದೆ. ಕಾಶ್ಮೀರದ ಜನರ ಪರವಾಗಿ ಧ್ವನಿಯೆತ್ತಿದ್ದಕ್ಕಾಗಿ ಆಕೆಗೆ ಈ ಶಿಕ್ಷೆ ವಿಧಿಸಲಾಗಿದೆ.' ಹಾಗೆಂದು ಬಿಂಬಿಸುತ್ತಿವೆ ಪಾಕಿಸ್ತಾನಿ ಮಾಧ್ಯಮಗಳು. ಜತೆಗೇ ಅವರಿಂದ ಹಣ ಪಡೆದ ಭಾರತದ ಕೆಲವರು, ಇನ್ನು ಕೆಲವು ಲಿಬರಲ್‌ಗಳು, ಹಲವಾರು ಅಂತಾರಾಷ್ಟ್ರೀಯ ಮಾಧ್ಯಮಗಳೂ ಅದೇ ರಾಗ ಹಾಡುತ್ತಿವೆ. ಅಂದ್ರಾಬಿಗೆ ನ್ಯಾಯಾಲಯವು ಇತ್ತೀಚೆಗೆ ಜೀವಾವಧಿ ಶಿಕ್ಷೆ ಪ್ರಕಟಿಸಿದ ಬಳಿಕ ಇವರೆಲ್ಲ ಇಂತಹ ಸಂಕಥನ(ನರೇಟಿವ್)ವನ್ನು ತೇಲಿಬಿಡುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಆಸಿಯಾ ಅಂದ್ರಾಬಿ ಮತ್ತು ಆಕೆಯ ಸಹಚರರ ಕಾರ್ಯಚಟುವಟಿಕೆಗಳನ್ನು ಪರಾಮರ್ಶಿಸಿದರೆ ಆಕೆಗೆ ನೀಡಲಾಗಿರುವ ಶಿಕ್ಷೆಯು ಕಡಿಮೆಯೆಂದೇ ತೋರಿಬರುತ್ತದೆ.



ಆಕೆಯ ಪುತ್ರ ಇತ್ತೀಚೆಗೆ ಮಾಧ್ಯಮದಲ್ಲಿ ಲೇಖನವೊಂದನ್ನು ಬರೆದು ಭಯೋತ್ಪಾದನೆಗೆ ಸಂಬಂಧಿಸಿ ಬಂಧಿಸಲ್ಪಟ್ಟ ತನ್ನ ತಂದೆ, ತಾಯಿ ಇಬ್ಬರೂ ಸರಕಾರದ ದೌರ್ಜನ್ಯದ ಬಲಿಪಶುಗಳಾಗಿದ್ದಾರೆ ಎಂದು ಬಣ್ಣಿಸಿದ್ದಾನೆ. ಇದು ಕ್ರೂರ ಸಿದ್ಧಾಂತವಾದಿಗಳನ್ನು ಬಲಿಪಶುಗಳೆಂಬಂತೆ ಬಿಂಬಿಸುವ ಜಾಗತಿಕ ಸಂಚಿನ ಒಂದು ಭಾಗವಾಗಿದೆ. ಆಸಿಯಾ ಅಂದ್ರಾಬಿ, ಹಾಗೂ ಆಕೆಯೊಂದಿಗೆ ಶಿಕ್ಷೆಗೆ ಗುರಿಯಾಗಿರುವ ಸೋಫಿ ಫೆಹ್ಮೀದಾ ಮತ್ತು ನಹಿದಾ ನಸ್ರೀನ್ ಅವರನ್ನೆಲ್ಲಾ ಅಮಾಯಕರೆಂಬಂತೆ ಬಿಂಬಿಸಲಾಗುತ್ತಿದೆ.

ಆದರೆ ವಸ್ತುಸ್ಥಿತಿ ಬೇರೆಯೇ ಇದೆ. ಅಸಹಾಯಕ, ಅಮಾಯಕ ಮಹಿಳೆ ಎಂದು ಬಿಂಬಿಸಲ್ಪಡುವ ಆಸಿಯಾ ಅಂದ್ರಾಬಿ 'ದುಖ್ತರಣ್ –ಇ– ಮಿಲ್ಲತ್' ಎಂಬ ಮಹಿಳಾ ಉಗ್ರಗಾಮಿ ಸಂಘಟನೆಯನ್ನು ಕಟ್ಟಿದವಳು. ಈ ಸಂಘಟನೆಯು ಜಿಹಾದ್‌ನ್ನು ಪ್ರತಿಪಾದಿಸುತ್ತಾ ಕಾಶ್ಮೀರದಲ್ಲಿ ಇಸ್ಲಾಮಿಕ್ ಕಾನೂನನ್ನು ಜಾರಿಗೊಳಿಸಬೇಕು ಹಾಗೂ ಕಾಶ್ಮೀರವನ್ನು ಪಾಕಿಸ್ತಾನದೊಂದಿಗೆ ವಿಲೀನಗೊಳಿಸಬೇಕೆಂದು ಪ್ರತಿಪಾದಿಸುತ್ತಿತ್ತು. ಈ ಸಂಘಟನೆಯು ಹಿಜ್‌ಬುಲ್ಲಾ ಮುಜಾಹಿದ್‌ನೊಂದಿಗೆ ಸಹಕರಿಸಿ ಕಾರ್ಯಾಚರಿಸುತ್ತಿತ್ತು. ಆಸಿಯಾ ಅಂದ್ರಾಬಿ ನಾಯಕತ್ವದಲ್ಲಿ 1987ರಲ್ಲಿ ಸ್ಥಾಪಿಸಲ್ಪಟ್ಟ ಈ ಸಂಘಟನೆಯು ತನ್ನ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದುದಷ್ಟೇ ಅಲ್ಲದೆ ಅದರ ಕಾರ್ಯಾಚರಣೆಗೂ ಕಾರ್ಯಶೀಲವಾಗಿತ್ತು. 1990ರ ದಶಕದಲ್ಲಿ ಕಾಶ್ಮೀರದಲ್ಲಿ ಉಗ್ರಗಾಮಿ ಚಟುವಟಿಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಈಕೆಯ ಸಂಘಟನೆಯು ಕಾಶ್ಮೀರಿ ಮಹಿಳೆಯರಿಗೆ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುವಂತೆ ಆದೇಶಿಸಿತ್ತು. ಸದಾ ಹಿಜಾಬ್ ಧರಿಸುವಂತೆ, ಅದಕ್ಕೆ ತಪ್ಪಿದವರಿಗೆ ಶಿಕ್ಷೆ ನೀಡುವುದಾಗಿ ಅದು ಹೇಳಿತ್ತು. ಅದರಂತೆ ಹಿಜಾಬ್ ಧರಿಸದ ಕೆಲ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಲಾಗಿತ್ತು. ಕೆಲವರ ಮೇಲೆ ಆ್ಯಸಿಡ್ ದಾಳಿಯೂ ನಡೆದಿತ್ತು. ಇವಷ್ಟೇ ಆಕೆಗೆ ಜೀವಾವಧಿ ಶಿಕ್ಷೆ ನೀಡಲು ಸಾಕಾಗುತ್ತದೆ. ಆದರೆ ಕಥೆ ಇನ್ನೂ ಇದೆ.

ಆಸಿಯಾ ಅಂದ್ರಾಬಿ ಲಷ್ಕರ್–ಇ–ತೊಯ್ಬಾದ ಸ್ಥಾಪಕ ಹಫೀಜ್ ಸಯೀದ್ ಜತೆ ನಿಕಟ ಸಂಪರ್ಕ ಹೊಂದಿದ್ದು ಇದು ಆಕೆಯ ಸೈದ್ಧಾಂತಿಕ ಮತ್ತು ಕಾರ್ಯಾಚರಣಾ ಶೈಲಿಯ ಮೇಲೆ ಪ್ರಭಾವ ಬೀರಿತ್ತು. ಆಕೆ ಹಫೀಜ್ ಸಯೀದ್ ಜತೆ ಸಂಪರ್ಕ ಹೊಂದಿದ್ದುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಳು. ಹಫೀಜ್‌ನ ಚಿಂತನೆಗಳನ್ನು ತಾನು ಪ್ರತಿಪಾದಿಸುತ್ತಾ ಭಾರತ ವಿರೋಧಿ ನಿಲುವುಗಳನ್ನು ಬಹಿರಂಗವಾಗಿ ಪ್ರಕಟಿಸುತ್ತಿದ್ದಳು. 2015ರ ಆಗಸ್ಟ್‌ನಲ್ಲಿ ಹಫೀಜ್ ಸಯೀದ್ ಪಾಕಿಸ್ತಾನದ ಮುಲ್ತಾನ್‌ನಲ್ಲಿ ಆಯೋಜಿಸಿದ್ದ ರ್‍ಯಾಲಿಯಲ್ಲಿ ಆಸಿಯಾ ಅಂದ್ರಾಬಿ ವಿಡಿಯೋ ಕರೆ ಮೂಲಕ ಭಾಷಣ ಮಾಡಿದ್ದಳು. ಆ ರ್‍ಯಾಲಿಯಲ್ಲಿ ಭಾರತವನ್ನು ವಿಭಜಿಸಲು ಕರೆ ನೀಡಲಾಗಿತ್ತು. ಇದನ್ನು ಆಸಿಯಾ ಅಂದ್ರಾಬಿ ಕೂಡಾ ಬೆಂಬಲಿಸಿದ್ದಲ್ಲದೆ ಭಾರತದ ಮೇಲೆ ಯುದ್ಧ ಸಾರುವಂತೆ ಕರೆ ನೀಡಿ ಅದಕ್ಕೆ ಪಾಕಿಸ್ತಾನದ ನೆರವನ್ನು ಕೋರಿದ್ದಳು. ಹಫೀಜ್ ಸಯೀದ್ ಆಸಿಯಾಳನ್ನು 'ಪ್ರೀತಿಯ ತಂಗಿ' ಎಂದು ಕರೆಯುತ್ತಿದ್ದ.

ಇನ್ನೂ ಹಲವು ಬಾರಿ ಆಸಿಯಾ ಅಂದ್ರಾಬಿ ತನ್ನ ವರ್ತನೆಗಳ ಮೂಲಕ ಭಾರತ ವಿರೋಧಿ ನಿಲುವನ್ನು ಪ್ರಕಟಿಸಿದ್ದಿದೆ. ಶ್ರೀನಗರದಲ್ಲಿ ಪಾಕಿಸ್ತಾನದ ಸ್ವಾತಂತ್ರ್ಯ ದಿನವನ್ನು ಆಚರಿಸಿದ್ದಲ್ಲದೆ ಪಾಕಿಸ್ತಾನದ ಧ್ವಜವನ್ನು ಹಾರಿಸಿದ್ದಳು. ಆಕೆಯ ನಾಯಕತ್ವದಲ್ಲಿ 'ದುಖ್ತರನ್–ಇ– ಮಿಲ್ಲತ್' ಸಂಘಟನೆಯು ಕಾಶ್ಮೀರಿಗರ ಸಂಸ್ಕೃತಿ ಮತ್ತು ದೈನಂದಿನ ಬದುಕಿನ ಮೇಲೂ ಹಿಡಿತ ಹೊಂದುವ ಪ್ರಯತ್ನ ನಡೆಸಿತ್ತು. ಕಾಶ್ಮೀರದ ಮೊತ್ತಮೊದಲ ಹುಡುಗಿಯರ ರಾಕ್ ಬ್ಯಾಂಡ್ ಮೇಲೆ ದಾಳಿ ನಡೆಸಲಾಗಿತ್ತು. ಕಾಶ್ಮೀರದಲ್ಲಿ ಕಲೋಪಾಸನೆಯನ್ನು ವಿರೋಧಿಸಿ ಬೆದರಿಕೆಗಳನ್ನು ಹಾಕಲಾಗಿತ್ತು. ಸೇನೆಯು ಸಂಘಟಿಸಿದ್ದ ಪ್ರವಾಸದಲ್ಲಿ ಕಾಶ್ಮೀರದ ಹುಡುಗಿಯರು ಪಾಲ್ಗೊಂಡುದ್ದಕ್ಕಾಗಿ ಅಂತವರ ಕುಟುಂಬಕ್ಕೆ ಬೆದರಿಕೆ ಒಡ್ಡಲಾಗಿತ್ತು. ಯುವಜನಾಂಗದ ಸಹಜ ಆಚರಣೆಗಳಾದ ಹೊಸ ವರ್ಷಾಚರಣೆ, ನೃತ್ಯ, ಗಾಯನ ಮುಂತಾದವುಗಳಿಗೆ ಈ ಸಂಘಟನೆ ಬೆದರಿಕೆಯೊಡ್ಡಿತ್ತು.

ಇದೆಲ್ಲವೂ ಕಾಶ್ಮೀರದ ಹಕ್ಕುಗಳಿಗಾಗಿ ಅಥವಾ ಘನತೆಗಾಗಿ ನಡೆದ ಹೋರಾಟವಲ್ಲ, ಅದಕ್ಕಿಂತಲೂ ಇಸ್ಲಾಮಿಕ್ ಕಠಿಣ ಕಾನೂನುಗಳನ್ನು ಜನರ ಮೇಲೆ ಹೇರುವ ಪ್ರಯತ್ನವಾಗಿತ್ತು.

ಆಸಿಯಾ ಅಂದ್ರಾಬಿಯ ಬಂಧನ ಮತ್ತು ಆಕೆಗೆ ಜೈಲು ಶಿಕ್ಷೆ ವಿಧಿಸಿರುವುದನ್ನು ಆಕೆಯ ಕಾರ್ಯ ಚಟುವಟಿಕೆಗಳಿಂದ ಪ್ರತ್ಯೇಕವಾಗಿ ನೋಡುವುದು ತಪ್ಪು. ಆಕೆ ನಡೆಸಿದ ಪ್ರತ್ಯೇಕತಾವಾದಿ ಚಳವಳಿ, ಉಗ್ರವಾದಿ ಪ್ರಚಾರ ಮತ್ತು ಕುಖ್ಯಾತ ಭಯೋತ್ಪಾದಕರೊಂದಿಗಿನ ಆಕೆಯ ಸಖ್ಯ ಮುಂತಾದವನ್ನು ಕಡೆಗಣಿಸಬಾರದು. ಅದನ್ನೆಲ್ಲ ಬಿಟ್ಟು ಆಕೆಯನ್ನು ಬಲಿಪಶು ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ. ಆಕೆಯ ವೈಯಕ್ತಿಕ ಬದುಕು ಕೂಡಾ ಉಗ್ರವಾದಿತ್ವವನ್ನೇ ಪ್ರತಿಬಿಂಬಿಸುತ್ತದೆ. ಆಕೆ ವಿವಾಹವಾದುದು ಹಿಜ್‌ಬುಲ್ ಮುಜಾಹಿದ್ದೀನ್‌ನ ಮುಖಂಡರಲ್ಲೊಬ್ಬನಾದ ಆಶಿಕ್ ಹುಸೇನ್ ಫಕ್ತು ಎಂಬಾತನನ್ನು. ಆತ ಮಾನವ ಹಕ್ಕುಗಳ ಪ್ರಮುಖ ಕಾರ್ಯಕರ್ತನೊಬ್ಬನನ್ನು ಹತ್ಯೆಗೈದ ಆರೋಪದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾನೆ. ಅಂದ್ರಾಬಿ ಪಾಕಿಸ್ತಾನದ ಸೇನೆಯೊಂದಿಗೆ ಕೂಡಾ ಕೌಟುಂಬಿಕ ಸಂಬಂಧವನ್ನು ಹೊಂದಿದ್ದಾಳೆ. ಆಕೆಯ ಸಂಬಂಧಿಕರು ಪಾಕಿಸ್ತಾನದ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗಾಗಿ ಆಕೆಯದು ಕೇವಲ ಕಾಶ್ಮೀರ ಪರ ಧ್ವನಿ ಎಂದು ಪರಿಗಣಿಸಲಾಗುವುದಿಲ್ಲ. ಆಕೆ ಪಾಕಿಸ್ತಾನದ ಕಾರ್ಯಸೂಚಿಯಂತೆಯೂ ಕಾರ್ಯಾಚರಿಸುತ್ತಿದ್ದಳು.

ಹಾಗಾಗಿ '66ರ ಹರೆಯದ ವಯೋವೃದ್ಧೆ , ಮಾತೆ, ಮಹಿಳೆ' ಎಂಬುದಾಗಿ ಸಂಭೋಧಿಸುತ್ತಾ ಆಕೆಯ ಕುರಿತಂತೆ ಕರುಣೆ ಉಕ್ಕುವ ರೀತಿಯಲ್ಲಿ ವರ್ಣಿಸುವುದಕ್ಕೆ ಏನನ್ನಬೇಕು? ಮಹಿಳೆಯರು ಕಡ್ಡಾಯವಾಗಿ ಹಿಜಾಬ್ ಧರಿಸಲೇಬೇಕು ಮತ್ತು ಅದಕ್ಕೆ ತಪ್ಪಿದಲ್ಲಿ ಶಿಕ್ಷೆ ಎದುರಿಸಬೇಕು ಎಂದು ಆಕೆ ಪ್ರತಿಪಾದಿಸುವಾಗ ಮಹಿಳೆಯಾಗಿರಲಿಲ್ಲವೇ? ಕಾಶ್ಮೀರಿ ಯುವಕರನ್ನು ಉಗ್ರಗಾಮಿ ಚಟುವಟಿಕೆಗೆ ಪ್ರೇರೇಪಿಸುತ್ತಿರುವಾಗ ಆಕೆ ಒಬ್ಬ ತಾಯಿಯಾಗಿರಲಿಲ್ಲವೇ? ಭಾರತ ಸರಕಾರದ ವಿರುದ್ಧ ಸಶಸ್ತ್ರ ಹೋರಾಟಕ್ಕೆ ಕರೆ ನೀಡುವಾಗ ಆಕೆ ವೃದ್ಧೆಯಾಗಿರಲಿಲ್ಲವೇ? ಹೀಗಿರುವಾಗ ಈಗ ಆಕೆಯ ಪುತ್ರನೂ ಸೇರಿದಂತೆ ಹಲವರು ಆಕೆಯನ್ನು ಅಮಾಯಕ, ಅಸಹಾಯಕ ಮತ್ತು ವೃದ್ಧ ಮಾತೆ, ಮಹಿಳೆ ಎಂಬಂತೆ ಬಿಂಬಿಸಿ ಅನುಕಂಪ ಸೃಷ್ಟಿಸಲು ಯತ್ನಿಸುತ್ತಿದ್ದಾರೆ. 2010ರಿಂದ 2019ರ ಅವಧಿಯಲ್ಲಿ ಬಹಳಷ್ಟು ಕಾಶ್ಮೀರಿ ಯುವಕರು ಸರಕಾರ ವಿರೋಧಿ ಪ್ರತಿಭಟನೆಯಲ್ಲಿ ತೊಡಗಿಕೊಂಡರು. ಅವರಲ್ಲಿ ಹಲವರು ಮನೆಗೆ ಮರಳಲೇ ಇಲ್ಲ, ಅವರ ಕಥೆ ಅಥವಾ ಹೆಸರನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ. ಅವರ ಕುಟುಂಬದ ಗತಿ ಏನಾಯಿತು ಎಂಬ ಬಗ್ಗೆಯೂ ಹೇಳುವವರು ಇಲ್ಲ, ಆದರೆ ಆಸಿಯಾ ಅಂದ್ರಾಬಿಯ ಕುರಿತಂತೆ ಮಾತ್ರ ಇಷ್ಟೆಲ್ಲಾ ಬರೆಯಲಾಗುತ್ತದೆ.

ಕಾಶ್ಮೀರದ ಜನತೆಯ ಪರವಾಗಿ ಕರುಣೆ ತೋರುವುದು ಮತ್ತು ಆಸಿಯಾ ಅಂದ್ರಾಬಿಯನ್ನು ಬೆಂಬಲಿಸುವುದು ಎರಡೂ ವೈರುಧ್ಯ ವಿಷಯಗಳು. ಇವನ್ನು ತಾರ್ಕಿಕವಾಗಿ ಒಂದುಗೂಡಿಸಲಾಗುವುದಿಲ್ಲ. ಕಾಶ್ಮೀರದ ಜನತೆಯ ಅತ್ಯಂತ ದೊಡ್ಡ ವೈರಿಗಳೆಂದರೆ ಆಸಿಯಾ ಅಂದ್ರಾಬಿ ಮತ್ತು ಆಕೆಯ ಸಹಚರರು. ಆಕೆ ಕೆಲವು ಪೀಳಿಗೆಗಳ ಕಾಶ್ಮೀರಿ ಯುವಕರ ಜೀವನವನ್ನು ಹಾಳುಗೆಡವಿದ್ದಾಳೆ. ಆಕೆಯನ್ನು ಬೆಂಬಲಿಸುವ ಎಲ್ಲರೂ ಕಟ್ಟಾ ಇಸ್ಲಾಮಿಕ್‌ವಾದಿಗಳಲ್ಲ. ಅವರಲ್ಲಿ ಬಹಳಷ್ಟು ಮಂದಿ ಸ್ವಾಯತ್ತತೆ, ಸ್ವಾತಂತ್ರ್ಯ ಎಂಬ ಘೋಷಣೆಯ ಹಿಂದೆ ಅಡಗಿಕೊಂಡ ಮೂರ್ಖರೂ ಇದ್ದಾರೆ. ಅವರೆಲ್ಲಾ ಸ್ವಾತಂತ್ರ್ಯ ಹಕ್ಕುಗಳನ್ನು ರಕ್ಷಿಸಲು ಯತ್ನಿಸುತ್ತಿರುವುದಲ್ಲ, ಅದಕ್ಕಿಂತಲೂ ಅವರು ಉಗ್ರವಾದಿ, ಮತೀಯವಾದಿ, ಸುಧಾರಣಾವಿರೋಧಿ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಿದ್ದಾರೆ.

ಆಪ್‌ಗೆ ಅಪಥ್ಯವಾಗುತ್ತಿರುವ ರಾಘವ್ ಚಡ್ಡಾ

▸ ಎಸ್. ಎನ್. ಭಟ್, ಸೈಪಂಗಲ್ಲು



ಇಂದಿನ ಡಿಜಿಟಲ್ ಯುಗದಲ್ಲಿ ನಮ್ಮ ಬದುಕು ಕೇವಲ ಭೌತಿಕ ಗಡಿಗಳಿಗೆ ಸೀಮಿತವಾಗಿಲ್ಲ. ನಾವು ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ಬಳಸುವ ಸ್ಮಾರ್ಟ್‌ಫೋನ್‌ಗಳು, ಡೇಟಾ ಪ್ಯಾಕೇಜ್‌ಗಳು ಮತ್ತು ಸಾಮಾಜಿಕ ಜಾಲತಾಣಗಳು ನಮ್ಮ ಆಲೋಚನೆ ಹಾಗೂ ಆದಾಯದ ಮೇಲೆ ಅತಿಕ್ರಮಣ ಮಾಡುತ್ತಿವೆ. ಇಂತಹ ಸಂಕೀರ್ಣ ಸಂದರ್ಭದಲ್ಲಿ, ಸಂಸತ್ತಿನ ವೇದಿಕೆಯಲ್ಲಿ ತಂತ್ರಜ್ಞಾನ ಮತ್ತು ಸಾಮಾನ್ಯ ಜನರ ಹಕ್ಕುಗಳ ಬಗ್ಗೆ ಗಂಭೀರವಾಗಿ ದನಿ ಎತ್ತಿದವರು ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ. ರಾಜಕೀಯ ಮೇಲಾಟಗಳ ನಡುವೆಯೂ ಅವರು ಮಂಡಿಸಿದ ಡಿಜಿಟಲ್ ನ್ಯಾಯದ ಪರಿಕಲ್ಪನೆ ಭಾರತೀಯ ರಾಜಕಾರಣದಲ್ಲಿ ಹೊಸ ಸಂಚಲನ ಮೂಡಿಸಿದೆ.

ರಾಘವ್ ಚಡ್ಡಾ ಅವರು ಆಮ್ ಆದ್ಮಿ ಪಕ್ಷದ ಪ್ರಮುಖ ಯುವ ನಾಯಕರು ಮತ್ತು ಪ್ರಸ್ತುತ ಪಂಜಾಬ್ ರಾಜ್ಯವನ್ನು ಪ್ರತಿನಿಧಿಸುವ ರಾಜ್ಯಸಭಾ ಸದಸ್ಯರಾಗಿದ್ದಾರೆ. ವೃತ್ತಿಯಿಂದ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಇವರು, 2022ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗುವ ಮೂಲಕ ಸಂಸತ್ತಿನ ಅತ್ಯಂತ ಕಿರಿಯ ಸದಸ್ಯರಲ್ಲಿ ಒಬ್ಬರೆಂಬ ಹೆಗ್ಗಳಿಕೆಗೆ ಪಾತ್ರರಾದರು. ಇದಕ್ಕೂ ಮೊದಲು ಅವರು ದೆಹಲಿಯ ರಾಜೇಂದ್ರ ನಗರ ಕ್ಷೇತ್ರದ ಶಾಸಕರಾಗಿ ಮತ್ತು ದೆಹಲಿ ಜಲ ಮಂಡಳಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಸಂಸತ್ತಿನಲ್ಲಿ ಡಿಜಿಟಲ್ ಹಕ್ಕುಗಳು, ಡೇಟಾ ಗೌಪ್ಯತೆ ಮತ್ತು ಆರ್ಥಿಕ ಹೊಣೆಗಾರಿಕೆಯಂತಹ ಸಮಕಾಲೀನ ವಿಷಯಗಳ ಬಗ್ಗೆ ಧ್ವನಿ ಎತ್ತುತ್ತಾ ಬಂದಿದ್ದಾರೆ.

ರಾಘವ್ ಚಡ್ಡಾ ಅವರ ರಾಜಕೀಯ ನಡೆಗಳು ತೀವ್ರ ಚರ್ಚೆಗೆ ಗ್ರಾಸವಾಗಿವೆ. ಆಮ್ ಆದ್ಮಿ ಪಕ್ಷದ ನಾಯಕತ್ವದೊಂದಿಗೆ ಉಂಟಾಗಿರುವ ಬಿರುಕಿನ ಹಿನ್ನೆಲೆಯಲ್ಲಿ, ಅವರನ್ನು ರಾಜ್ಯಸಭೆಯ ಪಕ್ಷದ ಉಪ ನಾಯಕನ ಸ್ಥಾನದಿಂದ ಅಧಿಕೃತವಾಗಿ ತೆಗೆದುಹಾಕಲಾಗಿದೆ ಮತ್ತು ಅವರ ಸ್ಥಾನಕ್ಕೆ ಅಶೋಕ್ ಕುಮಾರ್ ಮಿತ್ತಲ್ ಅವರನ್ನು ನೇಮಿಸಲಾಗಿದೆ. ಅಷ್ಟೇ ಅಲ್ಲದೆ, ಪಕ್ಷದ ಕೋಟಾದಡಿ ಅವರಿಗೆ ಸಂಸತ್ತಿನಲ್ಲಿ ಮಾತನಾಡಲು ಸಮಯ ನೀಡಬಾರದೆಂದು ಆಪ್ ನಾಯಕತ್ವವು ರಾಜ್ಯಸಭಾ ಸಚಿವಾಲಯಕ್ಕೆ ವಿನಂತಿಸಿದೆ. ಸದ್ಯಕ್ಕೆ ಅವರು ಸಂಸದರಾಗಿ ಮುಂದುವರಿಯುತ್ತಿದ್ದರೂ, ಪಕ್ಷದ ಪ್ರಮುಖ ಕಾರ್ಯಕ್ರಮಗಳಿಂದ ಮತ್ತು ಪ್ರಚಾರದಿಂದ ಅವರನ್ನು ದೂರವಿಡಲಾಗಿದೆ. ಈ ಬೆಳವಣಿಗೆಗಳು ಅವರು ಆಮ್ ಆದ್ಮಿ ಪಕ್ಷದಿಂದ ಹೊರಬಂದು ಹೊಸ ರಾಜಕೀಯ ಹಾದಿ ತುಳಿಯಬಹುದು ಎಂಬ ಮುನ್ಸೂಚನೆಯನ್ನು ನೀಡುತ್ತಿದೆ.

ರಾಘವ್ ಚಡ್ಡಾ ಅವರು ಮಂಡಿಸಿದ ಅತ್ಯಂತ ಪ್ರಬಲ ವಾದವೆಂದರೆ 'ಡೇಟಾ ರೋಲ್‌ಓವರ್' ಹಕ್ಕು. ನಾವು ಹಣ ಪಾವತಿಸಿ ಖರೀದಿಸಿದ ಇಂಟರ್ನೆಟ್ ಡೇಟಾ, ನಿಗದಿತ ಅವಧಿಯಲ್ಲಿ ಬಳಕೆಯಾಗದಿದ್ದರೂ ಎಕ್ಸ್‌ಪೈರ್ ಆಗಿ ಕಂಪನಿಗಳ ಪಾಲಾಗುವುದು ಗ್ರಾಹಕರಿಗೆ ಮಾಡುವ ಅನ್ಯಾಯ ಎಂಬುದು ಅವರ ನಿಲುವು. 'ಹಾಲಿನ ಪ್ಯಾಕೆಟ್ ಕೆಡುವಂತೆ ಡೇಟಾ ಕೆಡುವುದಿಲ್ಲ' ಎಂಬ ಅವರ ತರ್ಕಬದ್ಧ ಹೋಲಿಕೆಯು, ಡೇಟಾ ಎಂಬುದು ಕೇವಲ ಒಂದು ಸೌಲಭ್ಯವಲ್ಲ, ಅದು ಗ್ರಾಹಕನ ಆಸ್ತಿ ಎಂಬ ಹೊಸ ಸಂವಿಧಾನಿಕ ಆಯಾಮವನ್ನು ಸಂಸತ್ತಿನ ಮುಂದೆ ಇಟ್ಟಿದೆ. ಇದರೊಂದಿಗೆ, ಸೋಷಿಯಲ್ ಮೀಡಿಯಾ ಅಲ್ಗಾರಿದಮ್‌ಗಳ 'ಅದೃಶ್ಯ ಸರ್ವಾಧಿಕಾರ'ದ ಬಗ್ಗೆ ಅವರು ವ್ಯಕ್ತಪಡಿಸಿದ ಆತಂಕ ಇಂದಿನ ಯುವ ಪೀಳಿಗೆಯ ಬದುಕಿಗೆ ಅತ್ಯಂತ ಪ್ರಸ್ತುತವಾಗಿದೆ. ಯಾವುದೇ ಮುನ್ಸೂಚನೆ ಇಲ್ಲದೆ ಕೃತಕ ಬುದ್ಧಿಮತ್ತೆಯ ಅಲ್ಗಾರಿದಮ್‌ಗಳು ಕಂಟೆಂಟ್ ಕ್ರಿಯೇಟರ್‌ಗಳ ರೀಚ್ ಕಡಿಮೆ ಮಾಡುವುದು ಅಥವಾ ಚಾನೆಲ್ ಬ್ಲಾಕ್ ಮಾಡುವುದು ಲಕ್ಷಾಂತರ ಜನರ ಜೀವನೋಪಾಯದ ಮೇಲೆ ಹೊಡೆತ ನೀಡುತ್ತಿದೆ. ಈ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು 1957ರ ಹಳೆಯ ಕಾಪಿರೈಟ್ ಕಾಯಿದೆಗಳನ್ನು ಇಂದಿನ 'ಫೇರ್ ಯೂಸ್' ಮತ್ತು ಡಿಜಿಟಲ್ ಯುಗದ ಅಗತ್ಯಗಳಿಗೆ ತಕ್ಕಂತೆ ತುರ್ತಾಗಿ ಪರಿಷ್ಕರಿಸಬೇಕೆಂದು ಅವರು ಪ್ರತಿಪಾದಿಸಿದ್ದಾರೆ.

ಕೇವಲ ತಂತ್ರಜ್ಞಾನಕ್ಕೆ ಸೀಮಿತವಾಗದ ಅವರ ಸಂಸದೀಯ ಕಾರ್ಯವೈಖರಿಯು ಸಾಮಾನ್ಯ ಜನರ ಜೀವನಕ್ಕೆ ಹತ್ತಿರವಾದ ಬೆಲೆ ಏರಿಕೆ, ರೈತರ ಕನಿಷ್ಠ ಬೆಂಬಲ ಬೆಲೆ ಮತ್ತು ಒಕ್ಕೂಟ ವ್ಯವಸ್ಥೆಯ ರಕ್ಷಣೆಯಂತಹ ವಿಷಯಗಳನ್ನೂ ಒಳಗೊಂಡಿದೆ. ಚಾರ್ಟರ್ಡ್ ಅಕೌಂಟೆಂಟ್ ಆಗಿ ಅವರ ವೃತ್ತಿಪರ ಹಿನ್ನೆಲೆಯು ಹಣದುಬ್ಬರ ಮತ್ತು ಜಿಎಸ್‌ಟಿ ಹೊರೆಯ ಮಗ್ಗುಲುಗಳನ್ನು ಸಂಶೋಧನಾತ್ಮಕವಾಗಿ ವಿಶ್ಲೇಷಿಸಲು ಅವರಿಗೆ ನೆರವಾಗಿದೆ.

ಆದರೆ, ಈ ಎಲ್ಲ ದಕ್ಷತೆಯ ನಡುವೆಯೂ ಆಮ್ ಆದ್ಮಿ ಪಕ್ಷದೊಳಗಿನ ಇತ್ತೀಚಿನ ಬೆಳವಣಿಗೆಗಳು ಒಂದು ವಿಪರ್ಯಾಸದಂತೆ ತೋರುತ್ತಿವೆ. ಪಕ್ಷದ ತಾಂತ್ರಿಕ ಚತುರ ಎಂದೇ ಹೆಸರಾಗಿದ್ದ ಚಡ್ಡಾ ಅವರನ್ನೇ ಇಂದು ಪ್ರಮುಖ ಜವಾಬ್ದಾರಿಗಳಿಂದ ದೂರವಿಟ್ಟಿರುವುದು ಹಲವು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ. ಪಕ್ಷದ ಸ್ಥಾಪಕ ಸದಸ್ಯ ಕುಮಾರ್ ವಿಶ್ವಾಸ್ ಅಂದು ಆಡಿದ್ದ ಮಾತುಗಳು ಅಕ್ಷರಶಃ ನಿಜವಾಗುತ್ತಿರುವಂತೆ ಭಾಸವಾಗುತ್ತಿದೆ. ''ಪಕ್ಷದಲ್ಲಿ ಯಾರಾದರೂ ಸ್ವತಂತ್ರ ಬ್ರ್ಯಾಂಡ್ ಆಗಿ ಬೆಳೆಯುತ್ತಿದ್ದಾರೆ ಎನಿಸಿದರೆ ಅವರನ್ನು ವ್ಯವಸ್ಥಿತವಾಗಿ ಮೂಲೆಗುಂಪು ಮಾಡಲಾಗುತ್ತದೆ'' ಎಂಬ ಅವರ ಎಚ್ಚರಿಕೆ ಇಂದು ಚಡ್ಡಾ ಅವರ ವಿಷಯದಲ್ಲಿ ಮರುಕಳಿಸುತ್ತಿದೆ.

ಪ್ರಶ್ನಿಸುವ ಮನೋಭಾವದ ನಾಯಕರಿಗಿಂತ, ಹೈಕಮಾಂಡ್ ಸಂಸ್ಕೃತಿಗೆ ಒಗ್ಗಿಕೊಳ್ಳುವವರಿಗೆ ಆದ್ಯತೆ ಸಿಗುತ್ತಿದೆ ಎಂಬ ವಿಶ್ಲೇಷಣೆ ರಾಜಕೀಯ ವಲಯದಲ್ಲಿ ಬಲವಾಗಿದೆ. ಇತ್ತೀಚಿನ ಈ ಬೆಳವಣಿಗೆಗಳು ರಾಘವ್ ಚಡ್ಡಾ ಅವರ ಮುಂದಿನ ನಡೆಯ ಬಗ್ಗೆ ಕುತೂಹಲ ಮೂಡಿಸಿವೆ. ಆಪ್ ನಾಯಕತ್ವದೊಂದಿಗೆ ಹೆಚ್ಚುತ್ತಿರುವ ಅಂತರ ಮತ್ತು ಸಂಸತ್ತಿನಲ್ಲಿ ಅವರು ಮಂಡಿಸುವ ವಿಷಯಗಳು ಕೆಲವೊಮ್ಮೆ ಕೇಂದ್ರ ಸರ್ಕಾರದ ನೀತಿಗಳಿಗೆ ಪೂರಕವಾಗಿರುವಂತೆ ಕಾಣುತ್ತಿರುವುದು, ಅವರು ಬಿಜೆಪಿಯತ್ತ ವಾಲುತ್ತಿರಬಹುದೇ ಎಂಬ ಸಂಶಯವನ್ನು ಹುಟ್ಟುಹಾಕಿದೆ.

ಬಿಜೆಪಿ ಕೂಡ ಪಂಜಾಬ್‌ನಲ್ಲಿ ಒಬ್ಬ ಪ್ರಬಲ ಸಿಖ್ ಯುವ ನಾಯಕನಿಗಾಗಿ ಹುಡುಕಾಟ ನಡೆಸುತ್ತಿದ್ದು, ಚಡ್ಡಾ ಅವರಿಗೆ ಅಲ್ಲಿ ಉತ್ತಮ ವೇದಿಕೆ ಸಿಗಬಹುದು ಎಂಬ ಊಹೆಗಳಿವೆ. ಸದ್ಯಕ್ಕೆ ಅವರು ಯಾವುದೇ ಅಧಿಕೃತ ಘೋಷಣೆ ಮಾಡದಿದ್ದರೂ, ಪಕ್ಷದೊಳಗಿನ ನಿರ್ಲಕ್ಷ್ಯ ಮತ್ತು ಅವಮಾನತು ಅವರನ್ನು ಬಂಡಾಯದ ಹಾದಿಗೆ ಅಥವಾ ರಾಷ್ಟ್ರೀಯ ಮಟ್ಟದ ಮತ್ತೊಂದು ಪರ್ಯಾಯದತ್ತ ನಡೆಸುವ ಸಾಧ್ಯತೆ ತಳ್ಳಿಹಾಕುವಂತಿಲ್ಲ.

ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ಎರಡು ವಾರಗಳ ಕದನ ವಿರಾಮ

ಶ್ವೇತಭವನ ನಿರ್ದೇಶನದಂತೆ ಪಾಕ್ ಮಧ್ಯಸ್ಥಿಕೆ

ಟೆಹ್ರಾನ್: ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ಎರಡು ವಾರಗಳ ಕದನ ವಿರಾಮ ಏರ್ಪಡಿಸಲು ಅಮೆರಿಕ ಪಾಕಿಸ್ತಾನದ ಮೇಲೆ ಒತ್ತಡ ಹೇರಿತ್ತು ಎಂದು ಫೈನಾನ್ಶಿಯಲ್ ಟೈಮ್ಸ್ ವರದಿ ಮಾಡಿದೆ. ಈ ವರದಿ, ತಾನು ತಟಸ್ಥ ಮಧ್ಯಸ್ಥಗಾರ ಎಂಬ ಪಾಕಿಸ್ತಾನ ವಾದವನ್ನು ಪ್ರಶ್ನಿಸಿದೆ.

ಮಧ್ಯವರ್ತಿಯ ಪಾತ್ರ: ಯುದ್ಧವನ್ನು ಸ್ಥಗಿತಗೊಳಿಸಲು ಮತ್ತು ಹಾರ್ಮುಜ್ ಜಲಸಂಧಿಯಲ್ಲಿ ಸಂಚಾರ ಮರು ಪ್ರಾರಂಭಿಸಲು ಇರಾನ್ ಅನ್ನು ಒಪ್ಪಿಸಲು ಟ್ರಂಪ್ ಆಡಳಿತ ವಾರಗಳ ಕಾಲ ಪಾಕಿಸ್ತಾನದ ಮೇಲೆ ಒತ್ತಡ ಹೇರಿತ್ತು. ಅಮೆರಿಕ ಬೆಂಬಲಿತ ಪ್ರಸ್ತಾಪವನ್ನು ತಲುಪಿಸಲು ಮುಸ್ಲಿಂ ಬಹುಸಂಖ್ಯಾತ ನೆರೆ ರಾಷ್ಟ್ರವಾದ ಪಾಕಿಸ್ತಾನ ಸೂಕ್ತ ಮಾಧ್ಯಮ ಎಂದು ಅಮೆರಿಕ ನಂಬಿತ್ತು ಎನ್ನಲಾಗಿದೆ.

ರಾಜತಾಂತ್ರಿಕ ಕ್ರಮಗಳು: ಪಾಕಿಸ್ತಾನದ ರಕ್ಷಣಾ ಮುಖ್ಯಸ್ಥ ಅಸಿಮ್ ಮುನೀರ್ ನೇತೃತ್ವದ ತೆರೆಮರೆಯ ಪ್ರಯತ್ನಗಳು ಮಂಗಳವಾರ ರಾತ್ರಿ ಫಲ ನೀಡಿದ್ದವು. ಮುನೀರ್ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಮತ್ತು ವಿಶೇಷ ಪ್ರತಿನಿಧಿ ಸ್ಟೀವ್ ವಿಟ್ಕಾಫ್ ರೊಂದಿಗೆ ಸರಣಿ ಮಾತುಕತೆ ನಡೆಸಿದ್ದರು. ಬಳಿಕ ಮುನೀರ್ ಎರಡು ವಾರಗಳ ಕದನ ವಿರಾಮದಪ್ರಸ್ತಾಪವನ್ನು ಇರಾನ್ ವಿದೇಶಾಂಗಸಚಿವ ಅಬ್ಬಾಸ್ ಅರಾಗ್ಚಿಗೆ ತಿಳಿಸಿದ್ದರು. ಅಮೆರಿಕ ಹೇಳಿಕೆಯನ್ನು ಪರಿಶೀಲಿಸಿ ಅನುಮೋದಿಸಿದ ನಂತರ ಪ್ರಧಾನಿ ಶೆಹಬಾಜ್ ಷರೀಫ್ ಈ ಒಪ್ಪಂದವನ್ನು ಸಾರ್ವಜನಿಕವಾಗಿ ಘೋಷಿಸಿದ್ದರು.



ತೆರೆಮರೆಯ ವಿದ್ಯಮಾನಗಳು

ಈ ಒಪ್ಪಂದ, ಪಾಕಿಸ್ತಾನದ ಸ್ವತಂತ್ರ ಯೋಜನೆಯಲ್ಲ, ಬದಲಾಗಿ ವಾಷಿಂಗ್ಟನ್‌ನ ನಿರ್ದೇಶನದಂತೆ ನಡೆದಿದೆ ಎಂಬುದಕ್ಕೆ ಪುರಾವೆಗಳು ಲಭ್ಯವಾಗಿವೆ. ಷರೀಫ್, ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಅಧಿಕೃತ ಪ್ರಕಟಣೆಯಲ್ಲಿ ಶ್ವೇತಭವನ ಸಿದ್ಧಪಡಿಸಿದ್ದ ಕರಡು ವಿಷಯದ ಸಾಲುಗಳು ಹಾಗೆಯೇ ಉಳಿದಿದ್ದವು, ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ಮಾತುಕತೆಯ ವೇಳೆ ಪಾಕಿಸ್ತಾನಿ ಅಧಿಕಾರಿಗಳು 15 ಅಂಶಗಳ ಅಮೆರಿಕದ ಪ್ರಸ್ತಾಪವನ್ನು ಇರಾನ್‌ನ ರಾಜಕೀಯ ಮತ್ತು ಮಿಲಿಟರಿ ನಾಯಕರಿಗೆ ಹಸ್ತಾಂತರಿಸಿದ್ದರು.



ಅಮೆರಿಕದ ಉದ್ದೇಶಗಳು

ತೈಲ ಬೆಲೆ ಏರಿಕೆ ಮತ್ತು ಇರಾನ್ ಆಡಳಿತದ ಪ್ರತಿರೋಧದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದ ಅಧ್ಯಕ್ಷ ಟ್ರಂಪ್, ಕದನ ವಿರಾಮಕ್ಕಾಗಿ ಉತ್ಸುಕರಾಗಿದ್ದರು. ಮಾ.21 ರಂದು ಇರಾನ್‌ನ ವಿದ್ಯುತ್ ಸ್ಥಾವರಗಳನ್ನು ನಾಶಪಡಿಸುವುದಾಗಿ ಸಾರ್ವಜನಿಕವಾಗಿ ಎಚ್ಚರಿಕೆ ನೀಡಿದ್ದರೂ, ತೆರೆಮರೆಯಲ್ಲಿ ಟ್ರಂಪ್ ಆಡಳಿತ ಪಾಕಿಸ್ತಾನದ ಮೂಲಕ ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಪ್ರಯತ್ನಿಸುತ್ತಿತ್ತು ಎಂಬುದು ಈಗ ಬಯಲಾಗಿದೆ.

ಇರಾನ್‌ನ ಆಂತರಿಕ ಸಂಘರ್ಷ

ಇರಾನ್‌ನ ರಾಜಕೀಯ ನಾಯಕರು ಕದನ ವಿರಾಮಕ್ಕೆ ತಾತ್ವಿಕವಾಗಿ ಒಪ್ಪಿಗೆ ನೀಡಿದ್ದರೂ, ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ನಿಂದ ವಿರೋಧ ವ್ಯಕ್ತವಾಗಿತ್ತು. ಅಮೆರಿಕ ಮತ್ತು ಇಸ್ರೇಲ್‌ನ ಸತತ ಬಾಂಬ್ ದಾಳಿಯ ನಂತರ ಐಆರ್‌ಜಿಸಿಯ ಕೆಲವು ವಿಭಾಗಗಳು ಮಾತುಕತೆಗೆ ಮರಳಲು ಅಥವಾ ಜಲಸಂಧಿಯ ಮೇಲಿನ ನಿಯಂತ್ರಣ ಬಿಟ್ಟುಕೊಡಲು ನಿರಾಕರಿಸಿದ್ದವು.

ಅಂತಿಮ ಮಾತುಕತೆಗಳು

ಮಂಗಳವಾರ ಸೌದಿ ಅರೇಬಿಯಾದ ಜುಬೈಲ್ ಪೆಟ್ರೋಕೆಮಿಕಲ್ ಕೇಂದ್ರದ ಮೇಲೆ ನಡೆದ ಡ್ರೋನ್ ದಾಳಿ, ಮಾತುಕತೆಯನ್ನು ಹಳಿತಪ್ಪಿಸುವ ಭೀತಿ ಮೂಡಿಸಿತ್ತು. ಸೌದಿ ಅರೇಬಿಯಾದೊಂದಿಗೆ ರಕ್ಷಣಾ ಒಪ್ಪಂದ ಹೊಂದಿರುವ ಪಾಕಿಸ್ತಾನ, ಇಂತಹ ದಾಳಿಗಳು ಮುಂದುವರಿದರೆ ಇರಾನ್ ಅಂತರಾಷ್ಟ್ರೀಯ ಮಟ್ಟದಲ್ಲಿ ಒಂಟಿಯಾಗಲಿದೆ ಎಂದು ಎಚ್ಚರಿಸಿತ್ತು. ಬುಧವಾರ ಶೆಹಬಾಜ್ ಷರೀಫ್ ಅವರೊಂದಿಗೆ ಮಾತನಾಡಿದ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಇಸ್ಲಾಮಾಬಾದ್‌ಗೆ ಮಾತುಕತೆಗಾಗಿ ತಮ್ಮ ಪ್ರತಿನಿಧಿಗಳನ್ನು ಕಳುಹಿಸಲು ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಐಆರ್‌ಜಿಸಿ ನಿಲುವೇನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಪಾಕಿಸ್ತಾನದ ಪಾತ್ರ ಪ್ರಶ್ನಿಸಿದ ಇಸ್ರೇಲ್

ಹೊಸದಿಲ್ಲಿ: ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರುವ ಕದನ ವಿರಾಮ ಮಾತುಕತೆಯಲ್ಲಿ ಪಾಕಿಸ್ತಾನವನ್ನು ವಿಶ್ವಾಸಾರ್ಹ ಮಧ್ಯಸ್ಥಗಾರ ಎಂದು ಇಸ್ರೇಲ್ ಪರಿಗಣಿಸುವುದಿಲ್ಲ ಎಂದು ಭಾರತಕ್ಕೆ ಇಸ್ರೇಲ್ ರಾಯಭಾರಿ ರೆವುನ್ ಅಜರ್ ತಿಳಿಸಿದ್ದಾರೆ.

ರಾಜತಾಂತ್ರಿಕ ಸಂಘರ್ಷ

ಪಾಕಿಸ್ತಾನದ ಸೇವೆಗಳನ್ನು ಬಳಸಿಕೊಳ್ಳಲು ಅಮೆರಿಕಕ್ಕೆ ತನ್ನದೇ ಆದ ಕಾರಣಗಳಿರಬಹುದು, ಆದರೆ ಮಾತುಕತೆಯ ಸಾರಾಂಶದ ವಿಷಯಕ್ಕೆ ಸಂಬಂಧಿಸಿದಂತೆ, ಇಸ್ರೇಲ್ ಅಮೆರಿಕದೊಂದಿಗೆ ಸಮನ್ವಯತೆ ಕಾಯ್ದುಕೊಳ್ಳಲಿದೆ ಎಂದು ಅಜರ್ ಹೇಳಿದ್ದಾರೆ. ಏ.11ರಂದು ಪಾಕಿಸ್ತಾನದಲ್ಲಿ ನಡೆಯಲಿರುವ ಅಮೆರಿಕ ಮತ್ತು ಇರಾನ್ ನೇರ ಮಾತುಕತೆಗೆ ಮುನ್ನ ಈ ಹೇಳಿಕೆ ಹೊರಬಿದ್ದಿದೆ. ಈ ಮಾತುಕತೆಯಲ್ಲಿ ಅಮೆರಿಕ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಭಾಗವಹಿಸುವ ಸಾಧ್ಯತೆಯಿದೆ.

ಲೆಬನಾನ್ ಸಂಘರ್ಷ

ಇರಾನ್ ಕದನ ವಿರಾಮ ಮತ್ತು ಲೆಬನಾನ್ ಕಾರ್ಯಾಚರಣೆಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಿದ ಅಜ್‌ರ್, ಇಸ್ರೇಲ್ ವಾಯುಪಡೆ ಇತ್ತೀಚೆಗೆ 250 ಕ್ಕೂ ಹೆಚ್ಚು ಹೆಜ್ಬೊಲ್ಲಾ ಸದಸ್ಯರನ್ನು ಹತ್ಯೆ ಮಾಡಿದೆ ಎಂದು ದೃಢಪಡಿಸಿದರು. ಲಿಟಾನಿ ನದಿಯ ದಕ್ಷಿಣ ಭಾಗದಲ್ಲಿ ಹೆಜ್ಬೊಲ್ಲಾ ನಿಶ್ಶಸ್ತ್ರೀಕರಣವಾಗಬೇಕು ಎಂದು ಅವರು ಒತ್ತಾಯಿಸಿದರು. ಇರಾನ್ ಜತೆಗಿನ ತಾತ್ಕಾಲಿಕ ಕದನ ವಿರಾಮದ ವೇಳೆ, ಇಸ್ರೇಲ್‌ನ ಉತ್ತರದ ಸಮುದಾಯಗಳನ್ನು ರಕ್ಷಿಸಲು ಲೆಬನಾನ್ ಸರ್ಕಾರ ಹೆಜ್ಬೊಲ್ಲಾ ಸಂಘಟನೆಯ ಮೂಲಸೌಕರ್ಯಗಳನ್ನು ತೆರವುಗೊಳಿಸಬೇಕು ಎಂದು ಅವರು ಪ್ರತಿಪಾದಿಸಿದ್ದಾರೆ.

ಲೆಬನಾನ್ ಕುರಿತು ಭಿನ್ನಮತ

ಲೆಬನಾನ್ ಮೇಲಿನ ಇಸ್ರೇಲ್ ದಾಳಿ ಎರಡು ವಾರಗಳ ಕದನ ವಿರಾಮ ಮತ್ತು ಪ್ರಾದೇಶಿಕ ಸ್ಥಿರತೆಗೆ ಧಕ್ಕೆ ತರಬಹುದು, ಎಂದು ಟೆಹ್ರಾನ್ ಎಚ್ಚರಿಸಿದೆ. ಆದರೆ, ಲೆಬನಾನ್ ಈ ಕದನ ವಿರಾಮ ಒಪ್ಪಂದದ ಭಾಗವಲ್ಲ ಎಂದು ಟ್ರಂಪ್ ಮತ್ತು ನೆತನ್ಯಾಹು ಸ್ಪಷ್ಟಪಡಿಸಿದ್ದಾರೆ.

ಹಾರ್ಮುಜ್ ಹಾದು ಹೋಗುವ ಹಡಗುಗಳಿಗೆ ಇರಾನ್‌ನಿಂದ ಶುಲ್ಕ

ಹೊಸದಿಲ್ಲಿ: ಎರಡು ವಾರಗಳ ಕದನ ವಿರಾಮದ ಅವಧಿಯಲ್ಲಿ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗುವ ಹಡಗುಗಳು ಕ್ರಿಪ್ಟೋಕರೆನ್ಸಿ ಅಥವಾ ಚೀನೀ ಯುವಾನ್‌ನಲ್ಲಿ ಶುಲ್ಕ ಪಾವತಿಸಬೇಕು ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಸೂಚಿಸಿದೆ. ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿಯ ಪ್ರಕಾರ, ಸರಕು ತುಂಬಿದ ಟ್ಯಾಂಕರ್‌ಗಳಿಗೆ ಇರಾನ್ ಪ್ರತಿ ಬ್ಯಾರೆಲ್‌ಗೆ ಸುಮಾರು 1 ಡಾಲರ್ ಶುಲ್ಕ ವಿಧಿಸುತ್ತಿದೆ. ಹಡಗುಗಳು ತಮ್ಮ ಸರಕಿನ ವಿವರಗಳನ್ನು ಮುಂಚಿತವಾಗಿ ಇಮೇಲ್ ಮೂಲಕ ನೀಡಬೇಕು ಮತ್ತು ಇರಾನ್ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು. ಬಳಿಕ ಖೇಶ್ಮ್ ಮತ್ತು ಲಾರಕ್ ದ್ವೀಪಗಳ ನಡುವಿನ ಉತ್ತರದ ಕಾರಿಡಾರ್ ಅನ್ನು ಬಳಸಬೇಕಾಗುತ್ತದೆ.

ಎಲ್‌ಪಿಜಿ ಟ್ಯಾಂಕರ್ ಗ್ರೀನ್ ಆಶಾ ಭಾರತಕ್ಕೆ ಸುರಕ್ಷಿತ ಆಗಮನ



ದೇಶೀಯ ಪೂರೈಕೆ

ದೇಶೀಯ ಇಂಧನ ಪೂರೈಕೆಯು ಸ್ಥಿರವಾಗಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತಿಳಿಸಿದೆ. ಇಂಧನ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ವಲಸೆ ಕಾರ್ಮಿಕರಿಗಾಗಿ 5 ಕೆಜಿ ಸಿಲಿಂಡರ್‌ಗಳ ದೈನಂದಿನ ಪೂರೈಕೆಯನ್ನು ದ್ವಿಗುಣಗೊಳಿಸಲು ಅಧಿಕಾರಿಗಳು ಸೂಚಿಸಿದ್ದಾರೆ.

ಮುಂಬೈ: ಭಾರತದ ಧ್ವಜ ಹೊಂದಿರುವ ಗ್ರೀನ್ ಆಶಾ ನೌಕೆ, ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿದ್ದು, 15,000 ಟನ್‌ಗಳಿಗಿಂತ ಹೆಚ್ಚು ದ್ರವೀಕೃತಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹೊತ್ತು ಗುರುವಾರ ಜವಾಹರಲಾಲ್ ನೆಹರು ಬಂದರು ಪ್ರಾಧಿಕಾರ ತಲುಪಿದೆ.

ಭಾರತದ ಈ ನೌಕೆ, ಇರಾನ್, ಅಮೆರಿಕ, ಇಸ್ರೇಲ್ ನಡುವಿನ ಸಂಘರ್ಷ ಆರಂಭವಾದ ನಂತರ ಈ ಬಂದರಿಗೆ ಬಂದಿಳಿದ ಮೊದಲ ಟ್ಯಾಂಕರ್ ಆಗಿದೆ. ಸಂಚಾರದ ಒತ್ತಡದ ನಡುವೆಯೂ ನೌಕೆ, ಅದರ ಸರಕು ಮತ್ತು ಎಲ್ಲಾ ಸಿಬ್ಬಂದಿ ಸುರಕ್ಷಿತವಾಗಿ ದ್ದಾರೆ, ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ. ಗ್ರೀನ್ ಆಶಾ ನೌಕೆ, ಗ್ರೀನ್ ಸಾನ್ವಿ ನೌಕೆಯ ಬಳಿಕ ಈ ಮಾರ್ಗವನ್ನು ಯಶಸ್ವಿಯಾಗಿ ದಾಟಿದ ಭಾರತದ ಮತ್ತೊಂದು ನೌಕೆ ಎನಿಸಿದೆ. ಸಂಘರ್ಷದ ಆರಂಭದಲ್ಲಿ ಈ ಪ್ರದೇಶದಲ್ಲಿದ್ದ 28 ಭಾರತೀಯ ನೌಕೆಗಳ ಪೈಕಿ 10 ನೌಕೆಗಳು ಇದುವರೆಗೆ ಜಲಮಾರ್ಗವನ್ನು ಯಶಸ್ವಿಯಾಗಿ ದಾಟಿವೆ. ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯ ನಂತರ ಈ ಜಲಮಾರ್ಗ ಇರಾನ್ ನಿಯಂತ್ರಣದಲ್ಲಿದೆ.

ಒಪ್ಪಂದ ಜಾರಿವರೆಗೆ ಇರಾನ್ ಬಳಿ ಅಮೆರಿಕ ಸೇನೆ ನಿಯೋಜನೆ

ವಾಷಿಂಗ್ಟನ್: ಅಮೆರಿಕದ ಎಲ್ಲಾ ಹಡಗುಗಳು, ವಿಮಾನಗಳು ಮತ್ತು ಮಿಲಿಟರಿ ಸಿಬ್ಬಂದಿ, ಅಧಿಕೃತ ಒಪ್ಪಂದ ಪೂರ್ಣವಾಗಿ ಜಾರಿಯಾಗುವವರೆಗೆ ಇರಾನ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಯೋಜಿತರಾಗಿರುತ್ತಾರೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಘೋಷಿಸಿದ್ದಾರೆ.

ಅಮೆರಿಕ ಮಿಲಿಟರಿ ಸ್ಥಿತಿ: ಯುಎಸ್ ಮಿಲಿಟರಿ ಹೆಚ್ಚುವರಿ ಮದ್ದುಗುಂಡುಗಳು ಮತ್ತು ಶಸ್ತ್ರಾಸ್ತ್ರಗಳೊಂದಿಗೆ ತನ್ನ ಸ್ಥಾನಗಳಲ್ಲಿ ಮುಂದುವರಿದಿದೆ. ಒಪ್ಪಂದದ ಷರತ್ತುಗಳ ಅನುಸರಣೆಯನ್ನು ಖಚಿತ ಪಡಿಸಿಕೊಳ್ಳಲು ಪಡೆಗಳು ಅಲ್ಲಿಯೇ ಇರುತ್ತವೆ. ಸೈನ್ಯ ಪ್ರಸ್ತುತ ಸನ್ನದ್ಧತೆಯನ್ನು ಕಾಯ್ದುಕೊಳ್ಳುವ ಜತೆಗೆ ಮುಂದಿನ ಕಾರ್ಯಾಚರಣೆಗಳಿಗೆ ಸಿದ್ಧವಾಗುತ್ತಿದೆ ಎಂದು ಅಧ್ಯಕ್ಷ ಟ್ರಂಪ್ ತಿಳಿಸಿದ್ದಾರೆ.

ಒಪ್ಪಂದದ ನಿಯಮಗಳು: ಹಾರ್ಮುಜ್ ಜಲಸಂಧಿ ಸಂಚಾರಕ್ಕೆ ಮುಕ್ತವಾಗಿರಬೇಕು ಮತ್ತು ಸುರಕ್ಷಿತವಾಗಿರಬೇಕು, ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ. ವರದಿಯಾಗಿರುವ ನಿಯಮಗಳ ಪ್ರಕಾರ, ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ, ಒಂದು ವೇಳೆ ಒಪ್ಪಂದ ಪಾಲಿಸದಿದ್ದರೆ ಮಿಲಿಟರಿ ಕ್ರಮ ಒಂದು ಆಯ್ಕೆಯಾಗಿ ಉಳಿಯಲಿದೆ ಎಂದು ಟ್ರಂಪ್ ಸೂಚಿಸಿದ್ದಾರೆ.

ಹೆಜ್ಬೊಲ್ಲಾ ಮುಖ್ಯಸ್ಥನ ಸಲಹೆಗಾರ ಹತ

ಇರಾನ್‌ನೊಂದಿಗಿನ ಅಮೆರಿಕ-ಇಸ್ರೇಲಿ ಯುದ್ಧದಲ್ಲಿ ಕದನ ವಿರಾಮ ಘೋಷಣೆಯ ಹೊರತಾಗಿಯೂ ಲೆಬನಾನ್ ಮೇಲೆ ಇಸ್ರೇಲಿ ದಾಳಿಗಳು ಮುಂದುವರೆದಿದ್ದು, ಬೈರೂತ್ ಮೇಲೆ ದಾಳಿಯಲ್ಲಿ ಹೆಜ್ಬೊಲ್ಲಾ ನಾಯಕ ನೈಮ್ ಖಾಸಿಮ್‌ನ ಸೋದರಳಿಯನನ್ನು ಹತ್ಯೆಗೈದಿದ್ದೇವೆ ಎಂದು ಇಸ್ರೇಲ್ ಗುರುವಾರ ಹೇಳಿದೆ. ಐಡಿಎಫ್ ಬೈರೂತ್ ಪ್ರದೇಶದಲ್ಲಿ ದಾಳಿ ನಡೆಸಿ ಹೆಜ್ಬೊಲ್ಲಾ ಪ್ರಧಾನ ಕಾರ್ಯದರ್ಶಿ ನೈಮ್ ಖಾಸಿಮ್ ಸೋದರಳಿಯ ಮತ್ತು ವೈಯಕ್ತಿಕ ಕಾರ್ಯದರ್ಶಿ ಅಲಿ ಯೂಸುಫ್ ಹರ್ಷಿಯನ್ನು ನಿರ್ಮೂಲನೆ ಮಾಡಿದೆ ಎಂದು ಸೇನೆ ತಿಳಿಸಿದೆ.

ಇಸ್ರೇಲ್ ದಾಳಿಗೆ ಲೆಬನಾನ್‌ನ 203 ಸಾವು

ಬೈರೂತ್: ಮಧ್ಯ ಬೈರೂತ್ ಮತ್ತು ಲೆಬನಾನ್‌ನ ಇತರ ಪ್ರದೇಶಗಳಲ್ಲಿ ಇಸ್ರೇಲಿ ದಾಳಿಯಲ್ಲಿ ಕನಿಷ್ಠ 203 ಮಂದಿ ಮೃತಪಟ್ಟಿದ್ದು, 1,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ಗುರುವಾರ ತಿಳಿಸಿದೆ. ಇಸ್ರೇಲ್ ಮತ್ತು ಲೆಬನಾನಿನ ಉಗ್ರಗಾಮಿ ಗುಂಪು ಹೆಜ್ಬೊಲ್ಲಾಹ್ ನಡುವೆ ಐದು ವಾರಗಳಿಗೂ ಹೆಚ್ಚು ಕಾಲ ನಡೆದ ಯುದ್ಧದಲ್ಲಿ ಬುಧವಾರ ಲೆಬನಾನ್‌ನ ಒಂದೇ ದಿನದ ಗರಿಷ್ಠ ಸಾವಿನ ಸಂಖ್ಯೆಯಾಗಿದೆ. ಇಸ್ರೇಲಿ ಮಿಲಿಟರಿ ಹೆಜ್ಬೊಲ್ಲಾ ತಾಣಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಹೇಳಿದೆ. ಮಧ್ಯಾಹ್ನದ ಜನದಟ್ಟಣೆ ವೇಳೆ ಅಪ್ಪಳಿಸಿದ ಕ್ಷಿಪಣಿ ಕಟ್ಟಡಗಳು ದಟ್ಟವಾದ ವಾಣಿಜ್ಯ ಮತ್ತು ವಸತಿ ಮೇಲೆ ಬಿದ್ದಿದ್ದೆ. ಇದು ವ್ಯಾಪಕ ನಾಗರಿಕ ಸಾವುನೋವುಗಳಿಗೆ ಕಾರಣವಾಗಿದೆ.

ಕಿರುಸುದ್ದಿ

ರಾಜ್ಯಸಭೆ ಸದಸ್ಯರಾಗಿ ಇಂದು ನಿತೀಶ್ ಪ್ರಮಾಣ



ಹೊಸದಿಲ್ಲಿ: ಬಿಹಾರದ ದೀರ್ಘಕಾಲದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಶುಕ್ರವಾರ ರಾಜ್ಯಸಭೆಯ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ರಾಜ್ಯಸಭೆಯ ಸಭಾಪತಿ ಸಿ. ಪಿ. ರಾಧಾಕೃಷ್ಣನ್ ಅವರ ಕೊಠಡಿಯಲ್ಲಿ ಅವರಿಗೆ ಮೇಲ್ಮನೆಯ ಸದಸ್ಯರಾಗಿ ಪ್ರಮಾಣ ವಚನ ಬೋಧಿಸಲಾಗುವುದು. ನಿತೀಶ್ ಈಗಾಗಲೇ ರಾಜ್ಯ ವಿಧಾನ ಪರಿಷತ್ತಿನ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರು ರಾಜ್ಯಸಭೆಗೆ ಆಯ್ಕೆಯಾದ ನಂತರ ಮಾ. 30ರಂದು ಎಂಎಲ್‌ಸಿ ಹುದ್ದೆಗೆ ರಾಜೀನಾಮೆ ನೀಡಿದ್ದರು.

3 ಮಕ್ಕಳನ್ನು ಹೊಂದಬೇಕು: ಹಿಂದುಗಳಿಗೆ ಸೀಮಾ ಹೈದರ್

ಹೊಸದಿಲ್ಲಿ: ಭಾರತದಲ್ಲಿರುವ ಪ್ರತಿ ಹಿಂದು ಕುಟುಂಬವು ಕನಿಷ್ಠ 2 ರಿಂದ ಮೂರು ಮಕ್ಕಳನ್ನು ಹೊಂದಬೇಕು . ಸಣ್ಣ ಕುಟುಂಬಗಳಿಂದ ಜನಸಂಖ್ಯಾ ಸಮತೋಲನದ ಮೇಲೆ ದುಷ್ಪರಿಣಾಮ ಬೀರಬಹುದು ಎಂದು ಪಾಕಿಸ್ತಾನದಿಂದ ಭಾರತಕ್ಕೆ ಬಂದಿರುವ ಸೀಮಾ ಹೈದರ್ ಹೇಳಿದ್ದಾರೆ.ಸೀಮಾ ಅವರು ಪಾಕಿಸ್ತಾನದಿಂದ ನೇಪಾಳ ಮೂಲಕವಾಗಿ ಭಾರತಕ್ಕೆ ಬಂದು ಸಚಿನ್ ಮೀನಾ ಅವರನ್ನು ವಿವಾಹವಾಗಿದ್ದರು. ಸಂದರ್ಶನವೊಂದರಲ್ಲಿ ಮಾತನಾಡುತ್ತಾ ಮಕ್ಕಳ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡ ಸೀಮಾ ಹೈದರ್, ದೇಶದಲ್ಲಿ ಇಂದು ಅನೇಕರು ಜನರು ಒಂದು ಅಥವಾ ಎರಡು ಮಕ್ಕಳನ್ನು ಮಾತ್ರ ಹೊಂದುತ್ತಿದ್ದಾರೆ. ಇದರಿಂದ ಹಿಂದು ಜನಸಂಖ್ಯೆಯಲ್ಲಿ ಕುಸಿತಕ್ಕೆ ಕಾರಣವಾಗುತ್ತಿದೆ ಎಂದಿದ್ದಾರೆ.

ಕತಾರ್‌ಗೆ ಸಚಿವ ಪುರಿ ಭೇಟಿ

ಹೊಸದಿಲ್ಲಿ: ಎರಡು ದಿನಗಳ ಭೇಟಿಗಾಗಿ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಗುರುವಾರ ಕತಾರ್‌ಗೆ ಭೇಟಿ ನೀಡಿದ್ದಾರೆ.ಇರಾನ್ ಯುದ್ಧದಿಂದ ಉಂಟಾದ ಇಂಧನ ಪೂರೈಕೆಯ ಕಳವಳದ ನಡುವೆ ಈ ಭೇಟಿ ಪ್ರಾಮುಖ್ಯತೆ ಹೊಂದಿದೆ. ಭಾರತವು ತನ್ನ ಎಲ್‌ಎನ್‌ಜಿ ದಾಸ್ತಾನಿನ ಶೇ.50ರಷ್ಟನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯಿಂದ ಆಮದು ಮಾಡಿಕೊಳ್ಳುತ್ತದೆ ಎಂದು ತೈಲ ಅರ್ಥಶಾಸ್ತ್ರಜ್ಞ ಕಿರಿಟ್ ಪಾರಿಖ್ ಹೇಳಿದ್ದಾರೆ.

ಸಂಸ್ಕೃತಿಗೆ ವಿರುದ್ಧವಾದ ಸ್ಥಳದ ಹೆಸರು ಬದಲು

ಕೋಲ್ಕತ್ತಾ: ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚಿಸಿದರೆ ಪಶ್ಚಿಮ ಬಂಗಾಳದ ಸಂಸ್ಕೃತಿ ಮತ್ತು ನೀತಿಗೆ ವಿರುದ್ಧವಾದ ಸ್ಥಳಗಳ ಹೆಸರುಗಳನ್ನು ಬದಲಾಯಿಸುತ್ತದೆ ಎಂದು ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಗುರುವಾರ ಹೇಳಿದ್ದಾರೆ.

ಬಾಂಗ್ಲಾದೇಶದಒಳನುಸುಳುಕೋರರುರಾಜ್ಯದಲ್ಲಿಮಹಿಳೆಯರ ಭದ್ರತೆಗೆ ಅಪಾಯವನ್ನುಂಟುಮಾಡುತ್ತಿದೆ ಎಂದು ಪ್ರತಿಪಾದಿಸಿದ ಅವರು, ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವುದರಿಂದ ಒಳನುಸುಳುಕೋರರು ಕಾನೂನುಕ ಕ್ರಮ ಎದುರಿಸುತ್ತಾರೆ. ಅವರನ್ನು ಮರಳಿ ಕಳುಹಿಸಲಾಗುತ್ತದೆ ಹೇಳಿದರು. ಉತ್ತರ ದಿನಾಜ್ಪುರ ಜಿಲ್ಲೆಯ ಚಾಕುಲಿಯಾದಲ್ಲಿ ಚುನಾವಣಾ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ನವೀನ್, ಅಲಿಪುರ್ದುವಾರ್‌ನಿಂದ ಇಸ್ಲಾಂಪುರದವರೆಗಿನ ಪಶ್ಚಿಮ ಬಂಗಾಳದ ಸಂಸ್ಕೃತಿಗೆ ವಿರುದ್ಧವಾದ ಸ್ಥಳಗಳ ಹೆಸರುಗಳನ್ನು ಬಿಜೆಪಿ ಸರ್ಕಾರದ ಅಡಿಯಲ್ಲಿ ಉಳಿಯಲು ಬಿಡುವುದಿಲ್ಲ ಎಂದು ಹೇಳಿದರು. ಮೇ 4ರ ನಂತರ, ಈ ಸ್ಥಳಗಳ ಹೆಸರುಗಳಲ್ಲಿನ ಬದಲಾವಣೆಗಳ ಜತೆಗೆ ನಿಮ್ಮ ಜೀವನದಲ್ಲಿ ಬದಲಾವಣೆಗಳು ಉಂಟಾಗುತ್ತವೆ ಎಂದು ಅವರು ಹೇಳಿದರು. ಈ ಚುನಾವಣೆಯು ರಾಜ್ಯದ ಭ್ರಷ್ಟಾಚಾರ, ದಬ್ಬಾಳಿಕೆ, ಕಾನೂನುಬಾಹಿರತೆ ಮತ್ತು 'ಮಹಾಜನ್ ಲಾಲ್ ರಾಜ್' ಅನ್ನು ಸೂಚಿಸುವ ದಬ್ಬಾಳಿಕೆಯ ಸರ್ಕಾರ ಮತ್ತು ದೇಶದ ಜನರಿಗೆ ನಂಬಿಕೆಯಿರುವ ಬಿಜೆಪಿ ನಡುವಿನ ಹೋರಾಟವಾಗಿದೆ ಎಂದು ನವೀನ್ ಹೇಳಿದರು. ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಡಬಲ್ ಎಂಜಿನ್ ಸರ್ಕಾರವನ್ನು ನೀಡಬೇಕೆಂದು ಅವರು ರಾಜ್ಯದ ಜನರನ್ನು ಒತ್ತಾಯಿಸಿದರು.

ಮಿಸ್ರಿ ಅಮೆರಿಕ ಭೇಟಿ: ಒಪ್ಪಂದಗಳ ಬಗ್ಗೆ ಚರ್ಚೆ



ವಾಷಿಂಗ್ಟನ್: ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಅಮೆರಿಕದ ಹಿರಿಯ ಅಧಿಕಾರಿಗಳನ್ನು ಭೇಟಿಯಾಗಿ ರಕ್ಷಣಾ ಮತ್ತು ವ್ಯಾಪಾರ ಸಂಬಂಧಗಳನ್ನು ಮತ್ತಷ್ಟು ಗಾಢವಾಗಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದರು.

ಇಂಡೋ-ಪೆಸಿಫಿಕ್ ಮತ್ತು ಪಶ್ಚಿಮ ಏಷ್ಯಾದ ಬೆಳವಣಿಗೆಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಇಲ್ಲಿ ಮೂರು ದಿನಗಳ ಭೇಟಿಯಲ್ಲಿ, ಮಿಸ್ರಿ ಅವರು ರಕ್ಷಣಾ ಇಲಾಖೆಯ ಕಾರ್ಯದರ್ಶಿಗಳಾದ ಮೈಕೆಲ್ ಡಫ್ಫಿ ಮತ್ತು ಎಲ್ಬ್ರಿಡ್ಜ್ ಕಾಲ್ಬಿ ಮತ್ತು ವಾಣಿಜ್ಯ ಇಲಾಖೆಯ ಅಧೀನ ಕಾರ್ಯದರ್ಶಿಗಳಾದ ಜೆಫ್ರಿ ಕೆಸ್ಲರ್ ಮತ್ತು ವಿಲಿಯಂ ಕಿಮ್ಮಿಟ್ ಅವರನ್ನು ಭೇಟಿಯಾದರು.

ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಪೆಂಟಗನ್‌ನಲ್ಲಿ ಅಂಡರ್ ಸೆಕ್ರೆಟರಿ ಆಫ್ ವಾರ್ ಫಾರ್ ಪಾಲಿಸಿ ಎಲ್ಬ್ರಿಡ್ಜ್ ಕೋಲ್ಬಿ ಅವರೊಂದಿಗೆ ಇಂಡೋ-ಪೆಸಿಫಿಕ್ ಪ್ರದೇಶ ಮತ್ತು ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಒಳಗೊಂಡ ಮತ್ತೊಂದು ವ್ಯಾಪಕವಾದ ಸಂಭಾಷಣೆಯನ್ನು ನಡೆಸಿದರು.

ಕರಾವಳಿ ರಾಜ್ಯಗಳ ಸವಾಲು ಅವಕಾಶಗಳಾಗಿ ಪರಿವರ್ತನೆ

ಪಣಜಿ: ಕರಾವಳಿ ರಾಜ್ಯಗಳು ತಮಗೆದುರಾದ ಸವಾಲುಗಳನ್ನೇ ಅವಕಾಶಗಳಾಗಿ ಪರಿವರ್ತಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಈ ಸಾಧನೆ ಮೆರೆದಿದ್ದಾರೆ ಎಂದು ಲೋಕಸಭಾ ಸಭಾಪತಿ ಓಂ ಬಿರ್ಲಾ ಗುರುವಾರ ಪ್ರಶಂಸೆಯ ನುಡಿಯಾಡಿದ್ದಾರೆ.

ಸಂಪನ್ನ ಭಾರತ ನಿರ್ಮಾಣದಲ್ಲಿ ಶಾಸಕಾಂಗ ಸಂಸ್ಥೆಗಳ ಪಾತ್ರ ಅತಿ ನಿರ್ಣಾಯಕ. ಸಂಪನ್ನ ಭಾರತದ ಗುರಿ ಸಾಕಾರದಲ್ಲಿ ಯುವ ಶಾಸಕರಿಗೆ ಮಹಾನ್ ಜವಾಬ್ದಾರಿಯಿದೆ. ಗುಜರಾತ್, ಮಹಾರಾಷ್ಟ್ರ, ಗೋವಾದಂತಹ ಕರಾವಳಿ ರಾಜ್ಯಗಳು ಹಲವು ಸವಾಲುಗಳನ್ನು ಎದುರಿಸುತ್ತಿರುವ ರಾಜ್ಯಗಳು. ಆದರೂ ಈ ರಾಜ್ಯಗಳ ನಾಯಕತ್ವ ಸವಾಲುಗಳನ್ನು ಅವಕಾಶವಾಗಿ ಪರಿವರ್ತಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಬರಗಾಲ, ಸುದೀರ್ಘ ಕರಾವಳಿ ವ್ಯಾಪ್ತಿ, ಬುಡಕಟ್ಟು ವಲಯಗಳು ಹೀಗೆ ಸಾಕಷ್ಟು ಸವಾಲುಗಳ ಸರಮಾಲೆ ಅವರೆದುರಿಗಿತ್ತು. ಆದರೆ ಮೋದಿ ಕೈಗಾರಿಕೀಕರಣವನ್ನು ಉತ್ತೇಜಿಸಿದರು. ವ್ಯಾಪಾರ, ಪ್ರವಾಸೋದ್ಯಮಕ್ಕೆ ಉತ್ತೇಜನವಿತ್ತರು. ಸಂಕಷ್ಟಗಳನ್ನು ಅಭಿವೃದ್ಧಿಯಾಗಿ ಪರಿವರ್ತಿಸಿಬಿಟ್ಟರು. ಜಲಕ್ಷಾಮವಿದ್ದ ಪ್ರದೇಶಗಳಿಗೆ ನರ್ಮದೆಯ ನೀರು ಹರಿಸಿದರು. ಜಾಗತಿಕ ಬದಲಾವಣೆಗಳಿಗೆ ಪೂರಕವಾಗಿ ಹೊಸ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸಿದರು ಎಂದು ಬಿರ್ಲಾ ಕೊಂಡಾಡಿದರು. ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಶನ್ (ಸಿಪಿಎ) ಇಂಡಿಯಾ ರೀಜನ್ ಝೋನ್ ೨ ಐಐ ಸಮಾವೇಶ ಉದ್ಘಾಟಿಸಿ ಬಿರ್ಲಾ ಮಾತನಾಡಿದರು.

ಇದೇ ತೆರ ಇತರ ಕೆಲವು ರಾಜ್ಯಗಳೂ ನೈಸರ್ಗಿಕ ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಿವೆ.

ಸುನೇತ್ರಾ ಪವಾರ್ ಅವಿರೋಧ ಆಯ್ಕೆ ಖಚಿತ

ಬಾರಾಮತಿ: ಏ.23ರಂದು ನಡೆಯಲಿರುವ ಬಾರಾಮತಿ ವಿಧಾನಸಭಾ ಉಪ ಚುನಾವಣೆಯಲ್ಲಿ ಸುನೇತ್ರಾ ಪವಾರ್ ಅವರ ಅವಿರೋಧ ಆಯ್ಕೆಗಾಗಿ ಪಕ್ಷದ ಅಭ್ಯರ್ಥಿ ಆಕಾಶ್ ಮೋರ್ ಅವರ ನಾಮಪತ್ರವನ್ನು ಹಿಂಪಡೆಯಲಾಗುವುದು ಎಂದು ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ಹರ್ಷವರ್ಧನ್ ಸಪ್ಕಲ್ ಘೋಷಿಸಿದ್ದಾರೆ.

ಜ.28ರಂದು ವಿಮಾನ ಅಪಘಾತದಲ್ಲಿ ಮೃತರಾದ ನ್ಯಾಶನಲಿಸ್ಟ್ ಕಾಂಗ್ರೆಸ್ ಪಕ್ಷದ ನಾಯಕ ಅಜಿತ್ ಪವಾರ್ ಅವರ ಗೌರವಾರ್ಥವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕಾಂಗ್ರೆಸ್ ಆರಂಭದಲ್ಲಿ ಸುನೇತ್ರಾ ಪವಾರ್ ವಿರುದ್ಧ ಮೋರ್ ಅವರನ್ನು ಕಣಕ್ಕಿಳಿಸಿತ್ತು. ಆದರೆ, ಹಿರಿಯ ರಾಜಕಾರಣಿಗೆ ಗೌರವ ಸಲ್ಲಿಸಲು ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್, ಎನ್‌ಸಿಪಿ-ಎಸ್‌ಪಿ ನಾಯಕಿ ಸುಪ್ರಿಯಾ ಸುಳೆ ಮಾಡಿದ ಮನವಿಯ ಮೇರೆಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಹಿಂಪಡೆದಿದೆ.ತಮ್ಮ ವೃತ್ತಿಜೀವನವನ್ನು ಕಾಂಗ್ರೆಸ್‌ನಿಂದ ಪ್ರಾರಂಭಿಸಿದ್ದ ಅಜಿತ್ ಪವಾರ್ ಪಕ್ಷದೊಂದಿಗೆ ಸುದೀರ್ಘ ಸಂಬಂಧ ಹೊಂದಿದ್ದರು.

ಕೇಂದ್ರ ಸರ್ಕಾರದಿಂದ ಬಲವಾದ ವಾದ ಮಂಡನೆ | ಶಬರಿಮಲೆ ವಿಚಾರಣೆ ವೇಳೆ ನಾನಾ ಸಂಗತಿ ಚರ್ಚೆ

ಅರ್ಚಕರ ನೇಮಕ ಧಾರ್ಮಿಕ ವಿಷಯ

ಹೊಸದಿಲ್ಲಿ: ದೇವಾಲಯಗಳಲ್ಲಿ ಅರ್ಚಕರನೇಮಕಾತಿ ಸರ್ಕಾರದ ಮಂಡಳಿಗಳ ನಿಯಂತ್ರಣಕ್ಕೆ ಒಳಪಡುವ ಲೌಕಿಕ ಕ್ರಮವಲ್ಲ, ಅದು ಧಾರ್ಮಿಕ ಪರಂಪರೆ ಮತ್ತು ಆಚರಣೆಗಳಿಗೆ ಸಂಬಂಧಿಸಿದ ವಿಷಯವಾಗಿದೆ ಎಂದು ಸುಪ್ರೀಂಕೋರ್ಟ್ ಮುಂದೆ ಕೇಂದ್ರ ಸರ್ಕಾರ ವಾದ ಮಂಡಿಸಿದೆ. ಹಾಗೆಯೇ, ಪಂಥಾಧಾರಿತವಾಗಿ ದೇವಾಲಯ ಪ್ರವೇಶ ನಿರ್ಬಂಧಿಸಿದರೆ ಹಿಂದೂ ಧರ್ಮವೇ ಹಾನಿಗೊಳಗಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿದ ಪ್ರಸಂಗವೂ ನಡೆಯಿತು.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಮಹಿಳೆಯರ ಧಾರ್ಮಿಕ ಸ್ಥಳ ಪ್ರವೇಶ, ಧಾರ್ಮಿಕ ಸ್ವಾತಂತ್ರ್ಯ, ಪಂಥಾಧಾರಿತ ಹಕ್ಕುಗಳು ಮತ್ತು ದೇವಾಲಯ ನಿರ್ವಹಣೆಯ ವ್ಯಾಪ್ತಿಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸುತ್ತಿದೆ.

ಅರ್ಚಕರ ನೇಮಕ ಧಾರ್ಮಿಕ ವಿಷಯ: ಕೇಂದ್ರ ಸರ್ಕಾರದ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದಿಸಿ, ಅರ್ಚಕರ ನೇಮಕಾತಿಯನ್ನು 'ಸೆಕ್ಯುಲರ್ ಆಕ್ಟ್' ಎಂದು ಹಿಂದಿನ ತೀರ್ಪುಗಳಲ್ಲಿ ಪರಿಗಣಿಸಿರುವುದು ತಪ್ಪು ಎಂದರು. ದೇವಸ್ಥಾನಗಳ ಆಗಮ, ಸಂಪ್ರದಾಯ, ಆಚರಣೆಗಳ ಪ್ರಕಾರ ಅರ್ಹತೆಯುಳ್ಳವರನ್ನು ಆಯ್ಕೆ ಮಾಡುವ ಹಕ್ಕು ಸಂಬಂಧಿತ ಧಾರ್ಮಿಕ ಸಮುದಾಯಕ್ಕೇ ಸೇರಬೇಕು; ಸರ್ಕಾರದ ಮಂಡಳಿಗಳಿಗೆ ಅಲ್ಲ ಎಂದು ಹೇಳಿದರು.



ತಮಿಳುನಾಡಿನಲ್ಲಿ ಅರ್ಚಕರ ನೇಮಕಾತಿ ಅಧಿಕಾರವನ್ನು ಸರ್ಕಾರದ ಮಂಡಳಿಗಳಿಗೆ ನೀಡಿದ ಕಾನೂನಿಗೆ ಸುಪ್ರೀಂ ಕೋರ್ಟ್ ಮಾನ್ಯತೆ ನೀಡಿರುವುದನ್ನು ಉಲ್ಲೇಖಿಸಿ, 'ಇದರಿಂದ ಧಾರ್ಮಿಕ ಪಂಥಗಳ ಸಂಪ್ರದಾಯಗಳಲ್ಲಿ ರಾಜ್ಯ ಹಸ್ತಕ್ಷೇಪಕ್ಕೆ ದಾರಿ ತೆರೆದಂತಾಗಿದೆ. ಇದೇ ತರ್ಕ ಮುಂದುವರಿದರೆ ನಾಳೆ ಶಂಕರಾಚಾರ್ಯರನ್ನೂ ತೆಗೆದುಹಾಕುವ ಪರಿಸ್ಥಿತಿ ಬರಬಹುದು' ಎಂದು ಮೆಹ್ತಾ ಎಚ್ಚರಿಸಿದರು.

ಸುಧಾರಣೆ ಹೆಸರಿನಲ್ಲಿ ಧರ್ಮಕ್ಕೆ ಧಕ್ಕೆ ಬೇಡ

ಧರ್ಮ ಮತ್ತು ನಂಬಿಕೆಗಳ ವಿಚಾರದಲ್ಲಿ ನ್ಯಾಯಾಲಯಗಳು 'ಸೆಕ್ಯುಲರಿಸಂ' ಮತ್ತು 'ಸಂವಿಧಾನಾತ್ಮಕ ನೈತಿಕತೆ' ಹೆಸರಿನಲ್ಲಿ ಹಸ್ತಕ್ಷೇಪ ಮಾಡಬಾರದು. ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗಳನ್ನು ವಿಧಾನಮಂಡಲವೇ ನಿರ್ಧರಿಸಬೇಕು ಎಂದು ತುಷಾರ್ ಮೆಹ್ತಾ ವಾದಿಸಿದರು. ಇದಕ್ಕೆ ಪೀಠ ಪ್ರಾಥಮಿಕವಾಗಿ ಒಪ್ಪಿಗೆ ಸೂಚಿಸಿ, 'ಸುಧಾರಣೆಯ ಹೆಸರಿನಲ್ಲಿ ಮೂಲ ನಂಬಿಕೆ ಮತ್ತು ಭಕ್ತಿಗೆ ಧಕ್ಕೆಯಾಗುವಂತಿಲ್ಲ; ಧರ್ಮಕ್ಕೇ ಹಾನಿಯಾಗಬಾರದು' ಎಂದು ಅಭಿಪ್ರಾಯಪಟ್ಟಿತು.

ರಾಜ್ಯ ಮಧ್ಯಪ್ರವೇಶಕ್ಕೆ ಸಂವಿಧಾನ ಅವಕಾಶ

ಪೀಠವು ಸಂವಿಧಾನದ ವಿಧಿ 25(2)(ಬಿ) ಅಡಿಯಲ್ಲಿ ಎಲ್ಲ ವರ್ಗಗಳಿಗೂ ದೇವಾಲಯ ಪ್ರವೇಶ ಕಲ್ಪಿಸಲು ರಾಜ್ಯ ಮಧ್ಯಪ್ರವೇಶಿಸಬಹುದು ಎಂದು ಸ್ಪಷ್ಟಪಡಿಸಿತು. ವಿಧಿ 26(ಬಿ)ಯ ಧಾರ್ಮಿಕ ಪಂಥ ಹಕ್ಕುಗಳನ್ನು ಪ್ರತ್ಯೇಕವಾಗಿ ಓದಲು ಸಾಧ್ಯವಿಲ್ಲ, ಅವು ವಿಧಿ 25ರೊಂದಿಗೆ ಹೊಂದಾಣಿಕೆಯಲ್ಲಿ ಪರಿಗಣಿಸಬೇಕೆಂದು ಸೂಚಿಸಿತು.

ಪಂಥಾಧಾರಿತ ಪ್ರವೇಶ ನಿರ್ಬಂಧಕ್ಕೆ ಪೀಠದ ಆಕ್ಷೇಪ

ಅಯ್ಯಪ್ಪ ಭಕ್ತರ ಪರ ಹಿರಿಯ ವಕೀಲ ಸಿ.ಎಸ್. ವೈದ್ಯನಾಥನ್, ಶಬರಿಮಲೆ ಶಬರಿಮಲೆ ಅಯ್ಯಪ್ಪ ದೇವಸ್ಥಾನ ಭಕ್ತರು ಪ್ರತ್ಯೇಕ ಧಾರ್ಮಿಕ ಪಂಥವಾಗಿದ್ದು, ಪಂಥಾಧಾರಿತ ದೇವಸ್ಥಾನಗಳು ತಮ್ಮ ಪಂಥದವರಿಗಷ್ಟೇ ಪ್ರವೇಶ ನೀಡುವ ಹಕ್ಕು ಹೊಂದಿವೆ ಎಂದು ವಾದಿಸಿದರು. ಆದರೆ ನ್ಯಾ. ಬಿ.ವಿ. ನಾಗರತ್ನಾ ತೀವ್ರ ಆಕ್ಷೇಪ ವ್ಯಕ್ತಪಡಿಸಿ, 'ಪ್ರತಿ ಪಂಥವೂ ತಮ್ಮದೇ ದೇವಸ್ಥಾನಕ್ಕೆ ಮಾತ್ರ ಪ್ರವೇಶ ಎಂದು ಹೇಳಲಾರಂಭಿಸಿದರೆ ಅದು ಹಿಂದೂಧರ್ಮಕ್ಕೆ ಹಾನಿಕಾರಕ. ದೇವಾಲಯಗಳು ಮತ್ತು ಮಠಗಳು ಎಲ್ಲರಿಗೂ ಮುಕ್ತವಾಗಿರಬೇಕು' ಎಂದು ಹೇಳಿದರು. ನ್ಯಾ. ಅರವಿಂದ ಕುಮಾರ್ ಸಹ, ಇಂತಹ ನಿರ್ಬಂಧಗಳು ಸಮಾಜವನ್ನು ವಿಭಜಿಸುವ ಅಪಾಯವಿದೆ ಎಂದು ಅಭಿಪ್ರಾಯಪಟ್ಟರು.



ಶಬರಿಮಲೆ ಕುರಿತು ಭಕ್ತರ ವಾದ

ವೈದ್ಯನಾಥನ್, 'ಶಬರಿಮಲೆಯಲ್ಲಿ ಯಾರಿಗೂ ಧರ್ಮದ ಆಧಾರದ ಪ್ರವೇಶ ನಿಷೇಧ ಇಲ್ಲ. ಕ್ರೈಸ್ತರು, ಮುಸ್ಲಿಮರೂ ಅಯ್ಯಪ್ಪನಲ್ಲಿ ನಂಬಿಕೆ ಇಟ್ಟು 40 ದಿನಗಳ ವ್ರತ ಪಾಲಿಸಿದರೆ ಬರಬಹುದು' ಎಂದು ವಾದಿಸಿದರು. 2018ರ ಶಬರಿಮಲೆ ತೀರ್ಪಿನಲ್ಲಿ ವೈಯಕ್ತಿಕ ಹಕ್ಕುಗಳಿಗೆ ಸಮೂಹ ಧಾರ್ಮಿಕ ಹಕ್ಕುಗಳಿಗಿಂತ ಮೇಲುಗೈ ನೀಡಿದ್ದು ತಪ್ಪು ಎಂದೂ ಅಭಿಪ್ರಾಯಪಟ್ಟರು. ವಿಚಾರಣೆ ಮುಂದಿನ ವಾರವೂ ಮುಂದುವರಿಯಲಿದೆ.

ಖರ್ಗೆ ವಿರುದ್ಧ ದೂರು: ಖಂಡನೆ



ಕಲಬುರಗಿ: ಎಐಸಿಸಿ ಅಧ್ಯಕ್ಷ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಬಿಜೆಪಿ ನಾಯಕರು ನಡೆಸುತ್ತಿರುವ ವೈಯಕ್ತಿಕ ಟೀಕೆಗಳು, ದೂರು ದಾಖಲಿಸಿರುವುದು ಅತ್ಯಂತ ಖಂಡನೀಯ ಹಾಗೂ ಹಾಸ್ಯಾಸ್ಪದ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ನಗರದ ತಮ್ಮ ನಿವಾಸದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಬಿಜೆಪಿಯ ದ್ವೇಷದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ಕಳೆದ 50 ವರ್ಷಗಳಿಂದ ಮೌಲ್ಯಾಧಾರಿತ ಮತ್ತು ಸಿದ್ಧಾಂತದ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಅವರು ಸಮಾಜ ಒಡೆಯುವ ಕೆಲಸ ಮಾಡಿಲ್ಲ, ಚುನಾವಣಾ ಸಂದರ್ಭದಲ್ಲಿ ಬಿಜೆಪಿಯನ್ನು ಸೈದ್ಧಾಂತಿಕವಾಗಿ ಎದುರಿಸುವ ಮಾತನ್ನೇ ಬಿಜೆಪಿ ನಾಯಕರು ಬೇರೆ ಅರ್ಥದಲ್ಲಿ ಬಿಂಬಿಸುತ್ತಿದ್ದಾರೆ. ಖರ್ಗೆ ಅವರ ಹೇಳಿಕೆಗೆ ಬಿಜೆಪಿ ಬಣ್ಣ ಹಚ್ಚುವುದು ಸರಿಯಲ್ಲ ಎಂದು ಕಿಡಿಕಾರಿದರು.

ಈ ಹಿಂದೆ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ನೆಹರು ಅವರ ಬಗ್ಗೆ ಬಿಜೆಪಿ ಏನೆಲ್ಲಾ ಮಾತನಾಡಿದೆ ಎಂಬುದು ದೇಶಕ್ಕೆ ತಿಳಿದಿದೆ. ಮೊದಲು ಬಿಜೆಪಿ ತನ್ನ ಸಂಸ್ಕೃತಿಯನ್ನು ನೋಡಿಕೊಳ್ಳಲಿ ಎಂದು ಆಕ್ರೋಶ ಹೊರಹಾಕಿದರು.

ವಿದೇಶಾಂಗ ನೀತಿ ವೈಫಲ್ಯದಿಂದ ಆರ್ಥಿಕ ಸಂಕಷ್ಟ

ಇರಾನ್ ಮತ್ತು ಇಸ್ರೇಲ್ ಯುದ್ಧದ ಪ್ರಸ್ತಾಪ ಮಾಡಿದ ಸಚಿವ ಶರಣಪ್ರಕಾಶ್ ಪಾಟೀಲ್, ಯುದ್ಧದ ಪರಿಣಾಮವಾಗಿ ದೇಶದಲ್ಲಿ ತೈಲ ಮತ್ತು ಅನಿಲ ದರ ಏರಿಕೆಯಾಗುತ್ತಿದೆ. ವೈದ್ಯಕೀಯ ಉಪಕರಣಗಳ ಆಮದು-ರಫ್ತಿನ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಭಾರತ ಯಾರ ಮೇಲೆಯೂ ಯುದ್ಧ ಮಾಡುವುದಿಲ್ಲ ನಿಜ. ಆದರೆ, ಮೋದಿಯವರು ಇರಾನ್ ಮೇಲೆ ದಾಳಿ ನಡೆಯುವ ಮುನ್ನ ಇಸ್ರೇಲ್ ಜೊತೆ ಅಷ್ಟೊಂದು ಆತ್ಮೀಯತೆ ಪ್ರದರ್ಶಿಸುವ ಅಗತ್ಯವೇನಿತ್ತು? ಎಂದು ಪ್ರಶ್ನಿಸಿದರು.

ಪರಿಶೀಲನೆ



ಗುರುವಾರ ಬೆಂಗಳೂರು-ಮೈಸೂರು ರೈಲು ಮಾರ್ಗದ ಕಾಮಗಾರಿಯನ್ನು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಪರಿಶೀಲನೆ ನಡೆಸಿದರು.

ಪೊಲೀಸ್ ಹುದ್ದೆಗಳ ನೇಮಕ ಶೀಘ್ರ



ದೇವನಹಳ್ಳಿ: ಪೊಲೀಸ್ ಇಲಾಖೆಯಲ್ಲಿ 1000 ಸಬ್ ಇನ್ಸ್‌ಪೆಕ್ಟರ್ , 8000 ಕಾನ್ಸ್‌ಟೇಬಲ್‌ಗಳನ್ನು ಆದಷ್ಟು ಶೀಘ್ರ ನೇಮಕ ಮಾಡಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ಪಟ್ಟಣದ ಪ್ರೆಸ್ಟೀಜ್ ಗ್ರೂಪ್ ಸಂಸ್ಥೆಯಿಂದ ಸಿಎಸ್ ಆರ್ ಅನುದಾನದಡಿ ನಿರ್ಮಿಸಲಾಗಿರುವ ದೇವನಹಳ್ಳಿ ಸಹಾಯಕ ಪೊಲೀಸ್ ಆಯುಕ್ತರ ಕಚೇರಿ ಹಾಗೂ ದೇವನಹಳ್ಳಿ ಪೊಲೀಸ್ ಠಾಣೆಯ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿ, ಪೊಲೀಸ್ ಇಲಾಖೆಯಲ್ಲಿ ದೊಡ್ಡ ಬದಲಾವಣೆಗಳನ್ನು ಮಾಡಲಾಗುತ್ತಿದೆಂದರು. ಪಿಎಸ್ಐ ಹಗರಣವನ್ನು ಬಗೆಹರಿಸಿ ಈಗ 545 ಜನ ತರಬೇತಿ ಪಡೆದು ಕೆಲಸಕ್ಕೆ ಸೇರಿದ್ದಾರೆ. ಇನ್ನು ಸಬ್ ಇನ್ಸ್‌ಪೆಕ್ಟರ್ ಗಳ ನೇಮಕ ಹಾಗೂ ಕಾನ್ಸ್‌ಟೇಬಲ್‌ಗಳನ್ನು ನೇಮಕಕ್ಕೆ ಮುಖ್ಯಮಂತ್ರಿಗಳು ಅನುಮತಿ ನೀಡಲಾಗಿದೆ. ಹಣಕಾಸು ಇಲಾಖೆಯು ಅನುಮೋದಿಸಿದ್ದು ಮುಂದಿನ ದಿನಗಳಲ್ಲಿ ನೇಮಕ ಮಾಡಲಾಗುವುದು ಎಂದರು.

ಎರಡು ವರ್ಷಕ್ಕೊಮ್ಮೆ ಇನ್ಸ್‌ಪೆಕ್ಟರ್ ವರ್ಗಾವಣೆ

ಕಳೆದ ಮೂರು ವರ್ಷದಲ್ಲಿ ರಾಜ್ಯದಲ್ಲಿ ಯಾವುದೇ ಕೋಮುಗಲಭೆಗಳಾಗಿಲ್ಲ ಕರಾವಳಿ ಭಾಗದಲ್ಲಿಯೂ ಕೂಡ ಗಲಾಟೆ ಆಗಿಲ್ಲ. ಸಬ್ ಇನ್ಸ್‌ಪೆಕ್ಟರ್ ವರ್ಗಾವಣೆಯನ್ನು ಒಂದು ವರ್ಷದಿಂದ ಎರಡು ವರ್ಷಕ್ಕೆ ಹೆಚ್ಚಿಸಲಾಗಿದೆ. ಕಡ್ಡಾಯವಾಗಿ ಎರಡು ವರ್ಷ ಪೂರೈಸಲೇಬೇಕು. ಪೊಲೀಸ್ ಇಲಾಖೆಗೆ ಎಲ್ಲಾ ರೀತಿಯ ಸೌಲಭ್ಯವನ್ನು ನೀಡುತ್ತಿದ್ದೇವೆ. ಪೊಲೀಸ್ ಗೃಹ ಎಂಬ ಯೋಜನೆ ಯಿಂದ ಸುಮಾರು 40% ಸಿಬ್ಬಂದಿ, ಪೊಲೀಸರಿಗೆ ಮನೆ ಕಟ್ಟಿಕೊಟ್ಟಿದ್ದೇವೆ. ಒಂದು ಅಪಾರ್ಟ್‌ಮೆಂಟಿಗೆ 38 ಲಕ್ಷ ರೂ. ಖರ್ಚು ಮಾಡಿ ಮನೆ ನಿರ್ಮಿಸಲಾಗಿದೆ. ಇನ್ನಷ್ಟು ಮನೆಗಳನ್ನು ಕಟ್ಟಲಿದ್ದೇವೆ ಎಂದು ಹೇಳಿದರು. ಪೊಲೀಸ್ ಇಲಾಖೆ ಬಹಳ ಶಿಸ್ತು ಬದ್ಧ ಇಲಾಖೆ, ಕರ್ನಾಟಕ ಪೊಲೀಸ್ ಇಲಾಖೆಗೆ ಒಂದು ಇತಿಹಾಸ ಇದೆ. ಇಲಾಖೆಯಲ್ಲಿ ಅನೇಕ ಬದಲಾವಣೆಯನ್ನು ತರಲಾಗಿದೆ . ಇಡೀ ದೇಶದಲ್ಲಿ ನ್ಯಾಯವನ್ನು ಜರೂರಾಗಿ ಒದಗಿಸುವುದರಲ್ಲಿ ಕರ್ನಾಟಕ ನಂಬರ್ ಒನ್ ಸ್ಥಾನದಲ್ಲಿದೆ ಎಂದರು.

ಕಿರುಸುದ್ದಿ

ಇಂದು ಸಿಎಂ ದೆಹಲಿಗೆ: ಸಂಪುಟ ವಿಸ್ತರಣೆ ಚರ್ಚೆ

ಬೆಂಗಳೂರು: ಸುಮಾರು ದಿನಗಳ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಿಲ್ಲಿಗೆ ತೆರಳುತ್ತಿದ್ದು, ನಾಯಕತ್ವ ಬದಲಾವಣೆ ಮತ್ತು ಸಂಪುಟ ವಿಸ್ತರಣೆ ಬಗ್ಗೆ ಪಕ್ಷದ ವರಿಷ್ಠರ ಚರ್ಚಿಸಲಿದ್ದಾರೆ ಎಂಬುವುದರ ಬಗ್ಗೆ ಕುತೂಹಲ ಮೂಡಿಸಿದೆ. ಶುಕ್ರವಾರ ಬೆಳಗ್ಗೆ ಎಚ್ಎಎಲ್ ವಿಮಾನ ನಿಲ್ದಾಣದಿಂದ ತೆರಳಿರುವ ಅವರು, ಮಧ್ಯಾಹ್ನ 12.30ಕ್ಕೆ ದಿಲ್ಲಿಯ ಇಂದಿರಾ ಗಾಂಧಿ ವಿಮಾನ ನಿಲ್ದಾಣಕ್ಕೆ ತೆರಳಲಿದೆ. ರಾಜ್ಯದ ಅಭಿವೃದ್ಧಿ ಯೋಜನೆಗಳ ಕುರಿತು



ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚಿಸಲಿದ್ದಾರೆ. ಮಧ್ಯಾಹ್ನ 3ಕ್ಕೆ ಕಾಂಗ್ರೆಸ್ ಕಚೇರಿಯಲ್ಲಿ ನಡೆಯಲಿರುವ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಭಾಗವಹಿಸಲಿದ್ದು ಈ ವೇಳೆ ರಾಜ್ಯ ರಾಜಕಾರಣದ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ.

ಚಾರಣಿಗರ ಸುರಕ್ಷತೆಗೆ ಎಸ್‌ಒಪಿ: ಖಂಡ್ರೆ

ಬೆಂಗಳೂರು: ರಾಜ್ಯದ ಗಿರಿಶ್ರೇಣಿಗಳಿಗೆ ಬರುವ ಚಾರಣಿಗರ ಸುರಕ್ಷತೆಯ ದೃಷ್ಟಿಯಿಂದ ದೇಶಕ್ಕೆ ಮಾದರಿಯಾಗುವಂತಹ ಪ್ರಮಾಣಿತ ಮಾನದಂಡ (ಎಸ್.ಒ.ಪಿ.) ರೂಪಿಸುವಂತೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ. ತಡಿಯಾಂಡಮೋಳ್ ಚಾರಣದ ವೇಳೆ ಕೇರಳದ ಶರಣ್ಯ ಎಂಬ ಮಹಿಳೆ 3 ದಿನ ಕಾಡಿನಲ್ಲಿ ಕಳೆದ ಹಾಗೂ ಚಂದ್ರದ್ರೋಣ ಪರ್ವತದಲ್ಲಿ ಅಪ್ರಾಪ್ತ ವಯಸ್ಕ ಬಾಲಕಿ ನಾಪತ್ತೆಯಾಗಿರುವ ಹಿನ್ನೆಲೆಯಲ್ಲಿ ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಅವರು ಲಿಖಿತ ಸೂಚನೆ ಕೊಟ್ಟಿದ್ದಾರೆ. ಅರಣ್ಯ ಇಲಾಖೆ ಈಗಾಗಲೇ ಅಭಿವೃದ್ಧಿಪಡಿಸಿರುವ ಇ-ಗಸ್ತು, ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಬಳಕೆ ಮಾಡುವ ಎಂ.ಸ್ಟ್ರೈಪ್ಸ್‌ನಂತಹ ಆ್ಯಪ್ ರೀತಿಯಲ್ಲೇ ಚಾರಣ ಅವಧಿಯಲ್ಲಿ ತಾತ್ಕಾಲಿಕವಾಗಿ ಚಾರಣಿಗರ ಮೊಬೈಲ್‌ನಲ್ಲಿ ಈ ಆಪ್ ಅಳವಡಿಸಿದರೆ, ಯಾರೇ ದಾರಿ ತಪ್ಪಿಸಿಕೊಂಡರೂ ಅವರ ಶೋಧಕಾರ್ಯ ಸುಲಭವಾಗುತ್ತದೆ. ಹೀಗಾಗಿ ಆ್ಯಪ್ ಅಭಿವೃದ್ಧಿಗೆ ಕ್ರಮವಹಿಸುವಂತೆ ಮತ್ತು ಚಾರಣಿಗರಿಗೆ ಗುಂಪು ವಿಮೆ ಮಾಡಿಸುವಂತೆ ಅರಣ್ಯ ಸಚಿವರು ನಿರ್ದೇಶಿಸಿದ್ದಾರೆ.

ಖರ್ಗೆ ವೈಯಕ್ತಿಕ ಟೀಕೆಗೆ ಕಾಂಗ್ರೆಸ್ ಆಕ್ರೋಶ

ಬೆಂಗಳೂರು: ಚುನಾವಣಾ ಪ್ರಚಾರ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಳಸಿದ ಭಾಷೆಯ ಸಂಬಂಧ ಬಿಜೆಪಿ ನಾಯಕರು ರಾಜಕೀಯ ಟೀಕೆಗಳನ್ನು ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಆರೋಗ್ಯಕರ ಟೀಕೆ ಟಿಪ್ಪಣಿಗಳಿಗೆ ಅವಕಾಶವಿದೆ, ಆದರೆ ವೈಯಕ್ತಿಕ ಟೀಕೆ ಮಾಡಲಾಗುತ್ತಿದೆ ಎಂದು ರಾಜ್ಯ ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ. ಟೀಕೆಯ ಸಂದರ್ಭದಲ್ಲಿ ಕೆಲವು ಬಿಜೆಪಿ ನಾಯಕರು ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಕುಟುಂಬದ ವೈಯಕ್ತಿಕ ತೇಜೋವಧೆಗೆ ಮುಂದಾಗಿದ್ದಾರೆ. ಇದು ಇವರ ಭೌತಿಕ ದಿವಾಳಿತನವನ್ನು ತೋರುತ್ತದೆ. ಸಂಘ ಪರಿವಾರದ ನಿರ್ದೇಶನಗಳಿಗೆ ಅನುಗುಣವಾಗಿ ಮತ್ತು ತಮ್ಮ ರಾಜಕೀಯ ಅಸ್ತಿತ್ವದ ಉಳಿವಿಗಾಗಿ ಬಿಜೆಪಿಯ ನಾಯಕರು ಇಂತಹ ಕೀಳುಮಟ್ಟದ ಟೀಕೆಗಳಿಗೆ ಮುಂದಾಗಿದ್ದಾರೆ ಎಂದು ಕೆಪಿಸಿಸಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

ಬಾಗಲಕೋಟೆ ಶೇ. 68.74 | ದಾವಣಗೆರೆ ಶೇ.68 ಮತದಾನ

ಬಿಸಿಲಿನಲ್ಲೂ ಹುರುಪು

ಬಾಗಲಕೋಟೆ/ದಾವಣಗೆರೆ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರಗಳಿಗೆ ಗುರುವಾರ ನಡೆದ ಉಪ ಚುನಾವಣೆ ಶಾಂತಿಯುವಾಗಿ ಮತದಾನವಾಗಿದ್ದು ಎರಡು ಕ್ಷೇತ್ರಗಳಿಂದ ಶೇ. 65ಕ್ಕೂ ಹೆಚ್ಚು ಮತದಾನ ದಾಖಲಾಗಿದೆ. ಬಾಗಲಕೋಟೆಯಲ್ಲಿ ಶೇ. 68.74ರಷ್ಟು ಮತದಾನವಾಗಿದ್ದರೆ, ದಾವಣಗೆರೆ ದಕ್ಷಿಣದಲ್ಲಿ ಶೇ.68.55ರಷ್ಟು ಮತದಾನವಾಗಿದೆ. ಆಡಳಿತಾರೂಢ ಕಾಂಗ್ರೆಸ್ ಎರಡೂ ಸ್ಥಾನಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೇ ಬಿಜೆಪಿ ಅವುಗಳನ್ನು ವಶಪಡಿಸಿಕೊಳ್ಳುವ ಮತ್ತು ನಾಯಕತ್ವಕ್ಕಾಗಿ ಆಂತರಿಕ ಹೋರಾಟದಲ್ಲಿ ಮುಳುಗಿರುವ ತನ್ನ ಪ್ರತಿಸ್ಪರ್ಧಿಗೆ ಹಿನ್ನಡೆಯನ್ನುಂಟುಮಾಡುವ ಗುರಿಯನ್ನು ಹೊಂದಿದೆ. ಹಿರಿಯ ಕಾಂಗ್ರೆಸ್ ಶಾಸಕರಾದ ಎಚ್ ವೈ ಮೇಟಿ (ಬಾಗಲಕೋಟೆ) ಮತ್ತು ಶಾಮನೂರು ಶಿವಶಂಕರಪ್ಪ (ದಾವಣಗೆರೆ ದಕ್ಷಿಣ) ಅವರ ನಿಧನದಿಂದಾಗಿ ಉಪಚುನಾವಣೆ ಘೋಷಣೆಯಾಗಿತ್ತು. ಬಾಗಲಕೋಟೆಯ ಸುಮಾರು 319 ಮತಗಟ್ಟೆಗಳಲ್ಲಿ ಒಟ್ಟು 2.59 ಲಕ್ಷಕ್ಕೂ ಹೆಚ್ಚು ಅರ್ಹ ಮತದಾರರು ಮತ ಚಲಾಯಿಸುವ ನಿರೀಕ್ಷೆಯಿದ್ದು, ಒಂಬತ್ತು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ದಾವಣಗೆರೆ ದಕ್ಷಿಣದಲ್ಲಿ 284 ಮತಗಟ್ಟೆಗಳಲ್ಲಿ 2.31 ಲಕ್ಷಕ್ಕೂ ಹೆಚ್ಚು ಅರ್ಹ ಮತದಾರರು ಮತ ಚಲಾಯಿಸುವ ನಿರೀಕ್ಷೆಯಿದ್ದು, 25 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ.



> ಗ್ರಾಮೀಣ ಮತ್ತು ನಗರಮಟ್ಟದಲ್ಲಿ ಕಾಂಗ್ರೆಸ್ ಪರ ಗಾಳಿ ಇದೆ. ಚುನಾವಣೆಯಲ್ಲಿ ಗೆಲ್ಲುತ್ತೇನೆ ಎಂಬ ವಿಶ್ವಾಸ ನನ್ನಲ್ಲಿದೆ.
> ■ ಉಮೇಶ ಮೇಟಿ, ಕಾಂಗ್ರೆಸ್ ಅಭ್ಯರ್ಥಿ

ಪೊಲೀಸ್ ಬಂದೋಬಸ್ತ್

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮತದಾನ ಬಹುತೇಕ ಶಾಂತಿಯುತವಾಗಿ ಮುಕ್ತಾಯಗೊಂಡಿತು. ಬೆಳಿಗ್ಗೆಯಿಂದಲೇ ಮತಗಟ್ಟೆಗಳ ಮುಂದೆ ಮತದಾರರು ಉತ್ಸಾಹದಿಂದ ಸರದಿಯಲ್ಲಿ ನಿಂತು ಮತ ಚಲಾಯಿಸಿದ್ದು ಕಂಡುಬಂತು. ಚುನಾವಣಾ ಆಯೋಗದ ಕಟ್ಟುನಿಟ್ಟಿನ ಕ್ರಮ ಹಾಗೂ ಪೊಲೀಸ್ ಬಂದೋಬಸ್ತ್ ನಿಂದಾಗಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಿಲ್ಲದಂತೆ ಮತದಾನ ಪ್ರಕ್ರಿಯೆ ಸುಗಮವಾಗಿ ನಡೆಯಿತು. ಮಹಿಳೆಯರು, ಹಿರಿಯ ನಾಗರಿಕರು ಮತಗಟ್ಟೆಗಳಿಗೆ ಆಗಮಿಸಿ ಹುಮ್ಮಸ್ಸಿನಿಂದ ಮತದಾನ ಮಾಡಿದರು.

ಶೇ.68.74ರಷ್ಟು ಮತದಾನ

ಬಾಗಲಕೋಟೆ ಮತಕ್ಷೇತ್ರದಲ್ಲಿ ಶಾಂತಿಯುತ ಮತದಾನ ನಡೆದಿದ್ದು ಅಂದಾಜು ಶೇ.68.74ರಷ್ಟು ಮತದಾನವಾಗಿದೆ. ಸುಡುಬಿಸಿಲಿನಲ್ಲಿ ಮತದಾನ ಮಾಡಲು ಹೋಗದವರು ಬೆಳಗ್ಗೆಯೇ ಮತದಾನ ಕೇಂದ್ರದತ್ತ ಜನ ಆಗಮಿಸಿದರು. ಇನ್ನೂ ಪ್ರತಿಯೊಂದು ಮತಗಟ್ಟೆ ಮುಂದೆ ಹೋದರೆ ಅಲ್ಲಿ ಮಹಿಳೆಯರ ಸಂಖ್ಯೆಯೇ ಏರಿಕೆಯಲ್ಲಿತ್ತು. ಇನ್ನೂ ಮಧ್ಯಾಹ್ನ 1ರಿಂದ ಸಂಜೆ 4 ಗಂಟೆಯವರೆಗೆ ಮಂದಗತಿಯಲ್ಲಿ ಮತದಾನ ನಡೆಯಿತು. ಸಂಜೆಯಾಗುತ್ತಿದ್ದಂತೆ ಅಲ್ಲಲ್ಲಿ ಮತದಾನ ಕೇಂದ್ರದ ಮುಂದೆ ಜನರು ಸರದಿಯಲ್ಲಿ ನಿಂತು ತಮ್ಮ ಮತದಾನದ ಹಕ್ಕು ಚಲಾಯಿಸಿದರು. ಉಪಚುನಾವಣೆಯ ಹಿನ್ನೆಲೆ ಯಲ್ಲಿ ಗೋವಾ ಹಾಗೂ ಮಂಗಳೂರ ಕಡೆ ದುಡಿಯಲು ಹೋದವರು ಬಸ್‌ನಲ್ಲಿ ಬಂದು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು. ತಿಮ್ಮಾಪುರ, ಐಹೊಳೆ ಗ್ರಾಮಗಳಲ್ಲಿ ಬಸ್‌ಗಳಲ್ಲಿ ಕೂಲಿಕಾರ್ಮಿಕರು ಆಗಮಿಸಿ ತಮ್ಮ ಮತದಾನದ ಹಕ್ಕು ಚಲಾಯಿಸಿದರು.

ಕಡತ ವಿಲೇವಾರಿ: ಸಚಿವ

ಬೆಂಗಳೂರು: 180 ದಿನ ಮೀರಿರುವ ಕೋರ್ಟ್ ಕೇಸ್‌ಗೆ ಸಂಬಂಧಿಸಿದ ಕಡತಗಳ ವಿಲೇವಾರಿಯನ್ನು ರಾಜ್ಯದ ಎಲ್ಲಾ ಎಸಿಗಳು ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ಆಟೋ ಜನರೇಟ್ ನೋಟೀಸ್ ನೀಡಲಾಗು ವುದು, ನೋಟೀಸ್ ತಲುಪಿಯೂ ಕೆಲಸ ಮಾಡದಿದ್ದರೆ ಶಿಸ್ತುಕ್ರಮ ಕೈಗೊಳ್ಳ ಲಾಗುವುದು ಎಂದು ಸಚಿವ ಕೃಷ್ಣಬೈರೇಗೌಡ ಸೂಚನೆ ನೀಡಿದರು.

ಕೋರ್ಟ್ ಕೇಸ್ ವಿಲೇವಾರಿಗೆ ಸಂಬಂಧಿಸಿ ತಮ್ಮ ಕಚೇರಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ರಾಜ್ಯದ ಎಲ್ಲಾ ಎಸಿಗಳ (ಉಪ ವಿಭಾಗಾಧಿಕಾರಿಗಳು) ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಚಿವರು, ಕೆಲವು ಎಸಿಗಳ ಬೇಜವಾಬ್ದಾರಿಯಿಂದ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ಎಸಿಗಳಿಗೂ ಕೆಟ್ಟ ಹೆಸರು ಬರುತ್ತಿದೆ ಎಂದರು. ಎಸಿ ನ್ಯಾಯಾಲಯಗಳಲ್ಲಿನ ಅವಧಿ ಮೀರಿದ ಶೇ.80 ಕ್ಕೂ ಹೆಚ್ಚು ಬಾಕಿ ಪ್ರಕರಣಗಳನ್ನು ಈಗಾಗಲೇ ವಿಲೇವಾರಿ ಮಾಡಲಾಗಿದೆ. 3 ವರ್ಷದ ಹಿಂದೆ ಎಸಿ ಕೋರ್ಟ್‌ನಲ್ಲಿ ಅವಧಿ ಮೀರಿದ 73,624 ಪ್ರಕರಣ ಇತ್ತು. ಹಳೆಯ ತಕರಾರು ಪ್ರಕರಣಗಳ ವಿಲೇವಾರಿಗಾಗಿ ವಿಶೇಷ ಎಸಿಗಳ ನೇಮಕ ಮಾಡಲಾಗಿತ್ತು.

ಎಸಿಗಳ ವಿರುದ್ಧ ಗರಂ

ಹಳೆ ಪ್ರಕರಣಗಳ ವಿಲೇವಾರಿಯ ಜೊತೆಗೆ ಹೊಸ ಪ್ರಕರಣಗಳ ವಿಲೇವಾರಿಯೂ ಗುಣಮಟ್ಟದಿಂದ ಕೂಡಿರಬೇಕು ಎಂಬ ಉದ್ದೇಶದಿಂದ ವಿಶೇಷ ಎಸಿಗಳ ನೇಮಕ ಮಾಡಲಾಯಿತು. ಆದರೆ, ರೆಗ್ಯುಲರ್ ಎಸಿಗಳು ಹೊಸದಾಗಿ ತೆಗೆದುಕೊಂಡ ಪ್ರಕರಣಗಳನ್ನೂ ಸಮಯಕ್ಕೆ ಸರಿಯಾಗಿ ಗುಣಮಟ್ಟದ ವಿಲೇವಾರಿ ಮಾಡುತ್ತಿಲ್ಲ, ರೆಗ್ಯುಲರ್ ಎಸಿಗಳು ದಾಖಲಿಸಿಕೊಂಡಿರುವ ಪ್ರಕರಣಗಳ ಕಾರಣಕ್ಕೆ ಹಳೆಯ ಪ್ರಕರಣಗಳ ಜೊತೆ ಮತ್ತೆ 1,500 ಪ್ರಕರಣಗಳು ಹೆಚ್ಚಾಗಿವೆ ಎಂದ ಸಚಿವರು, ಅರ್ಹ ಪ್ರಕರಣಗಳನ್ನು ಮಾತ್ರ ದಾಖಲಿಸಿಕೊಳ್ಳಲು ಎಸಿಗಳಿಗೆ ಸೂಚನೆ ನೀಡಿದರು.

14 ಸಾವಿರ ಪ್ರಕರಣ ವಿಲೇವಾರಿ

ಒಂದುವರೆ ವರ್ಷದ ಹಿಂದೆ ವಿಶೇಷ ಎಸಿಗಳಿಗೆ ಬಾಕಿ ಇದ್ದ ಹಳೆಯ 18,300 ಪ್ರಕರಣಗಳನ್ನು ವಿಲೇವಾರಿಗಾಗಿ ನೀಡಲಾಗಿತ್ತು. ಆದರೆ, ಇಂದು ಕೇವಲ 4,300 ಪ್ರಕರಣಗಳು ಮಾತ್ರ ಬಾಕಿ ಇವೆ. 14,000 ಪ್ರಕರಣಗಳು ವಿಲೇವಾರಿ ಆಗಿವೆ. ತುಮಕೂರಿನಲ್ಲಿ ಅತಿಹೆಚ್ಚು ಪ್ರಕರಣ ಬಾಕಿ ಇವೆ. ಅವಧಿ ಮೀರಿದ 1,900 ಪ್ರಕರಣ ಬಾಕಿ ಇವೆ. ಈ ಪೈಕಿ 180 ದಿನಕ್ಕೂ ಮೀರಿದ 91 ಪ್ರಕರಣಗಳು ಬಾಕಿ ಇವೆ. 3 ಜನ ವಿಶೇಷ ಎಸಿಗಳಿದ್ದಾರೆ. ಮುಂದಿನ 2 ತಿಂಗಳಲ್ಲಿ ಎಲ್ಲಾ ಬಾಕಿ ಪ್ರಕರಣ ವಿಲೇಗೊಳಿಸಲು ಸಚಿವ ಕೃಷ್ಣ ಬೈರೇಗೌಡ ಸೂಚನೆ ನೀಡಿದರು.

ಡಿಕೆಶಿಯಿಂದ ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ

ಚೆನ್ನೈ: ಮಹಿಳೆಯರಿಗೆ 2 ಸಾವಿರ, 3 ಲಕ್ಷ ಸರ್ಕಾರಿ ಹುದ್ದೆ ಭರ್ತಿ, ಭೂ ರಹಿತ ರೈತರಿಗೆ ವಾರ್ಷಿಕ 6 ಸಾವಿರ ಸೇರಿದಂತೆ ತಮಿಳುನಾಡಿನ ಎಲ್ಲಾ ವರ್ಗದವರ ಹಿತ ಕಾಪಾಡುವ ಮಹತ್ತರ ಭರವಸೆಗಳನ್ನು ಒಳಗೊಂಡ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಡುಗಡೆ ಮಾಡಿದರು.

ಗುರುವಾರ ಚೆನ್ನೈನ ತಮಿಳುನಾಡು ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಮಹಿಳೆಯರನ್ನು ಸಬಲರನ್ನಾಗಿ ಮಾಡಬೇಕು, ಮಹಿಳೆ ಶಕ್ತಿಶಾಲಿಯಾದರೆ ಕುಟುಂಬ ಶಕ್ತಿಶಾಲಿ ಆಗುತ್ತದೆ. ಕುಟುಂಬ ಶಕ್ತಿಶಾಲಿಯಾದರೆ, ಸಮಾಜ ಬಲಿಷ್ಠವಾಗುತ್ತದೆ. ಇದಕ್ಕಾಗಿ ಮಹಿಳೆಯರಿಗೆ ಮಾಸಿಕ 2 ಸಾವಿರ ರೂ. ನೀಡಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು. ಆರೋಗ್ಯ, ಮೀನುಗಾರರ ಸಮಸ್ಯೆ, ಭೂ ದಾಖಲೆ ಹಂಚಿಕೆ ಯೋಜನೆಗಳನ್ನು ಘೋಷಣೆ ಮಾಡಲಾಗಿದ್ದು, ರಾಜ್ಯದ ಜನರ ಅಗತ್ಯಕ್ಕೆ ತಕ್ಕಂತೆ ಯೋಜನೆ ರೂಪಿಸಲಾಗಿದೆ. ನಿರುದ್ಯೋಗಿಯುವಕರಿಗಾಗಿ 3 ಲಕ್ಷ ಸರ್ಕಾರಿ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲಾಗುವುದು. ಹುದ್ದೆ ಖಾಲಿಯಾದ 300 ದಿನಗಳಲ್ಲಿ ಅವುಗಳನ್ನು ಭರ್ತಿ ಮಾಡಲಾಗುವುದು. ಪಿಂಚಣಿ ದರ ಏರಿಕೆ, ಭೂರಹಿತ ರೈತರಿಗೆ ವಾರ್ಷಿಕ 6 ಸಾವಿರ ರೂ. ನೀಡಲಾಗುವುದು ಎಂದರು.

ಇಡೀ ದೇಶಕ್ಕೆ ಗ್ಯಾರಂಟಿ ಮಾದರಿ: ಕರ್ನಾಟಕದಲ್ಲಿ ನಾವು ಅಧಿಕಾರಕ್ಕೆ ಬಂದ ಮೊದಲ 6 ತಿಂಗಳ ಒಳಗಾಗಿ ಜಾರಿ ಮಾಡಿದೆವು. ಪ್ರಧಾನಮಂತ್ರಿ ಸೇರಿದಂತೆ ಬಿಜೆಪಿಯರು ನಮ್ಮ ಗ್ಯಾರಂಟಿ ಯೋಜನೆಗಳನ್ನು ಟೀಕಿಸಿದರು. ಇದು ಸಾಧ್ಯವೇ ಎಂದು ಪ್ರಶ್ನಿಸಿದರು. ನಾವು ಈ ಗ್ಯಾರಂಟಿ ಯೋಜನೆ ಜಾರಿ ಮಾಡಿದ ಬಳಿಕ ಇಡೀ ದೇಶದೆಲ್ಲೆಡೆ ನಮ್ಮ ಮಾದರಿಯನ್ನೇ ಅವಲಂಬಿಸಿದ್ದಾರೆ. ಯಾವುದೇ ರಾಜ್ಯವಾಗಲಿ, ಯಾವುದೇ ಸರ್ಕಾರವಿರಲಿ ಮಹಾರಾಷ್ಟ್ರ, ಮಧ್ಯಪ್ರದೇಶ, ಬಿಹಾರ ರಾಜ್ಯಗಳಲ್ಲಿ ಬಿಜೆಪಿ ನಮ್ಮ ಯೋಜನೆಗಳನ್ನು ನಕಲು ಮಾಡಲಾಗಿದೆ ಎಂದರು.

ದುಡ್ಡಿಲ್ಲ ಎಂದು ಸಿಎಂ ಪತ್ರ: ಸೋಮಣ್ಣ

ಮಂಡ್ಯ: ಹೆಜ್ಜಾಲ-ಚಾಮರಾಜನಗರ ರೈಲು ಮಾರ್ಗಕ್ಕೆ ತಡೆಯೊಡ್ಡಿದ್ದೇ ಮುಖ್ಯಮಂತ್ರಿ ಸಿದ್ದರಾಮಯ್ಯ. ನಮ್ಮತ್ರ ದುಡ್ಡಿಲ್ಲ, ಈ ಯೋಜನೆಯನ್ನು ಕೈಬಿಡುವಂತೆ ಪತ್ರ ಬರೆದಿದ್ದರು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಗಂಭೀರ ಆರೋಪ ಮಾಡಿದರು.

ಗುರುವಾರ ಬೆಂಗಳೂರಿನಿಂದ ಮೈಸೂರುವರೆಗೆ ಕೇಂದ್ರ ಭಾರೀ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ವಿಂಡೋ ಟ್ರೇಲಿಂಗ್



ಪರಿವೀಕ್ಷಣೆ ನಡೆಸುವ ವೇಳೆ ನಗರದ ರೈಲು ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಅಧಿಕಾರಕ್ಕೆ ಬಂದ ತಕ್ಷಣವೇ ಹೆಜ್ಜಾಲ-ಕನಕಪುರ-ಮಳವಳ್ಳಿ-ಚಾಮರಾಜನಗರ ರೈಲ್ವೆ ಮಾರ್ಗದ ಯೋಜನೆಯನ್ನು ಕೈಗೆತ್ತಿಕೊಂಡೆವು. ಇದು ಅಗತ್ಯದ ಯೋಜನೆಯಾಗಿತ್ತು. ಕೇಂದ್ರ ಸರ್ಕಾರ ಯೋಜನೆಗೆ ಗ್ರೀನ್ ಸಿಗ್ನಲ್ ನೀಡಿತ್ತು. ಆದರೆ, ರಾಜ್ಯದ ಪಾಲಿನ ಹಣ ಬಿಡುಗಡೆಗೆ ಕಾಂಗ್ರೆಸ್ ಸರ್ಕಾರ ಸಿದ್ಧವಿರಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಯೋಜನೆಗೆ ರಾಜ್ಯದಿಂದ ಹಣಕಾಸು ಒದಗಿಸಲಾಗುವುದಿಲ್ಲ, ಈ ಯೋಜನೆಯನ್ನು ಕೈಬಿಡುವಂತೆ ಪತ್ರ ಬರೆದಿದ್ದರು. ಆದಕ್ಕಾಗಿ ಯೋಜನೆ ಅನುಷ್ಠಾನಕ್ಕೆ ಬರಲಿಲ್ಲ ಎಂದು ದೂಷಣೆ ಮಾಡಿದರು.

ರೈಲ್ವೆ ನಿಲ್ದಾಣಗಳಲ್ಲಿ ಸಾರ್ವಜನಿಕರಿಗೆ ಇರುವ ಸೌಲಭ್ಯಗಳು, ರೈಲ್ವೆ ಮಾರ್ಗಗಳಲ್ಲಿರುವ ಸಮಸ್ಯೆಗಳು, ತೊಂದರೆಗಳು, ರೈಲ್ವೆ ಮೇಲ್ಸೇತುವೆ, ಕೆಳ ಸೇತುವೆಗಳ ನಿರ್ಮಾಣ ಕುರಿತಂತೆ ಪರಿಶೀಲನೆ ನಡೆಸಲಾಗುತ್ತಿದೆ. ಸಾಮಾನ್ಯ ಜನರಿಗೆ ತೊಂದರೆ ಆಗದ ರೀತಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕ್ರಮ ಜರುಗಿಸುವ ಭರವಸೆ ನೀಡಿದರು. ಬೆಂಗಳೂರು-ಮೈಸೂರು ನಡುವೆ ಮೆಮೋ ರೈಲು ನೀಡುವಂತೆ ಬೇಡಿಕೆ ಇದೆ. ಇದರ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುವುದು. ಈ ಕುರಿತಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೂ ಚರ್ಚಿಸಲಾಗಿದೆ. ಅವರು ನಿಮ್ಮ ಕನಸು ನನಸು ಮಾಡುವರು. ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ನಿಟ್ಟಿನಲ್ಲಿ ನಾನೂ ಅವರ ಜೊತೆಯಾಗಿರುತ್ತೇನೆ ಎಂದರು.

ಮಂಗಳೂರಿಗೆ ಶೀಘ್ರ ವಂದೇ ಭಾರತ್ ರೈಲು

ಹಾಸನ- ಕುಕ್ಕೆ ಸುಬ್ರಹ್ಮಣ್ಯ -ಮಂಗಳೂರು ನಡುವಿನ 51 ಕಿ.ಮೀ. ಪ್ರಯಾಸದ ರೈಲು ಮಾರ್ಗವನ್ನು ವಿದ್ಯುದೀಕರಣ ಮಾಡಿದ್ದು ಮಂಗಳೂರು-ಕುಕ್ಕೆ ಸುಬ್ರಹ್ಮಣ್ಯ ನಡುವಿನ 51 ಕಿ.ಮೀ. ಪ್ರಯಾಸದ ರೈಲು ಮಾರ್ಗವನ್ನು ವಿದ್ಯುದೀಕರಣ ಮಾಡಿದ್ದು ನಮ್ಮ ಸಾಧನೆ. ಮಂಗಳೂರಿಗೆ ವಂದೇ ಭಾರತ್ ರೈಲು ಸಂಚಾರ ಶೀಘ್ರದಲ್ಲಿ ಆರಂಭವಾಗಲಿದೆ ಎಂದರು. ದೇಶದಲ್ಲಿರುವ ರೈಲ್ವೆ ನಿಲ್ದಾಣಗಳನ್ನು ವಿಮಾನ ನಿಲ್ದಾಣಗಳನ್ನಾಗಿ ಪರಿವರ್ತಿಸುವ ಸಂಕಲ್ಪವನ್ನು ಪ್ರಧಾನಿ ನರೇಂದ್ರಮೋದಿಯವರು ಮಾಡಿದ್ದು, ಆ ನಿಟ್ಟಿನಲ್ಲಿ ಕೆಲಸ ಸಾಗುತ್ತಿದೆ. 1568 ಮಾರ್ಗಗಳಿಗೆ ಪ್ರಯಾಣಿಕರಿಗೆ ಸುರಕ್ಷತಾ ಕವಚಗಳನ್ನು ಅಳವಡಿಸಲಾಗಿದೆ. ಕಳೆದ ಹತ್ತು ವರ್ಷದಲ್ಲಿ ರಾಜ್ಯದಲ್ಲಿ 707 ಹೊಸ ರೈಲ್ವೆ ಸೇತುವೆಗಳನ್ನು ನಿರ್ಮಿಸಲಾಗುತ್ತಿದೆ. ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲೆಲ್ಲ ನಿರ್ಮಾಣಕ್ಕೆ ಸೂಚಿಸಿದ್ದು, ವೆಚ್ಚವನ್ನು ಕೇಂದ್ರವೇ ಭರಿಸಲಿದೆ ಎಂದರು.

ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹೈ ವಜಾ

ಬೆಂಗಳೂರು: ಶಾಲೆಗಳಲ್ಲಿ ಪ್ರತಿದಿನ ವಂದೇ ಮಾತರಂ ಗೀತೆಯನ್ನು ಎಲ್ಲ ಆರು ಚರಣಗಳೊಂದಿಗೆ ಕಡ್ಡಾಯವಾಗಿ ಹಾಡುವ ಸಂಬಂಧ ಕೇಂದ್ರ ಸರ್ಕಾರ ಹೊರಡಿಸಿರುವ ಶಿಷ್ಟಾಚಾರ ಮಾರ್ಗಸೂಚಿಗಳನ್ನು ಅಸಾಂವಿಧಾನಿಕ ಎಂದು ಘೋಷಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಲು ನಿರಾಕರಿಸಿರುವ ಹೈಕೋರ್ಟ್ ಗುರುವಾರ ವಜಾಗೊಳಿಸಿದೆ. ಬೆಂಗಳೂರಿನ



ವಕೀಲ ಸೋಮಶೇಖರ್ ರಾಜವಂಶಿ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ.ಪೂಣಚ್ಚ ಅವರ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ್ ಕಾಮತ್ ಅವರು ಕೇಂದ್ರ ಗೃಹ ಇಲಾಖೆಯ ಆದೇಶದಲ್ಲಿ ವಂದೇ ಮಾತರಂ ಗೀತೆ ಹಾಡಬಹುದು ಎಂಬ ಪದ ಬಳಕೆ ಮಾಡಲಾಗಿದ್ದು, ಅದು ಕಡ್ಡಾಯವಲ್ಲ ಎಂಬುದನ್ನು ಸೂಚಿಸುತ್ತದೆ. ಅಲ್ಲದೇ, ಈಚೆಗೆ ಸುಪ್ರೀಂ ಕೋರ್ಟ್ ಇಂಥದ್ದೇ ಮನವಿ ಒಳಗೊಂಡಿದ್ದ ಪಿಐಎಲ್ ವಜಾಗೊಳಿಸಿದೆ ಎಂದರು. ಇದನ್ನು ಆಲಿಸಿದ ಪೀಠವು ವಂದೇ ಮಾತರಂ ಗೀತೆಯನ್ನು ಯಾವುದೇ ಶಾಸನಬದ್ಧ ಚೌಕಟ್ಟಿನಲ್ಲಿ ಸೇರ್ಪಡೆ ಮಾಡಲಾಗಿಲ್ಲ, ಕೇಂದ್ರ ಸರ್ಕಾರದ ಆದೇಶದಲ್ಲಿ ಸಾಧ್ಯತೆ ಎಂಬ ಪದ ಬಳಕೆ ಮಾಡಿದ್ದು ಅದು ಕಡ್ಡಾಯವಲ್ಲ. ರಾಷ್ಟ್ರಗೀತೆಯಂತೆ ವಂದೇ ಮಾತರಂ ಗೀತೆಯ ಗಾಯನ ಕಡ್ಡಾಯವಲ್ಲ. ಇಂಥದ್ದೇ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ ಎಂದು ಅರ್ಜಿ ವಜಾಗೊಳಿಸಿತು.

ಮತದಾನದ ದಿನವೇ ಹಣ ಹಂಚಿಕೆ

ಬಾಗಲಕೋಟೆ: ಬಾಗಲಕೋಟೆಯ ಉಪಚುನಾವಣೆ ಶಾಂತಿಯುತವಾಗಿ, ಪಾರದರ್ಶಕವಾಗಿ ನಡೆಯಬೇಕು ಹಾಗೂ ಮತದಾರರಿಗೆ ದುಡ್ಡಿನ ಆಮಿಷ, ಇನ್ನಿತರ ಆಮಿಷ ಒಡ್ಡಬಾರದು ಎಂದು ಚುನಾವಣಾಧಿಕಾರಿಗಳು ನಿತ್ಯ ಪತ್ರಿಕೆಯಲ್ಲಿ ಜನರಿಗೆ ಜಾಗೃತಿ ಮೂಡಿಸಿದರೂ ಕಾಂಗ್ರೆಸ್ ಕಾರ್ಯಕರ್ತರು ರಾಜಾರೋಷವಾಗಿ ನಡು ಬೀದಿಯಲ್ಲೇ ದುಡ್ಡು ಹಂಚಿಕೆ ಮಾಡಿದ್ದು ಭಾರೀ ಚರ್ಚೆಗೆ ಗ್ರಾಸವಾಗಿದೆ.

ಬಾಗಲಕೋಟೆ ಉಪಚುನಾವಣೆ ಎಂದರೆ ಅನುಕಂಪ, ಅಭಿವೃದ್ಧಿಯನ್ನು ಇಟ್ಟುಕೊಂಡು ಚುನಾವಣಾಯಲ್ಲಿ ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳು ಕಣದಲಿದ್ದರು. ಆದರೆ, ಕಾಂಗ್ರೆಸ್ ಕಾರ್ಯಕರ್ತರು ಕೊನೆ ಗಳಿಗೆಯಲ್ಲಿ ಮತದಾನ ದಿನವೇ ಹಣವನ್ನು ಹಂಚಿಕೆ ಮಾಡಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಬಾಗಲಕೋಟೆ ನಗರದ ವಾಂಬೆ ಕಾಲೋನಿಯ ಮುಂಭಾಗ ಕಾಂಗ್ರೆಸ್ ಮುಖಂಡ ಜಾಫರ್ ಬೇಪಾರಿ ನೂರಾರು ಜನರ ಮಧ್ಯೆ ನಿಂತು ಹಣವನ್ನು ಹಂಚಿಕೆ ಮಾಡುತ್ತಿದ್ದರು ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದಿಂದ ದುಡ್ಡು ಕೊಡತಾ ಇದ್ದಾರೆ ಎಂದು ವಿಡಿಯೋದಲ್ಲಿ ಹೇಳಿಕೆ ಕೇಳಿ ಬರುತ್ತಿತ್ತು. ಇನ್ನೂ ಜನರು ಒಬ್ಬರ ಮೇಲೆ ಒಬ್ಬರು ಮುಗಿಬಿದ್ದು ದುಡ್ಡಿಗಾಗಿ ಕೈ ಚಾಚುತ್ತಿದ್ದರು. ಇನ್ನೂ ಹೆಚ್ಚು ಜನರು ದುಡ್ಡಿಗಾಗಿ ಕೈ ಚಾಚುತ್ತಿದ್ದಂತೆ ಕಾಂಗ್ರೆಸ್ ಮುಖಂಡ ಅಲ್ಲಿಂದ ಕಾಲ್ಕಿತ್ತರು. ಗದ್ದಲದಲ್ಲಿಯೇ ಹಣವನ್ನು ಪಡೆದುಕೊಂಡು ಮಹಿಳೆಯೊಬ್ಬಳು ಕೈಯಲ್ಲಿ ಹಿಡಿದುಕೊಂಡು ಬರುವಾಗ ವಿಡಿಯೋ ಮಾಡುವವರು ಕೇಳಿದಾಗ ಯಾರು ಕೊಟ್ಟರು ಎಂದು ದುಡ್ಡು ಕೇಳಿದರೆ ಕಾಂಗ್ರೆಸ್‌ನವರು ಕೊಟ್ಟರು ಎಂದು ಹೇಳಿಕೆ ನೀಡಿದ್ದು ವಿಡಿಯೋದಲ್ಲಿ ಕೇಳಿಬಂದಿದೆ. .

ನೀತಿ ಸಂಹಿತೆ ಉಲ್ಲಂಘನೆ: ದೂರು ದಾಖಲು

ಉಪಚುನಾವಣೆಯ ಹಿನ್ನಲೆಯಲ್ಲಿ ನವನಗರದ ವಾಂಬೆ ಕಾಲೋನಿಯಲ್ಲಿ ರಾಜಾರೋಷವಾಗಿ ನೂರಾರು ಜನರ ಮಧ್ಯೆ ನಿಂತು ಕಾಂಗ್ರೆಸ್ ಪಕ್ಷದ ಮುಖಂಡ ಜಾಫರ್ ಬೇಪಾರಿ ದುಡ್ಡು ಹಂಚಿಕೆ ಮಾಡುತ್ತಿರುವ ವಿಡಿಯೋ ದೃಶ್ಯವನ್ನು ಆಧಾರಿಸಿ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣವನ್ನು ದಾಖಲಿಸಲಾಗಿದೆ. ಫ್ಲಾಯಿಂಗ್ ಸ್ಕಾಡ್ ಅಧಿಕಾರಿ ವಿಠ್ಠಲ ಸಿದ್ದಪ್ಪ ನಾಯಕ ಎಂಬುವವರು ಸಾಮಾಜಿಕ ಜಾಲತಾಣದಲ್ಲಿ ದುಡ್ಡು ಹಂಚಿಕೆ ಮಾಡುತ್ತಿದ್ದ ಕಾಂಗ್ರೆಸ್ ಮುಖಂಡನ ವಿಡಿಯೋ ಆಧರಿಸಿದ ಕಾಂಗ್ರೆಸ್ ಮುಖಂಡ ನವನಗರದ ಜಾಫರ್ ಬೇಪಾರಿಯವರ ಮೇಲೆ ಚುನಾವಣೆ ನೀತಿಸಂಹಿತೆ ಉಲ್ಲಂಘನೆ ಮಾಡಿರುವ ಕುರಿತು ಪ್ರಕರಣ ದಾಖಲಿಸಿದ್ದಾರೆ.

ಶಿಕ್ಷಣ ಅಧಿಕಾರಿ ತರಾಟೆಗೆ ತೆಗೆದುಕೊಂಡ ಮಾಜಿ ಶಾಸಕ ವಿಕ್ರಮಸಿಂಹ ಸಾವಂತ್

ಮಹಾರಾಷ್ಟ್ರ ಟಿಇಟಿಯಲ್ಲಿ ಕನ್ನಡ ಸೇರಿಸಲು ಆಗ್ರಹ

ಬೆಂಗಳೂರು: ಮಹಾರಾಷ್ಟ್ರ ರಾಜ್ಯ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (ಟಿಇಟಿ) ಕನ್ನಡ ಭಾಷೆಯನ್ನು ಸೇರಿಸುವಂತೆ ಮತ್ತು ಗಡಿಭಾಗದ ಕನ್ನಡ ಶಾಲೆಗಳ ದೀರ್ಘಕಾಲದ ಬಾಕಿ ಉಳಿದಿರುವ ಸಮಸ್ಯೆಗಳನ್ನು ಪರಿಹರಿಸುವಂತೆ ಆಗ್ರಹಿಸಿ, ಜತ್ ಮಾಜಿ ಶಾಸಕ ವಿಕ್ರಮಸಿಂಹ ಸಾವಂತ್ ಪುಣೆಯಲ್ಲಿ ರಾಜ್ಯದ ಹಿರಿಯ ಶಿಕ್ಷಣ ಅಧಿಕಾರಿಗಳನ್ನು ಭೇಟಿ ಮಾಡಿ ತರಾಟೆಗೆ ತೆಗೆದುಕೊಂಡರು.

ಈ ಸಂಬಂಧ ಮಹಾರಾಷ್ಟ್ರ ರಾಜ್ಯ ಶಿಕ್ಷಣ ಆಯುಕ್ತ ಸಚಿಂದ್ರ ಪ್ರತಾಪ್ ಸಿಂಗ್, ಪರೀಕ್ಷಾ ಪರಿಷತ್ತಿನ ಅಧ್ಯಕ್ಷ ನಂದಕುಮಾರ್ ಬೆಡ್ಸೆ ಮತ್ತು ಆಯುಕ್ತ ಮಹೇಶ್ ಚೋತೆ ಅವರನ್ನು ಭೇಟಿ ಮಾಡಿ ಸುದೀರ್ಘ ಚರ್ಚೆ ನಡೆಸಿದರು. ಡಿಜಿಟಲ್ ಮಾಧ್ಯಮದಲ್ಲಿ ಕನ್ನಡದ ಬಳಕೆ ಸಂಬಂಧ ನಿಪುಣ ಭಾರತ ಮತ್ತು ಇತರ ಶೈಕ್ಷಣಿಕ ಆ್ಯಪ್‌ಗಳಲ್ಲಿ ಮೌಲ್ಯಮಾಪನವು ಕೇವಲ ಮರಾಠಿಯಲ್ಲಿ ನಡೆಯುತ್ತಿರುವುದರಿಂದ ಕನ್ನಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅಲ್ಲಿ ತಕ್ಷಣವೇ ಕನ್ನಡ ಭಾಷೆಯ ಆಯ್ಕೆಯನ್ನು ನೀಡಬೇಕು ಎಂದು ಒತ್ತಾಯಿಸಿದರು.



> ಕನ್ನಡ ಭಾಷಿಕರ ಸಮಸ್ಯೆಗಳ ಕುರಿತು ಶೀಘ್ರದಲ್ಲೇ ಸರ್ಕಾರಿ ಮಟ್ಟದಲ್ಲಿ ಚರ್ಚಿಸಿ ಪರಿಹರಿಸಲಾಗುವುದು. ಅಲ್ಲದೇ ಟಿಇಟಿ ಪರೀಕ್ಷೆಯ ಲ್ಲಿ ಕನ್ನಡ ಮಾಧ್ಯಮವನ್ನು ಸೇರಿಸುವ ಕುರಿತು ಖಂಡಿತವಾಗಿಯೂ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುವುದು.
> ■ ಸಚೇಂದ್ರ ಪ್ರತಾಪ್ ಸಿಂಗ್, ಮಹಾರಾಷ್ಟ್ರ ಶಿಕ್ಷಣ ಆಯುಕ್ತ

ಮಹಾರಾಷ್ಟ್ರ ಮುಖ್ಯ ಕಾರ್ಯದರ್ಶಿಗೆ ಶಾಲಿನಿ ರಜನೀಶ್ ಪತ್ರ

ಮಹಾರಾಷ್ಟ್ರದ ಜತ್ತ, ಅಕ್ಕಲಕೋಟೆ, ದಕ್ಷಿಣ ಸೋಲಾಪುರ ಸೇರಿದಂತೆ ವಿವಿಧೆಡೆ ಸುಮಾರು 377 ಕನ್ನಡ ಮಾಧ್ಯಮ ಶಾಲೆಗಳಿವೆ. ಇವುಗಳಲ್ಲಿ 44,860ಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. ಸಂವಿಧಾನದ ವಿಧಿ 350ಎ ಅನ್ವಯ ಭಾಷಾ ಅಲ್ಪಸಂಖ್ಯಾತರಿಗೆ ಅವರದ್ದೇ ಮಾಧ್ಯಮದಲ್ಲಿ ಪರೀಕ್ಷೆ ಬರೆಯುವ ಹಕ್ಕಿದೆ. ಸುಪ್ರೀಂ ಕೋರ್ಟ್ ಆದೇಶದಂತೆ 2027ರೊಳಗೆ ಶಿಕ್ಷಕರು ಟಿಇಟಿ ಪಾಸಾಗುವುದು ಕಡ್ಡಾಯ. ಪ್ರಸ್ತುತ ಮಹಾರಾಷ್ಟ್ರದಲ್ಲಿ ಟಿಇಟಿಗೆ ಅರ್ಜಿ ಸಲ್ಲಿಸಲು ಏ.16 ಕೊನೆಯ ದಿನ. ತಕ್ಷಣವೇ ಕನ್ನಡ ಮಾಧ್ಯಮದ ಆಯ್ಕೆಯನ್ನು ಒದಗಿಸಬೇಕು. ಕರ್ನಾಟಕ ಸರ್ಕಾರವು ಇಲ್ಲಿನ ಮರಾಠಿ ಭಾಷಿಕರಿಗಾಗಿ ಮರಾಠಿ ಮಾಧ್ಯಮದಲ್ಲೂ ಟಿಇಟಿ ನಡೆಸುತ್ತಿದೆ. ಅದೇ ಮಾದರಿಯ ಸೌಲಭ್ಯವನ್ನು ಮಹಾರಾಷ್ಟ್ರ ಸರ್ಕಾರವು ಅಲ್ಲಿನ ಕನ್ನಡಿಗರಿಗೂ ನೀಡಬೇಕು ಎಂದು ಮಹಾರಾಷ್ಟ್ರದ ಮುಖ್ಯ ಕಾರ್ಯದರ್ಶಿ ರಾಜೇಶ್ ಅಗರವಾಲ್ ಅವರಿಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಪತ್ರ ಬರೆದು ಒತ್ತಾಯಿಸಿದ್ದಾರೆ.

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಆ&ಕು.ಕ.ಇ.ಇಂ ವಿಭಾಗ, ಘೋರ್ಟ್ ರೋಡ್, ಧಾರವಾಡ–580008

ದೂರವಾಣಿ ಸಂ : 0836 – 2955800
(E-Mail : eehfwedvndwd1@gmail.com)

ಸಂಖ್ಯೆ: ಕಾನಿಅ/ಆಕುಕಇಇಂ/ವಿಭಾಗ–ಧಾ/ಪಿ.ಎಮ್. ಅಭಿಮ್/17/26–27
ದಿನಾಂಕ : 08.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (Through KPP Portal only)

ಕಾರ್ಯನಿರ್ವಾಹಕ ಅಭಿಯಂತರರು, ಆ&ಕು.ಕ.ಇ.ಇಂ., ವಿಭಾಗ, ಧಾರವಾಡ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆ ವರ್ಗದ ಗುತ್ತಿಗೆದಾರರಿಂದ ಕಾಮಗಾರಿವಾರು ಹಾಗೂ ಜಿಲ್ಲಾವಾರು ಸಂಬಂಧಿಸಿದ ಈ ವಿಭಾಗದಡಿಯಲ್ಲಿಯ 1} ಪಿ.ಎಮ್. ಅಭಿಮ್: ಬೆಳಗಾವಿ ಜಿಲ್ಲೆಯ: 3 ಸಂಖ್ಯೆ, 2} ಡಿ.ಪಿ.ಆರ್. ಹಾವೇರಿ ಜಿಲ್ಲೆ: 2 ಸಂಖ್ಯೆ, ಬೆಳಗಾವಿ ಜಿಲ್ಲೆ: 01 ಸಂಖ್ಯೆ ಕಾಮಗಾರಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿರುವಂತೆ ಕಾಮಗಾರಿವಾರು Double cover system, ಐಟಂವಾರು ದರದ ಟೆಂಡರ್‌ಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ದಿನಾಂಕ : **09.04.2026** ರಿಂದ **17.04.2026** ರ ಸಾಯಂಕಾಲ 4.00 ಘಂಟೆಯವರೆಗೆ www.kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ, ಹಾಗೂ ಸದರಿ ಕಾಮಗಾರಿಯ ಬಿಡ್‌ಗಳನ್ನು ದಿ : **18.04.2026** ರಂದು ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಒಂದು ವೇಳೆ ಮಾಹಿತಿ ಹಾಗೂ ದಿನಾಂಕಗಳಲ್ಲಿ ಬದಲಾವಣೆಯಾದಲ್ಲಿ, ನಿಖರವಾದ ಮಾಹಿತಿ ಹಾಗೂ ದಿನಾಂಕಗಳನ್ನು ಕೆ.ಪಿ.ಪಿ.ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ನಲ್ಲಿ ಬಿಡ್‌ಗಳನ್ನು ಪಡೆದು, ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಇನ್ನೂ ಹೆಚ್ಚಿನ ಮಾಹಿತಿಯನ್ನು www.kppp.karnataka.gov.in ನಲ್ಲಿ ವೀಕ್ಷಿಸಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಆ&ಕು.ಕ.ಇ. ಇಂಜಿನೀಯರಿಂಗ್ ವಿಭಾಗ, ಧಾರವಾಡ.

ವಾಸಾಸಂಇ/ಧಾ/ಕೆಎಸ್‌ಎಂಸಿಎ/40/2026–27

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ದೂರವಾಣಿ ಸಂ: 08352–259855,
ಇ–ಮೇಲ್:itstaff_dudc_bijapur@yahoo.co.in
dudc_bjp@yahoo.co.in, ka.vijayapura.dudc@gmail.com
ವೆಬ್‌ಸೈಟ್: www.vijayapuradudc.mrc.gov.in

ಕ್ರ.ಸಂ:ಜಿನಕೊ–3/ಮಾನವ ಸಂಪನ್ಮೂಲ/ಟೆಂಡರ್/2025–26/10 ದಿನಾಂಕ:02.04.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

ವಿಜಯಪುರ ಜಿಲ್ಲೆಯ ಜಿಲ್ಲಾ ನಗರಾಭಿವೃದ್ಧಿ ಕೋಶ ವಿಜಯಪುರ ಕಾರ್ಯಾಲಯಕ್ಕೆ 02 ಜನ ನುರಿತ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಒದಗಿಸುವ ಕುರಿತು ಆಹ್ವಾನಿಸಿದ ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಮತ್ತು ನೊಂದಾಯಿತ ಏಜೆನ್ಸಿದಾರರು ಹೆಚ್ಚಿನ ವಿವರಗಳನ್ನು ಇ–ಪ್ರೋಕರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬಸೈಟ್ www.kppp.karnataka.gov.in ಮೂಲಕ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ. Indent No: DMA/2025-26/SE7356/CALL-2

1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 09.04.2026** ರಂದು ಸಾಯಂಕಾಲ 5.00 ಘಂಟೆಯವರೆಗೆ.
2) ಟೆಂಡರ್ ತೆರೆಯುವ **ದಿನಾಂಕ : 10.04.2026** ರಂದು ಸಾಯಂಕಾಲ 5.30 ಘಂಟೆಗೆ.

ಅವಧಿ ವಿಸ್ತರಣೆ ಮತ್ತು ತಿದ್ದುಪಡಿ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ವಾಸಾಸಂಇ/ವಿಜಯಪುರ/17/ಕೆಎಸ್‌ಎಂಸಿಎ/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ: ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ ಟೆಂಡರ್ ಪ್ರಕಟಣೆ
ಸಂಖ್ಯೆ : 01/2026–27 ದಿನಾಂಕ : 04.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 07.04.2026 ರಿಂದ 17.04.2026 ರವರೆಗೆ ಸಂಜೆ 17.30 ಗಂಟೆಗೆ. 2) ಪ್ರೀ ಬಿಡ್ ಮೀಟಿಂಗ್ : 13.04.2026 ರಂದು ಬೆಳಿಗ್ಗೆ 11.00 ಗಂಟೆಗೆ, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18.04.2026 ರಂದು 17.30 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : After obtaining approval of technical bid from competent authority 5) ಕಾಲಾವಧಿ : 08 ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. 97.40 ಲಕ್ಷಗಳು. 7) ಇಎಂಡಿ ಮೊತ್ತ : ರೂ. 1,95,000/–.

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/–
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ.44–04/ಝೇಂಕಾರ್/2026–27

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ಲೆ.ಶೀ /ಟೆಂಡರು /2026–27/30
ದಿನಾಂಕ 06–04–2026

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025–26 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆ, 2025–26 ನೇ ಸಾಲಿನ ಸಿ.ಐ.ಎಮ್.ಡಿ.ಪಿ,2025–26 ನೇ ಸಾಲಿನ 5054 ಎಸ್.ಸಿ.ಪಿ/ಟಿ.ಎಸ್.ಪಿ ಒಟ್ಟು 11 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ–

1.RDPR/2025-26/BD/WORK_INDENT25783
2.RDPR/2025-26/BD/WORK_INDENT25817
3.RDPR/2025-26/BD/WORK_INDENT25784
4.RDPR/2025-26/RD/WORK_INDENT25813
5.RDPR/2025-26/RD/WORK_INDENT25818
6.RDPR/2025-26/BD/WORK_INDENT24269/CALL-4
7.RDPR/2025-26/BD/WORK_INDENT24141/CALL-4
8.RDPR/2025-26/BD/WORK_INDENT24442/CALL-4
9.RDPR/2025-26/RD/WORK_INDENT25657/CALL-2
10.RDPR/2025-26/RD/WORK_INDENT24749/CALL-3
11.RDPR/2025-26/BD/WORK_INDENT24441/CALL-4

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ ದಿನಾಂಕ 06–04–2026 ರಿಂದ ದಿನಾಂಕ 13–04–2026 ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ ದಿನಾಂಕ: 13–04–2026 ರ 16.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ ದಿನಾಂಕ: 15–04–2026 ರಂದು ಬೆಳ್ಳಗೆ 10.30 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/41

ಕೃಷಿ ಮಾರಾಟ ಇಲಾಖೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜೇವರ್ಗಿ

ಅಖಂಡೇಶ್ವರ ಗಂಜ್, ಬೀದರ–ಬೆಂಗಳೂರ ಮುಖ್ಯ ರಸ್ತೆ, ಜೇವರ್ಗಿ–585 310, ಜಿ.ಕಲಬುರಗಿ
e-mail : apmcjewargi@gmail.com

ಸಂಖ್ಯೆ : ಕೃಮಾಇ/ಕೃಉಮಾಸ/ಜೇ/08/2026–27 ದಿನಾಂಕ : 08.04.2026

ಪ್ರಕಟಣೆ

ಸಾರ್ವಜನಿಕ, ರೈತರ ಮತ್ತು ಪೇಟೆಕಾರ್ಯಕರ್ತರ ಗಮನಕ್ಕೆ ತರಬಯಸುವುದೇನೆಂದರೆ, ಜೇವರ್ಗಿ ಕೃಷಿ, ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಮೀತಿಯಿಂದ ಹಂಚಿಕೆಯಾಗಿರುವ ನಿವೇಶನ ಸಂಖ್ಯೆ 85, ಮತ್ತು 47 ಹಾಗೂ ಅವುಗಳಲ್ಲಿ ನಿರ್ಮಿಸಿರುವ ಅಂಗಡಿ–ವ–ಗೋದಾಮಿನ ಮಾಲೀಕರು ಮರಣ ಹೊಂದಿರುವ ಪ್ರಯುಕ್ತ, ಅದರ ವಾರಸುದಾರ ವರ್ತಕರು ಖಾತೆ ಬದಲಾವಣೆ ಮಾಡಿ ಶುದ್ಧಕ್ರಯ ಪತ್ರ ಮಾಡಿಕೊಡಲು ಕೋರಿ ಮನವಿ ಸಲ್ಲಿಸಿರುತ್ತಾರೆ, ಪ್ರಯುಕ್ತ ಸಾರ್ವಜನಿಕರು ಕೆಳಕಾಣಿಸಿದ ನಿವೇಶನ ಮತ್ತು ಅದರಲ್ಲಿನ ಕಟ್ಟಡ ವರ್ಗಾವಣೆ ಕುರಿತು ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆಯನ್ನು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕ ದಿಂದ 07 ದಿನಗಳೊಳಗಾಗಿ ಲಿಖಿತ ಆಕ್ಷೇಪಣೆಗಳನ್ನು ಪೂರಕ ದಾಖಲಾತಿಗಳೊಂದಿಗೆ ಈ ಕಚೇರಿಗೆ ಸಲ್ಲಿಸಬಹುದಾಗಿರುತ್ತದೆ. ನಿಗದಿತ ಅವಧಿಯ ನಂತರದಲ್ಲಿ ಸಲ್ಲಿಸುವ ಆಕ್ಷೇಪಣೆಗಳು ಪರಿಗಣಿಸಲಾಗುವುದಿಲ್ಲ.

ಕ್ರ.ಸಂ.01 ನಿವೇಶನ ಮತ್ತು ಅಂಗಡಿ–ವ–ಗೋದಾಮು **ಸಂಖ್ಯೆ 85**, ಹಂಚಿಕೆಯಾದ ಪೇಟೆ ಕಾರ್ಯಕರ್ತರ ಹೆಸರು : **ಮೇ॥ ಎಂ.ಎ.ನಹಿಮ ಫಕೀರ್ ಅಹ್ಮದ** (ಮಾಲಿಕರು: ದಿವಂಗತ ಶ್ರೀ ಮೋಹಮ್ಮದ್ ಅಬ್ದುಲ್ ನಹಿಮ್ ಜೇವರ್ಗಿ) ಖಾತೆ ಬದಲಾವಣೆ ಬಯಸಿರುವ ವಾರಸುದಾರ ಪೇಟೆ ಕಾರ್ಯಕರ್ತರ ಹೆಸರು : **ಮೇ॥ ಇದ್ರಿಸ್ ಟ್ರೇಡಿಂಗ್ ಕಂಪನಿ ಜೇವರ್ಗಿ** (ಮಾಲೀಕರು, ಶ್ರೀಮತಿ ಸುಭಿಯಾ ಬೇಗಂ ಗಂಡ ದಿ.ಶ್ರೀ ಮೋಹಮ್ಮದ್ ಅಬ್ದುಲ್ ನಹಿಮ್ ಜೇವರ್ಗಿ), 2) ನಿವೇಶನ ಮತ್ತು ಅಂಗಡಿ–ವ–ಗೋದಾಮು ಸಂಖ್ಯೆ 47, ಹಂಚಿಕೆಯಾದ ಪೇಟೆ ಕಾರ್ಯಕರ್ತರ ಹೆಸರು : **ಮೇ॥ ಕುಮಾರ ಮಾರ್ಕೆಟಿಂಗ್ ಜೇವರ್ಗಿ**, (ಮಾಲಿಕರು: ದಿವಂಗತ ಶ್ರೀ ಸಿದ್ದಪ್ಪ ತಂದೆ ಹಾವಣ್ಣ ಅವರಾದ ಸಾ॥ ಹಾಲಗಡ್ಲಾ) ಖಾತೆ ಬದಲಾವಣೆ ಬಯಸಿರುವ ವಾರಸುದಾರ ಪೇಟೆ ಕಾರ್ಯಕರ್ತರ ಹೆಸರು : **ಮೇ॥ ಕುಮಾರ ಮಾರ್ಕೆಟಿಂಗ್ ಜೇವರ್ಗಿ** (ಮಾಲೀಕರು, ಶ್ರೀಮತಿ ಸರಸ್ವತಿ ಗಂಡ ಸಿದ್ದಪ್ಪ ಅವರಾದ ಸಾ॥ ಹಲಗಡ್ಲಾ).

ಸಹಿ/– ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜೇವರ್ಗಿ

ಸಹಿ/– ಆಡಳಿತಾಧಿಕಾರಿಗಳು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜೇವರ್ಗಿ

ವಾ.ಸಾ.ಸಂ.ಇ./ಕಲಬುರಗಿ/20 /ದೇಶಪಾಂಡೆ ಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ

ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ–577 204

Ph: 08182–250785 Email: cfworkingplansmg@gmail.com

ಸಂಖ್ಯೆ: ಕಾಯೋಮೋಶಿ /ಎ2/ಹೊರಗುತ್ತಿಗೆ–ಟೆಂಡರ್/ಸಿಆರ್–01/2026–27
ದಿನಾಂಕ:04.04.2026

ಇ–ಟೆಂಡರ್ ಪ್ರಕಟಣೆ

ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗರವರ ಕಛೇರಿಗೆ ಅಗತ್ಯವಿರುವ ವಿವಿಧ ವೃಂದದ ಮಾನವ ಸೇವೆಯನ್ನು ಹೊರಗುತ್ತಿಗೆ ಮೂಲಕ ಪೂರೈಕೆ ಮಾಡುವ ಬಗ್ಗೆ, 2026–27 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಈ ಕಛೇರಿಯಲ್ಲಿ ಅಥವಾ ಯಾವುದೇ ಅರಣ್ಯ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿತರಾದಂತಹ ಹಾಗೂ ನೊಂದಾಯಿತ ಸೇವಾ ಸಂಸ್ಥೆ (Outsourcing) ಮೂಲಕ ಪಡೆಯಲು ಉದ್ದೇಶಿಸಿದ್ದು, ಟೆಂಡರ್‌ನ ಅಂದಾಜು ಮೊತ್ತ ರೂ.51.56 ಲಕ್ಷ ಆಗಿದ್ದು, ಅರ್ಹ ಆಸಕ್ತರು ಈ ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ದಿನಾಂಕ:21.04.2026 ರ ಸಂಜೆ 4.30 ಗಂಟೆಯವರೆಗೆ ಟೆಂಡರ್ ನಮೂದಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182–250785 ನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–(ವೀರೇಶಗೌಡ ಪೋಲಿಸ್ ಪಾಟೀಲ್)
ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕರು, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/51/04/56

ಹೆಸರಿನಲ್ಲಿ ಬದಲಾವಣೆ

ನಾನು, ಶ್ರೀಮತಿ ಅಸ್ಮತ್ ನಾಸೀರ್ ಅಹ್ಮದ್ ಸಾಬ್, ಸಾಕಿನ: ಕೇಣಿ ರೋಡ, ತಾ: ಅಂಕೋಲಾ (ಉ.ಕ), ಆಧಾರ ಸಂಖ್ಯೆ: 8173 9288 9657, ಆಧಾರ ಕಾರ್ಡನಲ್ಲಿ, ಪಾನ್, ಕಾರ್ಡನಲ್ಲಿ, ಬ್ಯಾಂಕ್ ಪಾಸ್‌ಬುಕ್ ದಾಖಲಾತಿಗಳಲ್ಲಿ ನನ್ನ ಹೆಸರು **ಅಸ್ಮತ್ ನಾಸೀರ್ ಅಹ್ಮದ್ ಸಾಬ್** ಅಂತಾ ನಮೂದು ಇರುತದೆ. ಶಾಲಾ ವರ್ಗಾವಣೆ ಪ್ರಮಾಣಪತ್ರದಲ್ಲಿ ನನ್ನ ಹೆಸರು Y. H. ಅಸ್ಮತ್ ಅಂತ ನಮೂದು ಇರುತದೆ. ಅಸ್ಮತ್ ನಾಸೀರ್ ಅಹ್ಮದ್ ಸಾಬ್ ಮತ್ತು Y. H. ಅಸ್ಮತ್ ಇವೆರಡು ಹೆಸರುಗಳು ನನಗೆ ಸಂಬಂಧಿಸಿದ್ದು ಆಗಿರುತದೆ. ಮತ್ಯಾರಿಗೂ ಸಂಬಂಧಪಟ್ಟಿದ್ದು ಆಗಿರುವುದಿಲ್ಲ. ಈ ಕುರಿತು ನಾನು **ಶ್ರೀ. ವಾಸುದೇವ ಸುಬ್ರಾಯ ನಾಯಕ್**, ನೋಟರಿಯವರ ಸಮಕ್ಷಮದಲ್ಲಿ ದಿನಾಂಕ: 04–04–2026 ರಂದು ಪ್ರಮಾಣ ಪತ್ರ ಮಾಡಿರುತ್ತೇನೆ.

CHANGE OF NAME

I, **ROOPA NASHI D/O SANGAPPA** (Old Name) Resident of Anupama Nivasa, Mig 288, 19th Cross, KHB Colony, Muddebihal Pin - 586212, have changed my name as **LAKSHITA ANAND KOTIN** (New Name) for all purposes, vide affidavit dated: 09/04/2026 before notary **S. S. MALAGATTI** of Muddebihal.

CHANGE OF NAME

I, **MEGHA SABHAHIT** (Old Name) Resident of Pavalamakki, Post: Vandoor, Taluk: Honnavar, Dist. : Uttara Kannada, Karnataka State, Pin code: 581341, India, have changed my name as **MEGHA BHAT** (New Name) for all purposes affidavit Dtd.: 09-04-2026 sworn before notary **S. G. Hegde.**

CHANGE OF NAME

I, **NAGANAGOUDA DODDAMANI** (Old Name) Resident of Ragihalla, Kundagol, Gudgeri, Dharwad, Karnataka, Pin Code: 581107, have changed my name as **NAGANGOUDA GOUDAPPAGOUDA DODDAMANI** (New Name) henceforth I will be called and recognized by new name for all future purposes, dated: 09/04/2026.

CHANGE OF NAME

I, **PASALA RAMANA REDDY** (Old Name) Resident of H No: 31, 1st Floor 10th Cross Pragati Nagar Basapur, Bangalore Pin - 560100, have changed my name as **RAMANA REDDY** (New Name) henceforth I will be called and recognized by new name for all future purposes, dated: 09/04/2026.

CHANGE OF NAME

I, **SHOBHA KOPPAD** (Old Name) Resident of Chikkabasur Byadagi, Haveri Pin - 581120, have changed my name as **SHILPA PRAVEEN LINGADAHALLI** (New Name) henceforth I will be called and recognized by new name for all future purposes, dated: 09/04/2026.

CHANGE OF NAME

I, **SHIVANNA** (Old Name) Resident of H No: 1079/A4 Ward No: 3, Ilkal, Bagalkot Pin - 587125, have changed my name as **SHIVANNA MALLESHAPPA DHOTRE** (New Name) henceforth I will be called and recognized by new name for all future purposes, dated: 09/04/2026.

(ಕರ್ನಾಟಕ ಸರ್ಕಾರ)

ಕಾರ್ಯಪಾಲಕ ಇಂಜನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:03/2025–26 ದಿನಾಂಕ:08.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗ ಹಾಸನ ರವರು, ಅರಕಲಗೂಡು ಉಪ ವಿಭಾಗ ವ್ಯಾಪ್ತಿಯ 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮೂಲಸೌಕಾರ್ಯ ಅಭೀವೃದ್ಧಿ ಯೋಜನೆಯಡಿINDENT NO: (1)RDPR/2025-26/RD/WORK_INDENT25407 (2) RDPR/2025-26/RD/ WORK_ INDENT25410 (3)RDPR/2025-26/RD/WORK_INDENT25405 ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ–ಪ್ರೊಕ್ಯೂರ್‌ಮೆಂಟ್ ಅಡಿ KW-4 ರ ರೀತ್ಯಾ ಅಂತರ್ಜಾಲದಲ್ಲಿ ದಿ: 09.04.2026 ರಿಂದ ದಿ:24.04.2026ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:24.04.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:23.04.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಪ್ರೀ–ಬಿಡ್ ಮೀಟಿಂಗನ್ನು ದಿನಾಂಕ:16.04.2026 ಬೆಳಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು,ಪಂಚಾಯತ್ ರಾಜ್ ಇಂಜನಿಯಿರಂಗ್ ವಿಭಾಗ,ಹಾಸನ ಕಛೇರಿಯಲ್ಲಿ ನಿಗಧಿ ಪಡಿಸಲಾಗಿದೆ. ದಿ:27.04.2026 ರಂದು ಬೆಳಗೆ 11.00 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/30/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಮ್ಯಾಮಮೂಸೌಅಯೋ/ತಾಸ–I/2026–27/14 ದಿನಾಂಕ: 08.04.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW - 4
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಗಳ ಹೆಸರು ಇಂಟೆಂಡ್ ಸಂಖ್ಯೆ: (1) ಶಹಾಪೂರ ತಾಲೂಕಿನ ಕಂದಳ್ಳಿ ದಿಂದ ಭೀಮಾನದಿ ಬ್ರಿಡ್ಜ್ ವರೆಗೆ 2.00 ಕಿ.ಮೀ. RDPR/2025-26/RD/WORK_INDENT24848)2) ಸುರಪೂರ ತಾಲ್ಲೂಕಿನ ಬೇವಿನಾಳ ಮುಖ್ಯರಸ್ತೆ ಯಿಂದ ಮುಷ್ಠಳ್ಳಿ ವರೆಗೆ ರಸ್ತೆ ಸುಧಾರಣೆ (ವ್ಹಾಯಾ ರಾಮನಗರ ಕ್ಯಾಂಪ್) RDPR/2025-26/RD/WORK_INDENT24863 (3) ಹುಣಸಗಿ ತಾಲ್ಲೂಕಿನ ಕೋಳಿಹಾಳ ದಿಂದ ಸಲಗುಂದ ರಸ್ತೆ ನಿರ್ಮಾಣ RDPR/2025-26/RD/WORK_INDENT24864 **2) ಲೆಕ್ಕ ಶೀರ್ಷಿಕೆ:** 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ** :ಕನಿಷ್ಠ 120.00 ಮತ್ತು ಗರಿಷ್ಠ ರೂ. 150.00 ಲಕ್ಷ **4) ಗುತ್ತಿಗೆದಾರರ ದರ್ಜೆ:** 3ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:**10.04.2026 ರಿಂದ 21.04.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 21.04.2026 ಸಾಯಂಕಾಲ 4:00 ಗಂಟೆವರೆಗೆ 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ಡ್: 23.04.2026 ಬೆಳ್ಳಿಗೆ 11:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್:** 29.04.2026 ಬೆಳ್ಳಿಗೆ 11:00 ನಂತರ **10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸೂಚನೆ: ಟೆಂಡರರಿಗೆಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/15/ಕೆ.ಎಸ್.ಎಂ.ಸಿ&ಎ/2026–27

ಕರ್ನಾಟಕ ಸರ್ಕಾರ (ಕೃಷಿ ಇಲಾಖೆ)

ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಕುಂದಾಪುರ

E-mail: kundapurada@gmail.com

ಸಂ: ಸಕೃನಿ/ಕುಂ/ಸಿಬ್ಬಂದಿ–1/ಹೊಗುಸಿಸೇ/ಟೆಂಡರ್/2026–27 ದಿನಾಂಕ: 08.04.2026

ಟೆಂಡರ್ ಪ್ರಕಟಣೆ

2026–27 ಮತ್ತು 2027–28ನೇ ಸಾಲಿಗೆ ಅನ್ವಯಿಸುವಂತೆ ಕುಂದಾಪುರ ತಾಲೂಕು ಕೃಷಿ ಇಲಾಖೆ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆ ಪಡೆಯಲು ಅರ್ಹ ಹೊರಗುತ್ತಿಗೆ ಸಂಸ್ಥೆಗಳ ಆಯ್ಕೆಗಾಗಿ e-Procurement ಮೂಲಕ ಎರಡು ವರ್ಷಗಳ ಟೆಂಡರ್‌ನ್ನು ಆಹ್ವಾನಿಸಿದ್ದು, ಸದರಿ ಸೇವೆಯನ್ನು ಒದಗಿಸಲು ಆಸಕ್ತ ಗುತ್ತಿಗೆದಾರರು ಕರ್ನಾಟಕ ಸರ್ಕಾರದ ಇ–ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ಡಾಕ್ಯುಮೆಂಟ್‌ನ್ನು ಇ–ಪೋರ್ಟಲ್‌ನಿಂದ ಪಡೆಯಬಹುದು. ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಸಕೃನಿ/ಉ/ಸಿಬ್ಬಂದಿ/ಹೊಗುಸಿಸೇ/ಟೆಂಡರ್/2026–27 ದಿನಾಂಕ 08.04.2026.

(1) ಇ–ಟೆಂಡರ್‌ನಲ್ಲಿ ಭಾಗವಹಿಸಲು ಪ್ರಾರಂಭವಾಗುವ ದಿನಾಂಕ: **08.04.2026. ಬೆಳಿಗ್ಗೆ 10:00 ಕ್ಕೆ** (2) ಇ–ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ & ಸಮಯ: **07.05.2026 ಸಂಜೆ 04:00 ಕ್ಕೆ** (3) ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **08.05.2026 ಸಂಜೆ 04:00 ಕ್ಕೆ.** (4) ಕುಂದಾಪುರ ಸಹಾಯಕ ಕೃಷಿ ನಿರ್ದೇಶಕರು ಕಛೇರಿ ಪ್ರಕಟಣೆ ತಿಳಿಸಿದೆ.

ಸಹಿ/– ಸಹಾಯಕ ಕೃಷಿ ನಿರ್ದೇಶಕರು
ಕುಂದಾಪುರ

ವಾಸಾಇ/ಸನಿಉ/ಕೆಎಸ್‌ಎಂಸಿಎ/32/26–27 ದಿ: 09.04.2026

ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯಡಿಯೂರು ವಿಭಾಗ, 4ನೇ ಕ್ರಾಸ್, ಜಯನಗರ 7ನೇ ಬ್ಲಾಕ್, ಬೆಂಗಳೂರು–560070

ಸಂಖ್ಯೆ: ಕಾಪಾಅ(ಯಡಿ)/ಟೆಂಡರ್/01/2026–27 ದಿನಾಂಕ: 07–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಟೆಂಡರ್ ದಾಖಲೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯಡಿಯೂರು ವಿಭಾಗ, ಬೆಂ.ಪ.ನ.ಪಾಲಿಕೆ ಇವರು, ಆಯುಕ್ತರು ಬೆಂ.ಪ.ನ.ಪಾಲಿಕೆ ಬೆಂಗಳೂರು ಇವರ ಪರವಾಗಿ, ಬೆಂ.ಪ.ನ.ಪಾಲಿಕೆ ತತ್ಸಮಾನವಾಗಿ ಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಟೆಂಡರುದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಗಳು ಕೆಡಬ್ಲ್ಯೂ–3 & 4 ರಂತೆ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರುಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	ಪದ್ಮನಾಭನಗರ ಕ್ಷೇತ್ರ, ಕಾಮಾಕ್ಯ **ವಾರ್ಡ್ ಸಂಖ್ಯೆ–109**ರಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ **₹.394.16** ಲಕ್ಷಗಳು, ಇಎಂಡಿ ಮೊತ್ತ:₹. **5,91,250/–**
2.	ಪದ್ಮನಾಭನಗರ ಕ್ಷೇತ್ರ, **ವಾರ್ಡ್ ಸಂಖ್ಯೆ–110**, ಚಿಕ್ಕಲ್ಲಸಂದ್ರದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ **₹.394.15** ಲಕ್ಷಗಳು, ಇಎಂಡಿ ಮೊತ್ತ:₹. **5,91,250/–**
3.	ಪದ್ಮನಾಭನಗರ ಕ್ಷೇತ್ರ, **ವಾರ್ಡ್ ಸಂಖ್ಯೆ–111**, ಇಟ್ಟಮಡುವಿನಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ **₹. 394.32** ಲಕ್ಷಗಳು, ಇಎಂಡಿ ಮೊತ್ತ:₹. **5,91,500/–**
4.	ಪದ್ಮನಾಭನಗರ ಕ್ಷೇತ್ರ, **ವಾರ್ಡ್ ಸಂಖ್ಯೆ–112**, ಹೊಸಕೆರೆಹಳ್ಳಿಯಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಸಾಮಾನ್ಯರಿಗೆ) ಕಾಮಗಾರಿಗಿಟ್ಟ ಅಂದಾಜು ಮೊತ್ತ **₹. 394.16** ಲಕ್ಷಗಳು, ಇಎಂಡಿ ಮೊತ್ತ:₹. **5,91,250/–**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **10–04–2026**ರ ಸಂಜೆ **4:30** ಗಂಟೆಯ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **27–04–2026**ರ ಸಂಜೆ **4:00** ಗಂಟೆಯವರೆಗೆ (3) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ಮಲ್ಲೇಶ್ವರಂ ವಲಯ, ಬೆಂ.ಪ.ನ.ಪಾಲಿಕೆ, ಪಾಲಿಕೆ ಸೌಧ ಕಟ್ಟಡ, 1ನೇ ಮಹಡಿ, 14ನೇ ಅಡ್ಡರಸ್ತೆ, ಚಂದ್ರಾ ಲೇಔಟ್ ಬೆಂಗಳೂರು – 560072 ಇಲ್ಲಿ ದಿನಾಂಕ **18–04–2026**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ದಾಖಲೆಗಳನ್ನು ದಿನಾಂಕ: **28–04–2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು (5) ಆರ್ಥಿಕ ಬಿಡ್ ತೆರೆಯುವಿಕೆ ದಿನಾಂಕವನ್ನು ಕೆಪಿಪಿ ಪೋರ್ಟಲ್ ಮೂಲಕ ತಿಳಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಯಡಿಯೂರು ವಿಭಾಗ, ಬೆಂ.ಪ.ನ.ಪಾಲಿಕೆ

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

E-mail:itstaff_ulb_raichura@yahoo.com Website:-www.raichurcity.gov.in
Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಕಾ/ಅ/2025–26 ದಿನಾಂಕ:07–04–2026.

ಅಲ್ಪಾವಧಿ / ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ 2.0 ಪದ್ದತಿ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	ಮಹಾನಗರ ಪಾಲಿಕೆ ಅನುದಾನದಲ್ಲಿ	Providing and Erection of Barricading Bamboo Thatti and Ballies For Water Kiosk at Various Places In Raichur City **Estimate Cost Rs.13,80,000/- (07 Days)**	DMA/2026-27/ OW/ WORK_ INDENT57224
2		Repair and Renovation of Public Toilets and Community Toilets Within The Limits of Raichur City Corporation (PHASE-1) **Estimate Cost Rs.2,40,00,000/- (15 Days)**	DMA/2025-26/ BD/ WORK_ INDENT55726/ CALL-2
3		Providing and Fixing Membrane for Water Proofing for Corporation (OLD DC) Office Building In Raichur City. **Estimate Cost Rs. 20,50,000/- (07 Days)**	DMA/2025-26/ OW/ WORK_ INDENT55744 /CALL-2
4		Providing and Fixing of Cistern and Fixing of Gate to the Safai Karmachari Gravayard at Ward No. 12 In Raichur City **Estimate Cost Rs. 1,80,000/-**	DMA/2025-26/ OW/WORK_ INDENT56756/ CALL-2

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.

DIP/RCR/13KSMCA/15/2026-27



ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಪುರಸಭೆ ಕಾರ್ಯಾಲಯ, ಘಟಪ್ರಭಾ

ತಾ :ಗೋಕಾಕ ಜಿ : ಬೆಳಗಾವಿ
ದೂರವಾಣಿ ನಂ–08332–286076

ನಂ:ಪುಸಘ:ಲೋ.ಇ:ಎಸ್.ಎಫ್.ಸಿ:2026–27 ದಿನಾಂಕ:07–04–2026

–: ಟೆಂಡರ ಪ್ರಕಟಣೆ :–
–: ಕೆ.ಪಿ.ಪಿ. ಪೋರ್ಟಲ್ ಮುಖಾಂತರ :–

ಘಟಪ್ರಭಾ ಪುರಸಭೆ ವ್ಯಾಪ್ತಿಯಲ್ಲಿ ಸನ್ 2025–26 ನೇ ಸಾಲಿನ ಘಟಪ್ರಭಾ ಉದ್ಯಮ ನಿಧಿಯಡಿ ಜಮೆಯಾದ ಮೊತ್ತದ್ದಲ್ಲಿ ಅನುದಾನದಡಿ ಮತ್ತು 2022–23 ನೇ ಸಾಲಿನ 15ನೇ ಹಣಕಾಸು ಮತ್ತು ಎಸ್ ಬಿ ಎಮ್ 1 ಯೋಜನೆಯಡಿ ಒಟ್ಟು 3 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆ ಇಂಜಿನಿಯರಿಂಗ ವಿಭಾಗದಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಸಿವ್ಹಿಲ ಗುತ್ತಿಗೆದಾರರು ಹಾಗೂ ಪೂರೈಕೆದಾರರಿಂದ ಕೆ.ಡಬ್ಲ್ಯೂ–1,2 ಮತ್ತು ಕೆ.ಜಿ–1 ರ ಪ್ರಕಾರ ಐಟಂವಾರ ಟೆಂಡರಗಳನ್ನು ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ನಿಗಧಿಪಡಿಸಿದ ಟೆಂಡರ ದಾಖಲಾತಿಯನ್ನು ಕೆ.ಪಿ.ಪಿ.ಪೋರ್ಟಲ್‌ನಿಂದ ನಿಗಧಿತ ಶುಲ್ಕ ಪಾವತಿಯೊಂದಿಗೆ ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು ಇ.ಎಂ.ಡಿ ಮೊತ್ತದೊಂದಿಗೆ ಭರ್ತಿ ಮಾಡಿದ ಟೆಂಡರುಗಳನ್ನು ದಿ:21–04–2026 ರ ಸಾಯಂಕಾಲ 5–30 ಘಂಟೆಯೊಳಗಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು, ಟೆಂಡರ ತೆರೆಯುವ,ದಿ: 23–04–2026 ರಂದು ಮುಂಜಾನೆ 11 ಘಂಟೆಗೆ ತೆರೆಯಲಾಗುವುದು. ಕಾಮಗಾರಿಗಳ ಟೆಂಡರ್ ಪಡೆಯಲು ಬೇಕಾದ ಅರ್ಹತೆ ಹಾಗೂ ಇತರೆ ಷರತ್ತುಗಳನ್ನು ಟೆಂಡರ್ ಫಾರಂಗಳಲ್ಲಿ ವಿವರವಾಗಿ ನಮೂದಿಸಲಾಗಿದೆ, ವಿವರವಾದ ಟೆಂಡರ ಪ್ರಕಟಣೆಯನ್ನು ಗುತ್ತಿಗೆದಾರರು ಹಾಗೂ ಪೂರೈಕೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಹಾಗೂ ಕಛೇರಿ ದೂರವಾಣಿ ನಂ–08332–286076 ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ ಕಾಮಗಾರಿ ವಿವರ ಹಾಗೂ ಶರತ್ತುಗಳು www.KPPP.Karnataka.gov.in,ಅಥವಾ ಈ ಕಛೇರಿ website: www.ghataprabhatown.mrc.gov.in ಇದರಲ್ಲಿ ಪಡೆಯಬಹುದು.

ಸಹಿ/–ಮುಖ್ಯಾಧಿಕಾರಿ
ಪುರಸಭೆ ಘಟಪ್ರಭಾ

ಸಹಿ/–ಆಡಳಿತಾಧಿಕಾರಿ
ಪುರಸಭೆ ಘಟಪ್ರಭಾ

DIPR/BGM/RO-NO-63/KSMCA/2026-27

ಕಿರುಸುದ್ದಿ



ಟಿಟಿ: ಅಗ್ರ ಮಿಯೊ ಸೋಲಿಸಿದ ಬಾತ್ರಾ

ಹೊಸದಿಲ್ಲಿ: ಅಗ್ರ ಶ್ರೇಯಾಂಕದ ಮಿಯೊ ಕಿಹರಾ ಅವರನ್ನು ಸೋಲಿಸಿರುವ ಭಾರತದ ಅನುಭವಿ ಟೇಬಲ್ ಟೆನಿಸ್ ಆಟಗಾರ್ತಿ ಮಣಿಕಾ ಬಾತ್ರಾ ಚೀನಾದ ತೈಯು ಯಾನ್‌ನಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಕಂಟೆಂಡರ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿದರು. ಮೊದಲನೇ ಸುತ್ತಿನ ಪಂದ್ಯದಲ್ಲಿ ಕಠಿಣ ಪೈಪೋಟಿ ಎದುರಿಸಿದ್ದ ಅವರು, ವಿಶ್ವದ ನಂಬರ್ 25ನೇ ಶ್ರೇಯಾಂಕದ ಆಟಗಾರ್ತಿಯನ್ನು 3-2ರಿಂದ ಸೋಲಿಸಿದರು. ರೋಚಕ ಹಣಾಹಣಿ ಕೊನೆಯ ಸೆಟ್‌ವರೆಗೂ ಹೋಯಿತು. ಮೊದಲನೇ ಸೆಟ್‌ನಲ್ಲಿ ವಿಶ್ವಾಸದೊಂದಿಗೆ ಕಣಕ್ಕಿಳಿದ ಭಾರತೀಯ ಆಟಗಾರ್ತಿ 11-8ರಿಂದ ಸೋಲಿಸಿದರು. ಕಂಬ್ಯಾಕ್ ಮಾಡಿದ ಮಿಯೊ 12-10ರಿಂದ ಎರಡನೇ ಸೆಟ್ ಅನ್ನು ಗೆದ್ದರು. ಮೂರನೇ ಸೆಟ್‌ನಲ್ಲಿ ಪ್ರಬಲ ಸ್ಪರ್ಧೆ ಮಾಡಿದ ಇಬ್ಬರೂ ಪಂದ್ಯದ ಗೆಲುವಿಗಾಗಿ ಹೋರಾಡಿದರು. ಟೈಬ್ರೇಕರ್‌ನಲ್ಲಿ 49ನೇ ಶ್ರೇಯಾಂಕದ ಬಾತ್ರಾ 14-12ರಿಂದ ಗೆಲುವು ಸಾಧಿಸಿ ಮತ್ತೊಮ್ಮೆ ಮುನ್ನಡೆ ಪಡೆದರು. ನಾಲ್ಕನೇ ಸೆಟ್‌ನಲ್ಲಿ ಎದುರಾಳಿ ಗೆಲ್ಲುತ್ತಿದ್ದಂತೆ ಪಂದ್ಯ ನಿರ್ಣಾಯಕ ಹಂತಕ್ಕೆ ಹೋಯಿತು. ಅಲ್ಲಿ ಮೊದಲಿನಿಂದಲೂ ಕರಾರುವಾಕ್ ಪ್ರದರ್ಶನ ನೀಡಿದ ಬಾತ್ರಾ, 11-9ರಿಂದ ಗೆದ್ದು ಬೀಗಿದರು.

ಶುಭಮನ್ ಗಿಲ್‌ಗೆ 12 ಲಕ್ಷ ರೂ. ದಂಡ

ಹೊಸದಿಲ್ಲಿ: ಗುಜರಾತ್ ಟೈಟಾನ್ಸ್ ತಂಡದ ನಾಯಕ ಶುಭಮನ್ ಗಿಲ್ ಅವರಿಗೆ ನಿಧಾನಗತಿ ಓವರ್ ಮಾಡಿಸಿರುವ ನಿಟ್ಟಿನಲ್ಲಿ 12 ರೂ. ದಂಡ ವಿಧಿಸಲಾಗಿದೆ. ದಿಲ್ಲಿ ಹಾಗೂ ಗುಜರಾತ್ ನಡುವಿನ ಪಂದ್ಯವನ್ನು ಗೆದ್ದಿರುವ ಶುಭಮನ್ ಗಿಲ್ ಪಡೆ ನಿಧಾನವಾಗಿ ಆಡಿದೆ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ. ಈ ಹಿಂದೆ ಶ್ರೇಯಸ್ ಅಯ್ಯರ್ ಅವರಿಗೂ ಎರಡು ಬಾರಿ ದಂಡವನ್ನು ವಿಧಿಸಲಾಗಿತ್ತು. ನಿಗದಿತ ಸಮಯದಲ್ಲಿ 20 ಓವರ್‌ಗಳು ಮುಕ್ತಾಯಗೊಳ್ಳದಿದ್ದರೆ ಅದು ಐಪಿಎಲ್ ಮಾನದಂಡದ ವಿಧೀ 2.2ರ ಅಡಿಯಲ್ಲಿ ತಪ್ಪೆಂದು ಬಣ್ಣಿಸಲಾಗುತ್ತದೆ. ಪರಿಣಾಮ ಶುಭಮನ್ ಗಿಲ್ ಅವರಿಗೆ 12 ಲಕ್ಷ ರೂ. ದಂಡ ವಿಧಿಸಲಾಗಿದೆ. ಎರಡನೇ ತಪ್ಪಿಗೆ 24 ಲಕ್ಷ ರೂ. ದಂಡ ವಿಧೀಸಲಾಗುತ್ತದೆ.

ಇಂಡಿಯನ್ ಅಥ್ಲೆಟಿಕ್ಸ್‌ನಲ್ಲಿ ಹೆಚ್ಚಿದ ಪೈಪೋಟಿ

ಹೊಸದಿಲ್ಲಿ: ದಿಲ್ಲಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿರುವ ಇಂಡಿಯನ್ ಅಥ್ಲೆಟಿಕ್ಸ್ ಸರಣಿ 3ರಲ್ಲಿ ಶನಿವಾರ ತಾರೆಗಳ ಪೈಪೋಟಿ ಕಣ್ತುಂಬಿಕೊಳ್ಳಲಿದೆ. ಇತ್ತೀಚೆಗೆ ಅಳವಡಿಸಿದ ಹೊಸ ಮೋಂಡೋ ಟ್ರ್ಯಾಕ್‌ನಲ್ಲಿ ಪ್ರದರ್ಶನ ನೀಡುವ ಉತ್ಸಾಹ ಕ್ರೀಡಾಪಟುಗಳಲ್ಲಿ ಹೆಚ್ಚಾಗಿದೆ. ರಾಷ್ಟ್ರೀಯ ದಾಖಲೆಧಾರಿಗಳಾದ ಅನಿಮೇಶ್ ಕುಜೂರ್ (ಪುರುಷರ 100 ಮೀ ಮತ್ತು 200 ಮೀ), ವಿಶಾಲ್ ಟಿ ಕೆ (ಪುರುಷರ 400 ಮೀ), ತಜಿಂದರ್ ಪಾಲ್ ಸಿಂಗ್ ತೂರ್ (ಶಾಟ್ ಪುಟ್) ಮತ್ತು ಹಿಮಾ ದಾಸ್ (ಮಹಿಳೆಯರ 400 ಮೀ) ಸೇರಿದಂತೆ ಹಲವು ಪ್ರಮುಖರು ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಜಾವೆಲಿನ್ ತೂರಾಟಗಾರ ಸಚಿನ್ ಯಾದವ್ ಕೂಡ ಕಣಕ್ಕಿಳಿಯಲಿದ್ದಾರೆ. ಅವರು 2025ರ ಟೋಕಿಯೋ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು. ಈ ಕ್ರೀಡಾಪಟುಗಳ ಹೆಸರುಗಳು ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾ ಪ್ರಕಟಿಸಿದ ಪ್ರವೇಶ ಪಟ್ಟಿಯಲ್ಲಿ ಕಾಣಿಸಿಕೊಂಡಿದ್ದು, ಅಂತಿಮ ಪಟ್ಟಿಯನ್ನು ಶುಕ್ರವಾರ ಪ್ರಕಟಿಸಲಾಗುತ್ತದೆ.

ಟಿ20 ಪಂದ್ಯದಲ್ಲಿ 9 ವಿಕೆಟ್ ಕಿತ್ತ ಬ್ರೆಜಿಲ್‌ನ ಲಾರಾ

ಹೊಸದಿಲ್ಲಿ: ಬ್ರೆಜಿಲಿಯನ್ ವೇಗಿ ಲಾರಾ ಕಾರ್ಡೋಸೊ ಗುರುವಾರ ಟಿ20ಐ ಇನ್ನಿಂಗ್ಸ್‌ನಲ್ಲಿ ಒಂಬತ್ತು ವಿಕೆಟ್‌ಗಳನ್ನು ಪಡೆದ ಮೊದಲ ಕ್ರಿಕೆಟ್ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗುವ ಮೂಲಕ ಇತಿಹಾಸ ಬರೆದರು.21 ವರ್ಷದ ಆಲ್‌ರೌಂಡರ್ ಗ್ಯಾಬೊರೋನ್‌ನ ಬೋಟ್ಸ್ವಾನಾ ಕ್ರಿಕೆಟ್ ಅಸೋಸಿಯೇಷನ್ ಓವಲ್ 2 ರಲ್ಲಿ ಲೆಸೊಥೊದ ಬ್ಯಾಟಿಂಗ್ ಲೈನ್‌ಅಪ್ ಅನ್ನು ಛಿದ್ರಗೊಳಿಸಿದರು, ಎರಡು ಮೇಡನ್ ಓವರ್‌ಗಳು ಸೇರಿದಂತೆ 9/4 (3) ರ ಅದ್ಭುತ ಸ್ಪೆಲ್ ಮಾಡಿದರು. ಇದು 2024 ರಲ್ಲಿ ಮಂಗೋಲಿಯಾ ವಿರುದ್ಧದ ಮಹಿಳಾ ಪಂದ್ಯದಲ್ಲಿ ರೋಹ್ಮಾಲಿಯಾ (ಇಂಡೋನೇಷ್ಯಾ) ಅವರ ಯಾವುದೇ ರನ್‌ಗಳಿಗೆ ಏಳು ವಿಕೆಟ್‌ಗಳ ಸ್ಪೆಲ್ ಮತ್ತು 2025 ರಲ್ಲಿ ಪುರುಷರ ಪಂದ್ಯದಲ್ಲಿ ಸೋನಮ್ ಯೆಶೆ (ಭೂತಾನ್) ಅವರ 8/7 ಸ್ಪೆಲ್‌ಗಿಂತ ಉತ್ತಮವಾಗಿದೆ.

ಲಖನೌ ತಂಡಕ್ಕೆ ಸ್ಪರ್ಧಾತ್ಮಕ ಗುರಿ | ಮಿಂಚಿದ ಪೋವೆಲ್

ಕೆಕೆಆರ್‌ಗೆ ರಹಾನೆ, ರಘುವಂಶಿ ಆಸರೆ



ಕೋಲ್ಕತ್ತಾ: ಅಜಿಂಕ್ಯಾ ರಹಾನೆ, ರಘುವಂಶಿ ಹಾಗೂ ರೋಮನ್ ಪೋವೆಲ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಉತ್ತಮ ಸ್ಕೋರ್ ನಿರ್ಮಿಸಿರುವ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಲಖನೌ ಸೂಪರ್ ಜೇಂಟ್ಸ್ ವಿರುದ್ಧ ಸ್ಪರ್ಧಾತ್ಮಕ ಸ್ಕೋರ್ ಕಲೆ ಹಾಕಿದೆ.

ಶಮಿ ಎಂದಿನಂತೆ ಮೊದಲಿಗೆ ವಿಕೆಟ್ ಪಡೆದು ಪೆಟ್ಟು ನೀಡಿದರೂ, ಮೂರನೇ ಕ್ರಮಾಂಕದಲ್ಲಿ ಬಂದ ರಘುವಂಶಿ ಮತ್ತೊಮ್ಮೆ ಮಿಂಚಿದರು. ಮಧ್ಯಮ ಓವರ್‌ಗಳಲ್ಲಿ ಕೆಕೆಆರ್‌ಗೆ ಮತ್ತೊಮ್ಮೆ ಆಘಾತವಾಯಿತು. ಅಂತಿಮದಲ್ಲಿ ಕೆಕೆಆರ್ ಮತ್ತೊಮ್ಮೆ ಉತ್ತಮ ಪ್ರದರ್ಶನ ನೀಡಿತು. ಇದರೊಂದಿಗೆ ಮೊದಲು ಬ್ಯಾಟಿಂಗ್ ಮಾಡಿರುವ ಕೆಕೆಆರ್ 20 ಓವರ್‌ಗಳಲ್ಲಿ 181 ರನ್ ಗಳಿಸಿದೆ. ಲಖನೌ ಸೂಪರ್ ಜೇಂಟ್ಸ್ 4 ವಿಕೆಟ್ ಪಡೆದಿದೆ.

ಮೊದಲನೇ ಆರು ಓವರ್‌ಗಳಲ್ಲಿ 56, ನಂತರದ 9 ಓವರ್‌ಗಳಲ್ಲಿ 59 ಮತ್ತು ಕೊನೆಯ 4 ಓವರ್‌ಗಳಲ್ಲಿ 66 ರನ್‌ಗಳು ಮೂಡಿಬಂದವು, ಮಧ್ಯಮ ಕ್ರಮಾಂಕ ಕುಸಿತ ಕಂಡರೂ ಪೋವೆಲ್ ಉತ್ತಮ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು. ಇತ್ತ ಲಖನೌ ಪರ ಮತ್ತೊಮ್ಮೆ ಶಮಿ ಮಿಂಚಿದರು.

ಆರಂಭಿಕ ಆಘಾತ: ಟಾಸ್ ಸೋಲಿನಿಂದಿಗೆ ಬ್ಯಾಟಿಂಗ್‌ಗಿಳಿದ ಕೋಲ್ಕತ್ತಾ ನೈಟ್ ರೈಡರ್ಸ್ ಎರಡನೇ ಓವರ್‌ನಲ್ಲೇ ಅಲೆನ್ ವಿಕೆಟ್ ಕಳೆದುಕೊಂಡಿತು. ಮೂರನೇ ಕ್ರಮಾಂದಲ್ಲಿ ಬಂದ ರಘುವಂಶಿ ಮತ್ತು ರಹಾನೆ ಕೊಂಚ ಹೊತ್ತು ಆಸರೆಯಾದರು. ನಾನ್‌ಸ್ಟ್ರೈಕ್‌ನಲ್ಲಿ ಉಳಿದಿದ್ದ ರಹಾನೆ ಬಾನೆತ್ತರದ ಸಿಕ್ಸರ್ ಬಾರಿಸಲು ಶುರು ಮಾಡಿದರು. ಇತ್ತ ಅಂಗ್ರಿಶ್ ತಮ್ಮ ಸ್ವಾಭಾವಿಕ ಆಟದಂತೆ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. ಈ ಜೋಡಿ ಬರೋಬ್ಬರಿ 84 ರನ್ ಗಳಿಸಿತು. ರಹಾನೆ 41 ರನ್‌ಗಳಿಸಿ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗುತ್ತಿರುವಾಗ ದಿಗ್ವೇಶ್‌ಗೆ ಕ್ಯಾಚ್ ಆದರು. ರಘುವಂಶಿ ಕೂಡ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಒಂದೆರಡು ಬೌಂಡರಿ ಬಾರಿಸಿದ ನಂತರ 33 ಎಸೆತಗಳಲ್ಲಿ 45 ರನ್‌ಗಳಿಸಿದ ನಂತರ ಸಿದ್ಧಾರ್ಥ್‌ಗೆ ಕ್ಯಾಚ್ ಆದರು. ಕ್ಯಾಮರನ್ ಗ್ರೀನ್ ಹಾಗೂ ರಿಂಕು ಸಿಂಗ್ ಮಧ್ಯಮ ಓವರ್‌ಗಳಲ್ಲಿ ರನ್‌ರೇಟ್ ಇಳಿಸಿದರು.

ಪೋವೆಲ್-ಗ್ರೀನ್ ಜೊತೆಯಾಟ

ಒತ್ತಡ ಹೇರಿದ ಲಖನೌ ಸೂಪರ್ ಜೇಂಟ್ಸ್ 11ರಿಂದ 14ನೇ ಓವರ್‌ಗಳವರೆಗೂ ಒಂದು ಬೌಂಡರಿ ಕೂಡ ಬಿಟ್ಟುಕೊಡಲಿಲ್ಲ. ಕೇವಲ 11 ರನ್ ಬಿಟ್ಟು ಕೊಟ್ಟು ಪ್ರಮುಖ 3 ವಿಕೆಟ್ ಕೂಡ ಪಡೆಯಿತು. ಶಮಿ ಎಂದಿನಂತೆ ಮತ್ತೊಮ್ಮೆ ಎಕನಾಮಿಕ್ ಬೌಲಿಂಗ್ ಮಾಡಿ ಮಿಂಚಿದರು. ರಿಂಕು ಸಿಂಗ್ 4 ರನ್ ಮಾತ್ರಕ್ಕೆ ವಿಕೆಟ್ ಒಪ್ಪಿಸಿದರು. ಮುಂದೆ ಬಂದ ಪೋವೆಲ್ ಅಲ್ಪ ಹೊಡೆದಾಟ ಆರಂಭಿಸಿದರು. ಸ್ಫೋಟಕ ಸಿಕ್ಸರ್‌ಗಳೊಂದಿಗೆ ಭರ್ಜರಿ ಬೌಂಡರಿಗಳನ್ನು ಬಾರಿಸಿದ ಅವರು, 24 ಬಾಲ್‌ಗಳಲ್ಲಿ ಔಟಾಗದೆ 39 ರನ್‌ಗಳಿಸಿದರು. ಗ್ರೀನ್ 24 ಬಾಲ್‌ಗಳಲ್ಲಿ 32 ರನ್ ಗಳಿಸಿದರು. ಗ್ರೀನ್ ಹಾಗೂ ಪೋವೆಲ್ ಕೊನೆಯಲ್ಲಿ 70 ರನ್‌ಗಳ ಜೊತೆಯಾಟ ನಿರ್ಮಿಸಿದರು.

ಕನ್ನಡಿಗ ಆಯುಷ್ ಕ್ವಾರ್ಟರ್‌ಫೈನಲ್‌ಗೆ

ನಿಂಗ್ಬೋ(ಚೀನಾ): ಬುಧವಾರದಂದು ವಿಶ್ವದ ಏಳನೇ ಶ್ರೇಯಾಂಕಿತ ಫೆಂಗ್ ಅವರನ್ನು ಸೋಲಿಸಿದ್ದ ಕನ್ನಡಿಗ, ಭಾರತದ ಭರವಸೆಯ ಶಟ್ಲರ್ ಆಯುಷ್ ಶೆಟ್ಟಿ ಗುರುವಾರ ನಡೆದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ತೈವಾನ್‌ನ ವೈ. ಆ ಅವರೊಂದಿಗೆ ಗೆದ್ದು ಕ್ವಾರ್ಟರ್‌ಫೈನಲ್‌ಗೆ ಲಗ್ಗೆ ಹಾಕಿದರು. ಮತ್ತೋರ್ವ ಭಾರತೀಯ ಪ್ರಣೋಯ್ ಸೋತು ಹೊರಬಿದ್ದ ನಂತರ ಪ್ರತಿಷ್ಠಿತ ಏಷ್ಯನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಆಯುಷ್ ಮಾತ್ರ ಉಳಿದ ಸಿಂಗಲ್ ಆಟಗಾರ ಅನಿಸಿಕೊಂಡರು. ಚಿ ಅವರನ್ನು ಎದುರಿಸಿದ್ದ ಆಯುಷ್ ಪಂದ್ಯದುದ್ದಕ್ಕೂ ಆಕ್ರಮಣಕಾರಿ ಪ್ರದರ್ಶನ ನೀಡಿ ನೇರ ಸೆಟ್ ಗೆಲುವು ಸಾಧಿಸಿದರು. ಆರಂಭದಲ್ಲಿ ಶುರುವಾದ ಅವರ ಗೆಲುವಿನಾಟ ಕೊನೆಯವರೆಗೂ ನಿಲ್ಲಲಿಲ್ಲ, ಇತ್ತ ಎದುರಾಳಿ ಪೈಪೋಟಿಗೂ ಅವಕಾಶ ಸಿಗಲಿಲ್ಲ.

ಮೊದಲನೇ ಸೆಟ್‌ನಲ್ಲಿ ಸರ್ವ್‌ಗಳ ಮೂಲಕ ಮುನ್ನಡೆ ಸಾಧಿಸಿದ ಶೆಟ್ಟಿ, 6 ಅಂಕಗಳ ಆರಂಭಿಕ ಮುನ್ನಡೆ ಪಡೆದರು. ಅದೇ ಆಟವನ್ನು ಮುಂದುವರಿಸುತ್ತಾ ಮುನ್ನಡೆಯನ್ನು ಹಿಗ್ಗಿಸಿದರು. ಎದುರಾಳಿ 16 ಅಂಕ ಗಳಿಸುವಷ್ಟರಲ್ಲಿ ಶೆಟ್ಟಿ ಸೆಟ್ ಅನ್ನು ಗೆದ್ದುಕೊಂಡರು. ಇನ್ನು ಮುನ್ನಡೆಯೊಂದಿಗೆ ಎರಡನೇ ಸೆಟ್‌ಗೆ ಲಗ್ಗೆ ಹಾಕಿದ ಅವರು, ಅದರಲ್ಲೂ ಆರಂಭಿಕ ಮುನ್ನಡೆ ಗಳಿಸಿದರು. ಈ ಬಾರಿ ಮೊದಲಿನಿಗಿಂತಲೂ ಹಿಡಿತ. ಸರ್ವ್‌ನೊಂದಿಗೆ ವಿಶ್ವಾಸಭರಿತ ಸ್ಮ್ಯಾಷ್‌ಗಳನ್ನೂ ಬಾರಿಸಿದ ಅವರು, 21-12ರಿಂದ ಗೆದ್ದರು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅವರು ಇಂಡೋನೇಷ್ಯಾದ ಜೋನಾಥನ್ ಕ್ರಿಸ್ತಿ ಅವರನ್ನು ಎದುರಿಸಲಿದ್ದಾರೆ.



ಪ್ರಣೋಯ್‌ಗೆ ಸೋಲು

ಬುಧವಾರದ ಪಂದ್ಯದಲ್ಲಿ ತಮ್ಮ ಅತ್ಯುತ್ತಮ ಪ್ರದರ್ಶನದೊಂದಿಗೆ ಗೆದ್ದು 16ರ ಸುತ್ತಿಗೆ ಲಗ್ಗೆ ಹಾಕಿದ್ದ ಪ್ರಣೋಯ್ ಚೀನಾದ ಎಚ್. ವೈ. ವೆಂಗ್ ಅವರೊಂದಿಗೆ ನೇರ ಸೆಟ್ ಪಂದ್ಯದಲ್ಲಿ ಸೋತರು. ವಿಶ್ವಾಸದೊಂದಿಗೆ ಕಣಕ್ಕಿಳಿದ ಅವರು ನಿರೀಕ್ಷಿತ ಪ್ರದರ್ಶನ ನೀಡಲಿಲ್ಲ. ಆರಂಭಿಕ ಸುತ್ತಿನಲ್ಲಿ ವೆಂಗ್ ಮುನ್ನಡೆ ಸಾಧಿಸಿದರು. ಅಲ್ಲಿ 21-12ರಿಂದ ಗೆದ್ದ ಅವರು ಎರಡನೇ ಸೆಟ್‌ನಲ್ಲೂ ಅದೇ ಪ್ರದರ್ಶನದೊಂದಿಗೆ ಮಿಂಚಿದರು. ಅಲ್ಲಿ 21-19ರಿಂದ ಗೆದ್ದರು.

ಮಹಿಳೆಯರ ಅಭಿಯಾನ ಅಂತ್ಯ

ಶಟ್ಲರ್‌ಗಳಾದ ಪಿ.ವಿ ಸಿಂಧು ಹಾಗೂ ಉನ್ನತಿ ಹೂಡಾ ಅವರು 16ರ ಸುತ್ತಿನ ಪಂದ್ಯದಲ್ಲಿ ಸೋತು ಹೊರಬಿದ್ದ ನಂತರ ಪಂದ್ಯಾವಳಿಯಲ್ಲಿ ಭಾರತೀಯ ಮಹಿಳೆಯರ ಅಭಿಯಾನ ಅಂತ್ಯವಾಯಿತು. ಚೀನಾದ ವಾಂಗ್ ಅವರನ್ನು ಎದುರಿಸಿದ್ದ ಭಾರತದ ಹಿರಿಯ ಆಟಗಾರ್ತಿ ಪಿ.ವಿ ಸಿಂಧು ಎರಡು ಸೆಟ್‌ಗಳ ಪಂದ್ಯದಲ್ಲಿ ಭಾರೀ ಸೋಲನುಭವಿಸಿದರು. ಮೊದಲಿನಿಂದಲೂ ಎದುರಾಳಿ ಮೇಲುಗೈ ಸಾಧಿಸಿದರು. ಮೊದಲನೇ ಸೆಟ್ ಅನ್ನು 21-18ರಿಂದ ಗೆದ್ದರೆ ಎರಡನೇ ಸೆಟ್ ಅನ್ನು 21-8ರಿಂದ ಗೆದ್ದು ಕ್ವಾರ್ಟರ್‌ಫೈನಲ್‌ಗೇರಿದರು. ಇನ್ನು ಮಿಶ್ರ ಡಬಲ್ಸ್‌ನಲ್ಲಿ ಕಪಿಲಾ ಹಾಗೂ ಕ್ರಾಸ್ಟೋ ಚೆನ್-ತೂ ಅವರೊಂದಿಗೆ ಸೋತು ಅಭಿಯಾನ ಮುಗಿಸಿದರು. ಕ್ವಾರ್ಟರ್‌ಫೈನಲ್ ಪಂದ್ಯಗಳು ಶುಕ್ರವಾರದಂದು ನಡೆಯಲಿವೆ.

ಆರ್‌ಸಿಬಿಗೆ ಹ್ಯಾಟ್ರಿಕ್ ಜಯದ ವಿಶ್ವಾಸ





ಗುವಾಹಟಿ: ಸತತ ಎರಡು ಗೆಲುವು ಸಾಧಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಇಲ್ಲಿ ನಡೆಯಲಿರುವ 16ನೇ ಪಂದ್ಯದಲ್ಲಿ ರಾಜಸ್ಥಾನ ತಂಡವನ್ನು ಎದುರಿಸಲಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಗೆಲುವುಗಳೊಂದಿಗೆ ಮೇಲಿರುವ ಉಭಯ ತಂಡಗಳು ಎದುರಾಗುತ್ತಿವೆ. ಸಾಂಘಿಕ ಬ್ಯಾಟಿಂಗ್ ಮತ್ತು ಡಫಿ ಸೇರಿದಂತೆ ವಿವಿಧ ಆಟಗಾರರ ಬೌಲಿಂಗ್‌ನೊಂದಿಗೆ ಆರ್‌ಸಿಬಿ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ. ಇತ್ತ ವೈಭವ್ ಸೂರ್ಯವಂಶಿ ಹಾಗೂ ಯಶಸ್ವಿ ಜೈಸ್ವಾಲ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಜೋಫ್ರಾ ಆರ್ಚರ್ ಅವರ ಬೌಲಿಂಗ್‌ನೊಂದಿಗೆ ರಾಜಸ್ಥಾನ ಸೋಲಿಲ್ಲದ ತಂಡವಾಗಿದೆ. ಮೊದಲನೇ ಪಂದ್ಯದಲ್ಲಿ ಹೈದರಾಬಾದ್, ನಂತರ ಚೆನ್ನೈ ತಂಡವನ್ನು ಆರ್‌ಸಿಬಿ ಸೋಲಿಸಿದ್ದರೆ, ಇತ್ತ ರಾಜಸ್ಥಾನ ಮುಂಬೈ, ಚೆನ್ನೈ ಹಾಗೂ ಗುಜರಾತ್ ತಂಡಗಳನ್ನು ಸೋಲಿಸಿ ಅಗ್ರಸ್ಥಾನದಲ್ಲಿದೆ. ಪಂದ್ಯ ಗುವಾಹಟಿಯಲ್ಲಿ ನಡೆಯಲಿದೆ.

ಆರ್‌ಸಿಬಿಗೆ ಆತ್ಮವಿಶ್ವಾಸ: ಹಾಲಿ ಚಾಂಪಿಯನ್ ತಂಡಕ್ಕೆ ಸೋಲೇ ಇಲ್ಲ, ಮೊದಲನೇ ಪಂದ್ಯದಿಂದಲೂ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಶಿಸ್ತಿನ ಬೌಲಿಂಗ್ ದಾಳಿ ಸೇರಿಕೊಂಡ ನಂತರ ಎರಡೂ ಪಂದ್ಯಗಳಲ್ಲಿ ಭರ್ಜರಿ ಗೆಲುವು ಸಾಧಿಸಿದೆ. ಸಮತೋಲಿತ ಪ್ರದರ್ಶನ ತಂಡದ ಶಕ್ತಿಯಾಗಿದೆ. ಬ್ಯಾಟರ್‌ಗಳು ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಸಾಲ್ಟ್, ಕೊಹ್ಲಿ, ಪಾಟಿದಾರ್, ಪಡಿಕ್ಕಲ್ ಎಲ್ಲರೂ ಅದ್ಭುತ ಲಯದಲ್ಲಿದ್ದಾರೆ. ಟೀಮ್ ಡೇವಿಡ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದ್ದಾರೆ. ಇನ್ನು ಬೌಲಿಂಗ್‌ನಲ್ಲಿ ಡಫಿ, ಕೃಣಾಲ್, ಸಾಯುಷ್ ಲಯದಲ್ಲಿದ್ದು, ಅಭಿನಂದನ್ ದುಬಾರಿಯಾಗಿದ್ದಾರೆ. ಮೂರನೇ ಗೆಲುವಿನ ನಿರೀಕ್ಷೆಯಲ್ಲಿರು ಆರ್‌ಸಿಬಿಗೆ ಶೆಫರ್ಡ್ ಬಲ ಕೂಡ ಇರಲಿದೆ.

ರಾಜಸ್ಥಾನಕ್ಕೆ ಬ್ಯಾಟಿಂಗ್ ಬಲ: ಇನ್ನು ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಭರ್ಜರಿ ಬ್ಯಾಟಿಂಗ್ ಪಡೆ ಇದೆ. ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅಬ್ಬರದ ಬ್ಯಾಟಿಂಗ್ ಮಾಡಿದ್ದಾರೆ. ಕಳೆದ ಪಂದ್ಯದಲ್ಲಿ ಜೈಸ್ವಾಲ್ ಆಡಿರುವ ರೀತಿ ತಂಡದ ವಿಶ್ವಾಸವನ್ನೇ ಹೆಚ್ಚಿಸಿದೆ. ಇನ್ನು ಮಧ್ಯಮ ಕ್ರಮಾಂಕದಲ್ಲಿ ಜುರೇಲ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿ ಮಿಂಚಿದ್ದಾರೆ. ಬೌಲಿಂಗ್‌ನಲ್ಲಿ ಆರ್ಚರ್, ಬಿಷ್ಣೋಯ್ ಹಾಗೂ ದೇಶಪಾಂಡೆ ವಿಶ್ವಾಸ ಹೆಚ್ಚಿಸಿದ್ದಾರೆ.

ಪಿಚ್: ಗುವಾಹಟಿ ಪಿಚ್ ಸ್ಫೋಟಕ ಬ್ಯಾಟಿಂಗ್‌ಗೆ ಅವಕಾಶ ಮಾಡಿಕೊಡಲಿದೆ. ಅಲ್ಲಿ ನಡೆದಿರುವ ಐಪಿಎಲ್ ಪಂದ್ಯಗಳಲ್ಲಿ ಬ್ಯಾಟರ್‌ಗಳೇ ಉತ್ತಮ ಪ್ರದರ್ಶನ ನೀಡಿದ್ದಾರೆ. ಬೌಲಿಂಗ್‌ನಲ್ಲಿ ಸ್ಪಿನ್ನರ್‌ಗಳು ಹೆಚ್ಚಿನ ಲಾಭ ಪಡೆದಿದ್ದಾರೆ. ಕಳೆದ ಪಂದ್ಯಕ್ಕೆ ಮಳೆ ಅಡ್ಡಿಯಾಗಿತ್ತು. ಮೊದಲು ಬೌಲಿಂಗ್ ಮಾಡುವ ತಂಡ ಲಾಭ ಪಡೆಯಲಿದೆ.

ಮುಖಾಮುಖಿ
- ಪಂದ್ಯ: 34
- ಆರ್‌ಸಿಬಿ: 17
- ರಾಜಸ್ಥಾನ: 14
- ಫಲಿತಾಂಶ ರಹಿತ: 3

ಅಗ್ರಸ್ಥಾನಕ್ಕೇರಿದ ವೈಶಾಲಿ

ಹೊಸದಿಲ್ಲಿ: ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಒಂಬತ್ತನೇ ಸುತ್ತಿನ ನಂತರ ಭಾರತದ ಆರ್. ವೈಶಾಲಿ ಗೆಲುವು ಸಾಧಿಸಿ ಸಂಯುಕ್ತ ಅಗ್ರಸ್ಥಾನಕ್ಕೆ ಏರಿದರು. ಸ್ವದೇಶದ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಅವರನ್ನು ಎದುರಿಸಿದ್ದ ಅವರು, ಚೀನಾದ ಝು ಜಿನರ್ ಜೊತೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ವೈಶಾಲಿ ಪಂದ್ಯದಲ್ಲಿ ದಿವ್ಯಾ ಮಾಡಿದ ಮಧ್ಯಭಾಗದ ತಪ್ಪನ್ನು ಚಾತುರ್ಯದಿಂದ ಬಳಸಿಕೊಂಡರು. ಏಳನೇ ಸಾಲಿನಲ್ಲಿ ಮಾಡಿದ ದಾಳಿ ನಿರ್ಣಾಯಕವಾಗಿದ್ದು, ದಿವ್ಯಾಳ ದುರ್ಬಲ ಪ್ಯಾನ್‌ಗಳನ್ನು ಗುರಿಯಾಗಿಸಿಕೊಂಡು ಸಂಪೂರ್ಣ ನಿಯಂತ್ರಣ ಸಾಧಿಸಿದರು. ಸಮಯದ ಒತ್ತಡದಲ್ಲಿದ್ದ ದಿವ್ಯಾ ಕೊನೆಗೆ ರಾಜೀನಾಮೆ ನೀಡಬೇಕಾಯಿತು. ಇನ್ನೊಂದೆಡೆ, ಭಾರತದ ಪ್ರಜ್ಞಾನಂದ ಚೀನಾದ ವೇಯಿ ಯಿ ವಿರುದ್ಧ ಉತ್ತಮ ಒತ್ತಡ ನಿರ್ಮಿಸಿದರೂ ಜಯ ಸಾಧಿಸಲು ಸಾಧ್ಯವಾಗಲಿಲ್ಲ, ಎರಡೂ ಆಟಗಾರರು ಸಮಬಲದ ಆಟ ಪ್ರದರ್ಶಿಸಿದ ಪರಿಣಾಮ ಪಂದ್ಯ ಡ್ರಾದಲ್ಲಿ ಅಂತ್ಯವಾಯಿತು. ಇತರೆ ಪಂದ್ಯಗಳಲ್ಲಿ ಉಜ್ಬೆಕಿಸ್ತಾನದ ಸಿಂದಾರೊವ್ ಮತ್ತೊಂದು ಡ್ರಾ ಸಾಧಿಸಿದರೆ, ನೆದರ್‌ಲ್ಯಾಂಡ್ಸ್‌ನ ಅನಿಶ್ ಗಿರಿ ಅಮೆರಿಕದ ಫ್ಯಾಬಿಯಾನೊ ಕರುವಾನಾ ವಿರುದ್ಧ ಗೆಲುವು ದಾಖಲಿಸಿದರು. ಅಂಡ್ರೇ ಮತ್ತು ಹಿಕಾರು ನಾಕಾಮುರಾ ನಡುವೆ ನಡೆದ ಪಂದ್ಯ ಡ್ರಾದಲ್ಲಿ ಅಂತ್ಯವಾಯಿತು. ಮಹಿಳಾ ವಿಭಾಗದಲ್ಲಿ ಅನ್ನಾ ಮುಝುಚುಕ್ ಮತ್ತು ಟ್ಯಾನ್ ಝೋಂಗಿ ನಡುವೆ ಪಂದ್ಯ ಡ್ರಾ ಆಗಿದ್ದು, ಅಲೆಕ್ಸಂಡ್ರಾ ಗೊರ್ಯಾಚ್ಕಿನಾ ಮತ್ತು ಬಿಬಿಸಾರಾ ಕೂಡ ಅಂಕ ಹಂಚಿಕೊಂಡರು. ಈ ಗೆಲುವಿನೊಂದಿಗೆ ವೈಶಾಲಿ ಪ್ರಶಸ್ತಿಗಾಗಿ ಬಲಿಷ್ಠ ಸ್ಪರ್ಧಿಯಾಗಿ ಹೊರಹೊಮ್ಮಿದ್ದಾರೆ.



ಜಪಾನ್‌ನಲ್ಲಿ ವಿಶ್ವಕಪ್ ಅರ್ಹತಾ ಸುತ್ತು

ಹೊಸದಿಲ್ಲಿ: ವರ್ಷದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗಾಗಿ ನಿರ್ಮಿಸಲಾಗಿರುವ ಜಪಾನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಟಿ20 ವಿಶ್ವಕಪ್ ಪಂದ್ಯಾವಳಿಯ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ. ಗುರುವಾರ ಐಸಿಸಿ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ಬೇಸ್‌ಬಾಲ್ ಮ್ಯಾಡ್ ನಿರ್ಮಿಸಿರುವ ಹೊಸ ಕ್ರೀಡಾಂಗಣದಲ್ಲಿ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ ಎಂದು ಘೋಷಿಸಿದೆ. ಅಲ್ಲಿನ ನಗೋಯಾ ಮತ್ತು ಐಚಿಯಲ್ಲಿ ಸೆಪ್ಟೆಂಬರ್ 19ರಿಂದ ಅಕ್ಟೋಬರ್ 4ರ ವರೆಗೆ ಪಂದ್ಯಗಳು ನಡೆಯಲಿವೆ. ನಗೋಯಾದಲ್ಲಿ ಈಸ್ಟ್ ಏಷ್ಯಾ ಪೆಸಿಫಿಕ್ ಪಂದ್ಯಗಳು ನಡೆಯಲಿವೆ. ಒಟ್ಟು 9 ತಂಡಗಳು 2028ರಲ್ಲಿ ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್‌ನಲ್ಲಿ ನಡೆಯಲಿರುವ ಪಂದ್ಯಾವಳಿಯ ಅರ್ಹತೆಗೆ ಪೈಪೋಟಿ ನಡೆಯಲಿವೆ. ಐವಿಶ್ವಕಪ್ ಅರ್ಹತಾ ಸುತ್ತುಗಳನ್ನು ಆಯೋಜಿಸುವ ಅವಕಾಶ ಸಿಕ್ಕಿರುವುದು ನಮಗೆ ಖುಷಿಯ ವಿಚಾರ. ಇದರಿಂದ ನಮಗೆ ದೊಡ್ಡ ಪಂದ್ಯಾವಳಿಗಳನ್ನು ಆಯೋಜಿಸುವ ಸಾಮರ್ಥ್ಯ ಸಾಬೀತು ಪಡಿಸಲು ಅವಕಾಶ ಸಿಗುತ್ತದೆಐ ಎಂದು ಅಲ್ಲಿನ ಸಂಸ್ಥೆಯ ಮುಖ್ಯಸ್ಥ ಅಲೆನ್ ಕರ್ರ್ ಹೇಳಿದ್ದಾರೆ.

ಬಿಲ್ಲಿ ಜೀನ್ ಕಿಂಗ್ ಕಪ್: ಭಾರತಕ್ಕೆ ಭರ್ಜರಿ ಗೆಲುವು

ಹೊಸದಿಲ್ಲಿ: ಹಿನ್ನಡೆ ಅನುಭವಿಸಿದ ನಂತರವೂ ಅತ್ಯುತ್ತಮ ಪ್ರದರ್ಶನ ನೀಡಿರುವ ಭಾರತೀಯ ಮಹಿಳೆಯರ ಟೆನಿಸ್ ತಂಡವು ಬಿಲ್ಲಿ ಜೀನ್ ಕಿಂಗ್ ಕಪ್ ಪಂದ್ಯಾವಳಿಯ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಗೆದ್ದಿದೆ. ಇದರೊಂದಿಗೆ ಮೊದಲನೇ ಸುತ್ತಿನ ಪಂದ್ಯಗಳ ನಂತರ ಅಗ್ರ ಎರಡರಲ್ಲಿ ಕಾಣಿಸಿಕೊಂಡಿದೆ.

ಬುಧವಾರದಂದು ದಿಲ್ಲಿಯಲ್ಲಿ ನಡೆದ ಪಂದ್ಯದಲ್ಲಿ 3-0ರಿಂದ ಗೆದ್ದಿರುವ ಭಾರತ ತಂಡವು ಥೈಲ್ಯಾಂಡ್ ಸೋಲಿನಿಂದ ಹೊರಬಂದಿದೆ. ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಉದಯೋನ್ಮುಖ ತಾರೆ ವೈಷ್ಣವಿ ಅಡ್ಕರ್ ಹಾಗೂ ಸಹಜಾ ಯಮಲಾಪಲ್ಲಿ ಅತ್ಯುತ್ತಮ ಪ್ರದರ್ಶನದೊಂದಿಗೆ ಮುನ್ನಡೆ ತಂದುಕೊಟ್ಟರು. ಇಬ್ಬರೂ ಗೆಲುವಿನೊಂದಿಗೆ ಭಾರತಕ್ಕೆ 2-0ರ ಮುನ್ನಡೆ ತಂದುಕೊಟ್ಟಿತು. ಮಂಗಳವಾರ ನಡೆದಿದ್ದ ಪಂದ್ಯದಲ್ಲಿ ಅಡ್ಕರ್ ಐಶಿ ದಾಸ್ ಅವರನ್ನು ಎದುರಿಸಿದ್ದರು. 6-2, 6-4ರಿಂದ ಗೆದ್ದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಅವರು ಯಾವುದೇ ಹಂತದಲ್ಲೂ ಎದುರಾಳಿಗೆ ಅವಕಾಶ ನೀಡಿರಲಿಲ್ಲ. ಎರಡನೇ ಪಂದ್ಯದಲ್ಲಿ ವಾಲೆಂಟಿನಾ ಅವರೊಂದಿಗೆ ಆಡಿದ ಸಹಜಾ 6-1, 6-3 ರಿಂದ ಗೆಲುವು ಸಾಧಿಸಿದರು. ಮುಂದಿನ ಜೋಡಿ ಪಂದ್ಯದಲ್ಲಿ ಅಂಕಿತಾ ಹಾಗೂ ಭೋಸ್ಲೇ ಕಣಕ್ಕಿಳಿದರು. ನ್ಯೂಜಿಲೆಂಡ್‌ನ ಬ್ಯಾರಿ ಮತ್ತು ಇರಿನ್ ಅವರನ್ನು ಎದುರಿಸಿದ್ದ ಈ ಜೋಡಿ 6-4, 6-2 ರಿಂದ ಗೆಲುವು ಸಾಧಿಸಿತು.



- ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ 3-0ರಿಂದ ಜಯ
- ಅಡ್ಕರ್, ಸಹುಜಾ ಅಬ್ಬರ
- ಅಗ್ರ ಎರಡರಲ್ಲಿ ಭಾರತ

ರಾಹುಲ್, ಮಿಲ್ಲರ್ ಪರಾಕ್ರಮಕ್ಕಿಲ್ಲ ಜಯ

ಹೊಸದಿಲ್ಲಿ: ಕೊನೆ ಬಾಲ್ ರೋಚಕ ಪಂದ್ಯದಲ್ಲಿ ಸೋಲೊಪ್ಪಿಕೊಳ್ಳದೆ ಹೋರಾಡಿದ ಗುಜರಾತ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 14ನೇ ಪಂದ್ಯದಲ್ಲಿ ದಿಲ್ಲಿ ತಂಡವನ್ನು 1 ರನ್‌ನಿಂದ ಸೋಲಿಸಿದೆ.


ಗಾಯಗೊಂಡಿದ್ದ ಡೇವಿಡ್ ಮಿಲ್ಲರ್ ಸ್ಫೋಟಕ ಬ್ಯಾಟಿಂಗ್ ಆಟವು ಮತ್ತೊಮ್ಮೆ ವ್ಯರ್ಥವಾದಂತಾಯಿತು. ಕೊನೆ ಬಾಲ್‌ನಲ್ಲಿ 2 ರನ್ ಬೇಕಿದ್ದಾಗ ರನೌಟ್ ಆಗಿದ್ದು, ದಿಲ್ಲಿ ಕ್ಯಾಪಿಟಲ್ಸ್ ಪಡೆ ಗುಜರಾತ್ ಟೈಟಾನ್ಸ್ ನೀಡಿದ್ದ 210 ರನ್‌ಗಳ ಗುರಿಯನ್ನು ಪೇರಿಸಲಿಲ್ಲ, 209 ರನ್ ಮಾತ್ರ ಗಳಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಗುಜರಾತ್ 20 ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿತು. ಗಿಲ್, ಬಟ್ಲರ್, ವಾಷಿಂಗ್ಟನ್ ಸುಂದರ್ ಅವರ ಅರ್ಧ ಶತಕಗಳ ನೆರವಿನಿಂದ 210 ರನ್ ಗಳಿಸಿತ್ತು. ಗುರಿ ಬೆನ್ನಟ್ಟುವಾಗ ದಿಲ್ಲಿ ತಂಡ ಕೆ.ಎಲ್.ರಾಹುಲ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿತು. ಬೇಗನೆ ವಿಕೆಟ್‌ಗಳನ್ನು ಕಳೆದುಕೊಂಡಿದ್ದರು. ರಾಹುಲ್ ಏಕಾಂಗಿ ಹೋರಾಟ ನಡೆಸಿದರು. ಕೊನೆಯ ಓವರ್‌ಗಳಲ್ಲಿ ಮಿಲ್ಲರ್ ಅಬ್ಬರಿಸಿದರು. ಇದರೊಂದಿಗೆ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿ ಸೋತಿತು.



ಮಿಲ್ಲರ್ ಅಬ್ಬರಕ್ಕೆ ಸಿಗದ ಜಯ: ಗುರಿ ಬೆನ್ನತ್ತುವಾಗ ರಾಹುಲ್ ಹಾಗೂ ನಿಸ್ಸಂಕಾ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. 76 ರನ್ ಜೊತೆಯಾಟದ ನಂತರ ನಿಸ್ಸಂಕಾ ವಿಕೆಟ್ ಒಪ್ಪಿಸಿದರು. ನಂತರ ರಾಹುಲ್ ತಮ್ಮ ಸ್ಫೋಟಕ ಬ್ಯಾಟಿಂಗ್ ಮುಂದುವರಿಸುತ್ತಲೇ ಇದ್ದರು. ಇನ್ನೇನು ಪಂದ್ಯ ಕಸಿದರು ಅನ್ನುವಷ್ಟರಲ್ಲಿ ರಶೀದ್ ಖಾನ್ ಸರಸರನೇ 2 ವಿಕೆಟ್ ಪಡೆದರು. ಆದರೆ ರಾಹುಲ್ ಅವರ ಆಟ ಮಾತ್ರ ನಿಲ್ಲಲಿಲ್ಲ, ಮಧ್ಯಮ ಕ್ರಮಾಂಕದಲ್ಲಿ ಮಿಲ್ಲರ್ ಬಂದು ಒಂದೆರಡು ಬೌಂಡರಿ ಬಾರಿಸಿ ಮತ್ತೆ ನಿವೃತ್ತರಾದರು. ರಾಹುಲ್ 92 ರನ್‌ಗಳಿಗೆ ವಿಕೆಟ್ ಒಪ್ಪಿಸಿದ ನಂತರ ಗುಜರಾತ್ ಪಂದ್ಯಕ್ಕೆ ಮರಳಿತು. ಆದರೆ ಮತ್ತೊಮ್ಮೆ ಬ್ಯಾಟಿಂಗ್‌ಗಿಳಿದ ಮಿಲ್ಲರ್ ಬಾನೆತ್ತರದ ಸಿಕ್ಸರ್‌ಗಳೊಂದಿಗೆ ಪಂದ್ಯವನ್ನು ಮರಳಿ ತಂದರು. 21 ಬಾಲ್‌ಗಳಲ್ಲಿ 36 ರನ್ ಬೇಕಿತ್ತು. ಡೇವಿಡ್ 23 ರನ್ ಚಚ್ಚಿದರು. ಕೊನೆಯ ಓವರ್‌ನಲ್ಲಿ 13 ರನ್ ಬೇಕಿತ್ತು. ಪ್ರಸಿದ್ಧಕೃಷ್ಣ ಬೌಲಿಂಗ್‌ಗೆ ಬಂದರು. ಮೊದಲನೇ ಬಾಲ್ ಅಲ್ಲೇ ಬೌಂಡರಿ ನಾಲ್ಕನೇ ಬಾಲ್‌ನಲ್ಲಿ ಸಿಕ್ಸರ್ ಬಾರಿಸಿದ ಮಿಲ್ಲರ್ ಪಂದ್ಯವನ್ನು ಬಹುತೇಕ ಗೆಲ್ಲಿಸಿದ್ದರು. 2 ಬಾಲ್‌ಗಳಲ್ಲಿ 2 ರನ್ ಬೇಕಿದ್ದಾಗ ಸಿಂಗಲ್ ಸಿಕ್ಕರೂ ಮಿಲ್ಲರ್ ನಿರಾಕರಿಸಿದರು. ಕೊನೆಯ ಬಾಲ್‌ಗೆ 2 ರನ್ ಬೇಕಿತ್ತು. ಸ್ಲೋವರ್ ಶಾರ್ಟ್ ಬಾಲ್ ಡಾಟ್ ಆದ ತಕ್ಷಣ ಬಟ್ಲರ್ ರೋಮಾಂಚನಕಾರಿ ರನೌಟ್ ಮೂಲಕ ಪಂದ್ಯವನ್ನು ಗೆಲ್ಲಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5949

5948 ಉತ್ತರ

ಎಡದಿಂದ ಬಲಕ್ಕೆ:
3.ಮದಗಜ 5.ಸಕ್ಕರೆ
7.ಹಸಿರು 8.ಸಬಲೆ
10.ಪಟ್ಟಾಂಗ 11.ಮಾಳಿಗೆ
14.ಕಟಕಿ 16.ವೈಭವ
17.ಸ್ವದೇಶಿ 18.ದೇಶಾಟನ
ಮೇಲಿನಿಂದ ಕೆಳಕ್ಕೆ
: 1.ಹಾಲಾಹಲ
2.ಮೊಸರು 4.ದವಸ
6.ತಾವರೆ 9.ಬಡಿಗೆ
10.ಪಲ್ಲಟ 12.ಸ್ವಗೃಹ
13.ಮಾವಟಿಗ 15.ಕಿರೀಟ
16.ವೈಶಿಷ್ಟ್ಯ

ಎಡದಿಂದ ಬಲಕ್ಕೆ
1.ಕೊಲೆ-ಕಳ್ಳತನ ಕಂಡುಹಿಡಿಯುವವನು (4)
5.ಆಶ್ರಯ-ಅವಲಂಬನವಿದು (3)
6.ದೇವರನ್ನು ಪೂಜಿಸುವ ಸ್ಥಳ (3)
8.ಶಹನಾಯಿಯ ಇನ್ನೊಂದು ಹೆಸರು (3)
9.ನೀರಿನಲ್ಲಿ ಚಲಿಸುವ ಸಂಚಾರ ಸಾಧನ (3)
10.ಬಿಸಿ ಕಡೆಯಲ್ಲಿರುವ ಶೌರ್ಯ (3)
14.ಇಸ್ಲಾಮಿಕ್ ರಾಷ್ಟ್ರದ ಪ್ರಧಾನಮಂತ್ರಿ (3)
16.ಸಾಧನೆಯ ಸ್ಮರಣಿಕೆಯಾಗಿ ನೀಡುವ ಲೋಹದ ಬಿಲ್ಲೆ (3)
17.ಇದು ಒಳ್ಳೆಯ ನಡಿಗೆ-ಮೋಕ್ಷ (3)
18.ಸಂಪೂರ್ಣವಾಗಿ ಪಕ್ವವಾಗಿರುವುದು (4)

ಮೇಲಿನಿಂದ ಕೆಳಕ್ಕೆ :
2.ದಾರದ ನಡುವೆ ನೀರಡಿಕೆಯಡಗಿದೆ (3)
3.ವೀರರ ನಡುವಿನ ಮುನಿಸು (3)
4.ಪ್ರತಿದಿನಕ್ಕೆ ಸಂಬಂಧಿಸಿದುದು (4)
5.ದವಾಖಾನೆ-ವೈದ್ಯಶಾಲೆಯಿದು (3)
7.ಸ್ವರ್ಗದಲ್ಲಿ ಹುಟ್ಟಿದವನು-ದೇವತೆ (3)
11.ಪದದ ನಡುವೆ ಅಡಗಿದ ವ್ಯಾಪಾರಿ (3)
12.ಈಶ್ವರನ ಭಕ್ತಸಮೂಹ (4)
13.ವಂತಿಗೆಯ ಬಗ್ಗೆ ಜನರಾಡಿಕೊಳ್ಳುವ ಮಾತು (3)
15.ರಾಕ್ಷಸ ತಲೆಕೆಳಗಾಗಿದ್ದಾನೆ (3)
16.ಪಲಾಯನಗೈಯುವಿಕೆ (3)

ಎಲ್ಲ ಆರೋಪಿಗಳು ನಿರ್ದೋಷಿಗಳೆಂದು ತೀರ್ಪು

◆**ಬೆಳಗಾವಿ:** ತಾಲೂಕಿನ ಯಳ್ಳೂರು ಗ್ರಾಮದಲ್ಲಿ ಕಳೆದ 12 ವರ್ಷಗಳ ಹಿಂದೆ ಮಹಾರಾಷ್ಟ್ರದ ರಾಜ್ಯ ಯಳ್ಳೂರು ಎಂದು ನಾಮಫಲಕ ಅಳವಡಿಸಿದ ವಿವಾದ ರಾಜ್ಯ ಅಲ್ಲದೆ, ದೇಶದಲ್ಲಿಯೇ ದೊಡ್ಡ ಮಟ್ಟದಲ್ಲಿ ಸದ್ದು ಮಾಡಿತ್ತು. ಈ ಪ್ರಕರಣದಲ್ಲಿ ಯಳ್ಳೂರು ಗ್ರಾಮದಲ್ಲಿನ 50ಕ್ಕೂ ಹೆಚ್ಚು ಜನರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿತ್ತು. ಆದರೆ, ಇದೀಗ ಎಲ್ಲ ಆರೋಪಿಗಳನ್ನು ನ್ಯಾಯಾಲಯ ನಿರ್ದೋಷಿ ಎಂದು ತೀರ್ಪು ನೀಡಿದೆ. 2014 ಜುಲೈ 27ರಂದು ಯಳ್ಳೂರು ಗ್ರಾಮದಲ್ಲಿ ಸರಹದ್ದು ಗುರುತಿಸಿ ಮಹಾರಾಷ್ಟ್ರ ರಾಜ್ಯ ಯಳ್ಳೂರು ಎಂದು ನಾಮಫಲಕ ಅಳವಡಿಕೆ ಮಾಡಲಾಗಿತ್ತು. ಇದರಿಂದಾಗಿ ಕನ್ನಡಿಗರು ಆಕ್ರೋಶಗೊಂಡು ದೊಡ್ಡ ಮಟ್ಟದಲ್ಲಿ ಗಲಾಟೆ, ಹೊಡೆದಾಟ, ಕಲ್ಲು ತೂರಾಟ ಇತ್ಯಾದಿ ಘಟನೆಗಳು ನಡೆದಿತ್ತು. ಈ ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರು ಲಾಠಿ ಚಾರ್ಜ್ ಸಹ ಮಾಡಿದ್ದರು. ತಾಲೂಕಿನ ಯಳ್ಳೂರು ಗ್ರಾಮದಲ್ಲಿನ 50 ಆರೋಪಿಗಳನ್ನು ಗುರುತಿಸಿ ಏಳು ವಿವಿಧ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಬುಧವಾರ ನ್ಯಾಯಾಲಯ ಎಲ್ಲ ಆರೋಪಿಗಳ ಪ್ರಕರಣಗಳನ್ನು ನಿರ್ದೋಷಿ ಎಂದು ತೀರ್ಪು ನೀಡಿದೆ. ಉಳಿದ ಎರಡು ಪ್ರಕರಣಗಳಲ್ಲೂ ಖುಲಾಸೆಯಾಗಿದ್ದಾರೆ. ಈ ಪ್ರಕರಣದಲ್ಲಿದ್ದ ಮೂರು ಜನ ಈಗಾಗಲೇ ಮರಣ ಹೊಂದಿದ್ದು, ಯಳ್ಳೂರು ಗ್ರಾಮಸ್ಥರ ಪರವಾಗಿ ನ್ಯಾಯವಾದಿ ಶ್ಯಾಮಸುಂದರ್ ಪತ್ತಾರ್, ಶ್ಯಾಮ್ ಪಾಟೀಲ ಹಾಗೂ ಹೇಮರಾಜ್ ಬೆಂಚನ್ನವರ ವಾದ ಮಂಡಿಸಿದ್ದರು.

ಮಹಾರಾಷ್ಟ್ರದ ರಾಜ್ಯ ಯಳ್ಳೂರು ನಾಮಫಲಕ ವಿವಾದ

ನೀರಿನ ಹೊಂಡದಲ್ಲಿ ಬಿದ್ದು ಯುವಕ ಸಾವು

◆**ಕೊಲ್ಹಾರ:** ತಾಲೂಕಿನ ಕುಬಕಡ್ಡಿ ಗ್ರಾಮದ ಹೊರವಲಯದ ಜಮೀನಿನಲ್ಲಿನ ನೀರಿನ ಹೊಂಡದಲ್ಲಿ ಬಿದ್ದು ಯುವಕನೋರ್ವ ಮೃತಪಟ್ಟ ಘಟನೆ ಗುರುವಾರ ನಡೆದಿದೆ. ಪಟ್ಟಣದ ಎರಡನೇ ವಾರ್ಡ್‌ನ ನಿವಾಸಿಯಾದ ಈರಣ್ಣ ಸಂಗಪ್ಪ ಚಿಕ್ಕಳಕಿ (20) ಮೃತ ಯುವಕನಾಗಿದ್ದಾನೆ. ಕುಡಿಯುವ ನೀರು ತರಲು ತೆರಳಿದ್ದ ವೇಳೆ ಕಾಲು ಜಾರಿ ನೀರಿನ ಹೊಂಡಕ್ಕೆ ಬಿದ್ದ ಪರಿಣಾಮ ಮೃತಪಟ್ಟಿದ್ದಾನೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಕೊಲ್ಹಾರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಪ್ರಕರಣ ದಾಖಲಾಗಿದ್ದು, ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ ಕನಿಷ್ಠ(ಕ್ವಿಂ)	₹ ಗರಿಷ್ಠ (ಕ್ವಿಂ)
ಅಲಸಂದೆ ಕಾಳು	3971	6166
ಕಡಲೆಬೇಳೆ	6450	6600
ಕಡಲೆಕಾಳು	1811	5759
ಉದ್ದಿನಬೇಳೆ	13200	14600
ಉದ್ದಿನಕಾಳು	3570	7266
ತೆಂಗಿನಕಾಯಿ	44000	44000
ಧನಿಯಾ	10666	10666
ಹತ್ತಿ	7700	7800
ಒಣ ಮೆಣಸಿನಕಾಯಿ	16533	52000
ಹೆಸರುಬೇಳೆ	9000	9311
ಹೆಸರುಕಾಳು	3410	5100
ನೆಲಗಡಲೆ (ಶೇಂಗಾ)	3233	6320
ಬೆಲ್ಲ	3920	4952
ಜೋಳ	2325	4255
ಮೆಕ್ಕೆಜೋಳ	1510	1894
ಮಡಿಕೆ (ಮಟಕಿ)	6095	13301
ಮೆಂತ್ಯ	7381	7381
ಈರುಳ್ಳಿ	400	2100
ಆಲೂಗಡ್ಡೆ	1400	1800
ಕುಸುಬೆ	5466	5466
ಸೋಯಾಬಿನ್	2700	5450
ತೊಗರಿ	2011	4845
ತೊಗರಿ ಬೇಳೆ	10500	11700
ಗೋಧಿ	1926	2509

ಕಿರುಸುದ್ದಿ

ಸೋಲಿಗೆ ಧೃತಿಗೆಡದಿರಿ

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ರಾಜ್ಯದ ಹಾಗೂ ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು. ನಿಮ್ಮ ಶ್ರಮ ಮತ್ತು ಪೋಷಕರು-ಶಿಕ್ಷಕರ ಮಾರ್ಗದರ್ಶನ ಈ ಯಶಸ್ಸಿಗೆ ನಾಂದಿ. ನಿಮ್ಮ ಮುಂದಿನ ಹಾದಿ ಸುಗಮವಾಗಿರಲಿ. ಪರೀಕ್ಷೆಯಲ್ಲಿ ಹಿನ್ನಡೆ ಅನುಭವಿಸಿದ ವಿದ್ಯಾರ್ಥಿಗಳು ಧೃತಿಗೆಡಬೇಡಿ. ಅಂಕಗಳೇ ಜೀವನವಲ್ಲ; ಸೋಲು ಗೆಲುವಿನ ಸೋಪಾನ. ಆತ್ಮವಿಶ್ವಾಸದಿಂದ ಮರುಪ್ರಯತ್ನಿಸಿ, ಮುಂದಿನ ಅವಕಾಶಗಳನ್ನು ಬಳಸಿಕೊಳ್ಳಿ. ಎಲ್ಲರಿಗೂ ಶುಭವಾಗಲಿ.



■ ವಿಶ್ವೇಶ್ವರ ಹೆಗಡೆ ಕಾಗೇರಿ ಸಂಸದರು, ಉತ್ತರ ಕನ್ನಡ, ಮಾಜಿ ಶಿಕ್ಷಣ ಸಚಿವರು



ಬೆಳಗಾವಿ: ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣಾ ಪ್ರಚಾರದ ಕಾರ್ಯ ಮುಗಿಸಿದ ಬೆನ್ನಲ್ಲೇ ಸಚಿವ ಸತೀಶ ಜಾರಕಿಹೊಳಿ ಮತ್ತು ಅವರ ಪುತ್ರ ರಾಹುಲ್ ಜಾರಕಿಹೊಳಿ ಗೋಕಾಕನಲ್ಲಿ ಕ್ರಿಕೆಟ್ ಆಟದಲ್ಲಿ ತಲ್ಲೀನರಾದರು.

ಕಾರು ಅಗ್ನಿಗಾಹುತಿಯಾಗಿದ್ದ ಪ್ರದೇಶಕ್ಕೆ ಎಸ್‌ಪಿ ಭೇಟಿ

◆**ಯಲ್ಲಾಪುರ:** ತಾಲೂಕಿನ ಅರಬೈಲ್ ಘಟ್ಟದಲ್ಲಿ ಕಾರು ಅಗ್ನಿಗಾಹುತಿಯಾದ ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ಅಧೀಕ್ಷಕ ದೀಪನ್ ಎಂ.ಎನ್. ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾರು ಸಂಪೂರ್ಣ ಸುಟ್ಟು ಕರಕಲಾಗಿದ್ದು, ಒಳಗಿದ್ದ ಮೃತದೇಹ ಗುರುತು ಸಿಗದಷ್ಟು ಸುಟ್ಟು ಹೋಗಿದೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಬೆಳಗಾವಿಯ ನಿತೀಶ್ ದಾಪಳೆ ಎಂಬುವವರು ಈ ಕಾರನ್ನು ಚಲಾಯಿಸುತ್ತಿದ್ದರು ಎಂದು ಶಂಕಿಸಲಾಗಿದೆ. ಘಟನಾ ಸ್ಥಳಕ್ಕೆ ಆಗಮಿಸಿದ ಮೃತ ನಿತೀಶ್ ಅವರ ತಂದೆ ಜಗನ್ನಾಥ ದಾಪಳೆ ಅವರು ಕಾರನ್ನು ಗುರುತಿಸಿದ್ದಾರಾದರೂ, ಮೃತದೇಹದ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಸಾವಿನ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಅವರು ಪೊಲೀಸರಿಗೆ ಮನವಿ ಮಾಡಿದ್ದಾರೆ.ಸ್ಥಳಕ್ಕೆ ಭೇಟಿ ನೀಡಿದ ಎಸ್‌ಪಿ ದೀಪನ್ ಎಂ.ಎನ್. ಅವರು ತನಿಖೆಯನ್ನು ವೈಜ್ಞಾನಿಕವಾಗಿ ನಡೆಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಶ್ರೀರಕ್ಷಾಗೆ ಶೇ.98.16

◆**ಕೊಪ್ಪಳ:** ಇಲ್ಲಿನ ಪ್ರಶಾಂತ ಕಾಲೋನಿಯಲ್ಲಿರುವ ವಿದ್ಯಾರ್ಥಿನಿ ಶ್ರೀರಕ್ಷಾ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಶೇ.98.16ರಷ್ಟು ಫಲಿತಾಂಶ ಪಡೆದಿದ್ದಾಳೆ. ಭೌತಶಾಸ್ತ್ರ, ಗಣಿತ ಮತ್ತು ಕಂಪ್ಯೂಟರ್ ಸೈನ್ಸ್ ಈ ಮೂರೂ ವಿಷಯಗಳಲ್ಲಿ ಪೂರ್ಣ 100 ಅಂಕಗಳನ್ನು ಗಳಿಸಿದ್ದಾಳೆ. ಇವರು ಚುಕ್ಕನಕಲ್ ರಸ್ತೆಯಲ್ಲಿರುವ ಲಯನ್ಸ್ ಸ್ವಾಮಿ ವಿವೇಕಾನಂದ ಸಂಯುಕ್ತ ಪದವಿಪೂರ್ವ ಕಾಲೇಜಿನ ಶ್ರೀ ಚೈತನ್ಯ ಸಮೂಹ ಸಂಸ್ಥೆ ವಿದ್ಯಾರ್ಥಿನಿ.



ರೈತ ಆತ್ಮಹತ್ಯೆ

◆**ಬ್ಯಾಡಗಿ:** ಸಾಲಬಾಧೆ ತಾಳಲಾರದೆ ತಾಲೂಕಿನ ಕದರಮಂಡಲಗಿ ಗ್ರಾಮದ ರೈತ ಕರಬಸಪ್ಪ ಶೇಖಪ್ಪ ನಂದಿಹಳ್ಳಿ (50) ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ. ಮೃತ ರೈತ ಒಟ್ಟು 3 ಎಕರೆ ಹದಿಮೂರು ಗುಂಟೆ ಜಮೀನು ಹೊಂದಿದ್ದು, ಜಮೀನಿನಲ್ಲಿ ವ್ಯವಸಾಯಕ್ಕಾಗಿ ಕೆವಿಜಿ ಬ್ಯಾಂಕ್‌ನಲ್ಲಿ ಎರಡು ಲಕ್ಷ ಹಾಗೂ ಐಡಿಎಫ್‌ಸಿ ಬ್ಯಾಂಕ್‌ನಲ್ಲಿ ಹೈನುಗಾರಿಕೆ ಸಲುವಾಗಿ 3 ಲಕ್ಷಕ್ಕಿಂತ ಹೆಚ್ಚು ಸಾಲ ಮಾಡಿದ್ದರು. ಜಮೀನಿನಲ್ಲಿ ತರಕಾರಿ, ಗೋವಿನಜೋಳ ಬೆಳೆ ಸರಿಯಾಗಿ ಬಾರದೆ ಮಾಡಿದ ಸಾಲ ಹೇಗೆ ತೀರಿಸಬೇಕೆಂದು ಮನಸ್ಸಿಗೆ ಹಚ್ಚಿಕೊಂಡು ಕದರಮಂಡಲಗಿ ಬ್ಯಾಡಗಿ ಗಡಿ ರಸ್ತೆಯಲ್ಲಿರುವ ಗುಡ್ಡಪ್ಪ ಬಾರ್ಕಿ ಅವರ ಜಮೀನಿನ ಬದುವಿನಲ್ಲಿ ಬೇವಿನ ಮರಕ್ಕೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ. ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಗಲಕೋಟೆ ಉಪಚುನಾವಣೆ | ಬಿರುಸಿನ ಮತದಾನ

ಶೇ.68.74ರಷ್ಟು ಮತದಾನ

◆**ಬಾಗಲಕೋಟೆ:** ನೆತ್ತಿಯ ಮೇಲೆ ಉರುಬಿಸಿಲು ಇದ್ದರೆ ಇತ್ತ ಬಾಗಲಕೋಟೆಯ ಉಪಚುನಾವಣೆಗೆ ಬಿರುಸಿನ ಮತದಾನ ನಡೆಯಿತು. ಬಾಗಲಕೋಟೆ ಮತಕ್ಷೇತ್ರದಲ್ಲಿ ಶಾಂತಿಯುತ ಮತದಾನ ನಡೆದಿದ್ದು ಅಂದಾಜು ಶೇ.68.74ರಷ್ಟು ಮತದಾನವಾಗಿದೆ.

ಸುಡುಬಿಸಿಲಿನಲ್ಲಿ ಮತದಾನ ಮಾಡಲು ಹೋಗದವರು ಬೆಳಗ್ಗೆಯೇ ಮತದಾನ ಕೇಂದ್ರದತ್ತ ಜನ ಆಗಮಿಸಿದರು. ಇನ್ನೂ ಪ್ರತಿಯೊಂದು ಮತಗಟ್ಟೆ ಮುಂದೆ ಹೋದರೆ ಅಲ್ಲಿ ಮಹಿಳೆಯರ ಸಂಖ್ಯೆಯೇ ಏರಿಕೆಯಲ್ಲಿತ್ತು. ಇನ್ನೂ ಮಧ್ಯಾಹ್ನ 1ರಿಂದ ಸಂಜೆ 4 ಗಂಟೆಯವರೆಗೆ ಮಂದಗತಿಯಲ್ಲಿ ಮತದಾನ ನಡೆಯಿತು. ಸಂಜೆಯಾಗುತ್ತಿದ್ದಂತೆ ಅಲ್ಲಲ್ಲಿ ಮತದಾನ ಕೇಂದ್ರದ ಮುಂದೆ ಜನರು ಸರದಿಯಲ್ಲಿ ನಿಂತು ತಮ್ಮ ಮತದಾನದ ಹಕ್ಕು ಚಲಾಯಿಸಿದರು.

ಬೆಳಗ್ಗೆ 7ರಿಂದ 9 ಗಂಟೆಯವರೆಗೆ ಶೇ.11.89ರಷ್ಟು ಮತದಾನ ನಡೆಯಿತು. ನಂತರ ಬೆಳಗ್ಗೆ 11 ಗಂಟೆಗೆ ಶೇ.27.82ರಷ್ಟು, ಮಧ್ಯಾಹ್ನ 1 ಗಂಟೆಗೆ ಶೇ.43.75ರಷ್ಟು, ಮಧ್ಯಾಹ್ನ 3 ಗಂಟೆಗೆ ಶೇ.54.82ರಷ್ಟು ಮತದಾನವಾದರೆ ಸಂಜೆ 5 ಗಂಟೆಗೆ ಶೇ.65.59ರಷ್ಟು ಮತದಾನವಾಗಿತ್ತು. ಸಂಜೆ 6 ಗಂಟೆ ವೇಳೆಗೆ ಅಂದಾಜು ಶೇ.68.74ರಷ್ಟು ಮತದಾನವಾಗಿದೆ.

ಬಾಗಲಕೋಟೆಯ ಗ್ರಾಮೀಣ ಭಾಗದಲ್ಲಿ ಬಿಸಿಲು ಇದ್ದರೂ ಪ್ರತಿಯೊಬ್ಬರು ಮತದಾನದ ಹಕ್ಕು ಚಲಾಯಿಸಿದರು. ಇನ್ನೂ ನಗರದಲ್ಲಿ ಅಲ್ಲಲ್ಲಿ ಕೆಲವು ಮತಗಟ್ಟೆಗಳಲ್ಲಿ ಮತದಾನ ಮಾಡಲು ಬರುವವರು ಸಂಖ್ಯೆ ಕಡಿಮೆಯಾಗಿತ್ತು ಸಮಯವಾಗುತ್ತಿದ್ದಂತೆ ನಗರದಲ್ಲಿ ಮತದಾನ ಜೋರಾಗಿ ನಡೆಯಿತು. ಬಾಗಲಕೋಟೆ ಮತಕ್ಷೇತ್ರದಲ್ಲಿ 1,26,999 ಪುರುಷ, 1,32,775 ಮಹಿಳಾ ಮತದಾರರು, 23 ಇತರೆ ಸೇರಿ 2,59,797 ಮತದಾರರು ಇದ್ದರು.

ಉಪಚುನಾವಣೆಯ ಹಿನ್ನೆಲೆಯಲ್ಲಿ ಗೋವಾ ಹಾಗೂ ಮಂಗಳೂರ ಕಡೆ ದುಡಿಯಲು ಹೋದವರು ಬಸ್‌ನಲ್ಲಿ ಬಂದು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು. ತಿಮ್ಮಾಪುರ, ಐಹೊಳೆ ಗ್ರಾಮ ಸೇರಿದಂತೆ ಕೆಲವೊಂದು ಗ್ರಾಮಗಳಲ್ಲಿ ಎರಡ್ಮೂರು ಬಸ್‌ಗಳಲ್ಲಿ ಕೂಲಿಕಾರ್ಮಿಕರು ಆಗಮಿಸಿ ತಮ್ಮ ಮತದಾನದ ಹಕ್ಕು ಚಲಾಯಿಸಿದರು.

ಶಾಂತಿಯುತ ಮತದಾನ

ಕೆಲವೊಂದು ಕಡೆ ಮತದಾನ ಕೇಂದ್ರದ ಸಮೀಪ ನಮ್ಮ ಪಕ್ಷದ ಅಭ್ಯರ್ಥಿಗೆ ಮತ ಹಾಕಿ ಎಂದು ಹೇಳುತ್ತಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸುತ್ತಿರುವುದು ಕಂಡುಬಂದಿತು. ಅಲ್ಲಲ್ಲಿ ಸಣ್ಣಪುಟ್ಟ ಘಟನೆ ನಡೆದಿರುವುದನ್ನು ಆಯಾ ಮತ ಕೇಂದ್ರದ ಅಧಿಕಾರಿಗಳು ಸರಿಪಡಿಸಿ ಶಾಂತಿಯುತ ಮತದಾನಕ್ಕೆ ಅವಕಾಶ ನೀಡಿದರು.

ನನ್ನ ಗೆಲುವು ನಿಶ್ಚಿತ: ವೀರಣ್ಣ ಚರಂತಿಮಠ

ಬಾಗಲಕೋಟೆ: ಬಾಗಲಕೋಟೆಯ ಉಪ ಚುನಾವಣೆಯ ಸಮರದಲ್ಲಿ ಬಿಜೆಪಿ ಗೆಲ್ಲುವುದು ನೂರಕ್ಕೆ ನೂರರಷ್ಟು ನಿಶ್ಚಿತ ಎಂದು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ವಿಶ್ವಾಸ ವ್ಯಕ್ತಪಡಿಸಿದರು. ಬಾಗಲಕೋಟೆ ನಗರದ ಶಾಸಕರ ಮಾದರಿ ಪ್ರಾಥಮಿಕ ಶಾಲೆಯ ನಂ.4 ಬೂತ ಸಂಖ್ಯೆ 166ರಲ್ಲಿ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿ ಅವರು ಮಾತನಾಡಿದರು. ಬಾಗಲಕೋಟೆ ಮತಕ್ಷೇತ್ರದ ಮತದಾರರು ತಮ್ಮ ಮತದಾನವನ್ನು ಉತ್ಸಾಹದಿಂದ ಮಾಡಿದ್ದಾರೆ. ಚುನಾವಣೆಯಲ್ಲಿ ಗೆಲ್ಲುತ್ತೇವೆ ಎಂದರು. ಚುನಾವಣೆಯಲ್ಲಿ ಪಾಪದ ದುಡ್ಡನ್ನು ಮತದಾರರಿಗೆ ಹಂಚುತ್ತಿರುವುದು ಗಮನಕ್ಕೆ ಬಂದಿದೆ. ಅದನ್ನು ತೆಗೆದುಕೊಂಡು ಪುಣ್ಯದ ಕೆಲಸಕ್ಕೆ ಬಳಕೆ ಮಾಡಿಕೊಂಡು ಬಿಜೆಪಿಯ ಕಮಲದ ಗುರುತಿಗೆ ಜನ ಮತದಾನ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು ಚುನಾವಣೆಯನ್ನು ಹಬ್ಬದ ವಾತಾವರಣದಂತೆ ಆಚರಣೆ ಮಾಡಬೇಕು ಎಂದು ಹೇಳಿದ್ದಾರೆ. ಈ ಬಾರಿ ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲುವ ಮೂಲಕ ಪ್ರಧಾನಿಯವರ ಕೈ ಬಲಪಡಿಸಲಾಗುವುದು ಎಂದು ಹೇಳಿದರು. ಬಾಗಲಕೋಟೆ ಮತಕ್ಷೇತ್ರದ ಉಪಚುನಾವಣೆಯ ಮತಗಟ್ಟೆ ಸಮೀಪ ಬೇರೆ ಜಿಲ್ಲೆಯವರು ಬಂದು ಜನರಿಗೆ ತಮ್ಮ ಬೆಂಬಲಿಗ ಅಭ್ಯರ್ಥಿಗಳಿಗೆ ಮತದಾನ ಮಾಡುವಂತೆ ಜನರಿಗೆ ಹೇಳುತ್ತಿರುವುದು ಗಮನಕ್ಕೆ ಬಂದ ನಂತರ ಎಸ್ಪಿಯವರ ಗಮನಕ್ಕೆ ತರಲಾಯಿತು. ಬೇರೆ ಜಿಲ್ಲೆಯವರು ಬಂದು ಇಲ್ಲಿ ಬೀಡು ಬಿಟ್ಟಿದ್ದಾರೆ. ಬಹಳಷ್ಟು ದುಡ್ಡು ಖರ್ಚುಮಾಡಿದವರು ಚುನಾವಣೆಯಲ್ಲಿ ಸೋತ ಉದಾಹರಣೆ ಇದೆ. ಕಡಿಮೆ ಖರ್ಚು ಮಾಡಿದವರು ಚುನಾವಣೆಯಲ್ಲಿ ಗೆದ್ದಿದ್ದು ಇದೆ. ಹೀಗಾಗಿ ಚುನಾವಣೆಯಲ್ಲಿ ಗೆಲ್ಲುತ್ತೇವೆ ಎಂದರು.



ಕಾಂಗ್ರೆಸ್ ಗಾಳಿ ಇದೆ ಗೆಲ್ಲುವೆ: ಉಮೇಶ ಮೇಟಿ

ಬಾಗಲಕೋಟೆ: ಗ್ರಾಮೀಣ ಮತ್ತು ನಗರಮಟ್ಟದಲ್ಲಿ ಕಾಂಗ್ರೆಸ್ ಪರ ಗಾಳಿ ಇದೆ. ಚುನಾವಣೆಯಲ್ಲಿ ಗೆಲ್ಲುತ್ತೇನೆ ಎಂಬ ವಿಶ್ವಾಸ ನನ್ನಲ್ಲಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಹೇಳಿದರು.

ತಮ್ಮ ಊರು ತಿಮ್ಮಾಪುರದಲ್ಲಿ ಮತದಾನ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಜನರಿಗೆ ನೀಡಿದ ಕಾರ್ಯಕ್ರಮದ ಆಧಾರದ ಮೇಲೆ ಜನ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದ್ದಾರೆ. ಚುನಾವಣೆಯಲ್ಲಿ ನಿಶ್ಚಿತವಾಗಿ ಗೆಲ್ಲುತ್ತೇವೆ ಎಂದರು.

ಕಾಂಗ್ರೆಸ್ ಪಕ್ಷ ಗೆಲ್ಲಲು ಹಣವನ್ನು ಹಂಚಿಕೆ ಮಾಡಿಲ್ಲ. ನಮ್ಮ ತಂದೆಯವರ ಮೇಲಿನ ಪ್ರೀತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಮ್ಮ ಪರವಾಗಿ ಇಲ್ಲಿ ಪ್ರಚಾರ ಮಾಡಿ ಹೋಗಿದ್ದಾರೆ. ಕ್ಷೇತ್ರದ ಮತದಾರರು ನಮ್ಮನ್ನು ಆಶೀರ್ವಾದ ಮಾಡಲಿದ್ದಾರೆ ಎಂದು ಹೇಳಿದರು.



ಗೋರೆಯ ಕಾಲೇಜಿನ ಮಹಾಲಕ್ಷ್ಮಿ ಪಿ.ಹೆಗಡೆ ರಾಜ್ಯಕ್ಕೆ 8ನೇ ರಾಂಕ್

◆**ಕುಮಟಾ:** ಉತ್ತರ ಕನ್ನಡ ಜಿಲ್ಲೆಯ ಖ್ಯಾತ ಸ್ತ್ರೀರೋಗತಜ್ಞ ವೈದ್ಯರು, ಸಮಾಜಮುಖಿ ಚಿಂತಕರು, ಶಿಕ್ಷಣ ತಜ್ಞರು ಆದ ಡಾ.ಜಿ.ಜಿ ಹೆಗಡೆ ಅವರ ನೇತೃತ್ವದಲ್ಲಿ ಮುನ್ನಡೆಯುತ್ತಿರುವ ಗೋರೆಯ ಕೆನರಾ ಎಕ್ಸಲೆನ್ಸ್ ಪಿ.ಯು ಕಾಲೇಜು ರಾಜ್ಯಮಟ್ಟದಲ್ಲಿ ಗ'ಂ'ರ'ಂ'ತಿ'ಸಿ'ಕ'ೊ'ಳ'್ಳ'ವ'ಂ'ತ'ಹ' ಫಲಿತಾಂಶವನ್ನು ದಾಖಲಿಸಿದೆ.

ಕಾಲೇಜಿನ ವಿಜ್ಞಾನ ವಿಭಾಗದಿಂದ ಒಟ್ಟು 90 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 51 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್,37 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಒಟ್ಟು 32 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದು 19 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ, 12 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಮಹಾಲಕ್ಷ್ಮಿ ಪಿ .ಹೆಗಡೆ 600 ಕ್ಕೆ 591 ಅಂಕಗಳನ್ನು ಪಡೆದು ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿರುತ್ತಾಳೆ. ಇಳಾ ಗೋಪಾಲಕೃಷ್ಣ ಹೆಗಡೆ 585 ಅಂಕ ಪಡೆದು ದ್ವಿತೀಯ ಹಾಗೂ ಹರ್ಷಿತಾ ಸುಧಾಕರ ಭಟ್ಟ , 582 ಅಂಕಗಳನ್ನು ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಪ್ರಜ್ಞಾ ವಿ. ಕೆ. 587 ಅಂಕ ಪಡೆದು ಪ್ರಥಮ ಸ್ಥಾನ ಪಡೆದರೆ, ಶ್ರೀಶ್ ರವೀಶ್ ಹೆಗಡೆ 579 ಅಂಕ ಪಡೆದು ದ್ವಿತೀಯ ಸ್ಥಾನ ಮತ್ತು ಧನ್ಯಶ್ರೀ ಜೋಶಿ, ಶ್ರೀರಾಮ್ ಹೆಗಡೆ 578 ಅಂಕ ಪಡೆದು ತೃತೀಯ ಸ್ಥಾನ ಪಡೆದಿರುತ್ತಾರೆ.

ಸಂಸ್ಕೃತದಲ್ಲಿ 22, ಕನ್ನಡದಲ್ಲಿ 4, ಭೌತಶಾಸ್ತ್ರದಲ್ಲಿ 4, ವ್ಯವಹಾರ ಅಧ್ಯಯನದಲ್ಲಿ 4,ಗಣಿತ ಶಾಸ್ತ್ರದಲ್ಲಿ 3, ಗಣಕ ವಿಜ್ಞಾನದಲ್ಲಿ 3, ಜೀವಶಾಸ್ತ್ರದಲ್ಲಿ 2, ಅರ್ಥಶಾಸ್ತ್ರದಲ್ಲಿ 1, ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆದು ಸಂಸ್ಥೆಗೆ ಕೀರ್ತಿ ತಂದಿರುತ್ತಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಜಿ. ಜಿ ಹೆಗಡೆ, ವಿಶ್ವಸ್ಥ ಡಿ. ಎನ್. ಭಟ್ಟ ,ಪ್ರಾಚಾರ್ಯ ಕಿರಣ ಭಟ್ಟ, ಆಡಳಿತಾಧಿಕಾರಿ ಶಶಾಂಕ್ ಶಾಸ್ತ್ರಿ ಎಲ್ಲಾ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.








ಶೇ.100ರಷ್ಟು ಫಲಿತಾಂಶ ದಾಖಲಿಸಿದ ಮೂರೂರಿನ ಪ್ರಗತಿ ಪಿಯು ಕಾಲೇಜು






◆**ಕುಮಟಾ:** ಪರಮಪೂಜ್ಯ ರಾಘವೇಶ್ವರ ಭಾರತೀ ಮಹಾಸ್ವಾಮಿಗಳವರ ಆಶೀರ್ವಾದದೊಂದಿಗೆ ನಡೆಯುತ್ತಿರುವ ಪ್ರಗತಿ ಪಿ.ಯು ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಶೇಕಡಾ 100ರಷ್ಟು ಫಲಿತಾಂಶ ನೀಡಿದ್ದಾರೆ.

ಉತ್ತಮ ಗುಣಮಟ್ಟದ ಮತ್ತು ಸಂಸ್ಕಾರಯುತ ಶಿಕ್ಷಣ ನೀಡುತ್ತಿರುವ ಪ್ರಗತಿ ಪಿ.ಯು ಕಾಲೇಜಿಗೆ ಇದು ಹೆಮ್ಮೆಯ ಘಳಿಗೆ. ಕಳೆದ ನಾಲ್ಕು ವರ್ಷಗಳಿಂದಲೂ ಸತತವಾಗಿ 100 ಕ್ಕೆ 100 ಫಲಿತಾಂಶ ನೀಡುತ್ತಿರುವುದು ಸಂಸ್ಥೆಯ ಗುಣಮಟ್ಟದ ಶಿಕ್ಷಣಕ್ಕೆ ನಿದರ್ಶನವಾಗಿದೆ.

ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಸೌಜನ್ಯ ಹೆಗಡೆ 94.5%, ಪೃಥ್ವಿ ಹೆಗಡೆ ಇವಳು 92.6%, ಹಾಗೂ ಸಮರ್ಥ ರೇವಣಕರ 90.5 % ಗಳಿಸಿದ್ದಾರೆ ಹಾಗೂ ವಾಣಿಜ್ಯ ವಿಭಾಗದಲ್ಲಿ ಮನಸ್ವಿನಿ ಭಟ್ಟ 92.6%, ಅಂಕಗಳನ್ನು ಗಳಿಸಿ ಸಂಸ್ಥೆಗೆ ಕೀರ್ತಿ ತಂದಿರುತ್ತಾರೆ.

ವಿದ್ಯಾನಿಕೇತನ ಸಂಸ್ಥೆಯ ಅಡಿಯಲ್ಲಿ ಮೂರೂರು-ಕಲ್ಲಬ್ಬೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಗತಿ ವಿದ್ಯಾಲಯದಲ್ಲಿ ಶಿಕ್ಷಣದ ಜೊತೆಗೆ ಭಾರತೀ ಕಲಾಕೇಂದ್ರದಲ್ಲಿ ಯಕ್ಷಗಾನ ಸಂಗೀತ, ತಬಲಾ, ಕರಾಟೆ, ಭರತನಾಟ್ಯ ಹಾಗೂ ಇನ್ನಿತರ ಕಲಾ ಪ್ರಕಾರಗಳನ್ನೂ ಕಲಿಸಲಾಗುತ್ತಿದ್ದು ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದು ಸಾಧನೆ ಮಾಡುವ ಜೊತೆಗೆ ಸಂಸ್ಕಾರ ಪಡೆದಿದ್ದು, ಸಂಸ್ಥೆಯ ಸಾರ್ಥಕತೆ ಎಂದು ಸಂಸ್ಥೆಯ ಆಡಳಿತಮಂಡಳಿ ಅಭಿಪ್ರಾಯ ವ್ಯಕ್ತಪಡಿಸಿದೆ.

ಸಾಧನೆಗೈದ ವಿದ್ಯಾರ್ಥಿಗಳನ್ನು ಸಂಸ್ಥೆಯ ಕಾರ್ಯಾಧ್ಯಕ್ಷರು, ಪದಾಧಿಕಾರಿಗಳು, ಪ್ರಾಂಶುಪಾಲರು ಹಾಗೂ ಅಧ್ಯಾಪಕರುಗಳು ಅಭಿನಂದಿಸಿದ್ದಾರೆ.

ಕರ್ನಾಟಕ ಮಂದಿರ ಮಹಾಸಂಘದ ಸಂಯೋಜಕ ಮೋಹನ ಗೌಡ ಅಭಿಪ್ರಾಯ

ದೇವಸ್ಥಾನಗಳಲ್ಲಿ ಧರ್ಮ ಶಿಕ್ಷಣ ಅಗತ್ಯ

◆**ಹುಬ್ಬಳ್ಳಿ:** ಪ್ರಸ್ತುತ ದಿನಗಳಲ್ಲಿ ಸಮಾಜದಲ್ಲಿ ಲವ್ ಜಿಹಾದ್ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿದ್ದು, ಇದಕ್ಕೆಲ್ಲ ಪ್ರಮುಖ ಕಾರಣ ನೋಡುವುದಾದರೆ ಹಿಂದೂಗಳಿಗೆ ಧರ್ಮ ಶಿಕ್ಷಣದ ಅಭಾವ ಎದ್ದು ಕಾಣುತ್ತದೆ. ಹಾಗಾಗಿ ದೇವಸ್ಥಾನಗಳಲ್ಲಿ ಧರ್ಮ ಶಿಕ್ಷಣ ಪ್ರಾರಂಭ ಮಾಡುವುದು ತುಂಬಾ ಆವಶ್ಯಕವಾಗಿದೆ ಎಂದು ಕರ್ನಾಟಕ ಮಂದಿರ ಮಹಾಸಂಘದ ಸಂಯೋಜಕ ಮೋಹನ ಗೌಡ ತಿಳಿಸಿದರು.

ಹುಬ್ಬಳ್ಳಿ ಉತ್ತರ ಕನ್ನಡ ವೈಶ್ಯ ಸಮಾಜದ ಶಂಕರ ಸದನ ಮಂಗಲ ಕಾರ್ಯಾಲಯದಲ್ಲಿ ನಡೆದ ಜಿಲ್ಲಾಮಟ್ಟದ ಅಧಿವೇಶನ ಸಮಾರೋಪದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕರ್ನಾಟಕ ಮಂದಿರ ಮಹಾಸಂಘ ಮುಂದಿನ ಒಂದು ತಿಂಗಳಲ್ಲಿ 100ಕ್ಕೂ ಅಧಿಕ ಮಂದಿರಗಳಲ್ಲಿ ವಸ್ತ್ರಸಂಹಿತೆಯನ್ನೂ ಅಳವಡಿಸಲು ಮತ್ತು 20ಕ್ಕೂ ಹೆಚ್ಚು ಮಂದಿರಗಳಲ್ಲಿ ಧರ್ಮಶಿಕ್ಷಣ ವರ್ಗಗಳನ್ನು ಪ್ರಾರಂಭ ಮಾಡಲು ಧ್ಯೇಯ ಇಟ್ಟುಕೊಂಡಿದೆ ಎಂದರು.

ಮಹಾನಗರ ಪಾಲಿಕೆ ಸದಸ್ಯ ರಾಜಣ್ಣ ಕೊರವಿ ಮಾತನಾಡಿ, ನಮ್ಮ ಮುಂದಿಗೆ ಪೀಳಿಗೆಗೆ ದೇವಸ್ಥಾನದ ಮಹತ್ವವನ್ನು ತಿಳಿಸಿಕೊಡಬೇಕಿದೆ. ಕಷ್ಟ ಬಂದಾಗ ಮಾತ್ರ ದೇವಸ್ಥಾನಕ್ಕೆ ಹೋಗುತ್ತೇವೆ. ದೇವರ ಹತ್ತಿರ ಪ್ರಾರ್ಥನೆ ಮಾಡುತ್ತೇವೆ. ಇಷ್ಟಕ್ಕೆ ಸೀಮಿತವಾಗದೆ ದೇವಸ್ಥಾನಗಳನ್ನು ಉಳಿಸಿಕೊಳ್ಳಲು ನಾವೆಲ್ಲರೂ ಹಿಂದುಗಳು ಒಟ್ಟಾಗಿ ಮುಂದೆ ಬರಬೇಕಿದೆ ಎಂದು ಹೇಳಿದರು. ಲೆಕ್ಕಪರಿಶೋಧಕ ಚನ್ನವೀರ ಮುಂಗರವಾಡಿ ಮಾತನಾಡಿ, ದೇವಸ್ಥಾನಗಳ ಪಾವಿತ್ರ್ಯತೆಯನ್ನು ಕಾಪಾಡುವುದು ಕೇವಲ ಆಡಳಿತ ಮಂಡಳಿಗೆ ಮಾತ್ರ ಸೀಮಿತವಾಗಿಲ್ಲ, ದೇವಸ್ಥಾನಕ್ಕೆ ಬರುವಂತಹ ಭಕ್ತಾದಿಗಳದ್ದು ಕೂಡ ಕರ್ತವ್ಯವಾಗಿದೆ ಎಂದರು. ಹೈಕೋರ್ಟ್ ವಕೀಲರಾದ ನಾರಾಯಣ ಯಾಜಿ, ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ಸಮನ್ವಯಕರಾದ ಗುರುಪ್ರಸಾದ ಗೌಡ, ಮಹಾದೇವ ಸಾಗರೇಕರ್ ಮಾತನಾಡಿದರು. ಗಣ್ಯರಾದ ವಿನಾಯಕ ಆಕಳವಾಡಿ, ಪ್ರಭುರಾಜೀವ್ ಲೋಚನದಾಸ್, ಶಾಂತಣ್ಣ ಕಡಿವಾಳ, ಮಲ್ಲಿಕಾರ್ಜುನ ಸಂತೋಜಿ, ಕೃಷ್ಣಾ ಸಾ ಪವಾರ ಸೇರಿದಂತೆ 250ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.



ಕೈಗೊಂಡ ನಿರ್ಣಯಗಳು

ರಾಜ್ಯದಲ್ಲಿನ ಮುಜರಾಯಿ ಇಲಾಖೆ ಅಡಿ ಇರುವ ದೇವಸ್ಥಾನಗಳನ್ನು ಸರ್ಕಾರದಿಂದ ಮುಕ್ತಗೊಳಿಸಿ ಅವುಗಳನ್ನು ಭಕ್ತರಿಗೆ ಒಪ್ಪಿಸುವ ಮೂಲಕ ಕರ್ನಾಟಕ ಸರ್ಕಾರ, ಸರ್ವೋಚ್ಚ ನ್ಯಾಯಾಲಯದ ಆದೇಶ ಪಾಲನೆ ಮಾಡಬೇಕು. ದೇವಸ್ಥಾನಗಳ ಸಂಪತ್ತನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸುವುದಿಲ್ಲವೆಂದು ಸರ್ಕಾರ ಘೋಷಿಸಬೇಕು. ಪ್ರಾಚೀನ ಮತ್ತು ಐತಿಹಾಸಿಕ ಮಹತ್ವವಿರುವ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಲು ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕು. ಕರ್ನಾಟಕದಲ್ಲಿ ಧಾರ್ಮಿಕ ಮಹತ್ವ ಇರುವ ತೀರ್ಥ ಕ್ಷೇತ್ರಗಳು, ದೇವಸ್ಥಾನಗಳ ಮೇಲಾಗಿರುವ ಅನ್ಯ ಮತೀಯರ ಅತಿಕ್ರಮಣಗಳ ಕುರಿತು ಸಮೀಕ್ಷೆ ನಡೆಸಿ ಅತಿಕ್ರಮಣ ತೆರವುಗೊಳಿಸಬೇಕು. ಈ ವಿಷಯದಲ್ಲಿ ನ್ಯಾಯಾಂಗದಲ್ಲಿ ವ್ಯಾಜ್ಯಗಳಿದ್ದಲ್ಲಿ ತ್ವರಿತವಾಗಿ ಇತ್ಯರ್ಥ ಪಡಿಸಲು ತ್ವರಿತ ಕೋರ್ಟ್ ಸ್ಥಾಪಿಸಬೇಕು. ದೇವಸ್ಥಾನ ಹಾಗೂ ತೀರ್ಥ ಕ್ಷೇತ್ರಗಳ ಪರಿಸರದಲ್ಲಿ ಮದ್ಯ ಮತ್ತು ಮಾಂಸ ಮಾರಾಟ-ಸೇವನೆ ನಿಷೇಧ ಆದೇಶ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳಿಂದ ಸಂಗ್ರಹವಾದ ಕಾಮನ್ ಪೂಲ್ ನಿಧಿಯನ್ನು ಹಿಂದು ಧಾರ್ಮಿಕ ಉದ್ದೇಶಕ್ಕೆ ಮಾತ್ರ ಬಳಸಬೇಕು. ದೇವಸ್ಥಾನದ ಜಾತ್ರೆ, ಉತ್ಸವದ ಸಂದರ್ಭದಲ್ಲಿ ಅನ್ಯ ಮತೀಯರಿಗೆ ವ್ಯಾಪಾರ-ವಹಿವಾಟು ಮಾಡಲು ಅವಕಾಶ ನೀಡಬಾರದು.

ಹಂಪಿ ಎಕ್ಸ್‌ಪ್ರೆಸ್ ರೈಲಿನ ಬೋಗಿಯಲ್ಲಿ ಬೆಂಕಿ ಅವಘಡ

ತಪ್ಪಿದ ಭಾರೀ ಅನಾಹುತ

◆**ಬಳ್ಳಾರಿ:** ಮೈಸೂರು – ಬಳ್ಳಾರಿ ಮೂಲಕ ಹುಬ್ಬಳ್ಳಿ ಕಡೆಗೆ ಸಂಚರಿಸುತ್ತಿದ್ದ ಹಂಪಿ ಎಕ್ಸ್‌ಪ್ರೆಸ್ ರೈಲಿನ ಬೋಗಿಯೊಂದರಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡ ಘಟನೆ ಗುರುವಾರ ಬೆಳಗಿನ ಜಾವ ಸಮೀಪದ ಪಿಡಿಹಳ್ಳಿ ಬಳಿ ನಡೆದಿದೆ. ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ. ಸುದ್ದಿ ತಿಳಿಯುತ್ತಿದ್ದಂತೆ ರೈಲ್ವೆ ಅಧಿಕಾರಿಗಳು, ಸಿಬ್ಬಂದಿ ಸ್ಥಳಕ್ಕೆ ತೆರಳಿ ಬೆಂಕಿನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ರೈಲು ಸಂಚರಿಸುವಾಗ ಏಕಾಏಕಿ ಶ್ಯಾಟ್ ಸರ್ಕ್ಯೂಟ್ ನಿಂದಾಗಿ ಬೆಂಕಿ ಕಾಣಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಧಿಕಾರಿಗಳು ಸುರಕ್ಷತಾ ಕ್ರಮಗಳನ್ನು ಕೈಗೊಂಡ ಬಳಿಕ ರೈಲನ್ನು ಹುಬ್ಬಳ್ಳಿ ಕಡೆಗೆ ಸಂಚರಿಸಲು ಅನುಮತಿ ನೀಡಿದರು. ಪ್ರಯಾಣಿಕರ ಸುರಕ್ಷತೆಗೆ ಕ್ರಮಕೈಗೊಂಡ ಬಳಿಕ ರೈಲು ಸಂಚಾರಕ್ಕೆ ಅನುಮತಿ ನೀಡಲಾಗಿದೆ ಎಂದು ರೈಲ್ವೆ ಸುರಕ್ಷತಾ ಅಧಿಕಾರಿಗಳು, ಪೊಲೀಸರು ತಿಳಿಸಿದರು. ಘಟನೆ ಹಿನ್ನೆಲೆ ಕೆಲ ಕಾಲ ಪ್ರಯಾಣಿಕರು ತೀವ್ರ ಆತಂಕಕ್ಕೆ ಒಳಗಾಗಿದ್ದರು. ನಾ ಮುಂದು, ನೀ ಮುಂದು ಎಂದು ರೈಲಿನಿಂದ ಕೆಳಗಿಳಿಯುವ ದೃಶ್ಯ ಕಂಡು ಬಂತು.

ರೈಲ್ವೆ ಅಧಿಕಾರಿಗಳ ದಾಳಿ, 40 ಕೆಜಿ ಗಾಂಜಾ ವಶ



◆**ಬಳ್ಳಾರಿ:** ಖಚಿತ ಮಾಹಿತಿ ಮೇರೆಗೆ ನಗರದ ರೈಲ್ವೆ ನಿಲ್ದಾಣದಲ್ಲಿ 40 ಕೆಜಿ ಗಂಜಾವನ್ನು ವಶಪಡಿಸಿಕೊಳ್ಳುವಲ್ಲಿ ಬಳ್ಳಾರಿ ರೈಲ್ವೆ ಭದ್ರತಾ ಪಡೆ ಹಾಗೂ ಸಿಐಬಿ ಹುಬ್ಬಳ್ಳಿ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ರೈಲು ಸಂಖ್ಯೆ 18047 ರಲ್ಲಿ ಅನುಮಾನಾಸ್ಪದವಾಗಿ ಪಾಲಿಥಿನ್ ಚೀಲದಲ್ಲಿ ಕಂಡು ಬಂದ 40.495 ಕೆಜಿ ಗಾಂಜಾವನ್ನು ಸಾಗಣೆ ಮಾಡುತ್ತಿರುವ ಕುರಿತು ಖಚಿತ ಪಡೆದ ಅಧಿಕಾರಿಗಳು, ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಪತ್ತೆಯಾಗಿದೆ. ಸುಮಾರು 20 ಲಕ್ಷಕ್ಕೂ ಹೆಚ್ಚು ಮೌಲ್ಯದ್ದುಎಂದುಅಂದಾಜಿಸಲಾಗಿದೆ. ಅನುಮಾನ ಬಾರದ ರೀತಿಯಲ್ಲಿ ಸಾಗಣೆ ಮಾಡುವ ವ್ಯವಸ್ಥಿತ ಜಾಲ ಇದನ್ನು ನಡೆಸಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದು, ತನಿಖೆ ಮುಂದುವರಿದಿದೆ. ಪ್ರಕರಣ ರೈಲ್ವೆ ಪೊಲೀಸ ಠಾಣೆಯಲ್ಲಿ ದಾಖಲಾಗಿದೆ.

ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಗೆಲುವು ಖಚಿತ: ಸಚಿವ ಖರ್ಗೆ

◆**ಕಲಬುರಗಿ:** ರಾಜ್ಯದ ದಾವಣಗೆರೆ ಹಾಗೂ ಬಾಗಲಕೋಟೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ದೊಡ್ಡ ಅಂತರದಲ್ಲಿ ಜಯ ಸಾಧಿಸಲಿದೆ. ರಾಜ್ಯ ಸರ್ಕಾರದ ಪಂಚ್ ಗ್ಯಾರಂಟಿ ಯೋಜನೆಗಳು ಜನರಿಗೆ ಅನುಕೂಲವಾಗಿದ್ದು,ಅದೇ ನಮ್ಮ ಪಕ್ಷದ ಗೆಲುವಿಗೆ ಕಾರಣವಾಗಲಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.



ನಗರದ ಐವನ್ ಶಾಹಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಪಕ್ಷದ ಹಿರಿಯರು ದಿ.ಶಾಮನೂರ್ ಶಿವಶಂಕರಪ್ಪ ಮತ್ತು ಮೇಟಿ ಅವರಕಾರ್ಯವೂಪಕ್ಷದಬಲವನ್ನು ಹೆಚ್ಚಿಸಲಿದೆ. ರಾಜ್ಯದ ಜನ ಅಭಿವೃದ್ಧಿ ಪರ ಒಲವು ತೋರಿಸಲಿದ್ದು, ದಾವಣಗೆರೆ ಹಾಗೂ ಬಾಗಲಕೋಟೆ ಫಲಿತಾಂಶದಲ್ಲಿ ತಿಳಿಯಲಿದೆ ಎಂದ ಅವರು, ಕಾಂಗ್ರೆಸ್ ಎರಡು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ ಎಂದರು. ಇನ್ನೂ ಆರೆಸ್ಸೆಸ್ ವಿರುದ್ಧ ಮಲ್ಲಿಕಾರ್ಜುನ ಖರ್ಗೆ ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ ಬಿಜೆಪಿ ನೀಡಿದ ದೂರಿನ ವಿಚಾರಕ್ಕೂ ಪ್ರತಿಕ್ರಿಯಿಸಿದ ಅವರು, ಆರ್‌ಎಸ್‌ಎಸ್ ಸದಸ್ಯರೇ ಸ್ವತಃ ದೂರು ನೀಡಬಹುದಿತ್ತು. ಅವರು ಯಾರ ಸಹಾಯವೂ ಬೇಡವೆಂದಿದ್ದಾರೆ. ಹಾಗಿದ್ದರೆ ಬಿಜೆಪಿ ಏಕೆ ದೂರು ಕೊಡುತ್ತಿದೆ ಎಂದು ಪ್ರಶ್ನಿಸಿದ ಅವರು, ವಿಷಸರ್ಪ ಕಂಡರೆ ಯಾರಾದರೂ ಅದಕ್ಕೆ ಹಾಲು ಕುಡಿಸುತ್ತಾರಾ? ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಲು ಆಗದೆ ಅಟೆನ್ಷನ್ ಡೈವರ್ಷನ್ ಮಾಡುವ ತಂತ್ರವನ್ನು ಬಳಸುತ್ತಿದ್ದಾರೆ. ಜನರು ಇದಕ್ಕೆತಕ್ಕಪಾಠ ಕಲಿಸುತ್ತಾರೆಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಎಂ.ಎಲ್.ಸಿ ತಿಪ್ಪಣ್ಣಪ್ಪ ಕಮಕನೂರು, ಜಗದೇವ ಗುತ್ತೇದಾರ, ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಪಾಟೀಲ್ ಹರವಾಳ ಉಪಸ್ಥಿತರಿದ್ದರು.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ಪತ್ರಿಕೆ

ಕಿರುಸುದ್ದಿ

ಶಂಕುಸ್ಥಾಪನೆ ಇಂದು

◆**ಗದಗ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಸಹಯೋಗದೊಂದಿಗೆ ಏ.10 ರಂದು ಬೆಳಗ್ಗೆ 10.30ಕ್ಕೆ ರಾಜೀವಗಾಂಧಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಆವರಣದ ರೋಣ ಪಟ್ಟಣದಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಶ್ರಮಿಕ ವಸತಿ ಶಾಲಾ ಕಟ್ಟಡದ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕಾರ್ಮಿಕ ಸಚಿವ ಸಂತೋಷ್ ಲಾಡ್ ಕಾರ್ಯಕ್ರಮದ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಶಂಕುಸ್ಥಾಪನೆ ನೆರವೇರಿಸುವರು. ಶಾಸಕ ಜಿ.ಎಸ್.ಪಾಟೀಲ ಅಧ್ಯಕ್ಷತೆ ವಹಿಸುವರು. ವಿಧಾನ ಪರಿಷತ್ ಶಾಸಕ ಹಾಗೂ ಸರ್ಕಾರ ಮುಖ್ಯ ಸಚೇತಕ ಸಲೀಂ ಅಹ್ಮದ್, ಸಂಸದ ಬಸವರಾಜ ಬೊಮ್ಮಾಯಿ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಶಾಸಕ ಸಿ.ಸಿ.ಪಾಟೀಲ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ರೋಣ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಮಿಥುನ್ ಪಾಟೀಲ ಆಗಮಿಸುವರು.

ವಿದ್ಯಾರ್ಥಿ ಸಂಘದ ಉದ್ಘಾಟನೆ ನಾಳೆ

◆**ಮುಂಡರಗಿ:** ಇಲ್ಲಿಯ ಶ್ರೀ ಜ.ಅ.ವಿದ್ಯಾಸಮಿತಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಸ್ತುತ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನೆ ಹಾಗೂ ಬಿ.ಇಡಿ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ಏ.11ರಂದು ಬೆಳಗ್ಗೆ 11ಕ್ಕೆ ಕಾಲೇಜಿನ ಸಭಾಭವನದಲ್ಲಿ ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳ ಸಾನ್ನಿಧ್ಯದಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ಕಾಲೇಜು ಮೇಲ್ವಿಚಾರಣಾ ಸಮಿತಿಯ ಕಾರ್ಯಾಧ್ಯಕ್ಷ ಸಿ.ಎಸ್.ಅರಸನಾಳ ವಹಿಸುವರು. ಸಮಿತಿಯ ಆಡಳಿತಾಧಿಕಾರಿ ಡಾ.ಬಿ.ಜಿ.ಜವಳಿ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಬಿಇಒ ಗಂಗಾಧರ ಅಣ್ಣಿಗೇರಿ, ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ಎಸ್.ವಿ.ಕಲ್ಲೂರ ಆಗಮಿಸುವರು. ಅತಿಥಿಗಳಾಗಿ ಮೇಲ್ವಿಚಾರಣಾ ಸಮಿತಿಯ ಉಪಕಾರ್ಯಾಧ್ಯಕ್ಷ ಯು.ಸಿ.ಹಂಪಿಮಠ, ಸದಸ್ಯರಾದ ನಾಗೇಶ ಹುಬ್ಬಳ್ಳಿ, ಅಜ್ಜಪ್ಪ ಲಿಂಬಿಕಾಯಿ, ಪ್ರಾಚಾರ್ಯ ಡಾ.ಎಂ.ವಿ.ಕುಲಕರ್ಣಿ ಆಗಮಿಸುವರು. ಈ ವೇಳೆ ಉಜ್ಜನಿ ರವಿಚಂದ್ರ, ಮಟ್ಟದರಾಜ ಚಿಂಚಲಿ ಇವರನ್ನು ಸನ್ಮಾನಿಸಲಾಗುವುದು.

ನಾಳೆ ಶರಣ ಚಿಂತನ ಮಾಲೆ

◆**ಮುಂಡರಗಿ:** ಇಲ್ಲಿಯ ಕನ್ನಡ ಸಾಹಿತ್ಯ ಪರಿಷತ್ತು ಏ.11ರಂದು ಸಂಜೆ 4.30ಕ್ಕೆ ಶ್ರೀ ಜಗದ್ಗುರು ಅನ್ನದಾನೀಶ್ವರ ಸಾಹಿತ್ಯ ಭವನದಲ್ಲಿ ಶರಣ ಚಿಂತನ ಮಾಲೆ-38 ತಾಲೂಕಾ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ ಅಧ್ಯಕ್ಷತೆಯಲ್ಲಿ ಜರಗುವುದು. ಉದ್ಘಾಟನೆಯನ್ನು ಶರಣ ಚಿಂತಕ ಬಸವರಾಜ ರಾಮೇನಹಳ್ಳಿ ನೆರವೇರಿಸುವರು. ಸಾಹಿತಿ ವೀರಣ್ಣ ಹುರಕಡ್ಲಿ ಅವರು ಶರಣ ಶಂಕರ ದಾಸಿಮಯ್ಯ ಕುರಿತು ಉಪನ್ಯಾಸ ನೀಡುವರು.

ನಿಧನಸುದ್ದಿ

ಯಮನಮ್ಮ ಕುರ್ತಕೋಟಿ



◆**ನರೇಗಲ್ಲ:** ಸಮೀಪದ ಜಕ್ಕಲಿ ಗ್ರಾಮದ ನಿವಾಸಿಯಾದ ಯಮನಮ್ಮ ಈಶ್ವರಪ್ಪ ಕುರ್ತಕೋಟಿ (96) ಅವರು ಬುಧವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಐವರು ಪುತ್ರಿಯರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರು ಹುನಗುಂದ ತಾಲೂಕಿನ ಕಾನಿಪ ಹಿರಿಯ ಸದಸ್ಯ, ಪತ್ರಕರ್ತ ವೀರಪ್ಪ ಕುರ್ತಕೋಟಿ ಅವರ ತಾಯಿ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಅಜವಾನ	8669-9069
ಅಲಸಂದಿ	3209-6102
ಕಡಲೆ	2380-5425
ಉದ್ದು	1012-5612
ಹವೀಜ	8569-8569
ಹೆಸರು	1009-8969
ಶೇಂಗಾ	2249-6901
ಜೋಳ	1914-4389
ಗೋವಿನಜೋಳ	1412-1818
ಮಡಕಿ	11105-11105
ಸಾಸವಿ	4031-5319
ಕುಸಬಿ	5079-5710
ಹತ್ತಿ	7601-7601
ಹುರಳಿ	2677-4401
ಸೂರ್ಯಕಾಂತಿ	2551-5982
ತೊಗರಿ	1864-4412
ಗೋಧಿ	1677-5210



ನರಗುಂದ: ಜನಗಣತಿ -2027 ರ ನಿಮಿತ್ತ ಮನೆಗಣತಿ ಕಾರ್ಯದ ಕುರಿತು ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ಪಟ್ಟಣದ ಚಾರ್ಜ ಕುರಿತು ತರಬೇತಿ ಕಾರ್ಯಕ್ರಮವನ್ನು ತಾಲೂಕು ಪಂಚಾಯತ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ತರಬೇತಿಯನ್ನು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅವರು ಭೇಟಿ ಮಾಡಿ ಪರಿಶೀಲಿಸಿದರು. ಯೋಜನಾ ನಿರ್ದೇಶಕ ಬಸನಗೌಡ ಕೊಟೂರ, ಚಾರ್ಜ್ ಅಧಿಕಾರಿ ಎಸ್.ಎಸ್. ಬ್ಯಾಳಿ ಹಾಗೂ ಫೀಲ್ಡ್ ಟ್ರೇನರ್ಸ್ ಹಾಗೂ ಇತರರಿದ್ದರು.

ಚುಟುಕು ಸಾಹಿತ್ಯ ಸಂಭ್ರಮ ನಾಳೆ



◆**ರೋಣ:** ಪಟ್ಟಣದಲ್ಲಿರುವ ಲೋಕಾನಾಥೇಶ್ವರನಿಗೆ 111 ಜಂಗಮರಿಂದ ಶಾಸಕ ಜಿ.ಎಸ್ .ಪಾಟೀಲರ 78ನೇ ಹುಟ್ಟು ಹಬ್ಬದ ನಿಮಿತ್ತ ಏಕದಶ ಮಹಾರುದ್ರಾಭಿಷೇಕ ಧಾರ್ಮಿಕ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಂಗಮ ಸಮುದಾಯದ ಮುಖಂಡರು ಹಾಗೂ ಚುಟುಕು ಸಾಹಿತ್ಯ ಪರಿಷತ್‌ನ ಜಿಲ್ಲಾ ಕಾರ್ಯದರ್ಶಿ ವಿ.ಬಿ.ಸೋಮನಕಟ್ಟಿಮಠ ಹೇಳಿದರು. ಅವರು ಪಟ್ಟಣದ ಲೋಕೋಪಯೋಗಿ ಇಲಾಖೆಯ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಶಾಸಕ ಜಿ.ಎಸ್.ಪಾಟೀಲರ ಹುಟ್ಟು ಹಬ್ಬದ ನಿಮಿತ್ತ ಸಮಾಜದ ಬಂಧುಗಳು ಮೊದಲಿನಿಂದಲೂ ಅನೇಕ ಸಮಾಜ ಮುಖಿ ಕಾರ್ಯಗಳನ್ನು ಹಮ್ಮಿಕೊಂಡು ಬಂದಿದೆ. ಆದರೆ ಈ ಬಾರಿ ಶಾಸಕ ಜಿ.ಎಸ್.ಪಾಟೀಲರಿಗೆ ದೇವರು ಮತ್ತಷ್ಟು ಶಕ್ತಿ ನಿಡಲೆಂದು ಲೋಕನಾಥೇಶ್ವರನಿಗೆ 111 ಜಂಗಮರಿಂದ ಏಕದಶಿ ಮಹಾರುದ್ರಭಿಷೇಕ ಏ.10 ರ ಬೆಳಗ್ಗೆ 5 ರಿಂದ 7.30 ರವರೆಗೆ ಜರುಗಲಿದ್ದು, ಈ ಧಾರ್ಮಿಕ ಕಾರ್ಯವು ಕಾಶಿ ಪಾಠ ಶಾಲೆಯ 11 ಪಂಡಿತರಿಂದ ಒಂದೆ ಧ್ವನಿಯಲ್ಲಿ ಮಂತ್ರಘೋಷಗಳು ಮೊಳಗಲಿರುವುದು ಮತ್ತಷ್ಟು ವಿಶೇಷವಾಗಿದೆ ಎಂದರು. ಇನ್ನು ಏ.10ರಂದು ರೋಣ ತಾಲೂಕಿನಲ್ಲಿ ಚುಟುಕು ಸಾಹಿತ್ಯ ಸಂಭ್ರಮವನ್ನು ಏರ್ಪಡಿಸಲಾಗಿತ್ತು. ಆದರೆ ಅಂದು ಶಾಸಕ ಜಿ.ಎಸ್.ಪಾಟೀಲರಿಗೆ ಬಿಡುವಿಲ್ಲದ ಕಾರ್ಯಕ್ರಮಗಳು ನಿಗದಿಯಾದ ಪ್ರಯುಕ್ತ ಏ.10ರ ಬದಲು ಏ.11ರ ಬೆಳಗ್ಗೆ 11ಕ್ಕೆ ಪಟ್ಟಣ ಗುರುಭವನದಲ್ಲಿ ನಡೆಸಲು ತಿರ್ಮಾನಿಸಲಾಗಿದೆ ಎಂದರು. ಜಂಗಮ ಸಮುದಾಯದ ಮುಖಂಡರುಗಳು ಉಪಸ್ಥಿತರಿದ್ದರು.



ಗದಗ: ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಸ್ಥಳೀಯ ಅಲ್ಪಸಂಖ್ಯಾತರ ಕುಂದುಕೊರತೆ ವಿಚಾರಣೆ ಮತ್ತು ಅಲ್ಪಸಂಖ್ಯಾತ ಮಹಿಳೆಯರು ಮತ್ತು ಸ್ಥಳೀಯ ಮಹಿಳಾ ಅಧಿಕಾರೇತರ ಸಂಸ್ಥೆಗಳಿಗೆ ಸಾಕ್ಷರತೆ ಪ್ರೇರೇಪಿಸಲು ಜಾಗೃತಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷ ಯು. ನಿಸಾರ್ ಅಹಮದ್ ಅವರು ಅಲ್ಪಸಂಖ್ಯಾತರ ಕುಂದುಕೊರತೆ ವಿಚಾರಿಸಿ ಅಹವಾಲು ಸ್ವೀಕರಿಸಿದರು. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಅಮಿತ ಬಿದರಿ, ವಕ್ಫ್ ಬೋರ್ಡ್‌ನ ಕೌಸಿಫ್ ಮಕಾನದಾರ, ಮುಜಾಬುಲ್ಲಾ ಜಾಫರ್ ಇತರರಿದ್ದರು.

ರಾಜ್ಯಕ್ಕೆ ಗದಗ 30ನೇ ಸ್ಥಾನ

◆**ಗದಗ:** ದ್ವಿತೀಯ ಪಿಯು ಪರೀಕ್ಷೆ ಫಲಿತಾಂಶ ಗುರುವಾರ ಪ್ರಕಟವಾಗಿದ್ದು, ಜಿಲ್ಲೆ ಶೇ.76.65 ಫಲಿತಾಂಶ ದಾಖಲಿಸಿ ರಾಜ್ಯ ಮಟ್ಟದಲ್ಲಿ 30ನೇ ಸ್ಥಾನದಲ್ಲಿದೆ. 2024-25ನೇ ಸಾಲಿನಲ್ಲಿ ಜಿಲ್ಲೆ ಶೇ.66.64 ಅಂಕಗಳಿಸಿ 25ನೇ ಸ್ಥಾನದಲ್ಲಿತ್ತು. ಈ ಬಾರಿ ಶೇ.10.01 ರಷ್ಟು ಹೆಚ್ಚು ಫಲಿತಾಂಶ ದಾಖಲಿಸಿದ್ದರೂ ರ್‍ಯಾಂಕಿಂಗ್‌ನಲ್ಲಿ ಇನ್ನಷ್ಟು ಕೆಳಕ್ಕೆ ಕುಸಿದಿದೆ.

ಕಲಾ ವಿಭಾಗದಲ್ಲಿ ಜಿಲ್ಲೆಗೆ ಟಾಪರ್ ಕಲಾ ವಿಭಾಗದಲ್ಲಿ ನರೇಗಲ್ಲ ಪಟ್ಟಣದ ಎಸ್‌ಎ ಪಿಯು ಕಾಲೇಜಿನ ಹುಲಿಗೆಮ್ಮ 589 (ಶೇ.98) ಅಂಕಗಳೊಂದಿಗೆ ಜಿಲ್ಲೆಗೆ ಪ್ರಥಮ, ಲಕ್ಷ್ಮೇಶ್ವರದ ಎಸ್‌ಎಂಜೆವಿಜಿ ಪಿಯು ಕಾಲೇಜಿನ ರೋಹಿಣಿ ಬೆಟಗೇರಿ 584 (ಶೇ.97.33) ಅಂಕಗಳೊಂದಿಗೆ ದ್ವಿತೀಯ ಹಾಗೂ ಶಿಗ್ಲಿಯ ಸರ್ಕಾರಿ ಪಿಯು ಕಾಲೇಜಿನ ದೀಪಾ ಪಾಟೀಲ 577 (ಶೇ.96.16) ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ವಿಜ್ಞಾನ ವಿಭಾಗದಲ್ಲಿ ಗದಗ ಸರ್ಕಾರಿ ಪಿಯು ಕಾಲೇಜಿನ ಸಮೃದ್ಧಿ ಸಿದ್ದಲಿಂಗ 591 (ಶೇ.98.4) ಅಂಕಗಳೊಂದಿಗೆ ಪ್ರಥಮ, ಸನ್ಮಾರ್ಗ ಪಿಯು ಕಾಲೇಜಿನ ಕಿರಣ ಹಿರೇಮಠ 590 (ಶೇ.98.3) ಅಂಕಗಳೊಂದಿಗೆ ದ್ವಿತೀಯ ಹಾಗೂ ಬಿಪಿನ್ ಚಿಕ್ಕಟ್ಟಿ ಪಿಯು ಕಾಲೇಜಿನ ನಿಸರ್ಗ ವಸ್ತ್ರದ 585 (ಶೇ. 97.50) ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ವಾಣಿಜ್ಯ ವಿಭಾಗದಲ್ಲಿ ಮುಂಡರಗಿ ಜೆಎ ಪಿಯು ಕಾಲೇಜಿನ ಪದ್ಮಪ್ರಿಯ ಶೆಟ್ಟರ ಹಾಗೂ ಬಳಗಾನೂರ ಚಿಕೇನಕೊಪ್ಪ ಶರಣರ ಮಠದ ಗೀತಾ ಹೂಗಾರ 590 (ಶೇ. 98.3) ಅಂಕಗಳೊಂದಿಗೆ ಪ್ರಥಮ, ಬೆಟಗೇರಿ ಪಿಯು ಕಾಲೇಜಿನ ವಿನಿತಾ ಬಂಡಾ, ಪ್ರಿಯಾಂಕ ಎಚ್., ಆದಿತ್ಯ ರಾಯಬಾಗಿ 589 (ಶೇ. 97.20) ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಕಳೆದ ಮೂರು ವರ್ಷಗಳ ಫಲಿತಾಂಶದ ಅಂಕಿ ಅಂಶಗಳನ್ನು ಗಮನಿಸಿದರೆ ಜಿಲ್ಲೆ ರ್‍ಯಾಂಕಿಂಗ್‌ನಲ್ಲಿ ವರ್ಷದಿಂದ ವರ್ಷಕ್ಕೆ ಕುಸಿಯುತ್ತಲೇ ಇರುವುದು ಗೊತ್ತಾಗುತ್ತದೆ. 2022-23ನೇ ಸಾಲಿನಲ್ಲಿ ಶೇ.66.91 ಫಲಿತಾಂಶ ದಾಖಲಿಸಿ, 30ನೇ ಸ್ಥಾನದಲ್ಲಿತ್ತು. 2023-24ನೇ ಸಾಲಿನಲ್ಲಿ ಜಿಲ್ಲೆ ಶೇ.72.86 ಫಲಿತಾಂಶ ದಾಖಲಿಸಿ, ಕೊನೆ ಸ್ಥಾನದಲ್ಲಿತ್ತು. 2024-25ನೇ ಸಾಲಿನಲ್ಲಿ ಶೇ. 66.64 ಫಲಿತಾಂಶ ದಾಖಲಿಸಿ, 25ನೇ ಸ್ಥಾನದಲ್ಲಿತ್ತು. ಕಳೆದ ವರ್ಷ ರ್‍ಯಾಂಕಿಂಗ್‌ನಲ್ಲಿ ಏಳು ಸ್ಥಾನ ಮೇಲಕ್ಕೇರಿದ್ದರೂ ಜಿಲ್ಲೆಯ ಶೇಕಡಾವಾರು ಫಲಿತಾಂಶ ಶೇ.6.22ರಷ್ಟು ಕುಸಿತ ಕಂಡಿತ್ತು. ಪ್ರಸಕ್ತ ವರ್ಷ ಶೇ.76.65 ಫಲಿತಾಂಶ ದಾಖಲಿಸಿ 30ನೇ ಸ್ಥಾನಕ್ಕೆ ದೂಡಲ್ಪಟ್ಟಿದೆ. ಪಿಯು ಫಲಿತಾಂಶ ಸುಧಾರಣೆಗೆ ಇಲಾಖೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಉಪನ್ಯಾಸಕರಿಗೆ ತರಬೇತಿ ಶಿಬಿರ, ವಿದ್ಯಾರ್ಥಿಗಳಿಗೆ ವಿಶೇಷ ತರಗತಿ, ಪ್ರಶ್ನೆಪತ್ರಿಕೆ ಬಿಡಿಸುವ ಕಾರ್ಯಾಗಾರ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ನಡೆಸಲಾಗಿತ್ತು. ಆದರೆ ಜಿಲ್ಲೆ ಪಿಯು ಫಲಿತಾಂಶದಲ್ಲಿ ಈ ಬಾರಿಯಾದರೂ ಟಾಪ್ ಟೆನ್ ಒಳಗೆ ಸ್ಥಾನ ಪಡೆಯಬೇಕು ಎಂಬ ಆಸೆ ಈಡೇರಿಲ್ಲ ಎಂಬುದು ಸಾರ್ವಜನಿಕರ ಬೇಸರಕ್ಕೆ ಕಾರಣವಾಗಿದೆ.





> ಫಲಿತಾಂಶ ಹೆಚ್ಚಿಸಲು ಜಿಲ್ಲಾದ್ಯಂತ ಪ್ರತಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಓದುವ, ಬರೆಯುವ ಹಾಗೂ ಮಾತನಾಡುವ ಕೌಶಲ್ಯವನ್ನು ಆರಂಭದಿಂದಲೇ ಜಾರಿಗೊಳಿಸಿ ಕ್ರಮ ಕೈಗೊಳ್ಳಲಾಗಿತ್ತು. ಶೈಕ್ಷಣಿಕ ವರ್ಷ ಆರಂಭದಿಂದಲೇ ಉಪನ್ಯಾಸಕರಿಗೆ ಫಲಿತಾಂಶ ಹೆಚ್ಚಿಸುವ ತರಬೇತಿ, ಪ್ರತಿ ಕಾಲೇಜಿನ ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ಪ್ರತಿ ಭಾನುವಾರ ವಿಶೇಷ ತರಗತಿ ಹಮ್ಮಿಕೊಳ್ಳಲಾಗಿತ್ತು. ಈ ಎಲ್ಲ ಫಲಿತಾಂಶ ಹೆಚ್ಚಿಸುವ ವಿಶೇಷ ತರಬೇತಿ ಹಾಗೂ ಕಾರ್ಯಾಗಾರಗಳಲ್ಲಿ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಆಸಕ್ತಿಯಿಂದ ಪಾಲ್ಗೊಂಡಿದ್ದರೂ ಉತ್ತಮ ಫಲಿತಾಂಶ ಹೊರಬರಲು ಸಾಧ್ಯವಾಗಿಲ್ಲ. ಈ ಕುರಿತು ಆತ್ಮಾವಲೋಕನ ಮಾಡಲಾಗುವುದು.
>
> ■ ಎಸ್.ಬಿ.ಮಸನಾಯಕ, ಉಪ ನಿರ್ದೇಶಕ, ಶಾಲಾ ಶಿಕ್ಷಣ ಇಲಾಖೆ

ತಪ್ಪು ಮಾಹಿತಿ

ಗದಗ: ರಾಜ್ಯದಲ್ಲಿ ಮಧ್ಯಾಹ್ನ 3.30ಕ್ಕೆ ಪಿಯು ಫಲಿತಾಂಶ ಪ್ರಕಟಗೊಂಡರೂ ಸಹ ಜಿಲ್ಲೆಯ ಡಿಡಿಪಿಯು ಎಸ್. ಬಿ. ಮಸನಾಯಕ ಅವರಿಗೆ ಸಂಜೆ 7.45ರ ವರೆಗೂ ಜಿಲ್ಲೆಯ ಲಿತಾಂಶ ಬಗ್ಗೆ ನಿಖರ ಮಾಹಿತಿ ಇರಲಿಲ್ಲ, ಡಿಡಿಪಿಯು ತಪ್ಪ ಮಾಹಿತಿ ನೀಡಿದ್ದರಿಂದ ಮಾಧ್ಯಮದವರಿಗೆ ಗೊಂದಲ ಸೃಷ್ಟಿ ಆಯಿತು. ಗದಗ ಜಿಲ್ಲೆ 30ನೇ ಸ್ಥಾನಕ್ಕೆ ಕುಸಿದಿದ್ದರೂ ಸಹ ಜಿಲ್ಲೆಯೂ 25ನೇ ಸ್ಥಾನ ಪಡೆದಿದೆ ಎಂದು ಮಾಧ್ಯಮಕ್ಕೆ ತಿಳಿಸಿ ನಿರ್ಲಕ್ಷ್ಯ ವಹಿಸಿದ್ದರು. ಕೃಷಿ ಇಲಾಖೆ ಅಧಿಕಾರಿ ಒಬ್ಬರು ವರ್ಷ ಮಾಡಿದ್ದ ಮಾಹಿತಿಯನ್ನೇ ಅಂತಿಮ ಎಂದು ತಿಳಿಸಿ ಅದನ್ನೇ ಮಾಧ್ಯಕ್ಕೆ ನೀಡಿದ್ದರು. ಇಲಾಖೆ ಅಧಿಕಾರಿಗಳಾಗಿ ಜಿಲ್ಲೆಯಲ್ಲಿ ಎಷ್ಟು ವಿದ್ಯಾಥಿರ್, ವಿದ್ಯಾಥಿರ್ನಿಯರು ಪರೀಕ್ಷೆಗೆ ಹಾಜರಾಗಿದ್ದಾರೆ ಎಂಬ ಮಾಹಿತಿಯೂ ಅವರ ಬಳಿ ಇರಲಿಲ್ಲ, ಎಲ್ಲದಕ್ಕೂ ಶುಕ್ರವಾರ ನೀಡುವುದಾಗಿ ಹೇಳಿ ಜಾರಿಕೊಂಡರು. ಸಂಜೆ 8 ಗಂಟೆ ವರೆಗೂ ಜಿಲ್ಲೆ 30ನೇ ಸ್ಥಾನಕ್ಕೆ ಕುಸಿದೆ ಎಂಬ ಮಾಹಿತಿಯೂ ಅವರ ಬಳಿ ಇರಲಿಲ್ಲ ಎಂಬುದು ಪಿಯು ವಿಭಾಗ ಎಷ್ಟರ ಮಟ್ಟಿಗೆ ನಿಷ್ಕಾಳಜಿ ವಹಿಸಿದೆ ಎಂಬುದನ್ನು ತೋರಿಸುತ್ತದೆ ಎಂದು ಸಾರ್ವಜನಿಕರು ಆರೋಪಿಸಿದರು.

ವಸ್ತುಗಳ ಮಾರಾಟಕ್ಕೆ ತರಬೇತಿ ಅಗತ್ಯ



◆**ರೋಣ:** ಸ್ವತಃ ತಯಾರಿಸಿದ ವಸ್ತುಗಳ ಮಾರಾಟಕ್ಕೆ ತರಬೇತಿ ಅಗತ್ಯವಾಗಿದ್ದು, ಮಹಿಳೆ ಮನಸ್ಸು ಮಾಡಿದರೆ ಯಶಸ್ವಿ ಜೀವನ ಸಾಧ್ಯ ಎಂದು ಶಿರಹಟ್ಟಿ ಮಠದ ದಿಂಗಾಲೇಶ್ವರ ಶ್ರೀಗಳು ಹೇಳಿದರು.

ಅವರು ಗುರುವಾರ ಪಟ್ಟಣದ ಆರ್ ಜಿಪಿಸ್ ಶಿಕ್ಷಣ ಸಂಸ್ಥೆ ಆವರಣದಲ್ಲಿ ಎಸ್. ಆರ್.ಪಾಟೀಲ ಫೌಂಡೇಶನ್ ಅವರು ಶಾಸಕ ಜಿ.ಎಸ್.ಪಾಟೀಲ ಅವರ 78ನೇ ಹುಟ್ಟುಹಬ್ಬದ ನಿಮಿತ್ತ ಹಮ್ಮಿಕೊಂಡಿದ್ದ ಉದ್ಯೋಗ ಮೇಳ ಮತ್ತು ಕೌಶಲ್ಯ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಅವರು ಆಶೀರ್ವಚನ ನೀಡಿದರು. ಮಹಿಳೆ ಹೊರಗಡೆ ಬಂದು ದುಡಿಯಬೇಕು ಅಂತಲ್ಲ ಬದಲಾಗಿ ಮನೆಯಲ್ಲಿ ಕುಳಿತುಕೊಂಡು ಆದಾಯ ವೃದ್ಧಿ ಮಾಡುವ ಚಾಕಚಕ್ಯತೆಯನ್ನು ಹೊಂದಬೇಕು. ಅನೇಕ ಮಹಿಳೆಯರು ರುಚಿಯಾದ ಅಡುಗೆ ಮಾಡುವ ಕಲೆಯನ್ನು ಹೊಂದಿದ್ದಾರೆ. ಅಂತಹ ಮಹಿಳೆಯರು ಕೆಲ ಸರ್ಕಾರಿ ಕಚೇರಿಗಳಿಗೆ ಅಥವಾ ಖಾಸಗಿ ಕಂಪನಿಗಳಿಗೆ ನಿತ್ಯ ಊಟ ಸರಬರಾಜು ಮಾಡುವ ಬುಕಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕು. ಇದರಿಂದ ಕುಟುಂಬದ ಆರ್ಥಿಕ ಶಕ್ತಿ ಸುಧಾರಣೆಯಾಗುತ್ತದೆ. ಕುಟುಂಬದ ಇತರ ಸದಸ್ಯರಗಳನ್ನು ಕೂಡಾ ಈ ಕಾರ್ಯಕ್ಕೆ ಬಳಕೆ ಮಾಡಿಕೊಳ್ಳಬೇಕು. ನಾವು ಮಾಡುವ ಕೆಲಸಗಳನ್ನು ಸಣ್ಣದು ದೊಡ್ಡದು ಎಂಬ ಭಾವನೆಗಳಿಂದ ನೋಡಬಾರದು. ಸಿಕ್ಕ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವ ಕಲೆಯನ್ನು ಬೆಳೆಸಿಕೊಳ್ಳಬೇಕು ಎಂದರು.

ಚಿತ್ರನಟಿ ಕಾರುಣ್ಯ ರಾಮ ಮಾತನಾಡಿ, ಕಷ್ಟಗಳು ಬಂದಾಗ ಮಾತ್ರ ಜೀವನದ ಗುಣ ಮಟ್ಟದ ಸುಧಾರಣೆಯಾಗಲು ಸಾಧ್ಯ. ಕಷ್ಟಗಳು ಬರುತ್ತಿವೆ ಎಂದು ಭಯ ಪಡುವ ಬದಲು ನಾನು ಯಾವುದರಲ್ಲಿ ಪ್ರತಿಭೆಯನ್ನು ಇಟ್ಟುಕೊಂಡಿದ್ದೇನೆ ಎಂಬುದನ್ನು ಅರಿತು, ಆ ಪ್ರತಿಭೆಯನ್ನು ಹೊರತರುವ ಕೆಲಸವನ್ನು ನಾವೇ ಮಾಡಿಕೊಳ್ಳಬೇಕು. ಅಂದಾಗ ವೇದಿಕೆಗಳು ನಮಗೆ ಸಿಗತೊಡಗುತ್ತವೆ ಎಂದರು.

ಗುಲಗಂಜಿ ಮಠದ ಗುರುಪಾದ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಶಾಸಕ ಜಿ.ಎಸ್ .ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಐ.ಎಸ್ .ಪಾಟೀಲ, ಸಂಗನಗೌಡ ಪಾಟೀಲ, ಅಕ್ಷಯ ಪಾಟೀಲ, ವೀರಣ್ಣ ಶೆಟ್ಟರ, ಶಿದ್ದಣ್ಣ ಬಂಡಿ, ವಿ.ಬಿ.ಸೋಮನಕಟ್ಟಿಮಠ, ಯೂಸುಫ್ ಇಟಗಿ, ಮಹೇಶ ಕಳಸಣ್ಣವರ, ಮಂಜುಳಾ ಹುಲ್ಲಣ್ಣವರ, ನಾಜಬೇಗಂ ಯಲಿಗಾರ, ಭವ್ಯಾ ಸೇರಿದಂತೆ ಎಂಎನ್‌ಸಿ ಕಂಪನಿಗಳ ಮುಖ್ಯಸ್ಥರುಗಳು ಉಪಸ್ಥಿತರಿದ್ದರು.

ಬ್ಯಾಂಕ್ ಪರೀಕ್ಷೆಗಳು ಅತೀ ಸುಲಭ: ಪ್ರವೀಣ

◆**ಮುಂಡರಗಿ:** ಸ್ಥಳೀಯ ಶ್ರೀ ಜ.ಅ.ವಿ.ಸಮಿತಿಯ ಕ.ರಾ ಬೆಲ್ಲದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಉದ್ಯೋಗಕ್ಕಾಗಿ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಬೆಳಗಾವಿಯ ನವದಿಶಾ ಕೋಚಿಂಗ್ ಸೆಂಟರ್‌ನ ಮುಖ್ಯಸ್ಥ ಪ್ರವೀಣ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬ್ಯಾಂಕ್ ಪರೀಕ್ಷೆಗಳು ಅತ್ಯಂತ ಸುಲಭವಾಗಿದ್ದು, ರೈಲ್ವೆ ಪರೀಕ್ಷೆಗಳಿಗೆ 4 ತಿಂಗಳು ಕೋಚಿಂಗ್ ನಡೆಸಿ, ಆನ್‌ಲೈನ್ ಕ್ಲಾಸ್‌ಗಳನ್ನು ಕೂಡ ನಡೆಸಲಾಗುವುದೆಂದರು. ಒಂದು ವರ್ಷದ ತರಗತಿಗಳನ್ನು ಕೂಡ ತೆಗೆದುಕೊಂಡು ಉದ್ಯೋಗ ಸಿಗುವವರೆಗೂ ವಿದ್ಯಾರ್ಥಿಗಳಿಗೆ ಪೂರ್ವ ತಯಾರಿಯ ಬಗ್ಗೆ ಮನವರಿಕೆ ಮಾಡಿಕೊಳ್ಳುವುದರೊಂದಿಗೆ ,ಬ್ಯಾಂಕಿಂಗ್ ಪರೀಕ್ಷೆ ಮತ್ತು ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವ ತಯಾರಿಯನ್ನು ಹೇಗೆ ನಡೆಸಬೇಕೆಂದು ಹಾಗೂ ಉದ್ಯೋಗಕ್ಕಾಗಿ ಬೇಕಾಗುವ ಉತ್ತಮ ಗುಣಗಳು,ಉತ್ತರಗಳ ಆಯ್ಕೆ, ಯೂನಿಟ್ ಡಿಜಿಟ್ ಗಳ ಪ್ರಶ್ನೋತ್ತರಗಳನ್ನು ಬಿಡಿಸುವುದರ ಕುರಿತು ಮತ್ತು ಗಣಿತದ ಲೆಕ್ಕಗಳನ್ನು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಹೇಗೆ ಚಾಣಾಕ್ಷತೆಯಿಂದ ಉತ್ತರಗಳನ್ನು ಕಂಡುಹಿಡಿಯಬೇಕೆಂದು ಹೇಳುವುದರೊಂದಿಗೆ ವಿದ್ಯಾರ್ಥಿಗಳೊಂದಿಗೆ ಚರ್ಚೆ ಮತ್ತು ಸಂಭಾಷಣೆ ನಡೆಸಿ ಸ್ಪರ್ಧಾತ್ಮಕ ಜಗತ್ತಿನ ಆವಶ್ಯಕತೆಯ ಕುರಿತು ಮನವರಿಕೆ ಮಾಡಿದರು. ಕಾಲೇಜು ಮೇಲ್ವಿಚಾರಣ ಸಮಿತಿ ಸದಸ್ಯ ಎಂ.ಜಿ. ಗಚ್ಚಣ್ಣವರ್ ಅವರು ವಾಣಿಜ್ಯ ಮತ್ತು ಕಲಾವಿಭಾಗದ ವಿದ್ಯಾರ್ಥಿಗಳು ಉದ್ಯೋಗ ಲಭಿಸಬೇಕೆಂದರೆ ಬ್ಯಾಂಕಿಂಗ್ ಪರೀಕ್ಷೆಯ ಪೂರ್ವ ತಯಾರಿಕೆಯ ಕುರಿತು ಹಾಗೂ ಹೇಗೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ಕುರಿತು ಮಾತನಾಡಿದರು. ಕಾಲೇಜು ಮೇಲ್ವಿಚಾರಣ ಕಾರ್ಯಕ್ರಮದಲ್ಲಿ ಪ್ರಾರ್ಥನಾ ಗೀತೆಯನ್ನು ಡಾ. ವನಜಾಕ್ಷಿ ಬರಮಗೌಡರ್ ಹಾಡಿದರು.ಪ್ರೊ.ಹನುಮಂತಪ್ಪ ಎನ್. ನಿರೂಪಿಸಿದರು. ಪ್ರೊ.ಆರ್.ಎಚ್. ಜಂಗಣವಾರಿ ಪ್ರಾಸ್ತಾವಿಸಿದರು. ಕಾಲೇಜಿನ ಪ್ರಾಚಾರ್ಯರಾದ ಡಾ.ಸಂತೋಷ್ ಹಿರೇಮಠ್ ,ಡಾಕ್ಟರ್ ಕುಮಾರ್ ಜಿ. ಕೌಶಲ್ಯ ಜಮಾದಾರ್, ತೇಜಸ್ವಿನಿ ಪಾಟೀಲ್, ಸಂಗೀತಾ ಮರಳಿ, ಅನುಷಾ ಬಳ್ಳಾರಿ, ಫಾತಿಮಾ ಕೊಕ್ಕರಗುಂದಿ, ಅಜಿತ್ ಬನ್ನಿಕೊಪ್ಪ ಉಪಸ್ಥಿತರಿದ್ದರು.

> **ಉದಾಸೀನ ಸಲ್ಲ**
> ಇಂತಹ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಉದಾಸೀನ ತೋರುತ್ತಿರುವುದು ವಿಷಾದನೀಯ, ಇದರ ಬಗ್ಗೆ ಎಲ್ಲಾ ವಿದ್ಯಾರ್ಥಿಗಳು ಗಮನಹರಿಸಬೇಕೆಂದು ಸಮಿತಿ ಉಪಕಾರ್ಯಾಧ್ಯಕ್ಷ ವಿ.ಎಫ್. ಗುಡದಪ್ಪನವರ ಹೇಳಿದರು.



ಬೃಹತ್ ಉದ್ಯೋಗ ಮೇಳ ನಾಳೆ



◆**ಗದಗ:** ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ, ಧಾರವಾಡದ ಕನೆಕ್ಟ್ ಸಂಸ್ಥೆ ಹಾಗೂ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಬಸವೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಏ.11 ರಂದು ಬೆಳಗ್ಗೆ 11ಕ್ಕೆ ನಗರದ ಬಸವೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಬೃಹತ್ ಉದ್ಯೋಗ ಮೇಳ ಹಮ್ಮಿಕೊಂಡಿದೆ ಎಂದು ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಜಿಲ್ಲಾಧ್ಯಕ್ಷ ಶರಣಬಸಪ್ಪ ಗುಡಿಮನಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸುಮಾರು ಐವತ್ತು ಕಂಪನಿಗಳು ಇಲ್ಲಿನ ಉದ್ಯೋಗ ಮೇಳದಲ್ಲಿ ಭಾಗವಹಿಸುತ್ತಾರೆ. ಸುಮಾರು ಎರಡೂ ಸಾವಿರ ವಿದ್ಯಾರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸುತ್ತಾರೆ. ಈಗಾಗಲೇ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ 756 ವಿದ್ಯಾರ್ಥಿಗಳು ನೋಂದಾಣಿ ಮಾಡಿಕೊಂಡಿದ್ದಾರೆ. 3 ಸಾವಿರಕ್ಕೂ ಅಧಿಕ ಉದ್ಯೋಗ ನೀಡಲಾಗುತ್ತಿದೆ. ವಿಶಿಷ್ಟಚೇತನರಿಗಾಗಿ ಎರಡೂ ಕಂಪನಿಗಳಿಂದ ಉದ್ಯೋಗ ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ಹಾಗೂ ಊಟದ ವ್ಯವಸ್ಥೆ ಮಾಡಲಾಗಿದೆ ಎಂದರು.

ಪರೀಕ್ಷೆಯಲ್ಲಿ ಶೇ.60ರಷ್ಟು ಫಲಿತಾಂಶ


◆**ನರಗುಂದ:** ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡಿದ್ದು, ಶ್ರೀ ಯಡೆಯೂರ ಸಿದ್ಧಲಿಂಗೇಶ್ವರ ಸ್ವತಂತ್ರ ಪದವಿ ಪೂರ್ವ ಕಾಲೇಜಿನ 11ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಅತೀ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆಯಾಗಿದ್ದಾರೆ. ಕಾಲೇಜಿನ ಒಟ್ಟಾರೆಯಾಗಿ ಶೇ.60 ಪ್ರತಿಶತ ತೇರ್ಗಡೆ ಹೊಂದಿದ್ದಾರೆ. ಪಟ್ಟಣದ ಶ್ರೀ ಯಡೆಯೂರ ಸಿದ್ಧಲಿಂಗೇಶ್ವರ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿಯ ವಾರ್ಷಿಕ ಪರೀಕ್ಷೆಯಲ್ಲಿ ಪೂಜಾ ಈಟಿ, ಕಲಾ ವಿಭಾಗದಲ್ಲಿ ಶೇ.92 ಕಾಲೇಜಿಗೆ ಪ್ರಥಮ, ಮಲ್ಲನಗೌಡ ಗೌಡಪ್ಪಗೌಡರ, ವಾಣಿಜ್ಯ ವಿಭಾಗ ಶೇ.91.83, ದ್ವಿತೀಯ, ಕುಮಾರಯ್ಯ ಕಾಡದೇವರಮಠ, ವಾಣಿಜ್ಯ ವಿಭಾಗ, ಶೇ.86.5 ತೃತೀಯ, ಲಕ್ಷ್ಮೀ ಸಂಗನಗೌಡರ ಶೇ.84.66, ಸುಧಾ ಬೋಸಲೆ ಶೇ.84, ಸುಮಾ ತಳವಾರ ಶೇ.83.33, ಜೋತಿ ಹಳೇಮನಿ ಶೇ.82.5, ಹಜರತಬಿ ನಧಾಫ್ ಶೇ.79, ವಿನಾಯಕ ಬಾರಕೇರ ಶೇ.78.66, ಆಶೀತಾ ಪಾಟೀಲ ಶೇ.77.5, ಕಾವ್ಯ ಗಂಗನಗೌಡ್ರ ಶೇ.77.5 ಅಂಕ ಗಳಿಸಿದ್ದಾರೆ ಎಂದು ಪ್ರಾಚಾರ್ಯ ಎಂ.ಜಿ.ಬೋಗಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರೀಡೆಯಲ್ಲಿ ಯಶಸ್ಸು ಗಳಿಸಿ: ಜಿಎಸ್‌ಪಾ

◆**ನರೇಗಲ್ಲ:** ಕ್ರೀಡೆ ಕೇವಲ ಒಂದು ಆಟವಾಗಿರದೇ ಜಾತ್ಯಾತೀತವಾಗಿ ಸಮುದಾಯಗಳ ನಡುವೆ ಪ್ರೀತಿಯನ್ನು ಹುಟ್ಟು ಹಾಕಿ ಸಮಾಯದ ಹಿತ ಕಾಪಾಡುವ ಶಕ್ತಿಯನ್ನು ಹೊಂದಿದೆ ಇದರೊಂದಿಗೆ ಯುವಕರು ಕ್ರೀಡೆಯಲ್ಲಿ ಯಶಸ್ಸು ಗಳಿಸುವುದು ಮುಖ್ಯ ಎಂದು ರೋಣ ಮತಕ್ಷೇತ್ರದ ಶಾಸಕ ಜಿ. ಎಸ್. ಪಾಟೀಲ ಹೇಳಿದರು.

ಪಟ್ಟಣದ 3ನೇ ವಾರ್ಡ್ ಆಶ್ರಯ ಕಾಲೋನಿ ಹಾಗೂ ಬುಲ್ಡೋಜರ್ ನಗರದ ಆಸ್ರಯದಲ್ಲಿ ಶಾಸಕ ಜಿ. ಎಸ್. ಪಾಟೀಲರ ಜನ್ಮ ದಿನದ ಅಂಗವಾಗಿ ಹಮ್ಮಿಕೊಂಡಿದ್ದ?ಸಾವಿರ ಕೆರೆಗಳ ಸರದಾರ ಟ್ರೋಫಿ-2026? 7 ಸೈಡ್ ಹಾರ್ಡ್ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು. ನಾನು ಕ್ರಿಕೆಟ್ ಆಟಗಾರನಾಗಿದ್ದು ಆಗ ಟೆಸ್ಟ್ ಪಂದ್ಯಾವಳಿಗೆ ಮಹತ್ವ ನೀಡಲಾಗುತ್ತಿತ್ತು. ನಂತರ 50 ಓವರ್‌ಗಳ ಪಂದ್ಯಾವಳಿ ಬಂದವು. ಈಗ ಟಿ-20 ಎನ್ನುವುದು ಹೆಚ್ಚು ಪ್ರಚಲಿತವಾಗಿದೆ. ಅಂದರೆ ಕಾಲಕ್ಕೆ ತಕ್ಕಂತೆ ಆಟ, ನಿಯಮ, ಆಸಕ್ತಿ ಬದಲಾಗುತ್ತಾ ಹೋಗುತ್ತವೆ. ಆದರಂತೆ ಗ್ರಾಮೀಣ ಭಾಗದಲ್ಲಿ 7ಸೈಡ್, 6ಸೈಡ್, 8ಸೈಡ್ ಎನ್ನುವ ಪಂದ್ಯಾವಳಿಗಳ ಆಯೋಜನೆ ನಡೆಯುತ್ತಿವೆ. ಕಡಿಮೆ ಅವಧಿಯಲ್ಲಿ ಹೆಚ್ಚು ಮನರಂಜನೆ ನೀಡುವ ಪಂದ್ಯಾವಳಿ ಈಗಿನ ಟ್ರೆಂಡ್ ಆಗಿದೆ. ಬದಲಾವಣೆಗೆ ತಕ್ಕಂತೆ ಯುವಕರು ಕ್ರೀಡೆಗಳಲ್ಲಿ ಪಾಲ್ಗೊಂಡು ಯಶಸ್ವಿಗಳಿಸಲು ಮುಂದಾಗಬೇಕು ಎಂದರು. ಏ.9,10 ರಂದು ರೋಣದಲ್ಲಿ ಯುವಕರಿಗಾಗಿ ಉದ್ಯೋಗ ಮೇಳ ಹಾಗೂ ಮಹಿಳೆಯರಿಗಾಗಿ ಮಹಿಳಾ ಸಬಲೀಕರಣದ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದೆ. ಎಲ್ಲರೂ ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದರು.

ಈ ವೇಳೆ ವಾರ್ಡ್ ಪರವಾಗಿ ಆಯೋಜನಕರು ಶಾಸಕರನ್ನು ಸನ್ಮಾನಿಸಿದರು. ಮುಖಂಡರಾದ ನಿಂಗನಗೌಡ ಲಕ್ಕನಗೌಡ್ರ, ಡಾ. ಕೆ.ಬಿ. ಧನ್ನೂರ, ವೀರನಗೌಡ ಪಾಟೀಲ, ಅರುಣ ಕಾಮತ, ಯೂಸೂಫ್ ಇಟಗಿ, ಬಸವರಾಜನವಲಂದ, ಎ.ಸಿ.ಪಾಟೀಲ, ಸಂತೋಷ ಹನಮಸಾಗರ, ಕಳಕನಗೌಡ ಪೊಲೀಸ್‌ಪಾಟೀಲ, ಶೇಖಪ್ಪ ಜುಟ್ಲ, ಆನಂದ ನಡುವಲಕೇರಿ, ಶೇಖಪ್ಪ ಕೆಂಗಾರ, ರೀಯಾಜ್ ಆಲೂರ, ದರ್ಶನ ದುಮ್ಮನ್ನವರ, ಖಾದರಸಾಬ್ ಬೇಪಾರಿ, ಲಾಲಸಾಬ್ ಬೇಪಾರಿ, ಸದ್ದಾಂ ನಶೇಖಾನ್, ಶರಣಪ್ಪ ಹಂಚಿನಾಳ, ಬಿ.ಬಿ. ಮಲ್ಲನಗೌಡ್ರ ಇದ್ದರು.



ಶೇ.60ರಷ್ಟು ಫಲಿತಾಂಶ




◆**ಮುಂಡರಗಿ:** ತಾಲೂಕಿನ ಕಲಕೇರಿ ಗ್ರಾಮದ ಶ್ರೀ ಶರಣಬಸವೇಶ್ವರ ವಿದ್ಯಾ ಸಮಿತಿಯ ಶ್ರೀ ಎಂ.ಬಿ.ಪಾಟೀಲ ಪದವಿಪೂರ್ವ ಮಹಾವಿದ್ಯಾಲಯದ ಕಳೆದ ಮಾರ್ಚ್‌ನಲ್ಲಿ ನಡೆದ ಪಿಯುಸಿ ದ್ವಿತೀಯ ವರ್ಷದಫಲಿತಾಂಶಶೇ.60ರಷ್ಟಾಗಿದೆ. ಕಾಲೇಜಿನ ವಿದ್ಯಾರ್ಥಿನಿ ಮಂಜುಳಾ ಹುಳಕಣ್ಣವರ 582 (ಶೇ.97) ರಷ್ಟು ಅಂಕಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಉಳಿದಂತೆ ಪೂರ್ಣಿಮಾ ಆರ್. (455), ಅಶ್ವಿನಿ ಹುಳಕಣ್ಣವರ (448), ಸಂಜನಾ ಬಳಿಗಾರ (443) ಅಂಕಗಳಿಸಿ ಕಾಲೇಜಿಗೆ ನಂತರದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ, ಮತ್ತು ಮಾಜಿ ಸಚಿವ ಎಸ್.ಎಸ್.ಪಾಟೀಲ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಶೇ.76.38 ರಷ್ಟು ತೇರ್ಗಡೆ

◆**ನರಗುಂದ:** 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನ ಕಲಾ ವಿಭಾಗ ಶೇ.66.47, ವಾಣಿಜ್ಯ ವಿಭಾಗ ಶೇ.80.51, ವಿಜ್ಞಾನ ವಿಭಾಗ ಶೇ.88.54 ಸೇರಿದಂತೆ ಶೇ.76.38 ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆಂದು ಕಾಲೇಜಿನ ಪ್ರಾಂಶುಪಾಲ ಸಿ.ಎಸ್. ಸುಳ್ಳದ ತಿಳಿಸಿದ್ದಾರೆ.

ಕಲಾ ವಿಭಾಗದಲ್ಲಿ ರಾಜೇಶ್ವರಿ ಲದ್ದಿ ಶೇ.98 ಪ್ರಥಮ, ವೈಷ್ಣವಿ ಕೋರಣ್ಣವರ ಶೇ.91.66 ದ್ವಿತೀಯ, ಶ್ರೇಯಾ ಶಿಂಧೆ ಶೇ.89.83 ತೃತೀಯ ಸ್ಥಾನ, ವಾಣಿಜ್ಯ ವಿಭಾಗದಲ್ಲಿ ಮಹಾಲಕ್ಷ್ಮೀ ಚಂದಣ್ಣವರ ಶೇ.96.66 ಪ್ರಥಮ, ಭೀಮವ್ವ ಬಡಿಗೇರ ಶೇ.94.33 ದ್ವಿತೀಯ, ಸೃಷ್ಟಿ ಕ್ಯಾಲಕೊಂಡ ಶೇ.90.5 ತೃತೀಯ ಸ್ಥಾನ, ವಿಜ್ಞಾನ ವಿಭಾಗದಲ್ಲಿ ರೋಹಿತ್ ಸಿದ್ದಣ್ಣವರ ಶೇ.93.33 ಪ್ರಥಮ, ಅನಿತಾ ದೇವಾಸಿ ಶೇ.92 ಹಾಗೂ ಶಿವಾನಂದ ನರಸಾಪೂರ ಶೇ.92 ದ್ವಿತೀಯ, ರೇಣವ್ವ ಗುಡಸಲಮನಿ ಹಾಗೂ ಸುಮಾ ಮದಿಹಾಳ ಶೇ.90.66 ಅಂಕಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ.

97.83ರಷ್ಟು ಅಂಕಗಳಿಸಿದ ವಿಕಾಸ



◆**ಮುಂಡರಗಿ:** ಮುಂಡರಗಿ ತಾಲೂಕಿನ ಕಕ್ಕೂರ ಗ್ರಾಮದ ವಿಕಾಸ ಹುಚ್ಚೀರಪ್ಪ ಹ್ಯಾಟಿ ವಿದ್ಯಾರ್ಥಿ ಗಂಗಾವತಿಯ ಶ್ರೀ ವಿದ್ಯಾನಿಕೇತನ ಪಿಯು ಕಾಲೇಜುನಲ್ಲಿ ಓದಿದ್ದು,ಕಳೆದ ಮಾರ್ಚ್‌ನಲ್ಲಿ ನಡೆದ ವಿಜ್ಞಾನ ಪರೀಕ್ಷೆಯಲ್ಲಿ 97.83 ಅಂಕಗಳಿಸಿ ಪಾಸಾಗಿದ್ದು ತಾಲೂಕಿಗೆ ಹೆಮ್ಮೆ ತಂದಿದೆ.

ಕಕ್ಕೂರಿನ ಒಕ್ಕಲುತನ ಮನೆತನದ ಈ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ ಇಲ್ಲಿಯ ಶ್ರೀ ಜ.ಅ.ಪ್ರೌಢಶಾಲೆಯಲ್ಲಿ ಮುಗಿಸಿದ್ದು, ಪ್ರತಿಭವಂತನಾಗಿದ್ದನು. ಈ ವಿದ್ಯಾರ್ಥಿಗಳಿಸಿದ ಒಟ್ಟು ಅಂಕಗಳು 587. ಭೌತಶಾಸ್ತ್ರಕ್ಕೆ 100, ಗಣಿತಕ್ಕೆ 100 ಮತ್ತು ಜೀವಶಾಸ್ತ್ರಕ್ಕೆ 100 ಹಾಗೂ ರಸಾಯನಶಾಸ್ತ್ರಕ್ಕೆ 98 ಅಂಕಗಳನ್ನು ಪಡೆದಿರುವುದು ವಿಶೇಷವಾಗಿದೆ. ಇಂಗ್ಲಿಷ್ ವಿಷಯಕ್ಕೆ 92 ಮತ್ತು ಕನ್ನಡ ವಿಷಯಕ್ಕೆ 97 ಅಂಕಗಳನ್ನು ಪಡೆದುಕೊಂಡಿದ್ದಾನೆ. ನೀಟ್ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಗಳಿಸಿ ವೈದ್ಯನಾಗಬೇಕೆಂಬ ಆಸೆ ಈ ವಿದ್ಯಾರ್ಥಿಯದ್ದಾಗಿದೆ.

ವಿದ್ಯಾರ್ಥಿಗಳ ಸಾಧನೆ



◆**ಮುಂಡರಗಿ:** ಇಲ್ಲಿಯ ಶ್ರೀ ಜ.ಅ.ವಿದ್ಯಾ ಸಮಿತಿಯ ಜ.ಅ.ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಕಳೆದ ಮಾರ್ಚನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಶೇಷ ಸಾಧನೆ ಮಾಡಿದ್ದಾರೆ.

ವಾಣಿಜ್ಯ ವಿಭಾಗದ ಪದ್ಮಪ್ರಿಯಾ ಶೆಟ್ಟರ 590 ಅಂಕಗಳನ್ನು ಪಡೆದು (ಶೇ 98.3) ಅಂಕಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದ ಪೂಜಾ ಕುಂಬಾರ 585 ಅಂಕಗಳಿಸಿ (ಶೇ. 97.5) ಕಾಲೇಜಿಗೆ ದ್ವಿತೀಯ ಸ್ಥಾನ ಮತ್ತು ಕಲಾ ವಿಭಾಗದ ಸಂತೋಷ ಚವ್ಹಾಣ 576 ಅಂಕಗಳಿಸಿ (ಶೇ. 96) ಕಾಲೇಜಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾನೆ. ವಿದ್ಯಾರ್ಥಿಗಳ ಈ ಸಾಧನೆಗೆ ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಸ್ವಾಮೀಜಿ ಹರ್ಷ ವ್ಯಕ್ತಪಡಿಸಿದ್ದಾರೆ.

ರೋಹಿಣಿ ಬೆಟಗೇರಿ ಜಿಲ್ಲೆಗೆ ದ್ವಿತೀಯ

◆**ಲಕ್ಷ್ಮೇಶ್ವರ:** ಪ್ರತಿಭೆ ಯಾರ ಸ್ವತ್ತೂ ಅಲ್ಲ ಅದು ಸಾಧಕನ ಸ್ವತ್ತಾಗಿದೆ. ಶಿಕ್ಷಣವೇ ಸಂಪತ್ತು ಶಿಕ್ಷಣಕ್ಕೆಬಡವಶ್ರೀಮಂತಿಕೆಯಹಮ್ಮು-ಬಿಮ್ಮು ಇಲ್ಲ ಎಂಬುದಕ್ಕೆ ಲಕ್ಷ್ಮೇಶ್ವರದಲ್ಲಿ ಹಣ್ಣು ಮಾರುವ ತಂದೆ-ತಾಯಿಯ ಮಗಳು ರೋಹಿಣಿ ಬೆಟಗೇರಿ ಬಡತನದಲ್ಲಿಯೇ ಓದುವ ಮೂಲಕ ಕಲಾ ವಿಭಾಗದಲ್ಲಿ 600ಕ್ಕೆ 584 ಅಂಕ (ಶೇ.97.33) ಗಳಿಸುವ ಮೂಲಕ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾಳೆ.

ರೋಹಿಣಿ ಬೆಟಗೇರಿ ಪಟ್ಟಣದ ತಾಯಿ ಪಾರ್ವತಿ ಮಕ್ಕಳ ಬಳಗದ ಶ್ರೀ ವೀರ ಗಂಗಾಧರ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು ಇದೇ ಸಂಸ್ಥೆಯಲ್ಲಿ ಎಸ್‌ಎಸ್‌ಎಲ್‌ಸಿ ಯಲ್ಲಿ ಶೇ.95ರಷ್ಟು ಅಂಕಗಳಿಸಿದ್ದಳು. ಇದೀಗ ಪಿಯುಸಿಯಲ್ಲಿ ಕನ್ನಡ, ಹಿಂದಿ, ಭೂಗೋಳಶಾಸ್ತ್ರದಲ್ಲಿ 100ರಷ್ಟು ಅಂಕ ಗಳಿಸಿದ್ದಾಳೆ. ರೋಹಿಣಿ ತಂದೆ ಪ್ರಭು ಮತ್ತು ತಾಯಿ ಕವಿತಾ ಮತ್ತು ಅಜ್ಜಿ ಸೋಮಕ್ಕ ಲಕ್ಷ್ಮೇಶ್ವರದಲ್ಲಿ ಬಾಳೆಹಣ್ಣು ಮಾರಾಟ ಮಾಡುವ ಮೂಲಕ ಬದುಕು ಸಾಗಿಸುತ್ತಿದ್ದಾರೆ. ಆಶ್ರಯ ಯೋಜನೆಯಡಿ ಚಿಕ್ಕದಾದ ಮನೆಯೊಂದನ್ನು ಬಿಟ್ಟರೆ ಮತ್ತಾವುದೇ ಆಸ್ತಿ, ಸಂಪತ್ತು ಇಲ್ಲ, ಹಣ್ಣು ಮಾರಿ ಬರುವ ದುಡಿಮೆಯಲ್ಲಿಯೇ ಇಡೀ ಕುಟುಂಬದ ನಿರ್ವಹಣೆ ಮಾಡುವ ಜವಾಬ್ದಾರಿಯ ಜತೆಗೆ ಮಕ್ಕಳನ್ನು ಚನ್ನಾಗಿ ಓದಿಸುವ ಹಂಬಲ ಪಾಲಕರದ್ದಾಗಿದೆ.



> ಉತ್ತಮ ಫಲಿತಾಂಶ ಮಾಡಬೇಕು ಎಂಬ ಹಂಬಲದಿಂದ ಪರೀಕ್ಷೆ ಸಮಯದಲ್ಲಿ ಬೆಳಗ್ಗೆ ಬೇಗ ಎದ್ದು ಆಸಕ್ತಿಯಿಂದ ಓದುತ್ತಿದ್ದೆ. ಕಾಲೇಜಿನಲ್ಲಿ ಆಸಕ್ತಿಯಿಂದ ಪಾಠ ಕೇಳುತ್ತಿದ್ದೆ. ಪದವಿ ಪಡೆದು ಐಎಎಸ್ ಓದಿ ಉನ್ನತ ಹುದ್ದೆ ಪಡೆದು ಸಮಾಜ ಸೇವೆ ಮಾಡುವಾಸೆ. ಫಲಿತಾಂಶಕ್ಕೆ ಪಾಲಕರ, ಶಿಕ್ಷಕರ ಪ್ರೋತ್ಸಾಹ ಮುಖ್ಯವಾಗಿದೆ.
>
> ■ ರೋಹಿಣಿ

> ನಾವಿಬ್ಬರೂ ಬಡತನದ ಕಾರಣದಿಂದ ಪ್ರಾಥಮಿಕ ಶಾಲೆಯನ್ನೇ ಅರ್ಧಕ್ಕೆ ಮೊಟಕುಗೊಳಿಸಿದ್ದೇವೆ. ಹಣ್ಣು ಮಾರಿ ಕುಟುಂಬ ಸಾಗಿಸುವ ಜತೆಗೆ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಆಸೆ ನಮ್ಮದು. ಮಗಳು ಅದೇನೂ ಆಯ್‌ಎಎಸ್ ಮಾಡುತ್ತಾಳಂತೆ ಅವಳ ಆಸೆಯಂತೆ ಓದಿಸಲು ದುಡಿಯುವುದೊಂದೇ ನಮ್ಮ ಬದುಕಿನ ಗುರಿ.
>
> ■ ಪ್ರಭು, ಕವಿತಾ (ತಂದೆ-ತಾಯಿ)

ದ್ವಿತೀಯ ಪಿಯುಸಿ ಫಲಿತಾಂಶ | ವಿದ್ಯಾರ್ಥಿಗಳ ಉತ್ತಮ ಸಾಧನೆ

17ನೇ ಬಾರಿಗೆ ವಿದ್ಯಾನಿಕೇತನ ಜಿಲ್ಲೆಗೆ ಪ್ರಥಮ



ಹುಬ್ಬಳ್ಳಿ: ಚೌಗಲಾ ಶಿಕ್ಷಣ ಸಂಸ್ಥೆಯ ವಿದ್ಯಾನಿಕೇತನ ಕಾಲೇಜಿನ ವಿದ್ಯಾರ್ಥಿ ಸ್ಥವನ ಇನಾಂದಾರ 595 ಅಂಕಗಳನ್ನು ಗಿಟ್ಟಿಸಿಕೊಂಡು ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾನೆ. ಈ ಸಾಧನೆಯಿಂದ ಮಹಾವಿದ್ಯಾಲಯದ ಮತ್ತು ಪಾಲಕರ ಕೀರ್ತಿಯನ್ನು ಹೆಚ್ಚಿಸಿದ್ದಾನೆ.

ಇದರ ಜೊತೆಗೆ ಅಭಿಷೇಕ ಚನ್ನಗೊಂಡ (593), ಅಮೃತಾ ಉಮಚಗಿ (593) ಮತ್ತುಸಾಯಿ ಮೈತ್ರಿ ಅಬ್ಬಿಗೇರಿ (592), ಶಾಂತಲಾ ಸಿಂಧೂರ (592), ಅಮೃತಾ ಕಡ್ಲಿ (591), ನಯನಾ ಅರಬನಂದ (591), ಓಮಿಕ್ಷಾ ಜಾಬನ್ನವರ (591) ಸಂಜನಾ ಮಂಜುನಾಥ ಕಡ್ಲರ್ (591) ವಿ ಮೈತ್ರಿ (591)ಅಂಕಗಳನ್ನು ಪಡೆದಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ.

ಅಭಿಷೇಕ ಟಕ್ಕಳಕಿ (590), ಆಕರ್ಷ ತರ್ಲಗಟ್ಟಿ (590) ಪ್ರೀತಮ ಆರ್‌ಮಾರಾ (590), ಪ್ರೇರಣಾ ಚಲವಾದಿ (590), ರಿತುಸಿಂಗ್ ಶಿಗ್ಗಾವಿ (590), ಸಾನವಿ ಹುನಕುಂಟಿ (590), ಸಹನಾ ರಾಯ್ಕರ್ (590), ಸಾನ್ವಿ ಪವಾರ (590), ವಿರೇಶಅಂಗಡಿ (590) ಒಟ್ಟು 37 ವಿದ್ಯಾರ್ಥಿಗಳು ಉನ್ನತ ಸ್ಥಾನವನ್ನು ಪಡೆದಿದ್ದಾರೆ. ಪ್ರತಿಶತ 95% ಹೆಚ್ಚು ಅಂಕಗಳನ್ನು 333 ವಿದ್ಯಾರ್ಥಿಗಳು ಗಳಿಸಿದ್ದಾರೆ.

ಪಿಸಿಎಂಬಿ / ಪಿಸಿಎಮ್‌ಎಸ್ / ಪಿಸಿಎಮ್‌ಸಿಎಸ್ ಸಂಯೋಜನೆಯಲ್ಲಿ 95%ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ493 ಆಗಿದ್ದಾರೆ.

ಈ ಶೈಕ್ಷಣಿಕ ವರ್ಷದಲ್ಲಿಒಟ್ಟು 822 ವಿದ್ಯಾರ್ಥಿಗಳು ಪಿ.ಯು.ಸಿ. ದ್ವಿತೀಯ ವರ್ಷಕ್ಕೆ ಪರೀಕ್ಷೆಯನ್ನು ಬರೆದಿದ್ದರು. ಎಲ್ಲ 822 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಮಹಾವಿದ್ಯಾಲಯವು ಪ್ರತಿಶತ 100 ರಷ್ಟು ಫಲಿತಾಂಶವನ್ನು ಮತ್ತೆ ಪಡೆದಿದೆ.

822 ವಿದ್ಯಾರ್ಥಿಗಳಲ್ಲಿ ವಿವಿಧ ವಿಷಯಗಳಲ್ಲಿ100ಕ್ಕೆ 100 ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಹೀಗಿದೆ. ಕನ್ನಡ ವಿಷಯದಲ್ಲಿ–13 ಸಂಸ್ಕೃತ– 27, ಹಿಂದಿ – 06, ಭೌತಶಾಸ್ತ್ರ–88, ರಸಾಯನಶಾಸ್ತ್ರ –58, ಗಣಿತಶಾಸ್ತ್ರ–125, ಜೀವಶಾಸ್ತ್ರ / ಸಂಖ್ಯಾಶಾಸ್ತ್ರ ಹಾಗೂ ಗಣಕ ವಿಜ್ಞಾನ ವಿಷಯಗಳಲ್ಲಿ – 132 ವಿದ್ಯಾರ್ಥಿಗಳು ಪಡೆದಿದ್ದಾರೆ. ಈ ವಿದ್ಯಾರ್ಥಿಗಳ ಮಹತ್ಸಾಧನೆಗೆ ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತು ಆಡಳಿತ ಮಂಡಳಿ ಹಾಗೂ ಪ್ರಾಧ್ಯಾಪಕ ಪ್ರಾಧ್ಯಾಪಕೇತರ ಸಿಬ್ಬಂದಿಯವರು ಮನದುಂಬಿ ಅಭಿನಂದನೆ ಸಲ್ಲಿಸಿದ್ದಾರೆ.

ಧ್ವನಿ ಕುಲಕರ್ಣಿ ರಾಜ್ಯಕ್ಕೆ ದ್ವಿತೀಯ

ಬೆಳಗಾವಿ: ಇಲ್ಲಿನ ಗೋಗಟೆ ವಾಣಿಜ್ಯ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಧ್ವನಿ ಸಂತೋಷ ಕುಲಕರ್ಣಿ ಅವರು



ವಾಣಿಜ್ಯ ವಿಭಾಗದಲ್ಲಿ ಶೇ. 99.83 (599) ಅಂಕಗಳನ್ನು ಪಡೆದು ಗಮನಾರ್ಹ ಸಾಧನೆ ಮೆರೆದಿದ್ದಾರೆ. ಇದು ರಾಜ್ಯ ಮಟ್ಟದಲ್ಲಿ ದ್ವಿತೀಯ ರ್‍ಯಾಂಕ್ ಆಗಿದೆ ಎಂದು ಕಾಲೇಜು ಪ್ರಕಟಣೆ ತಿಳಿಸಿದೆ. ಧ್ವನಿ ಅವರು ಸಂಸ್ಕೃತ, ಬಿಸಿನೆಸ್ ಸ್ಟಡೀಸ್, ಬೇಸಿಕ್ ಗಣಿತ, ಅಕೌಂಟನ್ಸಿ ಹಾಗೂ ಸ್ಟಾಟಿಸ್ಟಿಕ್ಸ್ ವಿಷಯಗಳಲ್ಲಿ 100ಕ್ಕೆ 100 ಅಂಕಗಳನ್ನು ಗಳಿಸಿದ್ದು ಇಂಗ್ಲಿಷ್‌ಲ್ಲಿ 99 ಅಂಕಗಳನ್ನು ಪಡೆದಿದ್ದಾರೆ. ಅವರ ತಂದೆ ಸಂತೋಷ ಅವರು ತಬಲಾ ವಾದಕರಾಗಿದ್ದು, ಕಳೆದ ಒಂದು ದಶಕದಿಂದ ಕತಾರ್‌ನಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ತಾಯಿ ಪಲ್ಲವಿ ಗೃಹಿಣಿಯಾಗಿದ್ದಾರೆ. ಧ್ವನಿ ಅವರು ಪ್ರತಿದಿನ ಬೆಳಗ್ಗೆ 5ರಿಂದ 7ರವರೆಗೆ ಹಾಗೂ ಸಂಜೆ 6ರಿಂದ 7.30ರವರೆಗೆ ನಿಯಮಿತವಾಗಿ ಅಧ್ಯಯನ ಮಾಡುವ ಅಭ್ಯಾಸ ಹೊಂದಿದ್ದರು. ರಾಜ್ಯಕ್ಕೆ ಟಾಪರ್ ಆಗುತ್ತೇನೆ ಎಂಬ ನಿರೀಕ್ಷೆ ಇತ್ತು. ದಿನದ ಪಾಠವನ್ನು ಅದೇ ದಿನ ಅಭ್ಯಾಸ ಮಾಡುವುದು ನನ್ನ ಯಶಸ್ಸಿನ ಗುಟ್ಟು. ಇದರಿಂದ ಪರೀಕ್ಷಾ ಸಮಯದಲ್ಲಿ ನಿರಾಳವಾಗಿರಲು ಸಾಧ್ಯವಾಯಿತು. ಮುಂದಾಗಿ ಸಿಎ ಮಾಡುವ ಗುರಿ ಹೊಂದಿದ್ದೇನೆ. ನನ್ನ ಅಕ್ಕ ಸ್ವರ ಅವರು 2023ರಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದು ಈಗ ಸಿ.ಎ ಅಭ್ಯಾಸ ಮಾಡುತ್ತಿದ್ದಾರೆ. ಹೀಗಾಗಿ, ನನಗೆ ಸರಿಯಾದ ಮಾರ್ಗದರ್ಶನ ದೊರೆಯಿತು ಎಂದು ಧ್ವನಿ ತಿಳಿಸಿದ್ದಾರೆ.

ಪಿಯು ಪರೀಕ್ಷೆಯಲ್ಲಿ ತಾಯಿ -ಮಗಳು ಪಾಸ್ !



ಮೂಡಲಗಿ : ಸಮೀಪದ ಕಲ್ಲೋಳಿಯಲ್ಲಿ ಪಟ್ಟಣದ ಅಂಗನವಾಡಿಯಲ್ಲಿ ಕಾರ್ಯಕರ್ತೆಯಾಗಿ ಕಳೆದ 16ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶಿಲ್ಪಾ ಸೋಮನಟ್ಟಿ (ಗಿರೆಣ್ಣವರ) ಪಿಯುಸಿ ವಡೆರಹಟ್ಟಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಎಕ್ಸ್ಟರ್ನಲ್ (ಹೊರಗಿನ) ಪರೀಕ್ಷೆಯಲ್ಲಿ ಶೇ.54 ಅಂಕ ಪಡೆದು ಪಾಸಾದರೆ ಅವರ ಮಗಳು ಪಲ್ಲವಿ ಗೀರೆನ್ನವರ ನಾಗನೂರಿನ ಅಥರ್ವ ಕಾಲೇಜಿನಲ್ಲಿ ಶೇ. 78% ಅಂಕ ಪಡೆದು ಪಾಸಾಗಿದ್ದಾರೆ.


Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ದ್ವಿತೀಯ ಪಿಯು ಫಲಿತಾಂಶ:ಉ.ಕ ಶೇ 91.78ರಷ್ಟು ದಾಖಲು

ಅಂಕೋಲಾ: ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು ಉತ್ತರ ಕನ್ನಡ ಜಿಲ್ಲೆಯು ಶೇ. 91.78 ಫಲಿತಾಂಶ ದಾಖಲಿಸಿದೆ. ಕಳೆದ ಬಾರಿ ಉ.ಕ ಜಿಲ್ಲೆಯು ಶೇ. 82.93 ಫಲಿತಾಂಶ ದಾಖಲಿಸಿತ್ತು.ಜಿಲ್ಲೆಯ ಶಿರಸಿ ತಾಲೂಕು ಶೇ. 96.7 ಫಲಿತಾಂಶದೊಂದಿಗೆ ಜಿಲ್ಲೆಯಲ್ಲಿ ಪ್ರಥಮ ಸ್ಥಾನದಲ್ಲಿದ್ದರೆ, ದಾಂಡೇಲಿ ಶೇ.83.1 ದೊಂದಿಗೆ ಕೊನೆಯ ಸ್ಥಾನದಲ್ಲಿದೆ.ಉತ್ತರ ಕನ್ನಡ ಜಿಲ್ಲೆಯ ವಿವಿಧ ತಾಲೂಕುಗಳಾದ ಅಂಕೋಲಾ ತಾಲೂಕು ಶೇ.90.50 , ಕಾರವಾರ ಶೇ. 85.9ರಷ್ಟು, ಕುಮಟಾ ಶೇ. 96.3ರಷ್ಟು, ಹೊನ್ನಾವರ ಶೇ. 92.9 ರಷ್ಟು, ಭಟ್ಕಳ ಶೇ.86.1ರಷ್ಟು, ಶಿರಸಿ ಶೇ.96.7 ರಷ್ಟು,ಸಿದ್ದಾಪುರ ಶೇ.91.7ರಷ್ಟು ಯಲ್ಲಾಪುರ ಶೇ.89.5 ರಷ್ಟು, ಹಳಿಯಾಳ ಶೇ.89 ರಷ್ಟು, ಮುಂಡಗೋಡ ಶೇ.93.8 ರಷ್ಟು, ದಾಂಡೇಲಿ ಶೇ.83.1ರಷ್ಟು, ಜೊಯಿಡಾ ಶೇ. 92.4 ರಷ್ಟು ದಾಖಲಿಸಿವೆ.

ಏ.2ಕ್ಕೆ ಪುಸ್ತಕ ಬಿಡುಗಡೆ



ಅಂಕೋಲಾ: ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳಲ್ಲಿ ಆಚರಿಸಲ್ಪಡುವ ಬಂಡಿಹಬ್ಬಗಳ ಕುರಿತಂತೆ ವಿವರಗಳನ್ನು ಒಳಗೊಂಡ ಅಂಕೋಲಾ ಶ್ರೀ ಶಾಂತಾದುರ್ಗಾದೇವಿಯ ಬಂಡಿಹಬ್ಬದ ಬಿಡಗುನಗರ ಮನೆತನದ ವಿಘ್ನೇಶ್ವರ ಎನ್ ಗುನಗಾ ಅವರು ಬರೆದಿರುವ ಬಂಡಿಹಬ್ಬ ಜಗತ್ತಿನ ಅತ್ಯಂತ ಪ್ರಾಚೀನ ಜಾತ್ರೆಯೊಂದರ ಅನಾವರಣ ಪುಸ್ತಕ ಬಿಡುಗಡೆ ಏ.12 ರಂದು ಭಾನುವಾರ ಸಂಜೆ 4 ಗಂಟೆಗೆ ಭೂಮ್ತಾಯಿ(ಶ್ರೀಶಾಂತಾದುರ್ಗಾ) ದೇವಾಲಯದ ಸಭಾಭವನದಲ್ಲಿ ನಡೆಯಲಿದೆ. ಉತ್ತರ ಕನ್ನಡ ಜಿಲ್ಲೆಯ ಕರಾವಳಿಯ ಪ್ರಾಚೀನ ಜಾತ್ರೆಯಾಗಿರುವ ಬಂಡಿಹಬ್ಬದ ಕುರಿತು ಸಾಕ್ಷ್ಯ ಸಮೇತ ಬರಹ ಹೊಂದಿರುವ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಸರ್ವರೂ ಪಾಲ್ಗೊಳ್ಳುವಂತೆ ಲೇಖಕ ವಿಘ್ನೇಶ್ವರ ಗುನಗಾ ಮತ್ತು ಕುಟುಂಬದವರು ಕೋರಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪ ವಿಭಾಗದ ವ್ಯಾಪ್ತಿಯಲ್ಲಿ ಹೆಚ್.ಟಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಏ.10ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಸುಂಕೇರಿ, ಕೆ.ಎಚ್.ಬಿ ನಂದನಗದ್ದಾ, ತೆಲಂಗರೋಡ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲ್ಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಯು ಫಲಿತಾಂಶ: ಸರ್ಕಾರಿ ಕಾಲೇಜಿನ ಸಾಧನೆ

ಬನವಾಸಿ: 2026 ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಬನವಾಸಿ ಸರ್ಕಾರಿ ಪಪೂ ಕಾಲೇಜಿನ ವಿದ್ಯಾರ್ಥಿಗಳು ಅದ್ವಿತೀಯ ಸಾಧನೆ ಮಾಡಿದ್ದಾರೆ. ಕಲಾ ವಾಣಿಜ್ಯ ವಿಜ್ಞಾನ ಮೂರೂ ವಿಭಾಗದಲ್ಲೂ ಉತ್ತಮ ಫಲಿತಾಂಶ ದಾಖಲಿಸಿದೆ. ಕಲಾವಿಭಾಗದಲ್ಲಿ 91.78% ವಾಣಿಜ್ಯ ವಿಭಾಗದಲ್ಲಿ 98.72% ಹಾಗೂ ವಿಜ್ಞಾನ ವಿಭಾಗದಲ್ಲಿ 100% ಫಲಿತಾಂಶ ಗಳಿಸಿದೆ ಎಂದು ಪ್ರಾಚಾರ್ಯರಾದ ದಿನೇಶ್ ಕೆ. ತಿಳಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60889	68399
ಬಿಳಿಗೋಟು	26100	39899
ಕೆಂಪುಗೋಟು	26123	38699
ಬೆಟ್ಟೆ	41899	50509
ರಾಶಿ	47099	55699
ಚಾಲಿ	45000	49600
ಬಿ.ಕಾಳುಮೆಣಸು	79199	79199

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58400	61999
ರಾಶಿ	49219	57259
ಬೆಟ್ಟೆ	38810	51269
ಕೆಂಪುಗೋಟು	19000	38500
ಬಿಳಿಗೋಟು	14899	40611
ಚಾಲಿ	40399	49499
ಕೋಕಾ	12909	34299
ಕಾಳುಮೆಣಸು	50000	67811



ಭಟ್ಕಳ : ತಾಲೂಕಿನ ಮುಂಡಳ್ಳಿಯ ದುರ್ಗಾಪರಮೇಶ್ವರಿ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರುತ್ತಿದ್ದು, ಗುರುವಾರ ದೇವಸ್ಥಾನದಲ್ಲಿ ಶತಚಂಡಿ ಹೋಮದ ಪೂರ್ಣಾಹುತಿ ಸಂಪನ್ನಗೊಂಡಿತು.

ಸಂಗೀತ ಕಲೆ ಉಳಿಸಿ ಬೆಳೆಸುವ ಕಾರ್ಯವಾಗಲಿ

ಗೋಕರ್ಣ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ನಮ್ಮ ದೇಶದ ಸಂಸ್ಕೃತಿಯ ಕೊಡುಗೆಯಾಗಿದ್ದು ಅಗಾದ ವ್ಯಾಪ್ತಿ ಹೊಂದಿದೆ, ಇಂತಹ ಕಲೆ ಉಳಿಸಿ ಬೆಳಸುವ ಕಾರ್ಯವಾಗಬೇಕು ಎಂದು ಮುಖ್ಯಾಧ್ಯಾಪಕಿ ನಾಗಕುಮಾರಿ ಉಪಧ್ಯಾಯ ಹೇಳಿದರು. ಅವರು ಕೋಟಿತೀರ್ಥ ಕಟ್ಟೆಯಲ್ಲಿರುವ ಶ್ರೀಮದಾಧ್ಯ ರಘೋತ್ತಮ ಮಠದಲ್ಲಿ ನಡೆದ ಸ್ವರಶ್ರೀ ಸಂಗೀತ ವಿದ್ಯಾಲಯದ ವಾರ್ಷಿಕೋತ್ಸವದಲ್ಲಿ ಮಾತನಾಡಿದರು. ಸಂಗೀತದ ಏಳು ಅಕ್ಷರಗಳು 64 ಸಾವಿರ ರಾಗವನ್ನ ಹುಟ್ಟು ಹಾಕುತ್ತದೆ. ಇದು ಕಲೆಯ ವ್ಯಾಪ್ತಿ ಎಷ್ಟು ವಿಸ್ತಾರ ಎಂಬುದನ್ನ ತಿಳಿಸುತ್ತದೆ ಎಂದರು. ಇಂತಹ ಸಂಗೀತ ಶಿಕ್ಷಣ ನೀಡುತ್ತಿರುವ ಈ ವಿದ್ಯಾಲಯದಿಂದ ಇನ್ನೂ ಹೆಚ್ಚಿನ ಕಾರ್ಯವಾಗಲಿ ಎಂದರು. ಕಾರ್ಯಕ್ರಮ ಉದ್ಘಾಟಿಸಿದ ಶ್ರೀಲಕ್ಷ್ಮೀ ವೇಂಕಟೇಶ ಮಂದಿರದ ಅರ್ಚಕ ನಿಶಾಂತ ಜಠಾರ ಮತಾನಾಡಿದರು. ಅಧ್ಯಕ್ಷತೆವಹಿಸಿದ್ದ ಶ್ರೀಭದ್ರಕಾಳಿ ಮತ್ತು ಶ್ರೀ ಲಕ್ಷ್ಮೀವೆಂಕಟೇಶ ಮಂದಿರದ ಟ್ರಸ್ಟಿ ವೇ. ನಾರಾಯಣ ಉಪಧ್ಯಾಯ ಮಾತನಾಡಿದರು. ವೇದಿಕೆಯಲ್ಲಿ ಪಂಡಿತ ಗೌರೀಶ ಯಾಜಿ. ಸ್ವರಶ್ರೀ ಸಂಗೀತ ವಿದ್ಯಾಲಯದ ಶಿಕ್ಷಕಿ ಸುಧಾ ಆಚಾರ್ಯ ಉಪಸ್ಥಿತರಿದ್ದರು. ಸುಷ್ಮಾ ನಿರ್ವಾಣೇಶ್ವರ ಕಾರ್ಯಕ್ರಮ ನಿರ್ವಹಿಸಿದರು.ಉಷಾ ಪ್ರಸಾದ ಮತ್ತಿತರರು ಸಹಕರಿಸಿದರು. ವಿದ್ವಾನ್ ಗೌರೀಶ ಯಾಜಿ ಹಾಗೂ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮ ಬಹು ಆಕರ್ಷಕವಾಗಿ ನಡೆಯಿತು. ತಬಲಾದಲ್ಲಿ ಶಿವರಾಮ ಗೋಪಿ, ಮಹೇಶ ಹೆಗಡೆ ಹೊಸಗದ್ದೆ,ಸಂವಾದಿನಿಯಲ್ಲಿ ವಿ.ಗೌರೀಶ ಯಾಜಿ, ಸುಧಾ ಆಚಾರ್ಯ,ಅಜಯ ಹೆಗಡೆ ಸಾಥ್ ನೀಡಿದರು. ವಿದ್ಯಾರ್ಥಿಗಳ ಪಾಲಕದರು, ಸಾರ್ವಜನಿಕರು ಪಾಲ್ಗೊಂಡಿದ್ದರು.



ಗೋಕರ್ಣ: ಕೋಟಿತೀರ್ಥ ಕಟ್ಟೆಯಲ್ಲಿರುವ ಶ್ರೀಮದಾಧ್ಯ ರಘೋತ್ತಮ ಮಠದಲ್ಲಿ ನಡೆದ ಸ್ವರಶ್ರೀ ಸಂಗೀತ ವಿದ್ಯಾಲಯದ ವಾರ್ಷಿಕೋತ್ಸವವನ್ನು ಶ್ರೀಲಕ್ಷ್ಮೀ ವೇಂಕಟೇಶ ಮಂದರಿದ ಅರ್ಚಕ ನಿಶಾಂತ ಜಠಾರ ಕಾರ್ಯಕ್ರಮ ಉದ್ಘಾಟಿಸಿದರು.ಈ ವೇಳೆ ಪಂಡಿತ ಗೌರೀಶ ಯಾಜಿ. ಸ್ವರಶ್ರೀ ಸಂಗೀತ ವಿದ್ಯಾಲಯದ ಶಿಕ್ಷಕಿ ಸುಧಾ ಆಚಾರ್ಯ ಉಪಸ್ಥಿತರಿದ್ದರು.

ಸಮನ್ವಯ ಸಮಿತಿ ಸಭೆ | ಅಪರ ಜಿಲ್ಲಾಧಿಕಾರಿ ಮುಲ್ಲಾ ಸೂಚನೆ

ಜನನ, ಮರಣ ನೋಂದಣಿ ವಿಳಂಬ ಬೇಡ

ಕಾರವಾರ: ಜಿಲ್ಲೆಯಲ್ಲಿ ಘಟಿಸುವ ಪ್ರತಿಯೊಂದು ಜನನ ಮತ್ತು ಮರಣ ಘಟನೆಗಳನ್ನು ಯಾವುದೇ ವಿಳಂಬಕ್ಕೆ ಆಸ್ಪದ ನೀಡದಂತೆ 21 ದಿನಗಳ ಒಳಗೆ ಕಡ್ಡಾಯವಾಗಿ ನೋಂದಣಿ ಮಾಡಲು ಕ್ರಮವಹಿಸುವಂತೆ ಜಿಲ್ಲೆಯ ಎಲ್ಲಾ ಜನನ ಮರಣ ನೋಂದಣಾಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ಸೂಚನೆ ನೀಡಿದರು.

ಅವರು ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ, ಜಿಲ್ಲಾ ಮಟ್ಟದ ಜನನ ಮರಣ ನೋಂದಣಿ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಗ್ರಾಪಂಗಳು ಮತ್ತು ನಗರಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಂಭವಿಸುವ ಪ್ರತಿಯೊಂದು ಜನನ ಮತ್ತು ಮರಣ ಘಟನೆಗಳನ್ನು ನಿಗದಿತ ಅವಧಿಯಲ್ಲಿ ನೊಂದಣಿ ಮಾಡಬೇಕಿದ್ದು, ಈ ಬಗ್ಗೆ ಪ್ರತೀ ತಿಂಗಳು ತಹಶೀಲ್ದಾರ್‌ಗಳ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಸಮನ್ವಯ ಸಮಿತಿ ಸಭೆ ನಡೆಸಿ, ಪರಿಶೀಲನೆ ನಡೆಸುವಂತೆ ತಿಳಿಸಿದ ಅವರು, ಜನನ ಮರಣ ನೋಂದಣಿಯನ್ನು 21 ದಿನಗಳ ಒಳಗೆ ಕಡ್ಡಾಯವಾಗಿ ಮಾಡಿಸುವ ಕುರಿತಂತೆ ಸಾರ್ವಜನಿಕರಿಗೆ ಸ್ವಚ್ಛ ವಾಹಿನಿ ವಾಹನಗಳ ಮೂಲಕ ಜಿಲ್ಲೆಯಾದ್ಯಂತ ನಿರಂತರವಾಗಿ ಪ್ರಚಾರ ಮಾಡುವಂತೆ ನಿರ್ದೇಶನ ನೀಡಿದರು.

ಜನನ ಮರಣ ವಿಷಯಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕ್ರಮಗಳು ಮತ್ತು ಇತ್ತೀಚಿನ ಬದಲಾವಣೆಗಳ ಕುರಿತಂತೆ ಎಲ್ಲಾ ನೋಂದಣಾಧಿಕಾರಿಗಳು ತಿಳಿದಿರಬೇಕು, ನಿಗಧಿತ ಅವಧಿಯ ನಂತರದ ನೋಂದಣಿಗಳನ್ನು ನ್ಯಾಯಾಲಯದ ಆದೇಶ ಪಡೆದು ಮಾಡಬೇಕು.



ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನ ಜನವರಿ ಯಿಂದ ಮಾರ್ಚ್ ವರೆಗೆ 4101 ಜನನ ಮತ್ತು 2969 ಮರಣದ ಕುರಿತು ದಾಖಲೆಗಳು ನೋಂದಣಿಯಾಗಿದ್ದು, ಈ ಕುರಿತ ದಾಖಲೆಗಳನು ಡಿಜಿಟಲ್ ಸಹಿಯೊಂದಿಗೆ ವಿತರಿಸಲಾಗುತ್ತಿದೆ.

■ ಸೋಮಶೇಖರ್ ಮೇಸ್ತಾ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ

2024 ವರ್ಷಕ್ಕಿಂತ ಹಿಂದಿನ ಅವಧಿಯ ಜನನ ಮರಣ ದಾಖಲೆಗಳನ್ನು ಸಂರಕ್ಷಣಾಧಿಕಾರಿಗಳಿಗೆ ವರ್ಗಾಯಿಸುವಂತೆ ತಿಳಿಸಿದರು.ನೋಂದಣಿ ದಾಖಲೆಗಳಲ್ಲಿ ದಿನಾಂಕಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ನಮೂದಿಸಬೇಕು, ಜನನ ಮರಣ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಡಿಜಿಟಲ್ ಸಹಿಯೊಂದಿಗೆ ವಿತರಿಸಬೇಕು. ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಂರಕ್ಷಣಾಧಿಕಾರಿಗಳು, ನೊಂದಣಾಧಿಕಾರಿಗಳು, ಉಪ ನೊಂದಣಾಧಿಕಾರಿಗಳು, ಖಾಸಗಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಹಾಗೂ ಜನನ ಮರಣ ಆಪರೇಟರ್ ಗಳಿಗೆ, ಜನನ ಮರಣ ನೊಂದಣಿ ಕುರಿತಂತೆ ತರಬೇತಿಯನ್ನು ಆಯೋಜಿಸುವಂತೆ ಸೂಚಿಸಿದರು.ಸಭೆಯಲ್ಲಿ ಕ್ರಿಮ್ಸ್ ನ ಡೀನ್ ಡಾ.ಪೂರ್ಣಿಮಾ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಜಹೀರ್ ಅಬ್ಬಾಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ವಿರೂಪಾಕ್ಷ ಪಾಟೀಲ್ ಮತ್ತು ಆನ್‌ಲೈನ್ ಮೂಲಕ ಎಲ್ಲಾ ತಾಲೂಕುಗಳ ತಹಶೀಲ್ದಾರ್‌ಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು ಮುಖ್ಯಾಧಿಕಾರಿಗಳು ಇದ್ದರು.

ಡಿಜಿಟಲ್ ದಾಖಲೀಕರಣ ಪೂರ್ಣಗೊಳಿಸಿ

ತಾಲೂಕು ಮಟ್ಟದಲ್ಲಿ ಜನನ ಮರಣ ನೋಂದಣಿಯು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿರುವ ಕುರಿತಂತೆ ಪ್ರತೀ ತಿಂಗಳು ಕನಿಷ್ಠ ನೋಂದಣಿ ಘಟಕಗಳ ಪರಿಶೀಲನೆ ಕೈಗೊಳ್ಳುವಂತೆ ಹಾಗೂ ನೋಂದಣಿಯ ದಾಖಲೆಗಳನ್ನು ಶಾಶ್ವತವಾಗಿ ಕಾಯ್ದಿರಿಸಲು ಕೈಗೊಂಡಿರುವ ಡಿಜಿಟಲ್ ದಾಖಲೀಕರಣ ಕಾರ್ಯವನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ತಿಳಿಸಿದರು.

ಪುಟ್ ಬ್ರಿಡ್ಜ್ ನಿರ್ಮಾಣಕ್ಕೆ ಅನುದಾನ ಮಂಜೂರು



ಹೊನ್ನಾವರ: ಭಟ್ಕಳ ಹೊನ್ನಾವರ ವಿಧಾನಸಭಾ ಕ್ಷೇತ್ರಕ್ಕೊಳಪಡುವ ಹೊನ್ನಾವರ ತಾಲೂಕಿನ ಗ್ರಾಮೀಣ ಭಾಗದ ಅಭಿವೃದ್ಧಿಗೆ ಸಚಿವ ಮಂಕಾಳ ವೈದ್ಯರು ಬಲ ತುಂಬಿದ್ದಾರೆ. ಗ್ರಾಮೀಣ ಭಾಗದ 7 ಕಡೆ ಪುಟ್ ಬ್ರಿಡ್ಜ್ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆಯಿಂದ ಕೋಟಿ ರೂ. ನೀಡಲಾಗಿದೆ.

ನದಿ, ಹಳ್ಳ ಕೊಳ್ಳ ಗುಡ್ಡಗಾಡು ಪ್ರದೇಶಗಳಿಂದ ಆವೃತ್ತವಾಗಿರುವ ಹೊನ್ನಾವರ ತಾಲೂಕಿನ ಜನ ಜೀವನಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ನೂರಾರು ಕೋಟಿ ವೆಚ್ಚದ ಸೇತುವೆಗಳನ್ನು ಮಂಜೂರಿ ಮಾಡಿಸಿಕೊಟ್ಟಿರುವ ಮಂಕಾಳ ವೈದ್ಯರದೀಗ ಮತ್ತೆ ಗ್ರಾಮೀಣ ಭಾಗದಲ್ಲಿ ಹರಿಯುವ ಹಳ್ಳಗಳಿಗೆ ಕಾಲು ಸಂಕ ನಿರ್ಮಿಸಿ ಆ ಭಾಗದ ಜನರಿಗೆ ನೆರವಾಗುವ ನಿಟ್ಟಿನಲ್ಲಿ ಒಂದು ಕೋಟಿ ವೆಚ್ಚದ ಒಟ್ಟೂ 6 ಪುಟ್ ಬ್ರಿಡ್ಜ್‌ಗಳಿಗೆ ಅನುದಾನ ಮಂಜೂರಿ ಮಾಡಲಾಗಿದೆ.

ಈ ಕುರಿತು ಲೋಕೋಪಯೋಗಿ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರಾದ ಡಾ.ಸೋಮನಾಥ ಅವರು ಕಾಮಗಾರಿ ಕೈಗೆತ್ತಿಕೊಳ್ಳಲು ಅಧಿಕೃತ ಆದೇಶ ಹೊರಡಿಸಿದ್ದಾರೆ.

ಮಂಜೂರಾದ ಕಾಮಗಾರಿಗಳು ಹೊನ್ನಾವರ ತಾಲೂಕಿನ ಕುದ್ರಗಿ ಗ್ರಾಪಂ ವ್ಯಾಪ್ತಿಯ ಬಗ್ಗಮುಕ್ಕಿ ಹಳ್ಳಕ್ಕೆ ಕಾಲು ಸಂಕ ನಿರ್ಮಾಣ(20 ಲಕ್ಷ ರೂ.), ಮಂಕಿ ಪಪಂ ಬಾಲಯ್ಯನವಾಡಿ ಹಳ್ಳಕ್ಕೆ ಕಾಲು ಸಂಕ ನಿರ್ಮಾಣ (15 ಲಕ್ಷ ರೂ.), ಚಿತ್ತಾರ ಗ್ರಾಪ ವ್ಯಾಪ್ತಿಯ ಸಂಪೊಳ್ಳಿ ಕೆಳಗಿನಕೇರಿಯಿಂದ ಮೇಲಿನಕೇರಿ ಜಡ್ಡಿಗದ್ದೆ ಹೋಗಲು ರಮೇಶ ಮರಾಠಿ ಮನೆಹತ್ತಿರ ಹಳ್ಳಕ್ಕೆ ಕಾಲು ಸಂಕ ನಿರ್ಮಾಣ (15 ಲಕ್ಷ ರೂ.), ಖರ್ವಾ ಪಂಚಾಯತ ವ್ಯಾಪ್ತಿಯ ಮೇಲಿನ ಖರ್ವಾ ವಿಷ್ಣು ಹೆಗಡೆ ಮನೆ ಹತ್ತಿರ ಹಳ್ಳಕ್ಕೆ ಕಾಲುಸಂಕ ನಿರ್ಮಾಣ(15 ಲಕ್ಷರೂ.), ಹೆರಂಗಡಿ ಗ್ರಾಪಂ ವ್ಯಾಪ್ತಿಯ ಕೆಳಗಿನ ಮೂಡ್ಕಣಿ ಗದ್ದೆಬಯಲಿನಿಂದ ಕೆಳಗಿನಮೂಡ್ಕಣಿ ಹನ್ಮಂತ ಹಳ್ಳೇರ್ ಮನೆ ಹತ್ತಿರ ಹಳ್ಳಕ್ಕೆ ಕಾಲುಸಂಕ ನಿರ್ಮಾಣ(15 ಲಕ್ಷ ರೂ.), ಬಳಕೂರು ಗ್ರಾಪಂ ತಲಗೋಡ ಮಹಾಲೆಮನೆಯಿಂದ ಕಮ್ಮಾವ್ ಶಾಲೆಗೆ ಹೋಗುವ ದಾರಿಯ ಮಧ್ಯೆ ಹಳ್ಳಕ್ಕೆ ಕಾಲುಸಂಕ ನಿರ್ಮಾಣ 20 ಲಕ್ಷ ರೂ. ಮಂಜೂರಾಗಿದೆ.

ಲಯನ್ಸ್ ಕ್ಲಬ್ ಕಾರ್ಯ ಶ್ಲಾಘನೀಯ: ನಾಯ್ಕ

ಅಂಕೋಲಾ: ಸಮಾಜದಲ್ಲಿ ದುರ್ಬಲರಿಗೆ ವೈದ್ಯಕೀಯ ಸೇವೆ, ಶೈಕ್ಷಣಿಕ ಕೊಡುಗೆ, ಹಸಿವು ನಿವಾರಣೆ, ಪರಿಸರ ಸಂರಕ್ಷಣೆಗೆ ಅಂಕೋಲಾದ ಲಯನ್ಸ್ ಕರಾವಳಿ ಸದಸ್ಯರು ನಿಸ್ವಾರ್ಥ ಮನೋಭಾವದಿಂದ ಸೇವೆ ಸಲ್ಲಿಸುತ್ತ ಬಂದಿದ್ದು ಚಿಕ್ಕ ಮಕ್ಕಳ ಕ್ಯಾನ್ಸರ್ ಕುರಿತು ಅರಿವು, ನೇತ್ರ ತಪಾಸಣೆ, ಮಧುಮೇಹ ಸಂಬಂಧಿತ ಆರೋಗ್ಯ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದು ಲಯನ್ಸ್ ಪ್ರಾಂತಪಾಲ ಜೈ ಅಮೋಲ ನಾಯ್ಕ ಹೇಳಿದರು.

ಲಯನ್ಸ್ ಕ್ಲಬ್ ಅಂಕೋಲಾ ಕರಾವಳಿಗೆ ಭೇಟಿ ನೀಡಿದ ಅವರು ಸ್ಥಳೀಯ ಲಯನ್ಸ್ ಸಂಸ್ಥೆಯ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿ ಅಂಕೋಲಾ ಲಯನ್ಸ್ ಕರಾವಳಿಯ ಸಾಮಾಜಿಕ ಸೇವಾ ಕಾರ್ಯ ನಿರಂತರವಾಗಿ ಮುಂದುವರಿಯಲಿ ಎಂದರು.

ಲಯನ್ಸ್ ಜಿಲ್ಲಾ ಕ್ಯಾಬಿನೇಟ್ ಕಾರ್ಯದರ್ಶಿ ಡಾ.ಕೀರ್ತಿ ನಾಯ್ಕ ಮಾತನಾಡಿ ವಿಶ್ವದ ಅತಿದೊಡ್ಡ ಅಂತಾರಾಷ್ಟ್ರೀಯ ಸೇವಾ ಸಂಸ್ಥೆ ಎಂದು ಹೆಗ್ಗಳಿಕೆ ಪಡೆದಿರುವ ಲಯನ್ಸ್ ಸೇವಾ ಸಂಸ್ಥೆಯ ಸದಸ್ಯರಾಗಿ ಗುರುತಿಸಿಕೊಳ್ಳುವುದು ಗೌರವದ ಸಂಗತಿ ಎಂದರು.ಪ್ರಾದೇಶಿಕ ಚೇರ್ ಪರ್ಸನ್ ರಾಜೇಶ ಸಾಲೆಹಿತ್ತಲ್, ಲಯನ್ಸ್ ಪರಿಸರ ವಿಭಾಗ ರವಿ ನಾಯಕ ಮಾತನಾಡಿದರು.

ಲಯನ್ಸ್ ಕರಾವಳಿ ಅಧ್ಯಕ್ಷ ರಮೇಶ ಪರಮಾರ ಮಾತನಾಡಿ ಅಂಕೋಲಾದಲ್ಲಿ ಲಯನ್ಸ್ ಸಂಸ್ಥೆಯ ಸಾಮಾಜಿಕ ಕಾರ್ಯಗಳು ಹೆಚ್ಚಲಿವೆ ಎಂದರು.

ಕಳೆದ ಸಾಲಿನಲ್ಲಿ ಅತ್ಯುತ್ತಮ ಕಾರ್ಯ ನಿರ್ವಹಿಸಿದ ದೇವಾನಂದ ಗಾಂವಕರ ಅವರಿಗೆ ಲಯನ್ಸ್ ಎಕ್ಸಲೆನ್ಸ್, ಮಹಾಂತೇಶ ರೇವಡಿ ಅವರಿಗೆ ಸೇವಾ ಸ್ವರ್ಣ ಪದಕ, ಕೆ.ವಿ.ಶೆಟ್ಟಿ, ಎಸ್.ಆರ್.ಉಡುಪಿ ಮತ್ತು ಶಂಕರ ಹುಲಸ್ವಾರ ಅವರಿಗೆ ದಶಕಗಳ ಲಯನ್ಸ್ ಸೇವಾ ಪದಕ ನೀಡಿ ಗೌರವಿಸಲಾಯಿತು.

ಲಯನ್ಸ್ ಗಣಪತಿ ತಾಂಡೇಲ್ ಸ್ವಾಗತಿಸಿದರು, ಸ್ಥಾಪಕ ಅಧ್ಯಕ್ಷ ಕೆ.ವಿ.ಶೆಟ್ಟಿ ಪ್ರಾಸ್ತಾವಿಕ ಮಾತನಾಡಿದರು, ಕೆ.ಎಂ.ಗೌಡ ವರದಿ ವಾಚಿಸಿದರು, ಕರುಣಾಕರ ನಾಯ್ಕ ಪರಿಚಯಿಸಿದರು.

ಮಹಾಂತೇಶ ರೇವಡಿ ಕಾರ್ಯಕ್ರಮ ನಿರ್ವಹಿಸಿದರು, ಸದಾನಂದ ಶೆಟ್ಟಿ ವಂದಿಸಿದರು.



ಹೆಣ್ಣುಮಕ್ಕಳು ಆರೋಗ್ಯದ ಕಾಳಜಿ ವಹಿಸಲಿ

ಬನವಾಸಿ: ಸೊಂದಾ ಸ್ವರ್ಣವಲ್ಲಿ ಶ್ರೀ ಗಂಗಾಧರೇಂದ್ರ ಸರಸ್ವತಿ ಶ್ರೀಗಳ ಆದೇಶಾನುಸಾರ, ಇಲ್ಲಿಯ ವಿವಿಧ ಮಹಿಳಾ ಸಂಘಟನೆಗಳ ಆಶ್ರಯದಲ್ಲಿ ಹೆಣ್ಣುಮಕ್ಕಳ ಮತ್ತು ಮಹಿಳೆಯರ ಆರೋಗ್ಯ ಸಮಸ್ಯೆ ಹಾಗೂ ಅವುಗಳ ಪರಿಹಾರದ ಕುರಿತು ವಿಶೇಷ ಉಪನ್ಯಾಸ ಮತ್ತು ಜಾಗೃತಿ ಕಾರ್ಯಕ್ರಮ ನಡೆಯಿತು.

ಇಲ್ಲಿಯ ಶ್ರೀ ಉಮಾಮಧುಕೇಶ್ವರ ಅನ್ನಪೂರ್ಣ ನಿಲಯದಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಬನವಾಸಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಜಯಶ್ರೀ ಹೆಗಡೆ ಅವರು ಮಾತನಾಡಿ, ಹೆಣ್ಣುಮಕ್ಕಳು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. 14 ರಿಂದ 15 ವರ್ಷದೊಳಗಿನ ಹೆಣ್ಣುಮಕ್ಕಳಿಗೆ ಸರ್ಕಾರವು ಗರ್ಭಾಶಯದ ಕ್ಯಾನ್ಸರ್ ವಿರುದ್ಧದ ಲಸಿಕೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡುತ್ತಿದೆ. ಪ್ರತಿಯೊಬ್ಬರೂ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದ ಅವರು ಗರ್ಭಕೋಶದ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಸೇರಿದಂತೆ ಸ್ತ್ರೀ ರೋಗಗಳ ಬಗ್ಗೆ ಮಾಹಿತಿ ನೀಡಿದರು.

ಬನವಾಸಿ ಮಾತೃ ಮಂಡಳಿ ಅಧ್ಯಕ್ಷೆ ಸವಿತಾ ಭಟ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ, ಇಂತಹ ಕಾರ್ಯಕ್ರಮದ ಮೂಲಕ ಜನರು ಆರೋಗ್ಯದಾಯಕ ಮಾಹಿತಿಗಳನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ದೇವಸ್ಥಾನ ವ್ಯವಸ್ಥಾಪನ ಸಮಿತಿ ಸದಸ್ಯೆ ಗೀತಾ ಯಜಮಾನಿ, ಗಂಗಾ ಸಹವಾಸಿ, ತೇಜಸ್ವಿನಿ ಮಹಿಳಾ ಮಂಡಲದ ಸಂಗೀತ ಕೊಳೆಕರ್, ಸುಧಾ ಮರಾಠ, ರತ್ನತ್ರಯ ಸುಮಂಗಲ ಸೇರಿದಂತೆ ಬನವಾಸಿ, ಬದನಗೋಡ ಹಾಗೂ ತವನಂದಿ ಗ್ರಾಮದ ನೂರಾರು ಮಾತೆಯರು ಭಾಗವಹಿಸಿದ್ದರು. ಉಪಾಧ್ಯಕ್ಷೆ ಪದ್ಮಾ ಮಹೇಂದ್ರ ಹೆಗಡೆ ಪ್ರಾರ್ಥಿಸಿದರು. ಪ್ರತಿಭಾ ಪಶುಪತಿ ಶಾಸ್ತ್ರಿ ವಂದಿಸಿದರು.



ಚೈತ್ರಾಂಜಲಿ ವಿನಾಯಕ ಗೌಡ ಪ್ರಥಮ



ಗೋಕರ್ಣ: ಇಲ್ಲಿನ ಭದ್ರಕಾಳಿ ಪದವಿ ಪೂರ್ವ ಕಾಲೇಜಿನ ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಫಲತಾಂಶ ಪ್ರಕಟಗೊಂಡಿದ್ದು,

ವಾಣಿಜ್ಯ ವಿಭಾಗದಲ್ಲಿ ಚೈತ್ರಾಂಜಲಿ ವಿನಾಯಕ ಗೌಡ (ಶೇ.91.50) ಪ್ರಥಮ, ಪ್ರಿಯಾ ಮಹಾಬಲೇಶ್ವರ ಗೌಡ(ಶೇ.87.66) ದ್ವಿತೀಯ, ದೀಪಾ ಉದಯ ಗೌಡ(ಶೇ.86) ತೃತೀಯ ಸ್ಥಾನ ಪಡೆದಿದ್ದಾರೆ.

ಕಲಾವಿಭಾಗದಲ್ಲಿ ರಜತ್ ನಾಗಪ್ಪ ಗೌಡ(ಶೇ.91.83) ಪ್ರಥಮ, ಸಂಕೇತ ಮಂಕಾಳಿ ಗೌಡ(ಶೇ.91.16) ದ್ವಿತೀಯ, ಧನಲಕ್ಷ್ಮೀ ಗಣೇಶ ಹೆಗಡೆ(ಶೇ.91) ತೃತೀಯ ಸ್ಥಾನ ಪಡಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಕೆನರಾ ಶಿಕ್ಷಣ ಪ್ರಸಾರಕ ಮಂಡಳಿಯ ಅಧ್ಯಕ್ಷ ಡಾ.ವಿ.ಆರ್.ಮಲ್ಲನ್ ಹಾಗೂ ಪದಾಧಿಕಾರಿಗಳು, ಸದಸ್ಯರು, ಪ್ರಾಚಾರ್ಯರು, ಹಾಗೂ ಉಪನ್ಯಾಸಕರು ಅಭಿನಂದಿಸಿದ್ದಾರೆ.

ವಿಶ್ವದರ್ಶನ ಪಿಯು ಕಾಲೇಜಿನ ಗಣನೀಯ ಸಾಧನೆ

ಯಲ್ಲಾಪುರ : ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಸ್ಥಳೀಯ ವಿಶ್ವದರ್ಶನ ಪಿಯು ಕಾಲೇಜು ಉತ್ತಮ ಫಲಿತಾಂಶ ದಾಖಲಿಸಿದೆ.

ವಿಜ್ಞಾನ ವಿಭಾಗದಲ್ಲಿ ಅನನ್ಯ ನಾಗೇಶ್ ಹೆಗಡೆ 96.8% ಅಂಕಗಳನ್ನು ಗಳಿಸಿ ಪ್ರಥಮ ಸ್ಥಾನ ಪಡೆದರೆ, ಸಿಂಚನಾ ವಿ. ಗೌಡ 96.3% ದ್ವಿತೀಯ ಸ್ಥಾನ ಹಾಗೂ ಗಣೇಶ ಶಾಂತಾರಾಮ ದೇಸಾಯಿ 94.6%ರಷ್ಟು ತೃತೀಯ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಆಶಾಬಿ ಸಲೀಂ ಶೇಖ್ 98.3% ಪ್ರಥಮ, ಶ್ರೀ ಗಣೇಶ ವಿ. ಬೋಳಗುಡ್ಡೆ 98% ದ್ವಿತೀಯ ಹಾಗೂ ದೀಪಾ ಪಟಗಾರ್ 97.6% ತೃತೀಯ ಸ್ಥಾನ ಗಳಿಸಿದ್ದಾರೆ.

ಒಟ್ಟು ವಿದ್ಯಾರ್ಥಿಗಳಲ್ಲಿ ಶೇಕಡಾ 43 ಮಂದಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ , ಆಡಳಿತ ಮಂಡಳಿ, ಪ್ರಾಚಾರ್ಯರು ಹಾಗೂ ಉಪನ್ಯಾಸಕ ವೃಂದ ಹರ್ಷ ವ್ಯಕ್ತಪಡಿಸಿದ್ದಾರೆ.

ಕೆಎಲ್‌ಎಸ್ ಕಾಲೇಜು: ಶೇ.95.45ರಷ್ಟು ಫಲಿತಾಂಶ



ಹಳಿಯಾಳ: ಕೆಎಲ್‌ಎಸ್ ಪಿಯು ಕಾಲೇಜು ಹಳಿಯಾಳ ಪಿಯುಸಿ ದ್ವಿತೀಯ ವರ್ಷದ ಫಲಿತಾಂಶ 95.45% ರಷ್ಟು ಫಲಿತಾಂಶ ಪಡೆದಿದೆ.ಪರೀಕ್ಷೆಗೆ ಹಾಜರಾದವರು ಒಟವಿದ್ಯಾರ್ಥಿಗಳು-286,ಉತ್ತೀರ್ಣರಾದವರು ಒಟ್ಟು ವಿದ್ಯಾರ್ಥಿಗಳು - 273,ಉನ್ನತ ಶ್ರೇಣಿಯಲ್ಲಿ ಪಾಸಾದವರ ವಿವರ ಈ ಕೆಳಗಿನಂತಿದೆ. **ವಿಜ್ಞಾನ ವಿಭಾಗದಲ್ಲಿ:** ಗೌತಮ್ ಸಂಜು ಧಾರವಾಡಕರ್ (ಶೇ 95.33) ರಷ್ಟು, ರಿಷಿಕಾ ಯಲ್ಲಪ್ಪ ಹಣಬರ (ಶೇ 94.83) ರಷ್ಟು, ತನಿಷ್ಕಾ ಮಹಾಬಲೇಶ್ವರ ದಡ್ಡಿ (ಶೇ 94.50) ರಷ್ಟು, ಅನು ರಾಜಶೇಖರ ಪಾಟೀಲ (ಶೇ 92.67) ರಷ್ಟು, ದಿವ್ಯಾ ಸಿಂಗ್ (ಶೇ 92.17) ರಷ್ಟು, ಸೈಲ್.ಎಸ್.ಜೆ (ಶೇ 91.17) ರಷ್ಟು ಅಂಕಗಳಿಸಿದ್ದಾರೆ. **ವಾಣಿಜ್ಯ ವಿಭಾಗದಲ್ಲಿ:** ವರ್ಷಾ ವಿಜಯ ಬಹದ್ದೂರ (ಶೇ 97) ರಷ್ಟು, ಅಂಜು ಪಟೇಲ (ಶೇ 96.5) ರಷ್ಟು, ಕಾವ್ಯ ಸುರೇಶ ಮೇದಾರ (ಶೇ 95.83) ರಷ್ಟು, ಶ್ರೀವಾಣಿ ಪ್ರಭಾಕರ ತಡಕೋಡ್ (95.83) ರಷ್ಟು, ಸಿಂಚನಾ ಶ್ಯಾಂಸುಂದರ ಜೋಶಿ (ಶೇ 95.67) ರಷ್ಟು, ಪ್ರತೀಕ್ಷಾ ಉದಯಸಿಂಗ್ ರಾಜಪುತ್ (ಶೇ 94.5) ರಷ್ಟು ಅಂಕಗಳಿಸಿದ್ದಾರೆ. **100ಕ್ಕೆ 100 ಅಂಕಗಳು :** ಗೌತಮ ಸಂಜು ಧಾರವಾಡಕರ ಗಣಕ ವಿಜ್ಞಾನದಲ್ಲಿ 100ಕ್ಕೆ 100, ಸಿಂಚನಾ ಶ್ಯಾಂಸುಂದರ್ ಜೋಶಿ, ಕಾವ್ಯಾ ಸುರೇಶ ಮೇದಾರ ವ್ಯವಹಾರ ಅಧ್ಯಯನದಲ್ಲಿ 100ಕ್ಕೆ 100 ರಷ್ಟು, ಅನು ರಾಜಶೇಖರ್ ಪಾಟೀಲ್ ಮತ್ತು ಮಾಯಲ್ ಗಂಗಾಧರ ರಾಮಾಜಿ ಕನ್ನಡ ವಿಷಯದಲ್ಲಿ 100ಕ್ಕೆ 100 ಪಡೆದಿದ್ದಾರೆ.ವಿದ್ಯಾರ್ಥಿಗಳ ಸಾಧನೆಗೆ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷರಾದ ಪ್ರಶಾಂತ ಕುಲಕರ್ಣಿ, ಕೆ.ಎಲ್.ಎಸ್ ಆಡಳಿತ ಮಂಡಳಿಯವರು, ಪ್ರಾಂಶುಪಾಲರಾದ ಶ್ರೀನಿವಾಸ ಪ್ರಭು, ಕಾಲೇಜು ಸಿಬ್ಬಂದಿ, ಪಾಲಕರು ಹರ್ಷ ವ್ಯಕ್ತಪಡಿಸಿದ್ದಾರೆ.

ರಾಮನಗರ ಕಾಲೇಜು: ಶೇ.86ರಷ್ಟು ಫಲಿತಾಂಶ



ಜೋಯಿಡಾ: ರಾಮನಗರ ಬಿ.ಜಿ ವಿ.ಎಸ್ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಬಿ.ಜಿ.ವಿ.ಎಸ್ ಪದವಿ ಪೂರ್ವ ಕಾಲೇಜು ರಾಮನಗರ ಕಾಲೇಜಿನಲ್ಲಿ ಒಟ್ಟು 90 ವಿದ್ಯಾರ್ಥಿಗಳು ಹಾಜರಿದ್ದು, ಅದರಲ್ಲಿ 77 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.ಕಾಲೇಜಿನ ಒಟ್ಟು ಫಲಿತಾಂಶ 86% ರಷ್ಟು ಫಲಿತಾಂಶ ಆಗಿದ್ದು, ವಾಣಿಜ್ಯ ವಿಭಾಗದಲ್ಲಿ ಯಾಸ್ಮೀನ ಎಮ್. ಶೇಖ್ 97.33% ಪ್ರಥಮ, ಪೂಜಾ ಎಸ್.ದೇಸಾಯಿ 93.17% ದ್ವಿತೀಯ, ಶ್ವೇತಾ ಪಿ ಎಡಗೆ 92.67% ತೃತೀಯ ಸ್ಥಾನ ಪಡೆದಿಕೊಂಡಿದ್ದಾಳೆ. ಕಲಾ ವಿಭಾಗದಲ್ಲಿಇಟಾ ಲಕ್ಷ್ಮಣ ಮೀರಶಿ 92.17% ರಷ್ಟು ಪ್ರಥಮ, ಸಂಜೀವಿನಿ ಎಸ್.ಹಣಬರ 79.17% ದ್ವಿತೀಯ, ಕಾಮಾಕ್ಷಿ ಕೆ. ಪಾಟೀಲ್ 76.17% ರಷ್ಟು ತೃತೀಯ ಸ್ಥಾನ ಪಡೆದಿದ್ದಾರೆ. ಇವರ ಸಾಧನೆಗೆ ಬಾಪೂಜಿ ಗ್ರಾಮೀಣ ವಿಕಾಸ ಸಮಿತಿ ಕಾರವಾರ ಅಧ್ಯಕ್ಷರಾದ ವನಿತಾ ಪ್ರಭಾಕರ ರಾಣೆ, ಉಲ್ಲಾಸ ನಾಯ್ಕ ಉಪಾಧ್ಯಕ್ಷರು, ಮಂಜುನಾಥ ಪವಾರ್ ಕಾರ್ಯದರ್ಶಿ, ಕಿಶೋರ ರಾಣೆ ಜಂಟಿ ಕಾರ್ಯದರ್ಶಿ, ಗಜೇಂದ್ರ ಗಾಂದಲೆ ಹಾಗೂ ಸದಸ್ಯರು, ಕಾಲೇಜಿನ ಪ್ರಾ. ಪ್ರೇಮಾನಂದ ಎಸ್.ಪರಬ ಹಾಗೂ ಕಾಲೇಜಿನ ಎಲ್ಲಾ ಸಿಬ್ಬಂದಿ ಅಭಿನಂದಿಸಿದ್ದಾರೆ.

ನಾಳೆ ಮಧುಕೇಶ್ವರ ದೇವಸ್ಥಾನದ ವಾರ್ಷಿಕೋತ್ಸವ

ಮುಂಡಗೋಡ: ತಾಲೂಕಿನ ಕಂಚಿಕೊಪ್ಪ ಗ್ರಾಮದ ಶ್ರೀ ಮಧುಕೇಶ್ವರ ದೇವಸ್ಥಾನದ 16ನೇ ವರ್ಷದ ವಾರ್ಷಿಕೋತ್ಸವ ಏ.11ಮತ್ತು12ರಂದು ನಡೆಯಲಿದೆ.



ಏ.11ರಂದು ಬೆಳಗ್ಗೆ ಇಷ್ಟದೇವತಾಪ್ರಾರ್ಥನೆ, ಪುಣ್ಯಾಹ, ದೇವನಾಂದಿ, ಮಾತೃಕಾ ಪೂಜೆ, ಕೌತುಕ ಬಂಧನ, ಧ್ವಜ ಪೂಜಾ, ಧ್ವಜಾರೋಹಣ, ಮಹಾಗಣಪತಿ ಹವನ, ನವಗ್ರಹ ಹವನ, ಸಪ್ತಶತಿ ಪಾರಾಯಣ, ನವಚಂಡಿಕಾ ಹವನ ಹಾಗೂ ಬೆಳಗ್ಗೆ 11 ಘಂಟೆಗೆ ಶ್ರೀಮನ್ನೆಲೆಮಾವು ಮಠದ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಮಾಧವಾನಂದ ಭಾರತೀ ಮಹಾಸ್ವಾಮಿಗಳು ಇವರ ಆಗಮನದ ನಂತರ ಪೂರ್ಣಕುಂಭ ಸ್ವಾಗತ, ಶ್ರೀಗಳ ಪಾದಪೂಜೆ ಜರುಗಲಿದ್ದು, ನಂತರ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿತರಣೆ ಹಾಗೂ ಅನ್ನ ಸಂತರ್ಪಣೆ ಜರುಗಲಿದೆ.ಮಧ್ಯಾಹ್ನ 3ಘಂಟೆಗೆ ಶ್ರೀಮದ್ ಮಾಧವಾನಂದ ಭಾರತಿ ಶ್ರೀಗಳು ಅಮೃತ ಹಸ್ತದಿಂದ ಮಧುಕೇಶ್ವರ ದೇವಸ್ಥಾನದ ಸಭಾಭವನ ಉದ್ಘಾಟನೆ ನೆರವೇರಲಿದೆ. ನಂತರ ಸಭಾ ಕಾರ್ಯಕ್ರಮ ನಡೆಯಲಿದ್ದು, ಶ್ರೀಮದ್ ಮಾಧವಾನಂದ ಭಾರತೀ ಶ್ರಿಗಳ ಸಾನ್ನಿಧ್ಯದಲ್ಲಿ ಆಶೀರ್ವಚನ ನಡೆಯುವುದು. ಕಾರ್ಯಕ್ರಮದಲ್ಲಿ ಶಾಸಕ ಶಿವರಾಮ ಹೆಬ್ಬಾರ ಭಾಗವಹಿಸಿದ್ದಾರೆ. ಕಂಚಿಕೊಪ್ಪದ ಶಾಂತಕುಮಾರ ಕೃಷ್ಣಪ್ಪ ಹೆಗಡೆ ಮತ್ತು ಅಟಬೈಲನ ಧರ್ಮರಾಜ ಜಟ್ಟಯ್ಯ ಗೌಡ ಇವರನ್ನು ಸನ್ಮಾನಿಸಲಾಗುವುದು. ಏ.12ರಂದು ಪ್ರಾತಃ ಕಾಲ ಪೂಜೆ, ಪಂಚಾಮೃತ ಪೂಜೆ, ರುದ್ರಾಭಿಷೇಕ, ಸರ್ವಾಲಂಕಾರ ಪೂಜೆ, ಅದಿವಾಸ ಹೋಮ, ರುದ್ರ ಹೋಮ, ಪೂರ್ಣಾಹುತಿ, ತೀರ್ಥ ಪ್ರಸಾದ ವಿತರಣೆ ಮತ್ತು ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಟ್ರಸ್ಟ್ ಕಮಿಟಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ್ವಿತೀಯ ಪಿಯು ಫಲಿತಾಂಶ: ವಿದ್ಯಾರ್ಥಿಗಳ ಉತ್ತಮ ಸಾಧನೆ

ಹೊನ್ನಾವರ: ತಾಲೂಕಿನ ಮಲ್ನಾಡ್ ಪ್ರೊಗ್ರೆಸ್ಸಿವ್ ಎಜ್ಯುಕೇಶನ್ ಸೊಸೈಟಿಯ ಎಸ್.ಡಿ.ಎಂ.ಪದವಿ ಪೂರ್ವ ಕಾಲೇಜು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದೆ. ವಾಣಿಜ್ಯ ವಿಭಾಗದಲ್ಲಿ ಚಿನ್ಮಯಿ ಮಂಜುನಾಥ ಶೆಟ್ಟಿ ಶೇ. 99.33 ರಷ್ಟು ಅಂಕ ಪಡೆದು ರಾಜ್ಯಕ್ಕೆ 5ನೇ ರ‍್ಯಾಂಕ್ ಪಡೆದಿಕೊಂಡಿದ್ದಾಳೆ. ವಿಜ್ಞಾನ ವಿಭಾಗದಲ್ಲಿ ಶ್ರೀ ರಾಮ್ ತಿಮ್ಮಣ್ಣ ಭಟ್ 97.50% ರಷ್ಟು ಪಡೆದು ಪ್ರಥಮ,.ಪ್ರಜ್ಞಾ ವೆಂಕಟರಮಣ ಭಟ್ 96.67% ದ್ವಿತೀಯ ಹಾಗೂ ರಚನಾ ಹನುಮಂತ ನಾಯ್ಕ 95.67 ಮತ್ತು ಸಹನಾ ಮಂಜುನಾಥ್ ಗೌಡ 95.67 % ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಚಿನ್ಮಯಿ ಮಂಜುನಾಥ್ ಶೆಟ್ಟಿ 99.33% ಪ್ರಥಮ ಸ್ಥಾನ, ಭೂಮಿಕಾ ವೆಂಕಟೇಶ್ ಕಾಮತ್ 98.83% ದ್ವಿತೀಯ, ಪ್ರತಿಕ್ಷಾ ನಾಯ್ಕ 97.67% ಅಂಕ ಪಡೆದು ತೃತೀಯ ಸ್ಥಾನ ಪಡೆದಿರುತ್ತಾರೆ. ಕಲಾ ವಿಭಾಗದಲ್ಲಿವೈಷ್ಣವಿ ನಾಗೇಶ್ ನಾಯ್ಕ 97.17%ಶ್ರೇಯಾ ಮಂಜುನಾಥ್ ನಾಯ್ಕ 96%, ಸಂಜನಾ ಗಜಾನನ ನಾಯ್ಕ 92.83% ರಷ್ಟು ಅಂಕ ಪಡೆದಿರುತ್ತಾರೆ. ಒಟ್ಟು ಕಾಲೇಜಿನ ಫಲಿತಾಂಶ 91.88% ಆಗಿರುತ್ತದೆ. ವಿದ್ಯಾರ್ಥಿಗಳ ಸಾಧನೆಗೆ ಆಡಳಿತ ಮಂಡಳಿ ಅಧ್ಯಕ್ಷ ಕೃಷ್ಣಮೂರ್ತಿ ಭಟ್ ಶಿವಾನಿ, ಹಾಗೂ ಸದಸ್ಯರು, ಪ್ರಾಚಾರ್ಯ ಡಾ.ರಾಜು ಟಿ ಮಾಳಗಿಮನಿ, ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಕಿರುಸುದ್ದಿ

ಸ್ವಾಮಿ ವಿವೇಕಾನಂದ ಕಾಲೇಜಿಗೆ ಶೇ.98ಫಲಿತಾಂಶ



ಹಾವೇರಿ: ಇಲ್ಲಿನ ಬಸವೇಶ್ವರ ನಗರದ 12ನೇ ಕ್ರಾಸ್ ''ಬಿ'' ಬ್ಲಾಕ್‌ನಲ್ಲಿರುವ ಸ್ವಾಮಿ ವಿವೇಕಾನಂದ ವಿಜ್ಞಾನ ಪದವಿ ಪೂರ್ವ ಕಾಲೇಜು 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.98ರಷ್ಟು ಫಲಿತಾಂಶ ಪಡೆದು ಜಿಲ್ಲೆಗೆ ಉತ್ತಮ ಸಾಧನೆ ತೋರಿದೆ. ವಿಜ್ಞಾನ ವಿಭಾಗದಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಸುವರ್ಣ ಗುಂಡಣ್ಣನವರ 580ಅಂಕ (ಶೇ.97) ಪ್ರಥಮ, ರಾಜು ಅಕ್ಕಿ 530ಅಂಕ (ಶೇ.88.5) ದ್ವಿತೀಯ ಹಾಗೂ ಮಹಾಲಕ್ಷ್ಮೀ ಚೌಟಿ 520ಅಂಕ (ಶೇ.87) ತೃತೀಯ ಸ್ಥಾನ ಪಡೆದಿದ್ದಾರೆ. ಉಳಿದ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದು ಕಾಲೇಜಿಗೆ ಹಾಗೂ ಸಂಸ್ಥೆಗೆ ಕೀರ್ತಿ ತಂದಿದ್ದಾರೆ ಎಂದು ಕಾಲೇಜಿನ ಪ್ರಾ. ರವಿಕುಮಾರ ಪೂಜಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಸತೀಶ ಕುಲಕರ್ಣಿ ಆಯ್ಕೆ



ಹಾವೇರಿ: ಡಾ. ವಿ.ಕೃ. ಗೋಕಾಕ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ಗೆ ನೂತನ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಡಾ.ವಿ.ಕೃ. ಗೋಕಾಕ ರಾಷ್ಟ್ರೀಯ ಸ್ಮಾರಕ ಟ್ರಸ್ಟ ನೂತನ ಅಧ್ಯಕ್ಷರಾಗಿ ಡಾ.ಸತೀಶ ಕುಲಕರ್ಣಿ ಆಯ್ಕೆಯಾಗಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಳಗಾವಿ ವಲಯ ವಿಭಾಗದ ಜಂಟಿ ನಿರ್ದೇಶಕ ಕೆ.ಎಚ್. ಚನ್ನೂರು, ಧಾರವಾಡ ದ.ರಾ. ಬೇಂದ್ರ ಟ್ರಸ್ಟ್ ಅಧ್ಯಕ್ಷ ಸರಜೂ ಕಾಟ್ಕರ್, ಹಾವೇರಿ ವಿಶ್ವವಿದ್ಯಾಲಯ ಕುಲಪತಿ ಸುರೇಶ ಜಂಗಮಶೆಟ್ಟಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಲಿಂಗಯ್ಯ ಹಿರೇಮಠ, ಸಂಜೀವಕುಮಾರ ನೀರಲಗಿ, ಟ್ರಸ್ಟ್ ಸದಸ್ಯರಾದ ಪ್ರೊ.ಮಾರುತಿ ಶಿಡ್ಲಾಪೂರ, ಗುರುರಾಜ ನಾಡಿಗೇರ, ಲಿಂಗರಾಜ ಸೊಟ್ಟಪ್ಪನವರ, ಡಾ.ಜಗನ್ನಾಥ ಗೇನಣ್ಣನವರ, ಪುಷ್ಪಾ ಶಲವಡಿಮಠ ಹಾಗೂ ಇತರರು ಉಪಸ್ಥಿತರಿದ್ದರು. ಟ್ರಸ್ಟ್‌ನ ಸದಸ್ಯ ಕಾರ್ಯದರ್ಶಿ ವೀರಯ್ಯಸ್ವಾಮಿ ಹಿರೇಮಠ ಸ್ವಾಗತಿಸಿ, ವಂದಿಸಿದರು.

ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿಗೆ ನೇರ ಸಂದರ್ಶನ

ಹಾವೇರಿ: ಹಾವೇರಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಸಹಾಯಕ ಪ್ರಾಧ್ಯಾಪಕರ ವಿವಿಧ ವಿಷಯಗಳ 27 ಬೋಧನಾ ಹುದ್ದೆಗೆ ಆರು ತಿಂಗಳ ಅವಧಿಗೆ ಏಕೀಕೃತ ವೇತನದೊಂದಿಗೆ ಎನ್‌ಎಂಸಿ ಮಾನದಂಡಗಳಿಗೆ ಅನುಗುಣವಾಗಿ ರೋಸ್ಟರ್ ಅನುಸಾರ ಏ.10ರಿಂದ ನೇರ ಸಂದರ್ಶನ ಜರುಗಲಿದೆ.ಹುದ್ದೆಗಳ ವಿವರ: ಅನಾಟಮಿ-3, ಬಯೋಕೆಮಿಸ್ಟ್ರೀ-3, ಪೆಥಾಲಜಿ -1, ಫಾರ್ಮಾಕೋಲಜಿ-3, ಮೈಕ್ರೋಬಯಾಲಜಿ -3, ಕಮ್ಯೂನಿಟಿ ಮೆಡಿಸಿನ್ -3, ಜನರಲ್ ಮೆಡಿಸಿನ್ -3, ಮನೋವೈದ್ಯಶಾಸ್ತ್ರ -1, ಜನರಲ್ ಸರ್ಜರಿ -1, ಆಪ್ತಮಾಲಜಿ -1, ಅನಸ್ತೇಷಿಯಾಲಜಿ -3, ಇಎನ್‌ಟಿ-1, ಗೈನಕಾಲಜಿ -2, ರೇಡಿಯೋ ಡೈಗ್ನಾಸಿಸ್ -1 ಹುದ್ದೆಗಳಿಗೆ ಅರ್ಜಿ ನೇರ ಸಂದರ್ಶನವಿದೆ. ಪ್ರತಿ ಹುದ್ದೆಗೆ ಅರ್ಹತೆಗಳು, ಅನುಭವ ಮತ್ತು ಇತರೆ ವಿವರಗಳನ್ನು ಚಿಠಿಠಿಟಿ:// ಚಿಚಿಣಿಡಿಚಿಟಡಿಟ್ಡಿಚಿ.ಟ್ಟುಚಿಠಿಬ್ಬುಚಿ.ಜಟಡ.ಜ್ಞ ವೆಬ್ ಸೈಟ್‌ನಲ್ಲಿ ನೋಡಬಹುದು. ಅಭ್ಯರ್ಥಿಗಳನ್ನು ಕೇವಲ ಗುತ್ತಿಗೆ ಆಧಾರದ ಮೇಲೆ ಮೆರಿಟ್ ಮತ್ತು ಅರ್ಹತೆಯ ಆಧಾರದ ಮೇಲೆ ನೇರ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುತ್ತದೆ.ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಭರ್ತಿಮಾಡಿದ ಅರ್ಜಿಯನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿದ ಎರಡು ಸೆಟ್ ದಾಖಲೆಗಳು ಮತ್ತು ಎರಡು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಛಾಯಾಚಿತ್ರಗಳು ಮತ್ತು ರೂ.1000/- (ಮರುಪಾವತಿ ಮಾಡಲಾಗುವುದಿಲ್ಲ) ಈ ಪ್ರಕಟಣೆಯ ದಿನಾಂಕದಂದು ಅಥವಾ ನಂತರ ಡ್ರಾ ಮಾಡಿದ ಡಿಮ್ಯಾಂಡ್ ಡ್ರಾಫ್ಟ್ ಜೊತೆಗೆ ನಿರ್ದೇಶಕರು, ಹಾವೇರಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಅವರ ಹೆಸರಿನಲ್ಲಿ ಸಂದರ್ಶನದ ದಿನಾಂಕದಂದು ಹಾವೇರಿಯಲ್ಲಿ ಪಾವತಿಸಬಹುದಾಗಿದೆ. ನಿರ್ದೇಶಕರು ಯಾವುದೇ ಕಾರಣ ನೀಡದೆ, ನೇಮಕಾತಿ ಮಾಡುವ, ರದ್ದುಗೊಳಿಸುವ ಅಥವಾ ಹುದ್ದೆಗಳ ಸಂಖ್ಯೆಯನ್ನು ಬದಲಾಯಿಸುವ ಹಕ್ಕನ್ನು ಕಾಯ್ದಿರಿಸಿದ್ದಾರೆ ಎಂದು ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಡೀನ್ ಮತ್ತು ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾವೇರಿ: ಜವಳಿ ಹಾಗೂ ಸಕ್ಕರೆ ಖಾತೆ ಮತ್ತು ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಗುರುವಾರ ಸಂಜೆ ನಗರದ ಹಿರಿಯ ಪತ್ರಕರ್ತ, ಸಾಹಿತಿ ಮಾಲತೇಶ ಅಂಗೂರ ಅವರ ಮನೆಗೆ ಭೇಟಿ ನೀಡಿ ಅಂಗೂರ ಅವರ ಆರೋಗ್ಯ ವಿಚಾರಿಸಿದರು. ಮಾಲತೇಶ ಅವರು ಕಾಲು ಕಳೆದುಕೊಂಡು ಅನಾರೋಗ್ಯಕ್ಕೆ ಒಳಗಾಗಿರುವುದು ದುಃಖಕರ ಸಂಗತಿ, ಅವರ ನೆರವಿಗೆ ಬದ್ಧರಾಗಿದ್ದು, ಸರ್ಕಾರದ ನೆರವು ದೊರಕಿಸುವ ಭರವಸೆ ನೀಡಿದರು. ಈ ವೇಳೆ ಶಾಸಕರಾದ ರುದ್ರಪ್ಪ ಲಮಾಣಿ, ಬಸವರಾಜ ಶಿವಣ್ಣನವರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಹಾಜರಿದ್ದರು.

ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ

ಹಾನಗಲ್ಲ: ತಾಲೂಕಿನ ಅಲ್ಲಾಪುರ ಗ್ರಾಮದಲ್ಲಿ 20 ಲಕ್ಷ ರೂ.ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಸಿಸಿರಸ್ತೆ, ಸಿಸಿ ಗಟಾರ ನಿರ್ಮಾಣ, ರಸ್ತೆ ಅಭಿವೃದ್ಧಿ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ ಮಾನೆ, ಗ್ರಾಮ ಭಾರತದ ಜೀವನಾಡಿಯಾಗಿದ್ದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಸ್ವರೂಪ ಬದಲಿಸಿ ಕೇಂದ್ರ ಸರ್ಕಾರ ಗ್ರಾಮೀಣಾಭಿವೃದ್ಧಿಯ ಮೇಲೆ ಗದಾಪ್ರಹಾರ ನಡೆಸಿದೆ. ಸಾಮಾನ್ಯವಾಗಿ ಪ್ರತಿ ಗ್ರಾಪಂ ಗಳ ಯೋಜನೆಯಡಿ ವಾರ್ಷಿಕ ಒಂದು ಕೋಟಿವರೆಗೆ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳುತ್ತಿದ್ದವು. ಕೂಲಿ ಕಾರ್ಮಿಕರ ವಲಸೆ ತಡೆಗಟ್ಟುವಲ್ಲಿ ಸಹ ಯೋಜನೆ ವರದಾನವಾಗಿತ್ತು. ಯೋಜನೆಯ ಸ್ವರೂಪ ಬದಲಾಗಿರುವುದರಿಂದ ಕಾಮಗಾರಿ ಕೈಗೊಳ್ಳುವುದು ಕಷ್ಟಸಾಧ್ಯವಾಗಿದೆ ಎಂದು ಆತಂಕ ವ್ಯಕ್ತಪಡಿಸಿದ ಅವರು ವರ್ಷದಿಂದ ವರ್ಷಕ್ಕೆ ಕೇಂದ್ರ ಸರ್ಕಾರ ಜಿ.ಎಸ್.ಟಿ. ರೂಪದಲ್ಲಿ ಹೆಚ್ಚು ಹೆಚ್ಚು ತೆರಿಗೆ ಸಂಗ್ರಹಿಸುತ್ತಿದೆ. ಆದರೆ ನ್ಯಾಯಯುತ ಅನುದಾನವನ್ನು ಕಡಿತಗೊಳಿಸಿ ಭಾರಿ ಅನ್ಯಾಯ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಖಂಡರಾದ ಅಲ್ಲಾಭಕ್ಷ ಇನಾಂದಾರ, ಯಲ್ಲಪ್ಪ ನಿಂಬಣ್ಣನವರ, ಮಹ್ಮದಹನೀಫ್ ಕಳಗೊಂಡ, ಇಸಾಕ ಲಾಲಾನವರ, ಗುಲಾಬ ಕಳಗೊಂಡ, ನಿಜಾಮಸಾಬ ಹುದ್ದಾರ, ಹಜರತ್ ಅಲಿ ಪರಾಸ್, ಅಬ್ದುಲರೆಹಮಾನ್ ಖಾಜಿ, ಸುಲೇಮಾನ ಪರಾಸ್ ಸೇರಿದಂತೆ ಇನ್ನೂ ಹಲವರು ಇದ್ದರು.



ಹಾನಗಲ್ಲ: ತಾಲೂಕಿನ ಅಲ್ಲಾಪುರ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

1 ಸ್ಥಾನ ಕುಸಿತ: ಜಿಲ್ಲೆಗೆ ಶೇ.84.11ರಷ್ಟು ಫಲಿತಾಂಶ

ಹಾವೇರಿ: ದ್ವಿತೀಯ ಪಿಯುಸಿ ಫಲಿತಾಂಶ ಗುರುವಾರ ಪ್ರಕಟವಾಗಿದ್ದು ಹಾವೇರಿ ಜಿಲ್ಲೆ ಶೇ.84.11 ಫಲಿತಾಂಶ ದಾಖಲಿಸುವುದರೊಂದಿಗೆ ರಾಜ್ಯಕ್ಕೆ 22ನೇ ಸ್ಥಾನ ಪಡೆದಿದೆ. ಕಳೆದ ವರ್ಷ 21ನೇ ಸ್ಥಾನದಲ್ಲಿದ್ದ ಜಿಲ್ಲೆ ಈ ಬಾರಿ ಒಂದು ಸ್ಥಾನ ಕುಸಿತ ಕಂಡಿದೆ.

ಜಿಲ್ಲೆಯ 25 ಪರೀಕ್ಷಾ ಕೇಂದ್ರಗಳಲ್ಲಿ ಫೆ.28ರಿಂದ ಮಾ.17ರ ವರೆಗೆ 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆದಿವೆ. ಜಿಲ್ಲೆಯಲ್ಲಿ 12684 ರೆಗ್ಯುಲರ್ ವಿದ್ಯಾರ್ಥಿಗಳಿದ್ದು ಈ ಪೈಕಿ 10,669 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಫಲಿತಾಂಶ ಶೇ.84.1ರಷ್ಟಾಗಿದೆ. ಉಳಿದಂತೆ 298 ಖಾಸಗಿಯಾಗಿ ಪರೀಕ್ಷೆ ಬರೆದವರಿದ್ದು ಈ ಪೈಕಿ 127 ಹಾಗೂ 855 ಪುನರಾವರ್ತಿತ ವಿದ್ಯಾರ್ಥಿಗಳ ಪೈಕಿ 292 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಗ್ರಾಮೀಣ ವಿದ್ಯಾರ್ಥಿಗಳ ಗಮನಾರ್ಹ ಸಾಧನೆ: ಈ ಬಾರಿ ಜಿಲ್ಲೆಯಲ್ಲಿ ಗ್ರಾಮೀಣ ವಿದ್ಯಾರ್ಥಿಗಳು ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಉತ್ತಮ ಫಲಿತಾಂಶ ದಾಖಲಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಪರೀಕ್ಷೆ ಬರೆದ 5567 ವಿದ್ಯಾರ್ಥಿಗಳ ಪೈಕಿ 4507 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.80.96 ಫಲಿತಾಂಶ ದಾಖಲಾಗಿದ್ದರೆ ನಗರ ಪ್ರದೇಶದಲ್ಲಿ 8270 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಇವರಲ್ಲಿ 6581 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ನಗರ ಪ್ರದೇಶದಲ್ಲಿ ಒಟ್ಟು ಶೇ. 79.58 ಫಲಿತಾಂಶ ದಾಖಲಾಗಿದೆ.

ವಿಜ್ಞಾನ ವಿಭಾಗ ಉತ್ತಮ : ವಿಜ್ಞಾನ ವಿಭಾಗದಲ್ಲಿ 4100 ವಿದ್ಯಾರ್ಥಿಗಳ ಪೈಕಿ 3737 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.91.15 ಫಲಿತಾಂಶ ದಾಖಲಾಗಿದ್ದರೆ ವಾಣಿಜ್ಯ ವಿಭಾಗದಲ್ಲಿ 3518 ವಿದ್ಯಾರ್ಥಿಗಳ ಪೈಕಿ 3070 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ. 87.27 ಫಲಿತಾಂಶ ಬಂದಿದೆ. ಇನ್ನು, ಕಲಾ ವಿಭಾಗದಲ್ಲಿ 5066 ವಿದ್ಯಾರ್ಥಿಗಳಲ್ಲಿ 3862 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.76.23 ಫಲಿತಾಂಶ ಬಂದಿದೆ.

ಒಂದು ಸ್ಥಾನ ಕುಸಿದಿದೆ : ಕಳೆದ ವರ್ಷ ಜಿಲ್ಲೆ ರಾಜ್ಯಕ್ಕೆ 21ನೇ ಸ್ಥಾನ ಪಡೆದಿದ್ದರೂ ಶೇಕಡಾವಾರು ಫಲಿತಾಂಶ ಕಡಿಮೆ ಇತ್ತು. ಒಟ್ಟು ಶೇ. 67.56 ಫಲಿತಾಂಶ ಬಂದಿತ್ತು. ಈ ವರ್ಷ ಒಂದು ಸ್ಥಾನ ಕುಸಿತ ಕಂಡಿದ್ದರೂ ಶೇಕಡಾವಾರು ಫಲಿತಾಂಶ 84.11ಕ್ಕೆ ಏರಿದೆ. ಜಿಲ್ಲೆಯ ಒಟ್ಟಾರೆ ಫಲಿತಾಂಶ ಸಮಾಧಾನಕರವಾಗಿದ್ದರೂ ಸ್ಥಾನದಲ್ಲಿ ಕುಸಿತ ಕಂಡಿರುವುದು ಶಿಕ್ಷಣ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ವಿದ್ಯಾರ್ಥಿಗಳ ಉತ್ತೀರ್ಣ ಪ್ರಮಾಣ ಉತ್ತಮವಾಗಿದ್ದರೂ, ಇತರ ಜಿಲ್ಲೆಗಳಿಗಿಂತ ಸ್ಪರ್ಧಾತ್ಮಕ ಮಟ್ಟದಲ್ಲಿ ಹಿಂದುಳಿದಿರುವುದರಿಂದ ಸ್ಥಾನದಲ್ಲಿ ಈ ಬದಲಾವಣೆ ಕಂಡುಬಂದಿದೆ ಎಂದು ಶಿಕ್ಷಣ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿರುವುದು ವಿಶೇಷವಾಗಿದ್ದು, ಹಲವು ಸರ್ಕಾರಿ ಕಾಲೇಜುಗಳು ಶ್ರೇಷ್ಠ ಫಲಿತಾಂಶ ದಾಖಲಿಸಿರುವುದು ಗಮನಾರ್ಹವಾಗಿದೆ. ಆದರೆ ಕೆಲವು ವಿಷಯಗಳಲ್ಲಿ ಕಡಿಮೆ ಫಲಿತಾಂಶ ದಾಖಲಾಗಿರುವುದು ಒಟ್ಟಾರೆ ಶೇಕಡಾವಾರಿನ ಮೇಲೆ ಪರಿಣಾಮ ಬೀರಿದೆ ಎನ್ನಲಾಗಿದೆ.



ಬಾಲಕಿಯರ ಮೇಲುಗೈ

ಎಂದಿನಂತೆ ಜಿಲ್ಲೆಯ ಪಿಯುಸಿ ಫಲಿತಾಂಶದಲ್ಲಿ ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. 8283 ಬಾಲಕಿಯರು ಪರೀಕ್ಷೆ ಬರೆದಿದ್ದು ಇವರಲ್ಲಿ 6996 ಬಾಲಕಿಯರು ಉತ್ತೀರ್ಣರಾಗಿದ್ದಾರೆ. ಬಾಲಕಿಯರ ಉತ್ತೀರ್ಣ ಪ್ರಮಾಣ ಶೇ.84.46 ಆಗಿದೆ. 5554 ಬಾಲಕರು ಪರೀಕ್ಷೆ ಬರೆದಿದ್ದು ಇವರಲ್ಲಿ 4092 ಜನ ಉತ್ತೀರ್ಣರಾಗಿದ್ದಾರೆ. ಬಾಲಕರ ಉತ್ತೀರ್ಣ ಪ್ರಮಾಣ ಶೇ.73.68 ಆಗಿದೆ.

ಕೆರೆ ಸ್ವಚ್ಛತೆಗೆ ಆಗ್ರಹಿಸಿ ಇಂದು ಬೃಹತ್ ಪ್ರತಿಭಟನೆ



ಬ್ಯಾಡಗಿ: ಪಟ್ಟಣದ ಗಾಂಧಿ ನಗರದಲ್ಲಿ ಇರುವ ಪುರಾತನವಾದ ಬಸನಕಟ್ಟಿ ಕೆರೆಯು ಕಲುಷಿತಗೊಂಡಿದ್ದು, ಸುಮಾರು ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದು ಕಳೆದ ಏ.2ರಿಂದ 10ರವರೆಗೆ ಕೆರೆ ಸ್ವಚ್ಛ ಮಾಡಿ ಕುಡಿಯುವ ನೀರಿಗೆ ಮತ್ತು ಬಡ ಜನರಿಗೆ ಆಶ್ರಯ ನಿವೇಶನ ನೀಡಲು ಜಾಗ ಮಾಡಿ ಎಂದು ಪುರಸಭೆ ಮುಖ್ಯ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ, ಇಲ್ಲಿಯವರೆಗೂ ಕೆರೆಯು ಸ್ವಚ್ಛತೆ ಹಾಗೂ ಗಿಡಗಂಟೆಗಳ ತೆಗೆಯುವ ಕಾರ್ಯ ನಡೆದಿಲ್ಲ ನಾವು ಕೊಟ್ಟ ಮನವಿಗೆ ಸ್ಪಂದನೆ ಇಲ್ಲ ಹಾಗಾಗಿ ನಾವು ಹೇಳಿದಂತೆ ಇಂದು ಗಾಂಧಿನಗರ, ಕದರಮಂಡಲಗಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ರಟ್ಟಿಹಳ್ಳಿ ಹೋಗುವ ಮಾರ್ಗವನ್ನು ಬಂದ್ ಮಾಡಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಮಾಜಿ ಸೈನಿಕ ಭ್ರಷ್ಟಾಚಾರ ವಿರೋಧಿನ್ಯಾಸ ಸಮಿತಿಯ ರಾಜ್ಯಾಧ್ಯಕ್ಷ ಮಲ್ಲೇಶಪ್ಪ ಚಿಕ್ಕಣ್ಣನವರ್ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗಾಂಧಿ ನಗರದ ದೊಡ್ಡ ನೀರಿನ ಟ್ಯಾಂಕ್ ಹತ್ತಿರ ಇರುವ ಬಸನ ಕಟ್ಟೆ ಕೆರೆ ಹೂಳು ತುಂಬಿ ಗಿಡ ಗಂಟೆಗಳ ಕೊಳಚೆ ನೀರು ತುಂಬಿಕೊಂಡಿದ್ದು ಗಬ್ಬುನಾರುತ್ತಿದೆ ಇದರಿಂದ ಪಟ್ಟಣದ ಇಸ್ಲಾಂಪುರ, ಗಾಂಧಿ ನಗರ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ ಸದರಿ ಕೆರೆಯು ಸುತ್ತಮುತ್ತ ಕೆರೆ ಕೋಡಿ ದುರ್ಗಾದೇವಿ ದೇವಸ್ಥಾನ, ಗಂಗಾಪರಮೇಶ್ವರಿ, ಮಾತಂಗೇಶ್ವರಿ ದೇವಸ್ಥಾನಗಳು ಇದ್ದು, ದೇವಸ್ಥಾನಕ್ಕೆ ಬರುವ ಭಕ್ತಾದಿಗಳು ಈ ಕೆರೆಯ ಪಕ್ಕದಲ್ಲಿ ಹೋಗಬೇಕಾಗುತ್ತದೆ ಕೆರೆಯ ದುರ್ನಾಥದಿಂದ ಗಬ್ಬುನಾರುತ್ತಿದ್ದು ಸದರಿ ಭಕ್ತರು ಮೂಗು ಮುಚಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಇಲ್ಲಿಯವರೆಗೂ ಕೆರೆಯು ಬಗ್ಗೆ ಯಾರೂ ಕಾಳಜಿ ತಗೊಂಡಿಲ್ಲ ಮೊದಲು ಗುಡ್ಡದದಿಂದ ಈ ಕೆರೆಗೆ ನೀರು ಬರುತ್ತಿದ್ದು, ಆಗ ಊರಿನ ದನಕರಗಳು ಈ ಕೆರೆಯಲ್ಲಿ ನೀರು ಕುಡಿಯುತ್ತಿದ್ದವು, ಆದರೆ ಇಂದು ರಾಜಕಾಲುವೆ ನೀರು ಈ ಕೆರೆಗೆ ಸೇರಿಕೊಂಡು ಕೆರೆಯಲ್ಲ ಹಸಿರುಗಟ್ಟಿ ಗಿಡಗಂಟೆಗಳು ಬೆಳೆದು ಗಬ್ಬುನಾರುತ್ತಿದೆ ಹಾಗಾಗಿ ಇಂದು ರಸ್ತೆ ಬಂದ್ ಮಾಡಿ ಹೋರಾಟ ಮಾಡುತ್ತೇವೆ ಎಂದು ತಿಳಿಸಿದಾರೆ.

ದೇವಾಂಗ ಜ್ಯೋತಿ ಸ್ವಾಗತಿಸಿದ ದೇವಾಂಗ ಸಮಾಜ

ರಾಣೇಬೆನ್ನೂರ: ಬೆಳಗಲೆಮ್ಮ ದೇವಾಂಗ ತತ್ವಮತ ಎಂಬ ನಾಮಕಿಂತದೊಂದಿಗೆ ದೇವಾಂಗ ಜ್ಯೋತಿ ಹೊತ್ತ ವಾಹನವನ್ನು ತಾಲೂಕ ದೇವಾಂಗ ಸಮಾಜದ ವತಿಯಿಂದ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ನಗರದ ದೊಡ್ಡಪೇಟೆ ರಾಮಲಿಂಗೇಶ್ವರ ದೇವಸ್ಥಾನದ ಮುಂಭಾಗದಲ್ಲಿ ದೇವಾಂಗ ಜ್ಯೋತಿಗೆ ರಾಜ್ಯ ದೇವಾಂಗ ರತ್ನ ಪ್ರಶಸ್ತಿ ಪುರಸ್ಕೃತ ನಾರಾಯಣಪ್ಪ ಮಂಡಕ್ಕಿ ಪೂಜೆ ಸಲ್ಲಿಸಿದರು.

ಜಿಲ್ಲಾ ದೇವಾಂಗ ಸಂಘದ ಅಧ್ಯಕ್ಷ ಬಸವರಾಜ ಮೈಲಾರ ಮಾತನಾಡಿ, ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲೂಕಿನ ಶಕ್ತಪೀಠ ಬನಶಂಕರಿಯಲ್ಲಿ ಮೇ 9 ಮತ್ತು 10ರಂದು ನಡೆಯಲಿರುವ ರಾಜ್ಯಮಟ್ಟದ ಅಖಿಲ ಭಾರತ ದೇವಾಂಗ ಜಾಗೃತಿ ಸಮಾವೇಶ ಹಾಗೂ ದಯಾನಂದಪುರಿ ಸ್ವಾಮೀಜಿ ಅವರ ಪಟ್ಟಾಭಿಷೇಕದ 36ನೇ ವಾರ್ಷಿಕೋತ್ಸವ ಸಮಾರಂಭದ ಪ್ರಚಾರ ಹಿನ್ನೆಲೆಯಲ್ಲಿ ಈ ಜ್ಯೋತಿ ರಾಣೇಬೆನ್ನೂರು ತಾಲೂಕಿಗೆ ಆಗಮಿಸಿದೆ. ಆದ್ದರಿಂದ ತಾಲೂಕಿನ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.

ರಾಮಲಿಂಗೇಶ್ವರ ದೇವಸ್ಥಾನದಿಂದ ಆರಂಭವಾದ ಜ್ಯೋತಿ ಯಾತ್ರೆ ಸುಭಾಶ ಚೌಕ, ಬಸವೇಶ್ವರ ದೇವಸ್ಥಾನ, ತಳವಾರ ಗಲ್ಲಿ, ಎಡಿಬಿ ವೃತ್ತ, ಎಮ್.ಜಿ.ರಸ್ತೆ, ದುರ್ಗಾ ಸರ್ಕಲ್‌ನಿಂದ ಕುರುಬಗೇರಿ ಪ್ರಾಚೀನ ಬನಶಂಕರಿ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸಿ, ಕುದರಿ ಗಲ್ಲಿಯ ಬನಶಂಕರಿ ದೇವಸ್ಥಾನ ಮುಕ್ತಾಯಗೊಂಡಿತು.

ಗೌರವಾಧ್ಯಕ್ಷ ಸಂಕಪ್ಪ ಮಾರನಾಳ, ತಾಲೂಕ ದೇವಾಂಗ ಸಂಘದ ಅಧ್ಯಕ್ಷ ಬಸವರಾಜ ಲಕ್ಷ್ಮೇಶ್ವರ, ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ, ಕಾರ್ಯದರ್ಶಿ ಗಿರೀಶ ಗುಳೇದಗುಡ್ಡ, ಅಶೋಕ ದುರ್ಗದಶೀಮಿ, ಮಂಜುನಾಥ ಕೆರೂಡಿ, ವಿಜಯಲಕ್ಷ್ಮಿ ಬೆಟಗೇರಿ, ಜಯಾ ಕುಂಚೂರು, ಶಾರದಾ ಅನ್ವೇರಿ, ಸುಮಾ ಹಳ್ಳಿ, ಗಣೇಶಪ್ಪ ಶಿರಗೂರ, ಲಕ್ಷ್ಮೀಕಾಂತ, ಹುಲಗೂರು, ಸುರೇಶ ಮಾರನಾಳ, ಗಣೇಶ ಸಾಲಗೇರಿ, ಉಮಾ ಅಗಡಿ, ಚೇತನಾ ಗುಡ್ಡದ, ಅಶ್ವಿನಿ ಹೆದ್ದೆರಿ, ಮರಿಸ್ವಾಮಿ ಪೂಜಾರ,ಯಲ್ಲಪ್ಪ ಪೂಜಾರ, ಗಣೇಶ ಹಳ್ಳಿ, ಸಂದೀಪ ಮಂಡಕ್ಕಿ, ರಾಘವೇಂದ್ರ ಹೆದ್ದೇರಿ, ಮೋಹನ ಕುಂಚೂರ, ಗುಡದಯ್ಯ ನೀಲಗುಂದ, ಮಂಜುನಾಥ ಬೆಟಗೇರಿ ಮತ್ತಿತರರಿದ್ದರು.



ಜಿಮ್‌ಗಳಲ್ಲಿ ಮಹಿಳೆಯರಿಗೆ ಸೂಕ್ತ ಭದ್ರತೆ ಒದಗಿಸಲು ಆಗ್ರಹ

ಹಾವೇರಿ: ನಗರದಲ್ಲಿರುವ ಜಿಮ್‌ಗಳಲ್ಲಿ ಮಹಿಳೆಯರಿಗೆ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸುವ ಹಾಗೂ ಮಹಿಳಾ ಸುರಕ್ಷತೆ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಜಾರಿಗೊಳಿಸುವಂತೆ ಒತ್ತಾಯಿಸಿ ಬಿಜೆಪಿ ನಗರ ಮಂಡಲ ಮಹಿಳಾ ಮೋರ್ಚಾ ವತಿಯಿಂದ ಗುರುವಾರ ನಗರದ ಶಹರ ಪೊಲೀಸ್ ಠಾಣೆಯಲ್ಲಿ ಸಿಪಿಐ ಮೋತಿಲಾಲ್ ಪವಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಮಾತನಾಡಿ, ರಾಜ್ಯದಲ್ಲಿ ಇತ್ತೀಚೆಗೆ ಮಹಿಳೆಯರ ಮೇಲೆ ವ್ಯಾಯಾಮ ಕೇಂದ್ರಗಳಲ್ಲಿ ಶೋಷಣೆ, ಕಿರುಕುಳ ಹಾಗೂ ವ್ಯಾಯಾಮ ಕಲಿಸುವ ನೆಪದಲ್ಲಿ ಮಹಿಳೆಯರನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಆದ್ದರಿಂದ ಬಿಜೆಪಿ ಮಹಿಳಾ ಮೋರ್ಚಾ ಪದಾಕಾರಿಗಳು ಜಿಮ್ ತರಬೇತಿ ಕೇಂದ್ರಗಳಲ್ಲಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸುತ್ತಿರುವುದು ಸ್ತುತ್ಯಾರ್ಹವಾಗಿದೆ ಎಂದರು.



ನಗರ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ರೋಹಿಣಿ ಪಾಟೀಲ ಮಾತನಾಡಿ, ವ್ಯಾಯಾಮ ಕೇಂದ್ರಗಳಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮರಾಗಳನ್ನು ಅಳವಡಿಸಬೇಕು. ಜಿಮ್‌ಗೆ ಆಗಮಿಸುವ ಮಹಿಳೆಯರಿಗೆ ಮಹಿಳಾ ತರಬೇತುದಾರರನ್ನೇ ನೇಮಿಸಬೇಕು. ಮಹಿಳೆಯರಿಗೆ ಪ್ರತ್ಯೇಕ ಅವಧಿಯನ್ನು ಸಿಮೀತಗೊಳಿಸಬೇಕು. ಪ್ರತ್ಯೇಕ ಶೌಚಾಲಯ ಹಾಗೂ ವಿಶ್ರಾಂತಿ ಕೊಠಡಿಗಳನ್ನು ಒದಗಿಸಬೇಕು. ಯಾವುದಾದರೂ ಜೀಮ್ ಕೇಂದ್ರಗಳಲ್ಲಿ ಅನುಚಿತ ವರ್ತನೆ ಮಾಡುವುದು ಕಂಡುಬಂದರೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಗವಿಸಿದ್ದಪ್ಪ ದ್ಯಾಮಣ್ಣವರ, ಹಾವೇರಿ ನಗರ ಮಂಡಲ ಅಧ್ಯಕ್ಷ ಕಿರಣ್ ಕೊಳ್ಳಿ, ಜಿಲ್ಲಾ ಮಾಧ್ಯಮ ಸಂಚಾಲಕ ವಿಜಯಕುಮಾರ ಚಿನ್ನಿಕಟ್ಟಿ, ಜ್ಯೋತಿ ಸಾತೇನಹಳ್ಳಿ, ಅನುಪಮಾ ವಾಲಿಶೆಟ್ಟರ್ ಸೇರಿದಂತೆ ಅನೇಕ ಪದಾಕಾರಿಗಳು, ಜಿಲ್ಲಾ ಮೋರ್ಚಾ ಪದಾಕಾರಿಗಳು, ನಗರ ಮಂಡಲ ಪದಾಕಾರಿಗಳು ಉಪಸ್ಥಿತರಿದ್ದರು.

ಕಣ್ಣಿನ ಜಾಗೃತಿ ಅವಶ್ಯ: ಚಿಕ್ಕಣ್ಣನವರ್

ಬ್ಯಾಡಗಿ: ಮಾನವನಿಗೆ ಕಣ್ಣು ದೇಹದ ಅತಿ ಸೂಕ್ಷ್ಮವಾದ ಅಂಗ ಇದನ್ನು ಅತಿ ಜಾಗೃತೆಯಿಂದ ಕಾಯ್ದುಕೊಳ್ಳಬೇಕು ಎಂದು ಮಾಜಿ ಸೈನಿಕ ಭ್ರಷ್ಟಾಚಾರ ವಿರೋಧಿ ನ್ಯಾಸ ಸಮಿತಿ ರಾಜ್ಯಾಧ್ಯಕ್ಷ ಮಲ್ಲೇಶಪ್ಪ ಚಿಕ್ಕಣ್ಣನವರ್ ಹೇಳಿದರು.

ಪಟ್ಟಣದ ಕದರಮಂಡಲಗಿ ರಸ್ತೆಯಲ್ಲಿರುವ ಸ್ನೇಹ ಸದನದಲ್ಲಿ ಜಯದೇವ ಜಗದ್ಗುರು ಮುರುಘರಾಜೇಂದ್ರ ಕಲೆ ಕ್ರೀಡೆ ಸಾಂಸ್ಕೃತಿಕ ಸೇವಾ ಸಂಸ್ಥೆ ಬ್ಯಾಡಗಿ ಹಾಗೂ ರಾಷ್ಟ್ರೀಯ ಯೋಜನಾ ಶಿಬಿರದ ವತಿಯಿಂದ ಉಚಿತ ನೇತ್ರ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಇಂದಿನ ಒತ್ತಡದ ಜೀವನ ಆಹಾರ ಕ್ರಮದಿಂದ ನಿತ್ಯ ಆರೋಗ್ಯದಲ್ಲಿ ಒಂದಲ್ಲ ಒಂದು ವೈಪರಿತ್ಯ ಕಾಣುತ್ತಿದ್ದೇವೆ. ಪ್ರತಿಯೊಬ್ಬರು ಎರಡು ಮೂರು ತಿಂಗಳಿಗೆ ಒಂದು ಬಾರಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ದೇಹದ ಆರೋಗ್ಯ ರಕ್ಷಣೆ ಜೊತೆಗೆ ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದರು.



ಶಿಬಿರದಲ್ಲಿ ಒಟ್ಟು ನೂರಕ್ಕೂ ಹೆಚ್ಚು ಜನ ಕಣ್ಣಿನ ತಪಾಸಣೆಯನ್ನು ಮಾಡಿಸಿಕೊಂಡು ಅದರಲ್ಲಿ ಒಟ್ಟು 60 ಶಿಬಿರಾರ್ಥಿಗಳು ಉಚಿತ ಶಸ್ತ್ರ ಚಿಕಿತ್ಸೆಗೆ ಕರೆದುಕೊಂಡು ಹೋಗಲಾಯಿತು. ಶಿವಮೊಗ್ಗ ಕಣ್ಣಿನ ಆಸ್ಪತ್ರೆ ವೈದ್ಯ ಕೃಷ್ಣ ಎಂ. ಡಾಕ್ಟರ್ ಪೂಜಾ ಹಾಗೂ ಚೇತನ್ ಉಪಸ್ಥಿತರಿದ್ದರು.

ಸರ್ಕಾರಿ ಕಾಲೇಜಿನ ಉತ್ತಮ ಸಾಧನೆ

ಹಾವೇರಿ: ಬಸವೇಶ್ವರ ನಗರದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1ರಲ್ಲಿ ಗಮನಾರ್ಹವಾದ ಫಲಿತಾಂಶವನ್ನು ಸಾಧಿಸಿದ್ದು 23 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 168 ವಿದ್ಯಾರ್ಥಿಗಳು ಪ್ರಥಮ ದರ್ಜೆ, 112 ವಿದ್ಯಾರ್ಥಿಗಳು ದ್ವಿತೀಯ ದರ್ಜೆ, 41 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿ ಕಾಲೇಜು ಒಟ್ಟು ಶೇ.90ರಷ್ಟು ಸಾಧನೆ ತೋರಿದ್ದಾರೆ.



ಕಾಲೇಜಿಗೆ ಕಲಾವಿಭಾಗದಲ್ಲಿ ಪ್ರಥಮ ಸ್ಥಾನ ಸಂಗೀತಾ ಭರಮನಾಯಕ (568/600), ವಾಣಿಜ್ಯ ವಿಭಾಗದಲ್ಲಿ ಶ್ವೇತಾ ಶುಂಠಿ (553/600) ಹಾಗೂ ವಿಜ್ಞಾನ ವಿಭಾಗದಲ್ಲಿ ಅಕ್ಮಲ್ ಅಹ್ಮದ್ ರಝಾ(573/600) ಸ್ಥಾನ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಕಲಾ ವಿಭಾಗದಲ್ಲಿ ಶಾಂತವ್ವ ಹರಿಜನ (558/600), ಛಾಯಾ ಬಾಲಣ್ಣನವರ (540/600) ಪಡೆದಿದ್ದಾಳೆ. ಅದೇ ರೀತಿಯಾಗಿ ವಾಣಿಜ್ಯ ವಿಭಾಗದಲ್ಲಿ ಶೇಕಡಾವಾರು 93.75 ರಷ್ಟು ಸಾಧಿಸಿದ್ದು, ಅದರಲ್ಲಿ ಶ್ವೇತಾ ಶುಂಠಿ 553, ಸುಮಿತ್ರಾ ಸಂಗೂರ 529, ಸುಮಿತ್ರಾ ಬೇಲೂರು 509 ತೃತೀಯ ಸ್ಥಾನ ಪಡೆದಿದ್ದಾಳೆ. ವಿಜ್ಞಾನ ವಿಭಾಗದಲ್ಲಿ ಸಿಮ್ರಾನ್ ಗಣಜೂರು(572/600), ದೊಡ್ಡಬಸಪ್ಪ ಹಾವೇರಿ 559/600) ಅಂಕ ಪಡೆದಿದ್ದಾರೆ.

ಜೀವಶಾಸ್ತ್ರ ಹಾಗೂ ಲೆಕ್ಕಶಾಸ್ತ್ರ ವಿಭಾಗದಲ್ಲಿ ಶೇ.100ರಷ್ಟು ಫಲಿತಾಂಶ ದಾಖಲಾಗಿದ್ದು, ಕಾಲೇಜಿನ ಫಲಿತಾಂಶದ ಬಗ್ಗೆ ಪ್ರಾ.ಡಾ.ಅರುಣಕುಮಾರ, ಕಾಲೇಜು ಆಡಳಿತ ಮಂಡಳಿ ಹಾಗೂ ಕಾಲೇಜಿನ ಸಿಬ್ಬಂದಿ ಸಂತಸ ವ್ಯಕ್ತಪಡಿಸಿದ್ದಾರೆ.

ವಿಶ್ವ ಣಮೋಕಾರ ಮಂತ್ರ, ದಿವಸ ಆಚರಣೆ

ಹಾವೇರಿ: ವಿಶ್ವ ಣಮೋಕಾರ ಮಂತ್ರ ದಿವಸ ಆಚರಣೆ ಅಂಗವಾಗಿ ಹಾವೇರಿಯ ಶ್ರೀ ನೇಮಿನಾಥ ದಿಗಂಬರ ಜೈನ ಕಮೀಟಿ, ರತ್ನತ್ರಯ ಮಹಿಳಾ ಸಮಾಜ, ಭಾರತೀಯ ಜೈನ ಮಿಲನ್ ಹಾಗೂ ಸಮ್ಯಕ್ತ್ವ ಜ್ಞಾನ ಪ್ರಭಾವನ ಯುವಕ ಸಂಘದ ಸಹಯೋಗದಲ್ಲಿ ವಿಶ್ವಶಾಂತಿಗಾಗಿ ನಗರದ ದಿಗಂಬರ ಜೈನ ಮಂದಿರದಲ್ಲಿ ಗುರುವಾರ ಬೆಳಗ್ಗೆ 8ರಿಂದ 9ಗಂಟೆವರೆಗೆ ಸತತ ಒಂದು ಗಂಟೆ ಕಾಲ ನಿರಂತರ ಣಮೋಕಾರ ಮಂತ್ರ ಪಠಣೆ ಮಾಡಲಾಯಿತು.

ಈ ದಿನವು ಕೇವಲ ಒಂದು ಧಾರ್ಮಿಕ ಆಚರಣೆಯಾಗಿರದೆ ವಿಶ್ವಕ್ಕೆ ಶಾಂತಿ, ಅಹಿಂಸೆ ಮತ್ತು ಭ್ರಾತೃತ್ವದ ಸಂದೇಶವನ್ನು ಸಾರುವ ಮಹೋನ್ನತ ದಿನವಾಗಿದೆ. ಣಮೋಕಾರ ಮಹಾಮಂತ್ರವು ಜೈನ ಧರ್ಮದ ಅತ್ಯಂತ ಶಕ್ತಿಶಾಲಿ ಮತ್ತು ಪವಿತ್ರವಾದ ಮಂತ್ರವಾಗಿದೆ. ಇದು ಯಾವುದೇ ಒಬ್ಬ ವ್ಯಕ್ತಿಗಾಗಲಿ ಅಥವಾ ದೇವರ ನಾಮಸ್ಮರಣೆಗೆ ಸೀಮಿತವಾಗಿಲ್ಲ, ಇದು ಪಂಚ ಪರಮೇಷ್ಠಿಗಳಾದ ಅರಿಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧುಗಳ ಗುಣಗಳಿಗೆ ಸಲ್ಲಿಸುವ ಗೌರವವಾಗಿದೆ. ಣಮೋಕಾರ ಮಂತ್ರ ಪಠಣೆಯಲ್ಲಿ ಸಮಸ್ತ ಶ್ರಾವಕ ಮತ್ತು ಶ್ರಾವಕಿಯರು, ಮಕ್ಕಳು ಶ್ವೇತ ವರ್ಣದ ಬಟ್ಟೆ ಧರಿಸಿ ಭಾಗವಹಿಸಿದ್ದರು.



ಕುಡಿಯುವ ನೀರು ಪೂರೈಕೆ ಯೋಜನೆ ಪೂರ್ಣಗೊಳಿಸಿ: ಪಾಟೀಲ

ಹಾವೇರಿ: ಜಲಜೀವನ್ ಮಿಷನ್, ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ ಸೇರಿದಂತೆ ಜಿಲ್ಲೆಯ ಎಲ್ಲ ಕುಡಿಯವ ನೀರು ಪೂರೈಕೆ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸುತ್ತೀರಿ ಲಿಖಿತವಾಗಿ ಕೊಡಿ, ಇಲ್ಲವೇ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಿ, ಆಯ್ಕೆ ನಿಮ್ಮದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಸ್ಥಳೀಯ ಜಿಪಂ ಸಭಾಂಗಣದಲ್ಲಿ ಗುರುವಾರ ನಡೆದ ಕುಡಿಯುವ ನೀರು ಪೂರೈಕೆ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅವರು ಮಾತನಾಡಿ, ಬಹುತೇಕ ಎಲ್ಲ ಯೋಜನೆಗಳ ಅನುಷ್ಠಾನಕ್ಕೆ ನಿಗದಿಪಡಿಸಿದ್ದ ಅವಧಿ ಮುಗಿದು ಎರಡು ವರ್ಷಗಳ ಮೇಲಾಗಿದೆ. ಗುತ್ತಿಗೆದಾರರ ಬಿಲ್ ಕೂಡ ಶೇ.90ರಷ್ಟು ಪಾವತಿಯಾಗಿದೆ. ಯೋಜನೆಗಳ ಅನುಷ್ಠಾನಕ್ಕೆ ಇದ್ದ ತಾಂತ್ರಿಕ ಅಡಚಣೆಗಳನ್ನು ನಾನೇ ಖುದ್ದಾಗಿ ಪರಿಹರಿಸಿದ್ದೇನೆ. ಆದರೂ ಯಾಕೆ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಿಮ್ಮ ಕರ್ತವ್ಯಲೋಪಕ್ಕೆ ಸಚಿವರು, ಶಾಸಕರು ಜಿಲ್ಲೆಯ ಜನರ ಕೋಪಕ್ಕೆ ತುತ್ತಾಗಬೇಕಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವನಾಗಿ ಅಧಿಕಾರ ವಹಿಸಿಕೊಂಡ ನಂತರ ಕೆಡಿಪಿ ಸಭೆಯ ಹೊರತಾಗಿಯೂ ನೀರಿನ ಯೋಜನೆಗಳ ಅನುಷ್ಠಾನಕ್ಕೆ ಹಲವು ಪ್ರತ್ಯೇಕ ಸಭೆಗಳನ್ನು ನಡೆಸಿದ್ದೇನೆ. ಆದರೂ ಸಹ ನೀವು ಗಂಭೀರವಾಗಿ ಪರಿಗಣಿಸಿಲ್ಲ, ಸಂಬಂಧಪಟ್ಟ ಇಲಾಖೆಯ ಹಿರಿಯ ಅಕಾರಿಗಳೂ ಈ ಬಗ್ಗೆ ಗಮನಹರಿಸ ಬೇಕಾಗಿದ್ದು, ಸಭೆ ನಡೆಸಲು ಅವರಿಗೆ ಸೂಚನೆ ನೀಡಿ ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರಗೆ ಸೂಚಿಸಿದರು. ಲೋಪ ಎಸಗಿರುವ ಎಲ್ಲಾ ಗುತ್ತಿಗೆದಾರರಿಗೆ ನೋಟಿಸ್ ಕೊಟ್ಟಿದ್ದೀರಾ? ಹೇಳಿ ಎಂದು ಪ್ರಶ್ನಿಸಿದರು.

ಅಣೂರು ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ ಬಹುತೇಕ ಮುಕ್ತಾಯ ಹಂತಕ್ಕೆ ಬಂದಿದೆ ಜೋನ್ 1 ಮತ್ತು ಜೋನ್ 2ಕ್ಕೆ ಈ ತಿಂಗಳ 15ರೊಳಗೆ ನೀರು ಪೂರೈಕೆ ಮಾಡಲಿದ್ದು, ಜೋನ್ 3ಗೆ ನೀರು ಪೂರೈಕೆ ಮಾಡಲು ಸ್ವಲ್ಪ ಸಮಯ ಬೇಕಾಗಲಿದೆ ಎಂದು ಅಧಿಕಾರಿಗಳು ತಿಳಿಸಿದರು.



ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಮಾತನಾಡಿ, ಅಂತರ್ಜಲಮಟ್ಟ ಕುಸಿದಿದ್ದು, ಬೇಸಿಗೆ ದಿನಗಳಲ್ಲಿ ನೀರಿನ ಸಮಸ್ಯೆ ಉದ್ಭವಿಸಬಹುದಾದ ಗ್ರಾಮಗಳನ್ನು ಗುರುತಿಸಲಾಗಿದೆ. ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಸಮಸ್ಯೆಯಾಗಲಿದ್ದು, ಪರಿಹಾರ ಕ್ರಮಗಳಿಗೆ ಕ್ರಿಯಾ ಯೋಜನೆ ರೂಪಿಸಲಾಗುತ್ತಿದೆ ಎಂದರು.

ಜಿಪಂ ಸಿಇಒ ರುಚಿ ಬಿಂದಲ್ ಮಾತನಾಡಿ, ಬಹುಗ್ರಾಮ ನೀರು ಪೂರೈಕೆ ಯೋಜನೆಗಳು ಬಹುತೇಕ ಅಂತಿಮ ಹಂತಕ್ಕೆ ಬಂದಿದ್ದು, ಟ್ರಯಲ್ ರನ್ ಮಾಡಲಾಗಿದೆ ಎಂದು ತಿಳಿಸಿದರು.ಸಭೆಯಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಬಸವರಾಜ ಶಿವಣ್ಣನವರ, ವಿಧಾನಸಭೆ ಉಪಾಧ್ಯಕ್ಷ, ಶಾಸಕ ರುದ್ರಪ್ಪ ಲಮಾಣಿ, ಶಾಸಕ ಪ್ರಕಾಶ ಕೋಳಿವಾಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಎಸ್ಪಿ ಯಶೋಧಾ ವಂಟಗೋಡಿ ಇದ್ದರು.

ಕಿರುಸುದ್ದಿ

ಏ.11 ರವರೆಗೆ ಮಾರುತಿ ದೇವರ ಜಾತ್ರಾ ಮಹೋತ್ಸವ

ಬೈಲಹೊಂಗಲ: ತಾಲೂಕಿನ ನಾವಲಗಟ್ಟಿ ಗ್ರಾಮದಲ್ಲಿ ಶ್ರೀ ಮಾರುತಿ ದೇವರ ಜಾತ್ರಾ ಮಹೋತ್ಸವವು ಏಪ್ರಿಲ್ 11 ರವರೆಗೆ ವೈಭವದಿಂದ ನಡೆಯಲಿದೆ. ಏ.6 ರಿಂದ ಆರಂಭಗೊಂಡ ಜಾತ್ರೆಯಲ್ಲಿ ಪ್ರತಿದಿನ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಿವೆ.

ಏ.8 ರಂದು ಶ್ರೀ ಮಾರುತಿ ಭಜನಾ ಮಂಡಳಿಯಿಂದ ಭಜನೆ ಕಾರ್ಯಕ್ರಮ ನಡೆಯಲಿದೆ. ಏ.9 ರಂದು ಬೆಳಿಗ್ಗೆ 5 ಗಂಟೆಗೆ ರುದ್ರಾಭಿಷೇಕ ನೆರವೇರಿದ ಬಳಿಕ ಮಹಾಪ್ರಸಾದ ವಿತರಣೆ ನಡೆಯಲಿದ್ದು, ರಾತ್ರಿ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಏಪ್ರಿಲ್ 10 ರಂದು ಗ್ರಾಮದೇವಿಗೆ ಉಡಿ ತುಂಬುವ ಕಾರ್ಯಕ್ರಮದೊಂದಿಗೆ ರಾತ್ರಿ ಮನೋರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಏಪ್ರಿಲ್ 11 ರಂದು ಪುನರ್ವಸತಿ ಕೇಂದ್ರಗಳಿಂದ ಪಲ್ಲಕ್ಕಿ ಆಗಮನ ಹಾಗೂ ಪಲ್ಲಕ್ಕಿ ಉತ್ಸವ ನಡೆಯಲಿದೆ. ಅದೇ ದಿನ ಸಂಜೆ 4 ಗಂಟೆಗೆ ಯರಗೊಪ್ಪ ಲೀಲಾಮಠದ ನಿತ್ಯಾನಂದ ಸ್ವಾಮಿಗಳ ಸಾನಿಧ್ಯದಲ್ಲಿ ಶ್ರೀ ಮಾರುತಿ ದೇವರ ರಥೋತ್ಸವ ನಡೆಯಲಿದೆ. ರಾತ್ರಿ 9 ಗಂಟೆಗೆ ಗೋಕಾಕ ಫಾಲ್ಸ್‌ನ ಪ್ರತಿಷ್ಠಾ ಮೆಲೋಡೀಸ್ ತಂಡದಿಂದ ರಸಮಂಜರಿ ಕಾರ್ಯಕ್ರಮ ಜರುಗಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ದೇವಸ್ಥಾನದ ಸದ್ಭಕ್ತ ಮಂಡಳಿ ಪ್ರಕಟಣೆಯಲ್ಲಿ ಮನವಿ ಮಾಡಿದೆ.

ಇಂದಿನಿಂದ ಜಾತ್ರೆ ಆರಂಭ

ರಾಯಬಾಗ: ತಾಲೂಕಿನ ಮಾರಡಿ (ಮಾಡಲಗಿ) ಗ್ರಾಮದ ಭರಮ ದೇವರ, ಹನುಮಾನ ದೇವರ, ಅರಣ್ಯ ಸಿದ್ದೇಶ್ವರ, ಲಕ್ಷ್ಮೀದೇವಿ, ಯಲ್ಲಮ್ಮದೇವಿ ಜಾತ್ರಾಮಹೋತ್ಸವವು ಏ.10 ರಿಂದ 14 ರವರೆಗೆ ವಿಜೃಂಭಣೆಯಿಂದ ಜರುಗಲಿದೆ. ಏ.10 ರಂದು ಬೆಳಿಗ್ಗೆ 8 ಗಂಟೆಗೆ ಕರಿ ಕಟ್ಟುವುದು, ಸಂಜೆ 4 ಗಂಟೆಗೆ ಯಲ್ಲಮ್ಮದೇವಿ ಉಡಿ ತುಂಬುವುದು, ನಂತರ ಭಕ್ತಾದಿಗಳಿಗೆ ಮಹಾಪ್ರಸಾದ ನಡೆಯುವುದು. ಬೆಳಿಗ್ಗೆ 10 ಗಂಟೆಗೆ ಹಾಫ್ ಪಿಚ್ ಕ್ರಿಕೆಟ ಪಂದ್ಯಾವಳಿಗಳು, ಸಂಜೆ 4 ಗಂಟೆಗೆ ಚೌಡಕಿ ಪದಗಳು ಜರುಗಲಿವೆ.ಏ.11 ರಂದು ಮಧ್ಯಾಹ್ನ 3 ಗಂಟೆಗೆ ಟಗರಿನ ಪಂದ್ಯಾವಳಿ ಜರುಗಲಿವೆ. ಸಂಜೆ 6 ಗಂಟೆಗೆ ಕೊಂಡ ಪೂಜೆ ನಡೆಯಲಿದೆ.

ಏ.12 ಮುಂ.9.30ಕ್ಕೆ ತುರಸಾ ತುರಸಿನ ಡೊಳ್ಳಿನ ಪದಗಳು ಜರುಗಲಿವೆ, ಮಧ್ಯಾಹ್ನ 3 ಗಂಟೆಗೆ ಮಹಿಳಾ ಮುಕ್ತ ಕಬಡ್ಡಿ ಪಂದ್ಯಾವಳಿಗಳು ನಡೆಯಲಿವೆ. ಸಾಯಂಕಾಲ 4 ಗಂಟೆಗೆ ಹನುಮಾನ ದೇವರ ಓಕಳಿ ನಡೆಯುವುದು.ಏ.13 ರಂದು ಮುಂ.10 ಗಂಟೆಗೆ ಹನುಮಾನ ದೇವರ ಗುಡಿಯಿಂದ ಭರಮದೇವರ ಗುಡಿಯವರೆಗೆ ಸುಮಂಗಲೆಯರಿಂದ ಅಂಬಲಿ ಕೊಡಗಳ ಮತ್ತು ಸಕಲ ವಾದ್ಯದೊಂದಿಗೆ ಪಲ್ಲಕ್ಕಿ ಮೆರವಣಿಗೆ ನಡೆಯುವುದು. ರಾತ್ರಿ 10 ಗಂಟೆಗೆ ಭರಮದೇವರ ದೇವಸ್ಥಾನ ರಂಗಮಂದಿರದಲ್ಲಿ ಲಕ್ಷ್ಮೇಶ್ವರ ಜೈ ಮಾತೃಭೂಮಿ ಕಲಾ ಸಂಘದಿಂದ ಅಲ್ಲೇನ ನೋಡ್ತಿ ಇಲ್ಲಿ ನೋಡ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ. ಏ.14 ರಂದು ಬೆಳಿಗ್ಗೆ 9 ಗಂಟೆಗೆ ವಿವಿಧ ಶರ್ಯತ್ತುಗಳು ಜರುಗಲಿವೆ ಎಂದು ಭರಮದೇವರ ಜಾತ್ರಾ ಕಮಿಟಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫಸಲ್ ಬಿಮಾ ಯೋಜನೆ : 1141 ಅರ್ಜಿ ತಿರಸ್ಕೃತ

ಚಿಕ್ಕೋಡಿ: 2024-25ನೇ ಸಾಲಿನ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ 2024-25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಚಿಕ್ಕೋಡಿ ತಾಲೂಕಿನ 1061 ಹಾಗೂ ನಿಪ್ಪಾಣಿ ತಾಲೂಕಿನ 67 ಪ್ರಸ್ತಾವನೆಗಳು, ಹಿಂಗಾರು ಹಂಗಾಮಿನಲ್ಲಿ 13 ಪ್ರಸ್ತಾವನೆಗಳು ಚಿಕ್ಕೋಡಿ ತಾಲ್ಲೂಕಿನಿಂದ ತಿರಸ್ಕೃತಗೊಂಡಿವೆ. ಬೆಳೆವಿಮೆ ನೋಂದಣಿ ಹಾಗೂ ಬೆಳೆ ಸಮೀಕ್ಷೆ ದತ್ತಾಂಶದೊಂದಿಗೆ ಹೋಲಿಕೆಯಾಗದ್ದರಿಂದ ತಿರಸ್ಕೃತಗೊಂಡಿವೆ ಎಂದು ಚಿಕ್ಕೋಡಿ ತಾಲೂಕು ಸಹಾಯಕ ಕೃಷಿ ನಿರ್ದೇಶಕ ಡಿ.ಬಿ. ಚವ್ಹಾಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಆಕ್ಷೇಪ ಸಲ್ಲಿಕೆಗೆ 15 ದಿನಗಳ ಕಾಲಾವಕಾಶ

ತಿರಸ್ಕೃತಗೊಂಡ ಪಟ್ಟಿಯನ್ನು ಚಿಕ್ಕೋಡಿಯ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ರೈತ ಸಂಪರ್ಕ ಕೇಂದ್ರಗಳಾದ ಚಿಕ್ಕೋಡಿ, ನಾಗರಮುನ್ನೋಳಿ, ಸದಲಗಾ ಹಾಗೂ ನಿಪ್ಪಾಣಿಯ ಕಚೇರಿಯ ಸೂಚನಾ ಫಲಕಕ್ಕೆ ಲಗತ್ತಿಸಲಾಗಿದೆ. ಈ ಕುರಿತು ಆಕ್ಷೇಪಗಳಿದ್ದಲ್ಲಿ ರೈತರು ನಿಖರವಾದ ದಾಖಲಾತಿಗಳಾದ ಬೆಳೆ ನಮೂದಾದ ಪಹಣಿ (ಉತಾರ), ಬೆಂಬಲ ಬೆಲೆ ಪ್ರಯೋಜನೆ ಪಡೆದ ರಶೀದಿ, ಎಪಿಎಂಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ ದಾಖಲೆಗಳನ್ನು 15 ದಿನಗಳೊಳಗಾಗಿ ಸಂಬಂಧಿಸಿದ ಕಚೇರಿಯಲ್ಲಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.



ಘಟಪ್ರಭಾ : ಕೊಣ್ಣೂರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಬಹುದಿನಗಳ ಪ್ರಯಾಣಿಕರ ಬೇಡಿಕೆಗೆ ಸ್ಪಂದಿಸಿ, ಗೋಕಾಕ ರೋಡ ರೈಲು ನಿಲ್ದಾಣದಲ್ಲಿ ಹುಬ್ಬಳ್ಳಿ ದಾದರ್ ಸೆಂಟ್ರಲ್ ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಅನುಮತಿಸಿದ ಹುಬ್ಬಳ್ಳಿ ನೈರುತ್ಯ ರೈಲ್ವೆಯ ವಿಭಾಗೀಯ ವ್ಯವಸ್ಥಾಪಕರಾದ ಬೆಲಾ ಮೀನಾ ಅವರನ್ನು ನಾಗರಿಕರ ಪರವಾಗಿ ಬುಧವಾರ ಸನ್ಮಾನ ಮಾಡಲಾಯಿತು. ಕೊಣ್ಣೂರ ಪಟ್ಟಣದ ಹಿರಿಯರಾದ ಪಾಂಡುರಂಗ ಕದಮ, ಗುರುಸಿದ್ದ ಜಂತಿ, ರಮೇಶ ಹಿರೇಮಠ, ಮಹಾದೇವ ಕೊಡಗಣ್ಣವರ ಅವರು ಕೊಣ್ಣೂರ ಪಟ್ಟಣದ ಸಾರ್ವಜನಿಕರ ಪರವಾಗಿ ಸತ್ಕರಿಸಲಾಯಿತು

ಏ.14ರಂದು ಅಂಬೇಡ್ಕರ್ ಜಯಂತಿ

ರಾಯಬಾಗ: ತಾಲೂಕು ಪಂಚಾಯತ್, ಪಟ್ಟಣ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಏ.14ರಂದು ಬೆಳಿಗ್ಗೆ 11 ಗಂಟೆಗೆ ರಾಯಬಾಗ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮಾಜ ಭವನದಲ್ಲಿ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೆಯ ಜಯಂತಿ ಉತ್ಸವವನ್ನು ಸಡಗರ ಸಂಭ್ರಮದಿಂದ ಆಚರಣೆ ಮಾಡಲಾಗುವುದು.ಶಾಸಕ ದುರ್ಯೋಧನ ಐಹೊಳೆ ಸಭೆಯ ಅಧ್ಯಕ್ಷತೆ ವಹಿಸುವರು. ಶಾಸಕ ಮಹೇಂದ್ರ ತಮ್ಮಣ್ಣವರ ಕಾರ್ಯಕ್ರಮ ಉದ್ಘಾಟಿಸುವರು. ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಚಿಕ್ಕೋಡಿ ಪಟ್ಟಣದ ಉಪವಿಭಾಗ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ, ನಾಮನಿರ್ದೇಶಿತ ಸದಸ್ಯ ಸಂಜಯ ತಳವಲಕರ ಅತಿಥಿ ಉಪನ್ಯಾಸ ನೀಡುವರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಮಹಾದೇವ ಸನಮುರಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅರುಣ ಮಾಚಕನೂರ, ರಾಯಬಾಗ ಸಿಪಿಐ ಎಂ.ಎಂ. ಡಪ್ಪಿನ, ರಾಯಬಾಗ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಎಸ್.ಆರ್.ಮಾಂಗ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ವ್ಹಿ.ಎಸ್.ಚಂದರಗಿ ಹಾಗೂ ತಾಲೂಕಿನ ಪುರಸಭೆ /ಪಟ್ಟಣ ಪಂಚಾಯತಿಯ ಎಲ್ಲಾ ಚುನಾಯಿತ ಸದಸ್ಯರು, ತಾಲೂಕು ಮಟ್ಟದ ಎಲ್ಲ ಇಲಾಖೆ ಅಧಿಕಾರಿ ಸಿಬ್ಬಂದಿ ವರ್ಗ ಹಾಗೂ ತಾಲೂಕಿನ ವಿವಿಧ ಸಂಘಟನೆಯ ಮುಖಂಡರು, ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ವ್ಹಿ.ಎಸ್.ಚಂದರಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನೇಸರಗಿ: ಸಮೀಪದ ಮದನಬಾವಿ ಗ್ರಾಮದಲ್ಲಿ 11 ವರ್ಷಗಳ ನಂತರ ನಡೆಯುತ್ತಿರುವ ಶ್ರೀ ಗ್ರಾಮದೇವತೆಯ ಜಾತ್ರಾ ಪ್ರಯುಕ್ತ ಬುಧವಾರದಂದು ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ತಂಗಿದ್ದ ಗ್ರಾಮದೇವಿ ಗದ್ದುಗೆಗೆ ಚನ್ನಮ್ಮನ ಕಿತ್ತೂರು ಶಾಸಕರಾದ ಬಾಬಾಸಾಹೇಬ ಪಾಟೀಲ ಅವರು ಭೇಟಿ ನೀಡಿ ತಾಯಿಯ ದರ್ಶನ ಪಡೆದರು. ಈ ಸಂದರ್ಭದಲ್ಲಿ ರವಿ ಸಿದ್ದಮ್ಮನವರ, ಮಲ್ಲೇಶ ಗುಜನಾಳ, ಬಾಬು ಮರಿಗೌಡರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನ್ಯಾಯ ಒದಗಿಸಲು ಬದ್ಧ | ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಕೆ ಹೇಳಿಕೆ

ರಾಜೀ ಸಂಧಾನದ ಮಾತೇ ಇಲ್ಲ

ಗೋಕಾಕ: ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದಾಗಿನಿಂದ ಜಿಲ್ಲೆಯ ಎಲ್ಲ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಹಕಾರದಿಂದ ಯಾವುದೇ ರಾಜಿ ಸಂಧಾನ ಇಲ್ಲದೇ ಪ್ರಕರಣಗಳು ದಾಖಲಿಸಿಕೊಳ್ಳುತ್ತಿದ್ದು, ಹೀಗಾಗಿ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು ಅವುಗಳನ್ನು ತನಿಖೆ ನಡೆಸುತ್ತಿದ್ದೇವೆ. ಸಾರ್ವಜನಿಕರು ಮೀಟರ್ ಬಡ್ಡಿ ದಂಧೆಕೋರರಿಂದ ಕಷ್ಟ ಅನುಭವಿಸುತ್ತಿದ್ದರೆ ನೇರವಾಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುವಂತೆ ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಕೆ ಹೇಳಿದರು.

ಅವರು, ಗುರುವಾರದಂದು ನಗರದ ಡಿವೈಎಸ್‌ಪಿ ಕಚೇರಿ ಆವರಣದಲ್ಲಿ ಕಳೆದು ಹೋದ ಮೊಬೈಲ್‌ಗಳನ್ನು ಪತ್ತೆ ಹಚ್ಚಿ ವಾರಸುದಾರರಿಗೆ ಮರಳಿ ಹಸ್ತಾಂತರಿಸುವ ಕಾರ್ಯಕ್ರಮದ ನಂತರ ಪತ್ರಕರ್ತರೊಂದಿಗೆ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಗೋಕಾಕ ವಿಭಾಗ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳ ಬಗ್ಗೆ ಪೊಲೀಸ್ ಸಿಬ್ಬಂಧಿಯೊಂದಿಗೆ ನಿಗಾ ವಹಿಸಲಾಗಿದ್ದು, ಮೀಟರ್ ಬಡ್ಡಿ, ಮನೆ ದರೋಡೆ, ಜೂಜಾಟ, ಅಕ್ರಮ ಸರಾಯಿ ಮಾರಾಟ ಸೇರಿ ಅಕ್ರಮ ಚಟುವಟಿಕೆಗಳಲ್ಲಿ ಭಾಗವಹಿಸುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುತ್ತಿದೆ ಎಂದರು. ಘಟಪ್ರಭಾ ವ್ಯಾಪ್ತಿಯ 125ಗ್ರಾಂ, ಟ್ರಾಕ್ಟರ್ ಟ್ರಾಲಿ 2, ಪಂಪ್ ಸೇಟ್ ಮತ್ತು 13ಕೇಬಲ್ ಕಳ್ಳತನ ಪ್ರಕರಣ ಬೇಧಿಸಲಾಗಿದೆ. ಬಂಗಾರ ಆಭರಣ ಕಳ್ಳತನ ಪ್ರಕರಣದಲ್ಲಿ ನಲ್ಲಾನಟ್ಟಿ ಹನಮಂತ ಪೂಜಾರಿ (37ವರ್ಷ), ಬಳೋಬಾಳ ಲಕ್ಷ್ಮಣ ರಾಮಪ್ಪ ಹಂಚಿನಮನಿ (29) ಆರೋಪಿಗಳು. ಕಳ್ಳತನ ಮಾಡಿದ ಆಭರಣ, ವಾಹನ ಸಮೇತ ವಶಕ್ಕೆ ಪಡೆಯಲಾಗಿದೆ. ಕುಲಗೋಡ ಪೊಲೀಸ್ ಠಾಣೆ ವ್ಯಾಪ್ತಿಯಮನೆಕಳ್ಳತನಪ್ರಕರಣದಲ್ಲಿ 15ಗ್ರಾಂಚಿನ್ನ ಸಮೇತ ಆರೋಪಿಗಳಾದ ಬಸವರಾಜ ಯಲ್ಲಶೆಟ್ಟಿ (24), ಶ್ರೀಶೈಲ ಮೇತ್ರಿ (22), ಹನಮಂತ ಭಜಂತ್ರಿ (22) ಬಂಧಿಸಲಾಗಿದೆ. ಘಟಪ್ರಭಾ ನದಿಗೆ ಅಳವಡಿಸಿದ್ದ ರೈತರ ಪಂಪ್ ಸೇಟ್ ಮತ್ತು ಕೇಬಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಗೋಕಾಕ ಉಪ ವಿಭಾಗದ ಪೋಲಿಸ್ ಠಾಣೆಗಳ 100ಕ್ಕೂ ಹೆಚ್ಚು ಕಳುವಾದ ಮೊಬೈಲ್‌ಗಳನ್ನು ವಾರುಸುದಾರರಿಗೆ ಮರಳಿಸಲಾಯಿತು. ಈ ಸಂದರ್ಭದಲ್ಲಿ ಡಿವೈಎಸ್‌ಪಿ ರವಿ ಡಿನಾಯಿಕ, ಸಿಪಿಐಗಳಾದ ಸುರೇಶ ಬಾಬು, ಶ್ರೀಶೈಲ ಬ್ಯಾಕೂಡ, ಎಚ್ ಡಿ ಮುಲ್ಲಾ, ಜಾವೇದ ಮುಶಾಪುರೆ, ಪಿಎಸ್‌ಐಗಳಾದ ಕಿರಣ ಮೊಹಿತೆ, ಕೆ ವಾಲಿಕಾರ, ವಾಯ್ ಮಾಂಗ ಸೇರಿದಂತೆ ಪೊಲೀಸ್ ಸಿಬ್ಬಂದಿ ಇದ್ದರು.



ಡಿ ಜೆ ಬ್ಯಾನ್

ಮಹಾತ್ಮರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕಾದ ನಾವು ಅವರ ಜಯಂತಿಯಲ್ಲಿ ಡಿಜೆ ಹಾಕಿ ನೃತ್ಯ ಮಾಡುವುದು ತಪ್ಪು. ಡಿಜೆಯಿಂದಾಗಿ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವವರಿಗೆ ಹೆಚ್ಚಿನ ಸಮಸ್ಸೆ ಉಂಟಾಗುತ್ತದೆ. ಸುಪ್ರೀಂ ಕೋರ್ಟ ಸಹ ಡಿಜೆ ನಿಷೇಧ ಮಾಡಿದ್ದು, ಸಾರ್ವಜನಿಕರು ಡಿಜೆ ಮಾಲಿಕರಿಗೆ ಲಕ್ಷಾಂತರ ರೂಗಳನ್ನು ವೆಚ್ಚ ಮಾಡಿ ಸಂಭ್ರಮಿಸುವ ಬದಲು ವಾದ್ಯ ಮೇಳದವರನ್ನು ಕರೆಸಿ ಅವರ ಕುಟುಂಬ ನೆರವಾಗುವ ಮೂಲಕ ಉಳಿಸಿ ಬೆಳೆಸುವ ಕಾರ್ಯವಾಗಬೇಕು ಎಂದು ಎಸ್‌ಪಿ ರಾಮರಾಜನ್ ಕೆ ಮನವಿ ಮಾಡಿದರು.

70 ಲಕ್ಷರೂ. ಮೊತ್ತದ ರಸ್ತೆ ಸುಧಾರಣೆ ಕಾಮಗಾರಿಗೆ ಚಾಲನೆ



ಚಿಕ್ಕೋಡಿ: ತಾಲೂಕಿನ ಪಾಂಗೇರಿ-ಎ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಹಾಗೂ ಚಿಕ್ಕೋಡಿ-ಸದಲಗಾ ಶಾಸಕ ಗಣೇಶ ಹುಕ್ಕೇರಿ ಪ್ರಯತ್ನದಿಂದ ಬಿಡುಗಡೆಯಾದ 70 ಲಕ್ಷ ರೂ. ಅನುದಾನದಲ್ಲಿ ರಸ್ತೆ ಸುಧಾರಣೆ ಕಾಮಗಾರಿಗೆ ಸ್ಥಳೀಯ ಮುಖಂಡರು ಗುರುವಾರ ಭೂಮಿಪೂಜೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಮಧುಕರ ಕೋಟೆ, ಶಿವಪ್ಪ ಮುತ್ನಾಳೆ, ಬಾಪು ಶಿತೋಳೆ, ರಾವಸಾಹೇಬ ಪಾಟೀಲ, ಪ್ರಮೋದ ಪಾಟೀಲ, ಬಾಪು ಚೌಗಲೆ, ಸಚಿನ ಶಿತೋಳೆ, ಅಮೋಲ ಶಿತೋಳೆ, ಮಹಾದೇವ ಶಿತೋಳೆ, ರೋಹನ ಶಿತೋಳೆ, ಸುನೀಲ ಶಿತೋಳೆ, ಮನೋಜ ಪಾಟೀಲ, ದೇವೇಗೌಡ ಪಠಾಡೆ, ಸುಭಾಷ ಮಾಳಿ, ಬಾಪು ಮಾಳಿ, ಗುತ್ತಿಗೆದಾರ ಶಿವರಾಯ ಕಮತೆ ಇತರರು ಇದ್ದರು.



ರಾಯಬಾಗ :ತಾಲೂಕಿನ ಪ್ರಾಥಮಿಕ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷರಾದ ರಾಜು ಅರಬಳ್ಳಿ ಅವರು ಚಿಕ್ಕೋಡಿ ತಾಲೂಕಿಗೆ ವರ್ಗಾವಣೆ ಆದ ಹಿನ್ನಲೆಯಲ್ಲಿ ಅವರನ್ನು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಅವರು ಸತ್ಕರಿಸಿದರು. ಈ ಸಂದರ್ಭದಲ್ಲಿ ಬಿಇಒ ಬಸವರಾಜಪ್ಪ ಆರ್., ದೈಹಿಕ ಪರಿವೀಕ್ಷಕ ಎಮ್.ಪಿ.ಜಿರಗ್ಯಾಳ, ಲಕ್ಷ್ಮಣ ಬಂಡಗರ ಅನೇಕ ದೈಹಿಕ ಶಿಕ್ಷಕರು ಉಪಸ್ಥಿತರಿದ್ದರು.

ಮೂಲ ಸೌಕರ್ಯ ಒದಗಿಸಲು ಬದ್ಧ

ರಾಮದುರ್ಗ: ಮುಖ್ಯಮಂತ್ರಿ ಸಿದ್ಧರಾಮಯ್ಯನವರ ನೇತೃತ್ವದ ರಾಜ್ಯ ಸರ್ಕಾರ ಗ್ರಾಮೀಣ ಪ್ರದೇಶ ಸೇರಿದಂತೆ ಎಲ್ಲ ಜನರ ಮೂಲಭೂತ ಸೌಲಭ್ಯ ಕಲ್ಪಿಸುವುದರ ಜೊತೆಗೆ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂದು ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಹೇಳಿದರು.

ಗುರುವಾರ ರೂ. ಲಕ್ಷ ವೆಚ್ಚದಲ್ಲಿ ರಾಮದುರ್ಗದಲ್ಲಿ ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯ ನೂತನ ಕಟ್ಟಡ, ಹನಮಾಪೂರದಲ್ಲಿ ರೂ. 20 ಲಕ್ಷ ವೆಚ್ಚದಲ್ಲಿ ಅಂಗನವಾಡಿಯ ನೂತನ ಕಟ್ಟಡ ನಿರ್ಮಾಣ ಮತ್ತು ರೂ. 26 ಲಕ್ಷ ವೆಚ್ಚದಲ್ಲಿ ನಂದಿಹಾಳ ಹದ್ದಿಯಿಂದ ಯಂಡಿಗೇರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಸುಧಾರಣೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸರ್ಕಾರದ ಅನುದಾನ ಸದ್ಬಳಕೆಯಾಗಲು ಅಧಿಕಾರಿಗಳು ಸರಿಯಾಗಿ ಕಾಮಗಾರಿಯ ಉಸ್ತುವಾರಿ ಮಾಡುವ ಮುಖಾಂತರ ಗುಣ ಮಟ್ಟದ ಕೆಲಸ ಮಾಡಿಸಬೇಕು ಎಂದು ತಿಳಿಸಿದರು.

ಕಾಮಗಾರಿ ಶೀಘ್ರ ಮುಗಿಸಲು ಮತ್ತು ಹೆಚ್ಚಿನ ಲಾಭಕ್ಕಾಗಿ ಕಾಮಗಾರಿ ಕಳಪೆಯಾದರೆ ಮಾಡಿದರೆ ಸಹಿಸುವದಿಲ್ಲ ಗ್ರಾಮಸ್ಥರು ಸಣ್ಣ ಪುಟ್ಟ ವಿಷಯಕ್ಕೆ ತಕರಾರು ಮಾಡದೇ ಗುಣ ಮಟ್ಟದ ಕೆಲಸ ಮಾಡಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಯ ತಾಲೂಕಾ ಅಧ್ಯಕ್ಷ ಜಿ. ಬಿ. ರಂಗನಗೌಡ್ರ, ತಾಪಂ ಮಾಜಿ ಸದಸ್ಯ ರಾಮಣ್ಣ ಬೀಡಕಿ, ಜಿಪಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಮಹ್ಮದ ಇಚಾನ್ ಶುಭುರ, ಇಂಜನೀಯರ ಪ್ರತಾಪ, ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಪ್ರಕಾಶ ಮುಗಳಖೋಡ, ಸಿಡಿಪಿಓ ಶಂಖರ ಕುಂಬಾರ ಸೇರಿದಂತೆ ಹಲವರಿದ್ದರು.



ಬಸವೇಶ್ವರ ಕಾಲೇಜಿಗೆ ನೂರಕ್ಕೆ ನೂರರಷ್ಟು ಫಲಿತಾಂಶ

ಮೂಡಲಗಿ : ಸಮೀಪದ ಕಲ್ಲೋಳಿಯ ಬಸವೇಶ್ವರ ಶಿಕ್ಷಣ ಸಂಸ್ಥೆ ಯ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ಪರೀಕ್ಷೆ ಯಲ್ಲಿ ಕಾಲೇಜ್ ಕಲಾ ವಿಭಾಗನಲ್ಲಿ ಪ್ರತಿಶತ 63 ಹಾಗೂ ವಾಣಿಜ್ಯ ವಿಭಾಗದಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿತ್ತು. ಸಾಧನೆಗೈದ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಂಸ್ಥಾಪಕ ಅಧ್ಯಕ್ಷ ಈರಣ್ಣ ಬೆಳಕೂಡ ಸಂಸ್ಥೆ ಅಧ್ಯಕ್ಷ ರಮೇಶ ಬೆಳಕೂಡ, ಕಾರ್ಯದರ್ಶಿ, ಡಾ ಭೋಜರಾಜ್ ಬೆಳಕೂಡ, ಆಡಳಿತ ಅಧಿಕಾರಿ ಪ್ರಕಾಶ್ ಗರಗಟ್ಟಿ ಪ್ರಾಚಾರ್ಯ ವಿ ಜಿ ಕಟ್ಟಿಮನಿ, ಅತೀ ಹೆಚ್ಚು ಅಂಕ ಪಡೆಯಲು ಬೋಧನೆ ಮಾಡಿದ ಗುರು ಖಡಕಭಾವಿ ಎಲ್ಲ ಉಪನ್ಯಾಸಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ,

ಪ್ರಥಮ ಪಿಯುಸಿ ಹಾಗೂ ಪ್ರಥಮ ಪದವಿ ಕಾಲೇಜಗೆ ಪ್ರವೇಶ ಪಡೆಯುವ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವರ್ಷ ಒಂದು ಸಾವಿರ ರೂಪಾಯಿ ಉಚಿತ ಗಿಫ್ಟ್ ನೀಡಲಾಗುತ್ತದೆ ಎಂದು ಅಧ್ಯಕ್ಷ ರಮೇಶ ಬೆಳಕೂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ



ಆರ್.ಡಿ.ಎಸ್. ಪಿ.ಯು ಕಾಲೇಜು ಶೇ 77 ರಷ್ಟು ಫಲಿತಾಂಶ

ಮೂಡಲಗಿ : ಇಲ್ಲಿಯ ಆರ್.ಡಿ.ಎಸ್. ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯವು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ77ರಷ್ಟು ಫಲಿತಾಂಶವನ್ನು ಪಡೆದುಕೊಂಡಿದೆ ಎಂದು ಕಾಲೇಜು ಪ್ರಾಚಾರ್ಯರು ತಿಳಿಸಿರುತ್ತಾರೆ.

ಕಲಾ-ಬಿ ವಿಭಾಗದಲ್ಲಿ ಲಕ್ಷ್ಮೀ ಗುಡೆನ್ನವರ 570 (ಶೇ 95.00) ಅಂಕ ಪಡೆದು ಕಾಲೇಜಿಗೆ ಪ್ರಥಮ. ಪ್ರಿಯಾಂಕಾ ಗಸ್ತಿ 555 (ಶೇ 92.50) ಅಂಕ ಪಡೆದು ದ್ವಿತಿಯ. ಲಕ್ಷ್ಮೀ ಪಾಟೀಲ 550 (ಶೇ92.) ಅಂಕ ಪಡೆದು ತೃತೀಯ. ಕಲಾ-ಎ ವಿಭಾಗದಲ್ಲಿ ಸುಕನ್ಯಾ ಇಟ್ನಾಳ 547 (ಶೇ 91.16.) ಅಂಕ ಪಡೆದು ಪ್ರಥಮ ಕಾವೇರಿ ಮೆಟಗುಡ್ಡ 538 (ಶೇ 90.) ಅಂಕ ಪಡೆದು ದ್ವಿತಿಯ. ಸಹನಾ ದುಂಡಗಿ 536 (ಶೇ 89.50) ಅಂಕ ಪಡೆದು ತೃತೀಯ.

ವಿಜ್ಞಾನ ವಿಭಾಗದಲ್ಲಿ ಸಾವಿತ್ರಿ ಮಾಳಪ್ಪನವರ 569 (ಶೇ 95) ಅಂಕ ಪಡೆದು ಪ್ರಥಮ, ಪಲ್ಲವಿ ಇಂಡಿ 559 (93.16) ಅಂಕ ಪಡೆದು ದ್ವಿತಿಯ, ರಾಜೇಂದ್ರ ವಾಣಿ 555 (91.66) ಅಂಕ ಪಡೆದು ತೃತೀಯ.

ವಾಣಿಜ್ಯ ವಿಭಾಗದಲ್ಲಿ ಆಕಾಶ ಬಾಯಪ್ಪಗೋಳ 569 (ಶೇ 95) ಅಂಕ ಪಡೆದು ಕಾಲೇಜಿಗೆ ಪ್ರಥಮ. ಪ್ರಕಾಶ ಕೂದನ್ನವರ 515 ಶೇ(86) ಅಂಕ ಪಡೆದು ದ್ವಿತಿಯ. ಪ್ರಜ್ವಲ್ ಉಪ್ಪಾರ 505 (ಶೇ 84.16)ಅಂಕ ಪಡೆದು ತೃತೀಯ ಸ್ಥಾನ ಪಡೆದು ಕೊಂಡಿದ್ದಾರೆ. ಒಟ್ಟು 372 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಅದರಲ್ಲಿ 39 ವಿದ್ಯಾರ್ಥಿಗಳು ಅತ್ಯುನ್ನತಶ್ರೇಣಿಯಲ್ಲಿ 161 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ 66 ವಿದ್ಯಾರ್ಥಿಗಳು ದ್ವಿತಿಯ ಶ್ರೇಣಿಯಲ್ಲಿ 24 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು ಸಾಧನೆಗೈದ ಎಲ್ಲ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷರಾದ ಸಂತೋಷ ತಮ್ಮಣ್ಣ ಪಾರ್ಶಿ ಹಾಗೂ ಆಡಳಿತ ಮಂಡಳಿ ಸದಸ್ಯರು ಪ್ರಾಚಾರ್ಯರು ಹಾಗೂ ಉಪನ್ಯಾಸಕ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.



ಸಚಿವರಿಂದ ಕ್ಷೇತ್ರದ ಸಮಗ್ರ ಅಭಿವೃದ್ಧಿ

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರೂ ಆಗಿರುವ ಬೆಳಗಾವಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸಂಪೂರ್ಣ ಕ್ಷೇತ್ರವನ್ನು ಸಮಗ್ರ ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದ್ದು, ಎಲ್ಲರೂ ಮುಂದೆ ಕೂಡ ಅವರ ಬೆಂಬಲಕ್ಕೆ ನಿಲ್ಲಬೇಕು ಎಂದು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಮನವಿ ಮಾಡಿದರು.

ಬೆಳಗಾವಿ ತಾಲೂಕಿನ ಮಾವಿನಕಟ್ಟಿ ಗ್ರಾಮದ ಶ್ರೀ ಮಹಾಲಕ್ಷ್ಮಿ ದೇವಿಯ ಜಾತ್ರಾ ಮಹೋತ್ಸವದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರೊಂದಿಗೆ ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿ, ದೇವಿಗೆ ಉಡಿ ತುಂಬಿ, ಲೋಕಕಲ್ಯಾಣಕ್ಕಾಗಿ ಪ್ರಾರ್ಥನೆ ಸಲ್ಲಿಸಿದ ನಂತರ ಅವರು ಮಾತನಾಡಿದರು. ಕ್ಷೇತ್ರದ ಯಾವುದೇ ಗ್ರಾಮದಲ್ಲಿ ಜಾತ್ರೆಯಾದರೂ ಅಲ್ಲಿ ಕೊಟ್ಯಂತರ ರೂ. ವೆಚ್ಚ ಮಾಡಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಮಾವಿನಕಟ್ಟಿಯಲ್ಲಿ ಸಹ ಎಲ್ಲ ರೀತಿಯ ವ್ಯವಸ್ಥೆ ಕಲ್ಪಿಸಲಾಗಿದೆ. 9 ದಿನದ ಜಾತ್ರೆ ಸುಗಮವಾಗಿ ನಡೆಯಲಿ. ಊರಿನಲ್ಲಿ ಶಾಂತಿ, ಸಮೃದ್ಧಿ ನೆಲೆಸಲಿ ಎಂದು ಅವರು ಆಶಿಸಿದರು. ಈ ವೇಳೆ ಗಿರಿಜಾ ಹಟ್ಟಿಹೊಳಿ, ಗ್ರಾಮದ ಹಿರಿಯರು, ಪಂಚ ಕಮೀಟಿಯ ಮುಖಂಡರು, ಭಕ್ತಾಧಿಗಳು, ಪಕ್ಷದ ಮುಖಂಡರು, ಕಾರ್ಯಕರ್ತರು ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಕೇಂದ್ರ ಗ್ರಂಥಾಲಯಕ್ಕೆ ಪ್ರಾದೇಶಿಕ ಆಯುಕ್ತರ ಭೇಟಿ



ಬೆಳಗಾವಿ: ನಗರದ ಕೇಂದ್ರ ಗ್ರಂಥಾಲಯಕ್ಕೆ ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿ ಕಾರ್ಯ ನಿರ್ವಹಣೆ ಕುರಿತು ಮಾಹಿತಿ ಪಡೆದುಕೊಂಡರು. ಉಪನಿರ್ದೇಶಕರಾದ ರಾಮಯ್ಯ ಅವರೊಂದಿಗೆ ಗ್ರಂಥಾಲಯದ ಎಲ್ಲಾ ವಿಭಾಗಗಳ ವೀಕ್ಷಣೆ ಮಾಡಿ, ಓದುಗರಿಂದ ತುಂಬಿ ತುಳುಕುತ್ತಿದ್ದ ಗ್ರಂಥಾಲಯವನ್ನು ನೋಡಿ ಸಂತಸ ವ್ಯಕ್ತಪಡಿಸಿದರು.

ಸಾರ್ವಜನಿಕ ಓದುಗರಿಗೆ ಇರುವ ಸೌಲಭ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಓದುಗರೊಂದಿಗೆ ಸಂವಾದ ನಡೆಸಿ,ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಕುರಿತು ಸಲಹೆ, ಸೂಚನೆ ನೀಡಿದರು. ಸ್ಪರ್ಧಾತ್ಮಕ ಪರೀಕ್ಷೆ ಪುಸ್ತಕಗಳ ಸಂಗ್ರಹ ಮತ್ತು ಮಕ್ಕಳ ವಿಭಾಗ ನೋಡಿದರು. ಈ ಸಂಧರ್ಭದಲ್ಲಿ ಗ್ರಂಥಪಾಲಕ ರಾದ ಎಸ್ ಎಸ್ ಸೀಮಿಮಠ, ಪ್ರಕಾಶ ಇಚಲಕರಂಜಿ, ಆನಂದ ಮುತ್ತಗಿ, ಸುಮಿತ್ ಕಾವಳೆ,ಸುನಿಲ್ ಕುಮಾರ, ಸಂಗೀತಾ ನಾವಿ, ಏಕನಾಥ ಅಂಬೇಕರ, ರಾಜು ಕಟ್ಟಿಮನಿ,ಮತ್ತು ಪ್ರಾದೇಶಿಕ ಆಯುಕ್ತರ ಕಚೇರಿ ಸಿಬ್ಬಂದಿ ಸೇರಿದಂತೆ ಇತರರು ಇದ್ದರು.

ಬಿಮ್ಸ್ ಆಸ್ಪತ್ರೆಗೆ ರಕ್ತ ಭಂಡಾರ ವಾಹನ ಕೊಡುಗೆ

ಬೆಳಗಾವಿ: ಕೆನರಾ ಬ್ಯಾಂಕ್ ಪ್ರಾದೇಶಿಕ ಕಚೇರಿ ಬೆಳಗಾವಿ ವತಿಯಿಂದ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ (ಬಿಮ್ಸ್) ಆವರಣದಲ್ಲಿ ಸಿಎಸ್ ಆರ್ ಅಡಿಯಲ್ಲಿ ಒಂದು ರಕ್ತ ಭಂಡಾರ ವಾಹನ'ವನ್ನು ಬಿಮ್ಸ್‌ಗೆ ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಹುಬ್ಬಳ್ಳಿ ಕೆನರಾ ಬ್ಯಾಂಕ್ ನ ಪ್ರಾದೇಶಿಕ ಕಚೇರಿಯ ಪ್ರಧಾನ ವ್ಯವಸ್ಥಾಪಕ ಜಗದೀಶ ಸ್ವಾಮಿ, ಬಿಮ್ಸ್ ನಿರ್ದೇಶಕ ಡಾ. ಅಶೋಕ ಕುಮಾರ ಶೆಟ್ಟಿ, ಸಹಾಯಕ ವ್ಯವಸ್ಥಾಪಕರಾದ ವಿದ್ಯಾ, ವಿಭಾಗೀಯ ವ್ಯವಸ್ಥಾಪಕ ಕೆ.ಎಸ್.ಭಗವಾನ್, ಮಂಜುನಾಥ ರಾವಳ, ರಾಜಶೇಖರ ದಂಡಿ, ಶಿಲ್ಪಾ ವಾಲಿ, ರೇಷ್ಮಾ ತಾಳಿಕೋಟಿ, ಈರಣ್ಣ ಪಲ್ಲೇದ, ಉಮೇಶ ಕುಲಕರ್ಣಿ, ಡಾ. ಸರೋಜಾ ತಿಗಡಿ, ಲಕ್ಷ್ಮಣ ತಳವಾರ ತಾಂತ್ರಿಕ ಸಲಹೆಗಾರರು ಮತ್ತು ಸಿಬ್ಬಂದಿ ವರ್ಗದವರು ಸೇರುಇದಂತೆ ಮತ್ತಿತರರು ಪಾಲ್ಗೊಂಡಿದ್ದರು.



ಮಹಿಳೆ ದೇಶದ ಶಕ್ತಿ: ಭಸ್ಮೆ



ಗೋಕಾಕ: ಭಾರತೀಯ ಸಂಸ್ಕೃತಿಯಲ್ಲಿ ಪ್ರತಿದಿನ ಮಹಿಳಾ ದಿನಾಚರಣೆಯಾಗಿದ್ದು, ಕುಟುಂಬದಲ್ಲಿ ಮೊದಲು ಜಾಗೃತರಾಗುವವರೆ ಮಹಿಳೆಯರು ಹಾಗಾಗಿ ಮಹಿಳಾ ಶಕ್ತಿ ದೇಶದ ಶಕ್ತಿಯಾಗಿದೆ ಎಂದು ತಹಶೀಲ್ದಾರ ಡಾ. ಮೋಹನ ಭಸ್ಮೆ ಹೇಳಿದರು.ಗುರುವಾರ ನಗರದ ಶ್ರೀ ಮಹಾಲಕ್ಷ್ಮೀ ಸಭಾಂಗಣದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯತ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಕಾರ್ಯಕ್ರಮವನ್ನು ಕಾರ್ಮಿಕ ಮುಖಂಡ ಅಂಬಿರಾವ ಪಾಟೀಲ್ ಉದ್ಘಾಟಿಸಿದರು.ಇದೇ ಸಂದರ್ಭದಲ್ಲಿ ನಿವೃತ್ತ ಅಂಚಿನಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಕಾರ್ಯಕರ್ತೆಯರಿಗೆ ಸತ್ಕರಿಸಿ, ಗೌರವಿಸಲಾಯಿತು.ಈ ಸಂದರ್ಭದಲ್ಲಿ ತಾಪಂ ಅಧಿಕಾರಿಗಳಾದ ಪರಶುರಾಮ ಗಸ್ತೆ, ನೆರಲೆಕರ, ಜಿಪಂ ಮಾಜಿ ಸದಸ್ಯರುಗಳಾದ ಟಿ.ಆರ್.ಕಾಗಲ್, ಮಡೆಪ್ಪ ತೋಳಿನವರ, ಸಿಡಿಪಿಓಗಳಾದ ಡಿ.ಎಸ್.ಕೂಡವಕ್ಕಲಿಗ, ಯಲಪ್ಪ ಗದಾಡಿ ಉಪಸ್ಥಿತರಿದ್ದರು.

ಕಿರುಸುದ್ದಿ

ಜೀರ್ಣೋದ್ಧಾರಕ್ಕೆ ಲಕ್ಷ ರೂ. ದೇಣಿಗೆ



◆**ಕಬ್ಬೂರು:** ಪಟ್ಟಣದ ಬೆಲ್ಲದ-ಬಾಗೇವಾಡಿ ರಸ್ತೆಗೆ ಹೊಂದಿಕೊಂಡ ಹನುಮಾನ ನಗರದ ಶ್ರೀ ಹನುಮಾನ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಅಭಿವೃದ್ಧಿ ಕಾರ್ಯಗಳಿಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಒಂದು ಲಕ್ಷ ರೂ. ದೇಣಿಗೆಯನ್ನು ಬುಧವಾರ ಹಸ್ತಾಂತರಿಸಲಾಯಿತು.ಚಿಕ್ಕೋಡಿ ಯೋಜನಾಧಿಕಾರಿಗಳಾದ ನಾಮದೇವ ದೇಶಪಾಂಡೆ, ಮೇಲ್ವಿಚಾರಕ ರಾದ ಮಹಾಂತೇಶ ಗೌರಿಮಠ ಮಾತ ನಾಡಿ, ಡಾ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಈ ಯೋಜನೆಯು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗೆ ಸಹಾಯಹಸ್ತ ನಿಡುತ್ತಾ ಬಂದಿದೆ. ಮಹಿಳೆಯರು ಸಾವಲಂಭಿಯಾಗಿ ತಮ್ಮ ಜೀವನ ಕಟ್ಟಿ ಕೊಂಡು ಉನ್ನತಮಟ್ಟಕ್ಕೇರಲು ಸದಾ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಬೆನ್ನೆಲುಬಾಗಿ ನಿಲ್ಲುತ್ತಾ ಬಂದಿದೆ ಎಂದರು.ಈ ವೇಳೆ ವಿಠಲ ಕುಕನೂರ, ಮಗೆಪ್ಪ ತೇರದಾಳೆ, ಸುನೀಲ ಇನಾಮದಾರ, ನಾಗೇಶ ಪೋತದಾರ, ಶ್ರೀಶೈಲ ಹಿರೇಕುರುಬರ, ಮಾರುತಿ ವಿಜಯನಗರ, ರಾಜು ಚೌಗಲಾ, ಮಲ್ಲಪ್ಪ ಚೌಗಲಾ ಸೇರಿದಂತೆ ಸಂಘದ ಪ್ರತಿನಿಧಿಗಳು ಹಾಗೂ ಹನುಮಾನ ನಗರದ ಸಾರ್ವಜನಿಕರು ಉಪಸ್ಥಿತರಿದ್ದರು.

ಉತ್ತಮ ಸಾಧನೆ



◆**ಗೋಕಾಕ:** ನಗರದ ಲಕ್ಷ್ಮಣರಾವ ಜಾರಕಿಹೊಳಿ ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. 474 ವಿದ್ಯಾರ್ಥಿ ಪರೀಕ್ಷೆ ಬರೆದಿದ್ದು 329 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.ಕಲಾ ವಿಭಾಗದಲ್ಲಿ ಸಿದ್ದು ಇಂಗಳೆ 571(95.17) ಪ್ರಥಮ, ಮಲ್ಲಿಕಾರ್ಜುನ ಅಂದಾನಿ 563(93.85) ದ್ವಿತೀಯ, ರಕ್ಷಿತಾ ಬಾಗೇವಾಡಿ 558(93) ತೃತೀಯ ಸ್ಥಾನ ಪಡೆದಿದ್ದಾರೆ. 16 ವಿದ್ಯಾರ್ಥಿಗಳು ಡಿಸ್ಟಿಂಕ್ಷನನಲ್ಲಿ, 49 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ವೈಶಾಲಿ ಘೋರ್ಪಡೆ 584(97.33) ಪ್ರಥಮ, ಪೂಜಾ ತಮ್ಮನ್ನಗೋಳ 574(95.66) ದ್ವಿತೀಯ, ಶಾರದಾ ಮುತ್ತೇನ್ನವರ 555(92.50) ತೃತೀಯ ಸ್ಥಾನ ಪಡೆದಿದ್ದಾರೆ. 11 ವಿದ್ಯಾರ್ಥಿಗಳು ಡಿಸ್ಟಿಂಕ್ಷನನಲ್ಲಿ, 35 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಸಿದ್ದಾರೂಢ ಬಡಿಗೇರ 575 (95.85) ಪ್ರಥಮ, ಸೃಜನಾ ವಸ್ತದ 573(95.50) ದ್ವಿತೀಯ, ರಕ್ಷೀತಾ ಮಲ್ಲಾಪೂರ 570(95) ತೃತೀಯ ಸ್ಥಾನ ಪಡೆದಿದ್ದಾರೆ. 27 ವಿದ್ಯಾರ್ಥಿಗಳು ಡಿಸ್ಟಿಂಕ್ಷನನಲ್ಲಿ, 100 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಯನ್ನು ಸಂಸ್ಥೆಯ ಚೇರಮನ್ ಡಾ.ಭೀಮಶಿ ಜಾರಕಿಹೊಳಿ, ವ್ಯವಸ್ಥಾಪಕ ನಿರ್ದೇಶಕ ಸನತ ಜಾರಕಿಹೊಳಿ, ಪ್ರಾಚಾರ್ಯ ಅರುಣ ಪೂಜೇರ ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

ವ್ಯಕ್ತಿ ಕಾಣೆ

◆**ಬೆಳಗಾವಿ:** ಗುಲ್ಬರ್ಗಾ ಜಿಲ್ಲೆಯ ಅಂಕಲಗಿ ಸಚೀನ ಹರಿದಾಸ ರಾಠೋಡ ವ್ಯಕ್ತಿ ಕಾಣೆ ತಾಂಡಾ ದತ್ತ ಗಾಣಗಾಪೂರ (ಹಾಲಿ ವಡ್ಡರ ಭಾವಣಿ ಖಾಸಬಾಗ ಬೆಳಗಾವಿ) ಗ್ರಾಮದ ನಿವಾಸಿ ಸಚೀನ ಹರಿದಾಸ ರಾಠೋಡ ಕಾಣೆಯಾಗಿದ್ದರ ಕುರಿತು ಶಹಾಪೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಈ ಬಗ್ಗೆ ಮಾಹಿತಿ ದೊರೆತಲ್ಲಿ ಪೊಲೀಸ್ ಆಯುಕ್ತರು, ಬೆಳಗಾವಿ ನಗರ ರವರಿಗೆ ಅಥವಾ ಪೊಲೀಸ್ ಇನ್ಸಪೆಕ್ಟರ್, ಶಹಾಪೂರ ಪೊಲೀಸ್ ಠಾಣೆ, ಬೆಳಗಾವಿ ನಗರ ರವರಿಗೆ ತಿಳಿಸಬಹುದು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಪೊಲೀಸ್ ಠಾಣೆ ಸಂಪರ್ಕಿಸಬಹುದು ಎಂದು ಶಹಾಪೂರ ಪೊಲೀಸ್ ಠಾಣೆ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಸುರೇಶ ಹುಲಮನಿ



◆ **ನೇಸರಗಿ:** ಸಮೀಪದ ಮೇಕಲಮರಡಿ ಗ್ರಾಮದ ಸುರೇಶ ದೇವಪ್ಪ ಹುಲಮನಿ (57) ನಿಧನರಾಗಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.



ಬೆಳಗಾವಿ: ಇಲ್ಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಹಾಗೂ ಕೆಎಲ್‌ಇ ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ (ಸ್ವಾಯತ್ತ) ಬೆಳಗಾವಿ ಸಂಯುಕ್ತಾಶ್ರಯದಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ತಂತ್ರಾಂಶದ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಡಾ. ಡಿ.ಕೆ. ಕಾಂಬಳೆ ಅವರು ಉದ್ಘಾಟಿಸಿದರು.

ತರಬೇತಿ ಕಾರ್ಯಾಗಾರ

◆**ಬೆಳಗಾವಿ:**ಇಲ್ಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ ಹಾಗೂ ಕೆಎಲ್‌ಇ ಸಂಸ್ಥೆಯ ರಾಜಾ ಲಖಮಗೌಡವಿಜ್ಞಾನಮಹಾವಿದ್ಯಾಲಯ(ಸ್ವಾಯತ್ತ) ಬೆಳಗಾವಿಸಂಯುಕ್ತಾಶ್ರಯದಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ತಂತ್ರಾಂಶದ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಡಾ.ಡಿ.ಕೆ.ಕಾಂಬಳೆ ಅವರು ಉದ್ಘಾಟಿಸಿದರು. ಬಳಿಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಉಪಕುಲಸಚಿವರಾದ ಡಾ. ಡಿ.ಕೆ. ಕಾಂಬಳೆ ರವರು ಸ್ವಾಯತ್ತ ತಂತ್ರಾಂಶವು ಒಂದು ಸರಳ ಹಾಗೂ ಬಹುಉಪಯುಕ್ತ ಸಾಧನವಾಗಿದ್ದು ಪ್ರವೇಶ ಪ್ರಕ್ರಿಯೆ, ಪಠ್ಯಕ್ರಮ ಮತ್ತು ಪರೀಕ್ಷಾ ಉಪಕ್ರಮಗಳ ಬಗ್ಗೆ ಸವಿಸ್ತಾರವಾದ ತರಬೇತಿಯನ್ನು ವಿಶ್ವವಿದ್ಯಾಲಯದ ವತಿಯಿಂದ ಹಮ್ಮಿಕೊಳ್ಳಲಾಗಿದ್ದು ವಿವಿಧ ಕಾಲೇಜುಗಳ ಸಂಯೋಜಕರು ಹಾಗೂ ಆಡಳಿತ ಸಿಬ್ಬಂದಿ ವರ್ಗ ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸದಾಶಿವ ತೋರಿ, ಲಕ್ಷ್ಮಣ್ ಮಾಳಗಿ ಹಾಗೂ ವಿಕ್ರಮ ಮಿರ್ಜಿ ಅವರು ಭಾಗವಹಿಸಿದ್ದರು. ಕಾರ್ಯಾಗಾರದಲ್ಲಿ ಬೆಳಗಾವಿ ಭಾಗದ 150ಕ್ಕೂ ಹೆಚ್ಚು ಕಾಲೇಜಿನ ಸಿಬ್ಬಂದಿವರ್ಗ ಭಾಗವಹಿಸಿದ್ದರು. ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜೆ.ಎಸ್. ಕವಳೇಕರ ಅವರು ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಐಕ್ಯೂಸಿ ಸಂಯೋಜಕರಾದ ಡಾ. ವಿನಯ ಕುಮಾರ ಎಮ್. ಸಂಯೋಜಕರಾದ ವಿನುತಾ ಜೆ.ಬಿ. ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ನೇಸರಗಿ: ಸಮೀಪದ ಸುನಕುಂಪಿ ಗ್ರಾಮದಲ್ಲಿ ಶ್ರೀ ಲಕ್ಷ್ಮೀದೇವಿ ಜಾತ್ರೆಯ ಪ್ರಯುಕ್ತ ವಿವಿಧ ಕಾರ್ಯಕ್ರಮಗಳಿಗೆ ಊರ ಹಿರಿಯರ ಸಮ್ಮುಖದಲ್ಲಿ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಸಚಿನ ಪಾಟೀಲ, ಮಾಜಿ ಜಿ ಪಂ ಸದಸ್ಯ ನಿಂಗಪ್ಪ ಅರಿಕೇರಿ , ಗ್ರಾಮದ ಮುಖಂಡರು ಗ್ರಾಮಸ್ಥರು ಉಪಸ್ಥಿತರಿದ್ದರು.

ಶಿಬಿರದ ಉದ್ಘಾಟನೆ | ಅಭಿನವ ಯಾದವ ಅಭಿಮತ

ಮಿಶ್ರ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಿ

◆**ರಾಮದುರ್ಗ:** ರೈತರೆಲ್ಲರೂ ಏಕಕಾಲದಲ್ಲಿ ಒಂದೇ ಬೆಳೆಯನ್ನು ಬೆಳೆದರೆ ರೈತರಿಗೆ ಸೂಕ್ತ ಬೆಲೆ ದೊರೆಯುವುದು ಕಷ್ಟ. ಹಾಗಾಗಿ ಮಿಶ್ರ ಬೇಸಾಯ ಪದ್ಧತಿಯ ಜೊತೆಗೆ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು. ಕೃಷಿ ಉತ್ಪನ್ನಗಳನ್ನು ಬೆಲೆ ಸಿಗುವ ವರೆಗೆ ದಾಸ್ತಾನು ಮಾಡಿಕೊಳ್ಳಬೇಕು ಎಂದು ಬೆಳಗಾವಿಯ ನಬಾರ್ಡ ಡಿ.ಡಿ.ಎಂ ಅಭಿನವ ಯಾದವ ಅಭಿಮತ ವ್ಯಕ್ತಪಡಿಸಿದರು.

ತಾಲೂಕಿನ ಗೊಡಚಿ ಗ್ರಾಮದಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಬಾಗಲಕೋಟಿ ಹಾಗೂ ಕಿತ್ತೂರ ರಾಣಿ ಚೆನ್ನಮ್ಮ ತೋಟಗಾರಿಕೆ ಮಹಾವಿದ್ಯಾಯ ಅರಭಾವಿ ಸಂಯುಕ್ತಾಶ್ರಯದಲ್ಲಿ ನಡೆದ ಅಂತಿಮ ಬಿಎಸ್ಸಿ (ಹಾನ್ಸ್) ವಿದ್ಯಾರ್ಥಿಗಳ ಗ್ರಾಮೀಣ ತೋಟಗಾರಿಕೆ ಕಾರ್ಯಾನುಭವ ಶಿಬಿರ ಉದ್ಘಾಟನೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾನಾಡಿದ ಅವರು.

ಯುವ ಮುಖಂಡ ಅನಿತೇಕ ಪಟ್ಟಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಒಕ್ಕಲುತನದಲ್ಲಿ ವಿಮುಖರಾಗುತ್ತಿರುವ ಇಂದಿನ ದಿನಗಳಲ್ಲಿ ಬಹಳಷ್ಟು ವಿದ್ಯಾರ್ಥಿಗಳು ಕೃಷಿ ಪದವಿ ಪಡೆದುಕೊಳ್ಳಲು ಮುಂದೆ ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ. ವ್ಯವಸ್ಥಿತವಾಗಿ ಕೃಷಿ ಚಟುವಟಿಕೆಗಳನ್ನು ಮಾಡಿಕೊಂಡರೆ ಹೆಚ್ಚಿನ ಆಧಾಯ ನಿರೀಕ್ಷಿಸಬಹುದೆಂದು ತಿಳಿಸಿದರು.

ಅರಭಾವಿ ತೋಟಗಾರಿಕೆ ಕೃಷಿಮಹಾವಿದ್ಯಾಲಯದ ಡೀನ್ ಡಾ. ಆನಂದ ಮಾಸ್ತಿಹೊಳಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಹಾಯಕ ಕೃಷಿ ನಿರ್ದೇಶಕ ಶ್ರೀನಾಥ ಚಿಮ್ಮಲಗಿ, ತೋಟಗಾರಿಕೆ ಸಹಾಯಕ ನಿರ್ದೇಶಕ ಪ್ರಕಾಶ ಮುಗಳಖೋಡ, ಪ್ರಗತಿಪರ ರೈತ ಪ್ರಕಾಶ ಮುರಕಟ್ನಾಳ ಮಾತನಾಡಿದರು.

ಅಮೂಲ್ಯ ಆರ್ಥಿಕ ಸಾಕ್ಷರತೆ ಕೇಂದ್ರದ ಸಮಾಲೋಚಕ ಮಲ್ಲಿಕಾರ್ಜುನರಡ್ಡಿ ಗೊಂದಿ ಸಾಮಾಜಿಕ ಸುರಕ್ಷಾ ವಿಮಾ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ಪಿಡಿಓ ಮಂಜುನಾಥ ದೇವರಡ್ಡಿ, ಕೃಷಿ ಅಧಿಕಾರಿ ರಮೇಶ ದಾಸರ, ಡಾ. ಆನಂದ ಗಸ್ತಿ, ಡಾ.ಪಲ್ಲವಿ ಜಿ, ಡಾ. ಎಸ್.ಜಿ.ಪ್ರವೀಣಕುಮಾರ, ಲಚ್ಚಪ್ಪ ಕಾಮನ್ನವರ, ಸಹಜಾನಂದ ಬಾವನ್ನವರ, ಅಮೂಲ್ಯ ಆರ್ಥಿಕ ಸಾಕ್ಷರತೆ ಕೇಂದ್ರದ ಸಮಾಲೋಚಕ ಮಲ್ಲಿಕಾರ್ಜುನರಡ್ಡಿ ಗೊಂದಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸುನಿತಾ ಪಟ್ಟೇದ ಪ್ರಾಸ್ತಾವಿಕ ಮಾತನಾಡಿದರು. ವಿದ್ಯಾರ್ಥಿಗಳಿಂದ ತೋಟಗಾರಿಕೆ ವಸ್ತು ಪ್ರದರ್ಶನ ನಡೆಯಿತು.

ಮಹ್ಮದ್ ರಿಯಾಜ್ ಸ್ವಾಗತಿಸಿದರು. ನಾಗವೇಣಿ ಕೆ. ನಿರೂಪಿಸಿದರು. ಪ್ರದೀಪ ಬಿ. ವಂದಿಸಿದರು.



ಕೃಷಿಯಲ್ಲಿ ಲಾಭ ಪಡೆದುಕೊಳ್ಳಲು ಕೃಷಿಯಲ್ಲಿ ತಂತ್ರಜ್ಞಾನವನ್ನು ಬೆಳೆಸಿಕೊಳ್ಳಬೇಕು. ಕೃಷಿ ತಂತ್ರಜ್ಞಾನದ ಬಗ್ಗೆ ರೈತರಿಗೆ ತಿಳುವಳಿಕೆ ನೀಡುವುದು ಅಗತ್ಯವಿದೆ. ಈ ನಿಟ್ಟಿನಲ್ಲಿ ಶಿಬಿರಾರ್ಥಿಗಳು ಗ್ರಾಮೀಣ ಭಾಗದ ರೈತರಿಗೆ ಕೃಷಿ ತಿಳಿವಳಿಕೆ ನೀಡುವತ್ತ ಗಮನ ಹರಿಸಬೇಕು.

■ ಪ್ರಶಾಂತ ಘೋಡಕೆ, ಎಲ್‌ಡಿಎಂ

ಲಾಭದಾಯಕ ಕೃಷಿ

ಕೃಷಿ ದಾಸ್ತಾನು ಮಾಡಿಕೊಳ್ಳಲು ನಬಾರ್ಡದಿಂದ ರಿಯಾಯತಿ ದರದಲ್ಲಿ ಗೋದಾಮುಗಳನ್ನು ನಿರ್ಮಿಸಿಕೊಳ್ಳಲು ಸಾಲ ನೀಡಲಾಗುತ್ತಿದೆ. ಇದರಿಂದ ಮಾತ್ರ ಕೃಷಿ ಲಾಭದಾಯಕವಾಗಲು ಸಾಧ್ಯವಿದೆ ಎಂದು ಬೆಳಗಾವಿಯ ನಬಾರ್ಡ ಡಿ.ಡಿ.ಎಂ ಅಭಿನವ ಯಾದವ ಹೇಳಿದರು.

ಜಾತ್ರೆಗೆ ಸಕಲ ಸಿದ್ಧತೆ: ಮಾಮನಿ

◆**ಸವದತ್ತಿ:** ಗ್ರಾಮದೇವಿ ಜಾತ್ರೆಗೆ ಎಲ್ಲ ಸಮಾಜಬಾಂಧವರಸಹಕಾರದೊರಕುತ್ತಿದ್ದು, 44 ವರ್ಷಗಳ ನಂತರ ನಡೆಯುವ ಜಾತ್ರೆಯನ್ನು ಅದ್ದೂರಿಯಾಗಿ ಆಚರಿಸಲು ಸಕಲ ಸಿದ್ದತೆ ಮಾಡಿಕೊಳ್ಳಲಾಗುತ್ತಿದೆ ಎಂದು ಗ್ರಾಮದೇವಿ ಜಾತ್ರಾ ಉತ್ಸವ ಸಂಘದ ಅಧ್ಯಕ್ಷ ವಿರುಪಾಕ್ಷಣ್ಣ ಮಾಮನಿ ಹೇಳಿದರು.

ಪಟ್ಟಣದಲ್ಲಿ ಮೇ.4 ರಂದು ಪ್ರಾರಂಭಗೊಳ್ಳಲಿರುವ ಗ್ರಾಮದೇವಿ ಜಾತ್ರೆಯ ವೇದಿಕೆಯ ಮಂಟಪ ನಿರ್ಮಾಣಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಈಗಾಗಲೇ ಜಾತ್ರಾ ಉತ್ಸವಕ್ಕೆ ಸಂಬಂಧಿಸಿದಂತೆ ಪೂರ್ವ ಸಿದ್ದತೆಗಳೆಲ್ಲಾ ನಡೆಯುತ್ತಿವೆ. ವೇದಿಕೆಯ ಕಾರ್ಯಕ್ರಮಗಳಿಗೆ ಶ್ರೀಗಳ ಮತ್ತು ಗಣ್ಯರ ಆಗಮನಕ್ಕೆ ಪಟ್ಟಿ ಮಾಡಲಾಗುತ್ತಿದೆ ಎಂದರು. ಜಾತ್ರೆಯ ಸಮಯದಲ್ಲಿ ಕಬಡ್ಡಿ, ಕುಸ್ತಿ, ಮಲ್ಲಕಂಭ, ತೆರೆಬಂಡಿ, ಎತ್ತಿನ ಗಾಡಿ ಓಟ, ಕುದರೆ ಗಾಡಿ ಓಟ, ಟಗರಿನ ಕಾಳಗ ಸೇರಿದಂತೆ ಅನೇಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ ಎಂದರು. ಪ್ರತಿ ನಿತ್ಯ ಪ್ರವಚನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಶಾಸಕರು ಹಾಗೂ ಜಾತ್ರಾ ಸಮಿತಿ ಗೌರವಾಧ್ಯಕ್ಷ ವಿಶ್ವಾಸ ವೈದ್ಯ ಮಾತನಾಡಿ, ಜಾತ್ರೆಯ ಅಂಗವಾಗಿ ಪಟ್ಟಣದಲ್ಲಿ ಅವಶ್ಯಕ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, ಆದಷ್ಟು ಬೇಗನೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತಿದೆ ಎಂದರು. ಜಾತ್ರೆಗೆ ಸಂಬಂಧಿಸಿದಂತೆ ಎಲ್ಲ ಕಾರ್ಯಗಳಿಗೆ ಸಂಪೂರ್ಣ ಸಹಕಾರ ನೀಡುವದಾಗಿ ಹೇಳಿದರು.

ಅಡಿವೆಪ್ಪಾ ಬೀಳಗಿ, ಅಲ್ಲಮಪ್ರಭು ಪ್ರಭುನವರ, ಎಲ್.ಆರ್.ಕುಲಕರ್ಣಿ, ಡಾ.ಎನ್.ಸಿ ಬೆಂಡಿಗೇರಿ, ಬಸವರಾಜ ಕಾರದಗಿ, ಬಿ.ವಿ.ಮಲ್ಲಗೌಡರ, ಐ.ಪಿ.ಪಾಟೀಲ, ರತ್ನಕ್ಕ ಆನಂದ ಮಾಮನಿ, ಅಶ್ವತ ವೈದ್ಯ, ಜಗದೀಶ ಶಿಂತ್ರಿ, ಶಿವಾನಂದ ಮೇಟಿ, ಶ್ರೇಯಸ್ಸ ಮಾಮನಿ, ಶ್ರೀಶೈಲ್ ಮುತಗೊಂಡ, ಬಿ.ಎನ್.ಪ್ರಭುನವರ, ಮದನಲಾಲ ಚೋಪ್ರಾ, ಭರಮಪ್ಪ ಅಣ್ಣಿಗೇರಿ, ಬಸವರಾಜ ಪುಟ್ಟಿ, ಅಮೃತ ಸುಳ್ಳದ, ಶ್ರೀಶೈಲ ಕಾರದಗಿ, ಸುರೇಶ ಭೀ ಬಾಳೋಜಿ, ಮಲ್ಲಿಕಾರ್ಜುನ ಬೀಳಗಿ, ಮಹಾಂತೇಶ ಪಂಪನವರ, ಬೋಪಾಲ ಬಾಂಡೇಕರ, ವಿರುಪಾಕ್ಷಿ ಹೆರಕಲ್, ಡಾ.ವೈ. ಎಮ್.ಯಾಕೊಳ್ಳಿ, ಶಿವರಾಜ ಚೌಗಲಾ, ರಾಮತೀರ್ಥ ಜೋಶಿ, ಬಸವರಾಜ ಹಂಪಣ್ಣವರ, ಸೋಮಯ್ಯ ವಡಿಯರ ಚಂದ್ರಶೇಖರ, ಅಮ್ಮಿನಬಾವಿ, ಬಾಬು ಕಾಳೆ ಇತರರು ಉಪಸ್ಥಿತರಿದ್ದರು.



ಬೂತ್ ಮಟ್ಟದ ಗೆಲುವಿಗೆ ಒತ್ತು ನೀಡಿ

◆**ಗೋಕಾಕ:** ಶಿಸ್ತಿಗೆ ಇನ್ನೊಂದು ಹೆಸರೇ ಬಿಜೆಪಿ ಪಕ್ಷವಾಗಿದೆ. ನಾವು ಮಾಡುವ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ನೋಡಿ ಜನ ನಮ್ಮನ್ನು ಗುರುತಿಸಬೇಕು.ಈ ನಿಟ್ಟಿನಲ್ಲಿ ನಾವು ಅಭಿವೃದ್ಧಿ ಕಾರ್ಯವನ್ನು ಮಾಡಬೇಕು ಎಂದು ಬೆಳಗಾವಿ ಜಿಲ್ಲಾ ಗ್ರಾಮಾಂತರ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂದೀಪ ದೇಶಪಾಂಡೆ ಹೇಳಿದರು.

ಅವರು, ತಾಲೂಕಿನ ಅಂಕಲಗಿ ಪಟ್ಟಣದಲ್ಲಿ ಜರುಗಿದ ಭಾರತೀಯ ಜನತಾ ಪಾರ್ಟಿ ನಗರ ಮತ್ತು ಗ್ರಾಮೀಣ ಮಂಡಲ ಮಟ್ಟದ ಪ್ರಶಿಕ್ಷಣ ಮಹಾಭಿಯಾನದ ಮೂರನೇ ತಂಡದ ಪ್ರಶಿಕ್ಷಣ ವರ್ಗದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಚುನಾವಣೆಯಲ್ಲಿ ಬೂತ್ ಮಟ್ಟವನ್ನು ಗೆಲ್ಲಿಸಿದರೆ ಭಾರತ ದೇಶವೇ ಗೆದ್ದಂತೆ. ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷಗಿಂತ ದೇಶ ಮುಖ್ಯವಾಗಿದೆ ಎಂದು ಹೇಳಿದರು. ಸಮಾರಂಭವನ್ನು ಯುವ ಮುಖಂಡರು ಹಾಗೂ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಅಮರನಾಥ ಜಾರಕಿಹೊಳಿ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಸ ಪಾಟೀಲ ವಹಿಸಿದ್ದರು. ವೇದಿಕೆ ಮೇಲೆ ನಗರ ಮಂಡಲ ಅಧ್ಯಕ್ಷ ಭೀಮಶಿ ಭರಮಣ್ಣವರ, ಗ್ರಾಮೀಣ ಮಂಡಲ ಅಧ್ಯಕ್ಷ ರಾಜೇಂದ್ರ ಗೌಡಪ್ಪಗೋಳ, ಮಾಜಿ ಜಿ.ಪಂ ಸದಸ್ಯರುಗಳಾದ ಟಿ.ಆರ್. ಕಾಗಲ, ಮಡ್ಡೆಪ್ಪ ತೋಳಿನವರ, ಭೀಮಗೌಡ ಪೋಲಿಸ್ ಗೌಡರ, ಜಿಲ್ಲಾ ಕಾರ್ಯದರ್ಶಿ ಶಿವಾನಂದ ಹಣಮಸಾಗರ, ಜಿಲ್ಲಾ ಉಪಾಧ್ಯಕ್ಷ ಶಾಮಾನಂದ ಪೂಜೇರಿ, ರಾಷ್ಟ್ರೀಯ ಓಬಿಸಿ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಲಕ್ಷ್ಮಣ ತಪಶಿ, ಬಿಜೆಪಿ ಹಿರಿಯ ಮುಖಂಡ ಪ್ರಮೋದ್ ಜೋಶಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ರಾಜೇಶ್ವರಿ ವಡೇಯರ ನಿರೂಪಿಸಿ, ವಂದಿಸಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಅಮರನಾಥ ಜಾರಕಿಹೊಳಿ ಪ್ರಶಿಕ್ಷಣ ವರ್ಗದ ಕಾರ್ಯಕ್ರಮದಲ್ಲಿ ಭಾಗಿ ಗೋಕಾಕ: ತಾಲೂಕಿನ ಅಂಕಲಗಿ ಪಟ್ಟಣದಲ್ಲಿ ಜರುಗಿದ ಭಾರತೀಯ ಜನತಾ ಪಾರ್ಟಿ ಪ್ರಶಿಕ್ಷಣ ಮಹಾಭಿಯಾನದಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಅಮರನಾಥ ಜಾರಕಿಹೊಳಿ ಭಾಗವಹಿಸಿದ್ದು ವಿಶೇಷವಾಗಿತ್ತು.



ಗಡ್ಡೆ ಶಿರಾಸಾಹೇಬ ದರ್ಗಾ ದರ್ಶನ ಪಡೆದ ಶಾಸಕ

◆**ಕುಡಚಿ:** ಗ್ರಾಮೀಣ ಭಾಗದ ಕುಡಚಿ ಎರಡನೇ ಅತಿ ದೊಡ್ಡ ಉರುಸಕ್ಕೆ ಪ್ರಸಿದ್ಧಿ ಹೊಂದಿದ ಹ.ಶೇಖ ಮೊಹ್ಮದ್ ಸಿರಾಜುದ್ದೀನ್ ಜುನ್ನೇದಿ ದರ್ಗಾ ಉರುಸ ಕಳೆದ ನಾಲ್ಕು ದಿನಗಳಿಂದ ಜರಗುತ್ತಿದ್ದು, ಬುಧವಾರ ಸಂಜೆ ಕುಡಚಿ ಶಾಸಕ ತಮ್ಮಣ್ಣವರ ದರ್ಗಕ್ಕೆ ಭೇಟಿ ನೀಡಿ ದರ್ಶನ ಪಡೆದರು.

ಕುಡಚಿ ಸುತ್ತಮುತ್ತಲಿನ ಗ್ರಾಮಗಳು ಹಾಗು ಕರ್ನಾಟಕ ಮಹಾರಾಷ್ಟ್ರ ರಾಜ್ಯದ ಹಲವು ಭಾಗಗಳಿಂದ ಸಹಸ್ರಾರು ಭಕ್ತರನ್ನು ಹೊಂದಿದ ಕೃಷ್ಣಾ ನದಿ ಬಲದಂಡೆಗೆ ಹೊಂದಿಕೊಂಡಿರುವ ಗಡ್ಡೆ ಸಿರಾಸಾಹೇಬ ದರ್ಗಾ ಉರುಸಕ್ಕೆ ಶನಿವಾರ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಗಲೀಪ ಸಲ್ಲಿಸಿ ದರ್ಶನ ಪಡೆದರು.

ಇದೇ ಸಮಯದಲ್ಲಿ ಕೃಷ್ಣಾ ನದಿ ದಡದ ಗಡ್ಡೆ ಪ್ರದೇಶಕ್ಕೆ ಘಾಟ ನಿರ್ಮಿಸಲು 15ಕೋಟಿ ಅನುದಾನ ಮಂಜೂರು ಮಾಡಿದ ಶಾಸಕ ಮಹೇಂದ್ರ ತಮ್ಮಣ್ಣವರ ಅವರನ್ನು ಗ್ರಾಮಸ್ಥರು ಸತ್ಕರಿಸಿ ಗೌರವಿಸಿದರು.

ಆತೀಫ್ ಪಠಾಯಿತು, ಹಮೀದೋದಿನ ರೋಹಿಲೆ, ಮುಶಫೀಕ ಜಿನಾಬಡೆ, ಆನಂದ ಪಾಟೀಲ, ಅಶ್ಫಾಕ್ ಅಲಾಲಖಾನ, ರವುಫ್ ಚಮನಮಲಿಕ, ವಾಸೀಕ ಮಾರುಫ, ಸಾದೀಕ ರೋಹಿಲೆ, ಸುರೇಶ ಹೊಸಮನಿ, ಸಾಹೇಬಹುಸೇನ್ ಚಮನಮಲೀಕ, ಸರ್ಫರಾಜ್ ಕರೀಮಖಾನ್, ಮುನೀರ್ ಜಿನಾಬಡೆ, ಶಬ್ಬೀರ್ ಮಕ್ತುಂಬಡೆ ಸೇರಿದಂತೆ ಮತ್ತಿತರರು ಇದ್ದರು.



ಅಧ್ಯಕ್ಷರಾಗಿ ಬಸವರಾಜ, ಉಪಾಧ್ಯಕ್ಷರಾಗಿ ಸುರೇಶ ಅವಿರೋಧ ಆಯ್ಕೆ

◆**ಚನ್ನಮ್ಮನ ಕಿತ್ತೂರು:** ಕಿತ್ತೂರ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ ಕಿತ್ತೂರ ಇದರ ಐದು ವರ್ಷಗಳ ಅವಧಿಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಬಸವರಾಜ ಮಾತನವರ, ಉಪಾಧ್ಯಕ್ಷರಾಗಿ ಸುರೇಶ ಜಾಂಗಟಿ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದಲ್ಲಿ ಗುರುವಾರ ನಡೆದ ಚುನಾವಣೆಯಲ್ಲಿ ಒಟ್ಟು 13 ಜನ ನಿರ್ದೇಶಕರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಂದೊಂದು ನಾಮ ಪತ್ರ ಸಲ್ಲಿಕೆಯಾಗಿ ಎರಡು ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆಯಿತು. ಚುನಾವಣಾಽಕಾರಿಯಾಗಿ ಸಿ ಆರ್ ಪಾಟೀಲ ಕಾರ್ಯ ನಿರ್ವಹಿಸಿದ್ದರು.ನಿರ್ದೇಶಕರಾದ ಬಸಪ್ಪ ಹುಣಶ್ಯಾಳ, ಜೈದೇವ ಮಾರಿಹಾಳ, ಬಸವರಾಜ ಕುಗಟಿ, ಮಂಜುನಾಥ ಭೀಮರಾಣಿ, ಶಂಕರ ಪರವಣ್ಣವರ, ನಿಜಗುಣಿ ಬಂಗಿ, ರಮೇಶ ಸಕ್ರೆನ್ನವರ, ಭೀಮಸಿ ಮುತ್ತೆನ್ನವರ, ರುದ್ರಪ್ಪ ದೇಗಲೊಳ್ಳಿ, ಯಶೋಧಾ ಜವಳಿ, ವಿಜಯಲಕ್ಷ್ಮೀ ಅಕ್ಕಿ, ಮುಖಂಡರಾದ ಬಸವರಾಜ ಹಡಪದ, ಈರಣ್ಣ ಹೈಬತ್ತಿ ಮುಂತಾದವರು ಉಪಸ್ಥಿತರಿದ್ದರು. ಅವಿರೋಧ ಆಯ್ಕೆಯಾಗುತ್ತಿದ್ದಂತೆ ಎಲ್ಲರೂ ಸಿಹಿ ಹಂಚಿ ಸಂಭ್ರಮಿಸಿದರು.



ಬಸವಪ್ರಿಯ ಬಂಡಿಗೆ ಅದ್ದೂರಿ ಸನ್ಮಾನ

◆**ತೆಲಸಂಗ:** ಬಸವಪ್ರಿಯ ಅವರ ಈ 500 ಕಿಲೋಮೀಟರ್ ನಡಿಗೆ ಕೇವಲ ಶ್ರೀಶೈಲದ ದಾರಿಯಲ್ಲ, ಇದು ನಾಳೆಯ ಸಾವಿರಾರು ಯುವತಿಯರ ಯಶಸ್ಸಿನ ಹಾದಿಗೆ ಹಾಕಿಕೊಟ್ಟ ಮುನ್ನುಡಿ ಎಂದು ಹಿರಿಯರಾದ ನಾನಾಗೌಡಾ ಪಾಟೀಲ ಹೇಳಿದರು.

ಗುರುವಾರ ಸಮೀಪದ ಕನ್ನಾಳ ಗ್ರಾಮದಲ್ಲಿ ಮಲ್ಲಯ್ಯಾ ದೇವರ ಐದೇಶಿ ನಿಮಿತ್ತ ನಡೆದ ಮರಗಾಲು ಕಟ್ಟಿಕೊಂಡ 5ನೂರು ಕಿಲೋ ಮೀಟರ್ ಶ್ರೀಶೈಲ ಪಾದಯಾತ್ರೆ ಮುಗಿಸಿಬಂದ ಅಮೀನಗಡದ ಬಸವಪ್ರಿಯ ಬಂಡಿ ಅವರ ಸತ್ಕಾರ ಸಮಾರಂಭದಲ್ಲಿ ಅವರು ಮಾತನಾಡಿ, ಹೆಣ್ಣು ಮಾಯೆಯಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನ ಎಂಬ ವಚನದ ಸಾಲುಗಳಿಗೆ ಬಸವಪ್ರಿಯ ಇಂದು ಅನ್ವರ್ಥವಾಗಿದ್ದಾಳೆ. ಹೆಣ್ಣು ಅಬಲೆಯಲ್ಲ, ಅವಳು ಮನಸ್ಸು ಮಾಡಿದರೆ ಅಸಾಧ್ಯವಾದುದನ್ನು ಸಾಧಿಸಿ ತೋರಿಸಬಲ್ಲ ಸಬಲೆ ಎಂಬುದನ್ನು ಈಕೆ ಜಗತ್ತಿಗೆ ಸಾರಿದ್ದಾಳೆ ಎಂದರು.

ಮೂರನೇ ವರ್ಷ ಮಲ್ಲಿಕಾರ್ಜುನನ ಆಶೀರ್ವಾದದೊಂದಿಗೆ ಮರಗಾಲು ಕಟ್ಟಿ ಸುಮಾರು 500 ಕಿಲೋ ಮೀಟರ್ ಕ್ರಮಿಸಿರುವುದು ಸಾಮಾನ್ಯ ಸಾಧನೆಯಲ್ಲ. ಈ ಹತ್ತು ದಿನಗಳ ಕಠಿಣ ಭಕ್ತಿ ಯಾತ್ರೆಯಲ್ಲಿ ಆಕೆ ತೋರಿದ ಆತ್ಮವಿಶ್ವಾಸ ಮತ್ತು ದೈಹಿಕ ಕಸುವು ಮೆಚ್ಚುವಂತದ್ದು ಎಂದರು.



» ಶ್ರೀಶೈಲ ಪಾದಯಾತ್ರೆಯಲ್ಲಿ ಮರಗಾಲು ಕಟ್ಟಿ ಇತಿಹಾಸ ಸೃಷ್ಟಿಸಿದ ಕುಮಾರಿ

ಬಸವಪ್ರಿಯ ಬಂಡಿ ಮಾತನಾಡಿ, ಶ್ರೀಶೈಲದ ಪಾದಯಾತ್ರೆ ಎಂದರೆ ಅದು ಕೇವಲ ದೈಹಿಕ ನಡಿಗೆಯಲ್ಲ, ಅದು ಅಧ್ಯಾತ್ಮದ ಹಾದಿ. ಈ ವೇದಿಕೆಯ ಮೂಲಕ ನನ್ನ ವಯಸ್ಸಿನ ಯುವತಿಯರಿಗೆ ನಾನು ಹೇಳಬಯಸುವುದಿಷ್ಟೇ: ಹೆಣ್ಣು ಅಬಲೆಯಲ್ಲ, ನಾವು ಕೇವಲ ಅಡುಗೆ ಮನೆ ಅಥವಾ ನಾಲ್ಕು ಗೋಡೆಗಳ ನಡುವೆ ಸೀಮಿತವಾಗಬಾರದು. ದೃಢ ಸಂಕಲ್ಪ ಮತ್ತು ಪರಿಶ್ರಮವಿದ್ದರೆ ನಮಗೆ ಈ ಪ್ರಪಂಚದಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ ಎಂದರು.

ಸಿದ್ದಯ್ಯ ಮಠಪತಿ, ಬಸವಲಿಂಗ ಹಿರೇಮಠ, ಮಲ್ಲಯ್ಯ ಮಠಪತಿ, ನನಗೌಡ ಪಾಟೀಲ, ಸಚಿನ್ ಪಾಟೀಲ, ಶೇಖರ ವಲಸಂಗ, ಅಪ್ಪಾಸಾಬ ನೇಮಗೌಡ, ಅಪ್ಪಾಸಾಬ ಇಸರಗೊಂಡ, ಅಶೋಕ ಮರನೂರ, ನಿರ್ಮಲಾ ಹಿರೇಮಠ, ಸವಿತಾ ಪಾಟೀಲ, ರಾಜಶ್ರೀ ಸತಿಗೌಡರ, ಶ್ರುತಿ ಬಿರಾದಾರ, ಗೀತಾ ಪಾಟೀಲ, ಪ್ರಿಯಾಂಕಾ ಪಾಟೀಲ, ರಾಜು ಪಾಟೀಲ, ರಮೇಶ ಮಾಳಿ, ಅಭಿಷೇಕ ಪತ್ತಾರ, ಶ್ರೀಗಂಗಾ ಪಾಟೀಲ, ಮಾದೇವಿ ಇಸರಗೊಂಡ, ಸುನಂದಾ ಇಸರಗೊಂಡ, ದರೆಪ್ಪ ನೇಮಗೌಡ, ಅಣ್ಣಾಸಾಬ ಅಲಿಬಾದಿ, ಸುಮಿತ್ರಾ ಪಾಟೀಲ, ಲಾಯವ್ವ ನೇಮಗೌಡ, ಕಸ್ತೂರಿ ಇಸರಗೊಂಡ, ಸುನಂದಾ ಚೊಳ್ಳಿ ಮತ್ತು ಜಕ್ಕವ್ವ ಇಸರಗೊಂಡ ಉಪಸ್ಥಿತರಿದ್ದರು.


ಪುತ್ಥಳಿ ನಿರ್ಮಾಣಕ್ಕೆ ದೇಣಿಗೆ ನೀಡಿರುವುದು ಶ್ಲಾಘನೀಯ

◆**ಮೂಡಲಗಿ:** ಡಾಲ್ಮಿಯಾ ಸಿಮೆಂಟ್ ಭಾರತ ಲಿ (ಡಿಸಿಬಿಎಲ್) ಯಾದವಾಡ ಯೂನಿಟ್ ಈ ಭಾಗದ ರೈತರು ಮತ್ತು ಸಾರ್ವಜನಿಕರ ಹಿತಕ್ಕೆ ಅನುಗುಣವಾಗಿ ಸಮಾಜಮುಖಿ ಕೆಲಸದಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯವಾಗಿದೆ. ಯಾದವಾಡ ಮತ್ತು ಕುಲಗೋಡದಲ್ಲಿ ನಿರ್ಮಾಣವಾಗುತ್ತಿರುವ ಬಸವೇಶ್ವರ ಪುತ್ಥಳಿ ಹಾಗೂ ಅಂಬೇಡ್ಕರ್ ಪ್ರತಿಮೆಗೆ ಒಟ್ಟು 26 ಲಕ್ಷ ರೂಪಾಯಿಗಳನ್ನು ದೇಣಿಗೆಯನ್ನಾಗಿ ನೀಡುತ್ತಿರುವುದು ಸಂತಸವನ್ನುಂಟು ಮಾಡಿದೆ ಎಂದು ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ಹರ್ಷ ವ್ಯಕ್ತಪಡಿಸಿದರು.

ಬುಧವಾರ, ಮೂಡಲಗಿ- ಗುರ್ಲಾಪೂರ ಪ್ರವಾಸಿ ಮಂದಿರದಲ್ಲಿ ಯಾದವಾಡ ಮತ್ತು ಕುಲಗೋಡ ಪ್ರಮುಖರ ಸಭೆಯಲ್ಲಿ ಪಾಲ್ಗೊಂಡು ಡಾಲ್ಮಿಯಾ ಕಾರ್ಖಾನೆಯವರು ನೀಡಿರುವ ಒಟ್ಟು 26 ಲಕ್ಷ ರೂಪಾಯಿ ಚೆಕ್ ವಿತರಿಸಿ ಮಾತನಾಡಿದರು,

ಈ ಹಿಂದೆ 1 ಕೋಟಿ ರೂಪಾಯಿ ಹಣವನ್ನು ಯಾದವಾಡ ರಸ್ತೆ ನಿರ್ಮಾಣಕ್ಕೆ ನೀಡಿದೆ. ಕುಡಿಯುವ ನೀರಿನ ವ್ಯವಸ್ಥೆಗಾಗಿ 25 ಲಕ್ಷ ರೂಪಾಯಿ ಧನ ಸಹಾಯ ಮಾಡಿದೆ. ಯಾದವಾಡ ಸರ್ಕಾರಿ ಆಸ್ಪತ್ರೆಯ ನವೀಕೃತ ಕಟ್ಟಡ ಕಾಮಗಾರಿಗೆ 30 ಲಕ್ಷ ರೂಪಾಯಿ ಆರ್ಥಿಕ ನೆರವು ನೀಡಿದೆ. ಈಗ ಯಾದವಾಡ (ಕ್ರಾಸ್) ಸರ್ಕಲ್ ಹತ್ತಿರ ನಿರ್ಮಾಣವಾಗುತ್ತಿರುವ ಜಗಜ್ಯೋತಿ ಬಸವೇಶ್ವರ ಪುತ್ಥಳಿ ನಿರ್ಮಾಣಕ್ಕೆ 16 ಲಕ್ಷ ರೂಪಾಯಿ ನೀಡುತ್ತಿದೆ. ಬಸ್ ನಿಲ್ದಾಣದ ಹತ್ತಿರ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಬಿ.ಆರ್.ಅಂಬೇಡ್ಕರ್ ಮೂರ್ತಿಯ ನಿರ್ಮಾಣಕ್ಕೆ ಕಾರ್ಖಾನೆಯವರು 10 ಲಕ್ಷ ರೂಪಾಯಿ ವೆಚ್ಚವನ್ನು ಭರಿಸುತ್ತಿದ್ದಾರೆ ಎಂದು ತಮ್ಮ ಸಂತಸವನ್ನು ಹಂಚಿಕೊಂಡರು.

ವೇದಿಕೆಯಲ್ಲಿ ಡಾಲ್ಮಿಯಾ ಸಿಮೆಂಟ್ ಕಾರ್ಖಾನೆಯ ಯಾದವಾಡದ ಯೂನಿಟ್ ಮುಖ್ಯಸ್ಥ ಪ್ರಭಾತ್ ಕುಮಾರ ಸಿಂಗ್, ಸಾಂಸ್ಥಿಕ ವಿಭಾಗ ಮುಖ್ಯಸ್ಥ ಉಮೇಶ ದೇಸಾಯಿ, ಹಣಕಾಸು ಮತ್ತು ಲೆಕ್ಕ ವಿಭಾಗದ ಮುಖ್ಯಸ್ಥ ಅರಬಿಂದಕುಮಾರ ಸಿಂಗ್, ಮುಖಂಡರಾದ ಪರ್ವತಗೌಡ ಪಾಟೀಲ, ಅಶೋಕ ನಾಯಿಕ, ಪುಟ್ಟಣ್ಣ ಪೂಜೇರಿ, ಗೋವಿಂದ ಕೊಪ್ಪದ, ಬಸನಗೌಡ ಪಾಟೀಲ, ಸುನೀಲ ನ್ಯಾಮಗೌಡ, ಸುಭಾಸ ಒಂಟಗೋಡಿ, ಬಸವರಾಜ ಹಿಡ್ಕಲ್, ಕಾನೂನು ಸಲಹೆಗಾರ ರಮೇಶ ಮಳಲಿ, ವಿವಿಧ ಸಮುದಾಯಗಳ ಪ್ರಮುಖರು ಉಪಸ್ಥಿತರಿದ್ದರು.



» ಡಾಲ್ಮಿಯಾ ಸಿಮೆಂಟ್ ಭಾರತ ಲಿ (ಡಿಸಿಬಿಎಲ್) ಯಾದವಾಡ ಯೂನಿಟ್‌ನಿಂದ ಬಸವೇಶ್ವರ ಪುತ್ಥಳಿ ಹಾಗೂ ಅಂಬೇಡ್ಕರ್ ಪ್ರತಿಮೆಗೆ ಒಟ್ಟು 26 ಲಕ್ಷ ರೂಪಾಯಿ ನೆರವು.

ಕಿರುಸುದ್ದಿ

ಸುಷ್ಮಿತಾ ಉತ್ತಮ ಸಾಧನೆ



ವಿಜಯಪುರ: ನಗರ ಹೊರ ವಲಯ ತುಂಗಳ ಪಿಯು ಕಾಲೇಜಿನ ವಿದ್ಯಾರ್ಥಿನಿ ದ್ವಿತೀಯ ಪಿಯು ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಉತ್ತಮ ಸಾಧನೆ ತೋರಿದ್ದಾಳೆ. ವಿದ್ಯಾರ್ಥಿನಿ ಸುಷ್ಮಿತಾ ಕೊಪ್ಪಳ 591 (ಶೇ.98.50) ಅಂಕ ಪಡೆದು ವಿಶೇಷ ಸಾಧನೆ ಮಾಡಿದ್ದು, ತುಂಗಳ ಪಿಯು ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರು, ಸಿಬ್ಬಂದಿ ಅಭಿನಂದಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆ



ದೇವರಹಿಪ್ಪರಗಿ: ತಾಲೂಕಿನ ಯಾಳವಾರ ಗ್ರಾಮದ ಸೋಮೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ 2025-26ನೇ ಸಾಲಿನ ಪಿಯುಸಿ ದ್ವಿತೀಯ ವರ್ಷದ ಫಲಿತಾಂಶ ಪ್ರಕಟಗೊಂಡಿದೆ. ಒಟ್ಟು ಕಾಲೇಜಿನ ಫಲಿತಾಂಶ 70% ಸಾವಿತ್ರಿ ಪೂಜಾರಿ 499 ಕಾಲೇಜಿಗೆ ಪ್ರಥಮ, ರೇಖಾ ಹಾದಿಮನಿ ದ್ವಿತೀಯ 496, ನಜೀಮಾ ಕಾಚೂರ 461-ತೃತೀಯ ಹಾಗೂ 7 ವಿದ್ಯಾರ್ಥಿಗಳು ಪ್ರಥಮ ಸ್ಥಾನದಲ್ಲಿ ಪಾಸಾಗಿದ್ದಾರೆ ಕಾಲೇಜಿಗೆ ಕೀರ್ತಿ ತಂದ ಎಲ್ಲಾ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ರಾಜುಗೌಡ ಸಂ ನಾಡಗೌಡ್ರ ಹಾಗೂ ಎಲ್ಲಾ ಉಪನ್ಯಾಸಕರು ಮತ್ತು ಪ್ರಾಚಾರ್ಯರು ಅಭಿನಂದಿಸಿದ್ದಾರೆ.

ಎಸ್.ಕೆ.ಬೆಳ್ಳುಬ್ಬಿ ಕಾಲೇಜು ಫಲಿತಾಂಶ ನೂರರಷ್ಟು



ಕೊಲ್ಹಾರ: ಪಟ್ಟಣದ ವಿಶ್ವ ಭಾರತಿ ವಿದ್ಯಾವರ್ಧಕ ಸಂಘದ ಎಸ್ ಕೆ ಬೆಳ್ಳುಬ್ಬಿ ಪಿಯು ಕಾಲೇಜು ವಿದ್ಯಾರ್ಥಿಗಳು 2025-26 ದ್ವಿತೀಯ ವರ್ಷದ ವಿಜ್ಞಾನ ವಿಭಾಗದಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿದ್ದು ಪಿಸಿಎಂಬಿಯಲ್ಲಿ ಪ್ರಥಮ ಪ್ರತಿಭಾ ಡಂಗಿ 95.83 ದ್ವಿತೀಯ ದಾನಮ್ಮ ಹಿರೇಮಠ 94.83 ತೃತೀಯಸ್ಥಾನದಲ್ಲಿ ಸುಮಿತ್ರಾ ವಂದಾಲ 93.25 ಪಡೆದಿದ್ದಾರೆ. ಶಾಲೆಯ ಒಟ್ಟು 25 ವಿದ್ಯಾರ್ಥಿಗಳಲ್ಲಿ ಡಿಸ್ಟಿಂಗಸೇನಲ್ಲಿ 13 ವಿದ್ಯಾರ್ಥಿಗಳು ಪ್ರಥಮಸ್ಥಾನದಲ್ಲಿ 11 ವಿದ್ಯಾರ್ಥಿಗಳು ಹಾಗೂ ದ್ವಿತೀಯ ಸ್ಥಾನದಲ್ಲಿ 1 ವಿದ್ಯಾರ್ಥಿ ಸಾದನೆಮಾಡಿದ್ದಾರೆ. ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷ ಎಂ.ಎಸ್.ಬೆಳ್ಳುಬ್ಬಿ ಹಾಗೂ ಶಾಲಾ ಆಡಳಿತ ಮಂಡಳಿ ಮತ್ತು ಶಾಲೆಯ ಪ್ರಾಂಶುಪಾಲ ಉಮರ್ ಲಾಟಿ, ಸೇರಿದಂತೆ ಶಿಕ್ಷಕ, ಶಿಕ್ಷಕಿಯರು ಅಭಿನಂದನೆ ಸಲ್ಲಿಸಿದ್ದಾರೆ.

ನುರುಝುತ್ ತಾಳಿಕೋಟೆ ಜಿಲ್ಲೆಗೆ ರ್‍ಯಾಂಕ್



ವಿಜಯಪುರ: ನಗರದ ರೇಡಿಯಂಟ್ ಪಿಯು ಕಾಲೇಜ್ ವಿದ್ಯಾರ್ಥಿನಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ರ್‍ಯಾಂಕ್ ಪಡೆದು ವಿಶೇಷ ಸಾಧನೆ ಮಾಡಿದ್ದಾಳೆ. ವಿದ್ಯಾರ್ಥಿನಿ ನುರುಝುತ್ ಫಾತೀಮಾ ತಾಳಿಕೋಟೆ (596) ಅಂಕಗಳನ್ನು ಪಡೆದು ವಿಶೇಷ ಸಾಧನೆ ತೋರಿದ್ದು, ವಿದ್ಯಾರ್ಥಿನಿ ಸಾಧನೆಗೆ ರೇಡಿಯಂಟ್ ಪಿಯು ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರು, ಸಿಬ್ಬಂದಿ ಅಭಿನಂದಿಸಿದ್ದಾರೆ.

ವಿಜ್ಞಾನ ಕಾಲೇಜಿಗೆ ಉತ್ತಮ ಫಲಿತಾಂಶ



ತಾಳಿಕೋಟೆ: ಜೆ.ಎಸ್.ಜಿ ಫೌಂಡೇಶನ್ ವಿಜ್ಞಾನ ಪ.ಪೂ.ಕಾಲೇಜಿನ ದ್ವಿತೀಯ ಪಿಯುಸಿ ಫಲಿತಾಂಶವು 100% ಆಗಿದೆ. ಪರೀಕ್ಷೆಗೆ ಹಾಜರಾದ 68 ವಿದ್ಯಾರ್ಥಿಗಳಲ್ಲಿ 45 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಹಾಗೂ 23 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. 7 ವಿದ್ಯಾರ್ಥಿಗಳು ಗಣಿತ ವಿಷಯದಲ್ಲಿ 100 ಕ್ಕೆ 100 ಅಂಕಗಳನ್ನು ಹಾಗೂ ಭೌತಶಾಸ್ತ್ರ ವಿಷಯದಲ್ಲಿ ಇಬ್ಬರು ವಿದ್ಯಾರ್ಥಿಗಳು 100 ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಅಧ್ಯಕ್ಷರು, ಕಾರ್ಯದರ್ಶಿಗಳು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.



ಮುದ್ದೇಬಿಹಾಳ: ತಾಲೂಕಿನ ಬೈಲಕೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಗಮವಾಗಿ 10 ವರ್ಷ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಪುಂಡಲೀಕ ವಟವಟಿ ಗುರುಗಳು ಜಂಬಗಿ ಶಾಲೆಗೆ ವರ್ಗಾವಣೆ ಹಿನ್ನೆಲೆಯಲ್ಲಿ ಗ್ರಾಮಸ್ಥರಿಂದ ಸನ್ಮಾನ ಹಾಗೂ ಬೀಳ್ಕೊಡುಗೆ ಸಮಾರಂಭ ನಡೆಯಿತು. ಹಿರಿಯರಾದ ಭೀಮನಗೌಡ ಪಾಟೀಲ, ಪಿಡಿಒ ಎಚ್.ಎಚ್.ಪಾಟೀಲ, ಕೂಡಲೆಪ್ಪ ಪಂಪಣ್ಣವರ, ಜಗದೀಶ ಪಂಪಣ್ಣವರ, ಊರಿನ ಯುವಕರಾದ ಶ್ರೀಧರ ನಾರಗಾಲ, ಮುತ್ತು ಪೂಜಾರಿ, ವಿಠ್ಠಲ ಟಕ್ಕಳಕಿ ಭಾಗವಹಿಸಿದ್ದರು.

ಶರಣರ ವಚನಗಳು ಬದುಕಿಗೆ ಬೆಳಕು: ಐಹೊಳ್ಳಿ

ವಿಜಯಪುರ: 12ನೇ ಶತಮಾನದಲ್ಲಿ ಬಸವಾದಿ ಶರಣರು ತಮ್ಮ ವಚನಗಳ ಮೂಲಕ ಲೌಕಿಕ, ಅಲೌಕಿಕ, ಸತ್ಯ, ನಿಷ್ಠೆಯಿಂದ ನಡೆಯಲು ಸಂದೇಶ ನೀಡಿದ್ದಾರೆ. ಅದರಲ್ಲಿ ಕಾಯಕ, ದಾಸೋಹ ಪೂಜೆಯಾಗಬೇಕು ಎಂದು ಉಪನ್ಯಾಸಕಿ ಶಾರದಾ ಕೊಪ್ಪ ಐಹೊಳ್ಳಿ ಹೇಳಿದರು. ನಗರದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಜಿಲ್ಲಾ ಘಟಕದವರು ವೀರಶೈವ ಸಭಾಭವನದಲ್ಲಿ ನಡೆದ 'ವಚನ ಬಂಡಾಯ ಶಾಂತರಸ ಅವರ ಬದುಕು ಮತ್ತು ಸಾಧನೆ' ವಿಷಯದ ಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಅನುಭವ ಮಂಟಪದ ಅಂಗ ಸಂಸ್ಥೆ ಅದರ ಕಾರ್ಯ ಬಸವಾದಿ ಶರಣರು ರಚಿಸಿದ ವಚನಗಳನ್ನು ವ್ಯವಸ್ಥಿತವಾಗಿ ಜೋಡಿಸಿರುವ ಕಾರ್ಯ ಶಾಂತರಸರದು ಅದರಂತೆ ಶರಣರ ವಚನಗಳನ್ನು ಬರೆದು ಬರೆಸುವ ನಡೆದಂತೆ ನುಡಿಯುವ ಚಿಂತನ-ಮಂಥನ ನಡೆದು ಬಸವಣ್ಣನವರ ಮುದ್ರೆಯೊಂದಿಗೆ ಭಂಡಾರಕ್ಕೆ ಕಳುಹಿಸುವ ಕಾಯಕ ಮಾಡುತ್ತ ವಚನ ಕಟ್ಟುಗಳನ್ನು ವ್ಯವಸ್ಥಿತವಾಗಿ ಸಂರಕ್ಷಿಸುವ ಕಾರ್ಯ ಮಾಡುತ್ತಿದ್ದರು ಎಂದು ಹೇಳಿದರು. ಮಹಾಸಭೆಯ ಕಾರ್ಯದರ್ಶಿ ದೊಡ್ಡಣ್ಣ ಬಜಂತ್ರಿ ಮಾತನಾಡಿ, ಶಾಂತರಸರ ವಚನಗಳಲ್ಲಿ ಸಾಮಾಜಿಕ ಅನಿಷ್ಠ ಪದ್ಧತಿ ವೈಚಾರಿಕ ನೆಲೆ, ಸಮಾಜ ಪರಿವರ್ತನೆಗೆ ಶ್ರೇಷ್ಠ ಮಂತ್ರಗಳಿದ್ದ ಹಾಗೆ ಎಂದರು. ಮಹಾಸಭೆ ಜಿಲ್ಲಾಧ್ಯಕ್ಷ ವಿ.ಸಿ.ನಾಗಠಾಣ ಮಾತನಾಡಿ, ವಚನ ಭಂಡಾರಿ ಶಾಂತರಸರು ರಾಜ ಮನೆತನಕ್ಕೆ ಸೇರಿದವರು ಬಸವಾದಿ ಶರಣರ ಬದುಕಿನ ನುಡಿಗಳು, ನಡೆ, ನುಡಿ, ಚಿಂತನ, ಮಂಥನ ಮಾಡಿ ತಾಡೋಲೆ ತಯಾರಿಸಿ ಸಂರಕ್ಷಿಸಿ ದೊಡ್ಡ ಕಾರ್ಯ ಶಾಂತರಸರು ಮಾಡಿದ್ದಾರೆ. ಹೀಗಾಗಿ ಅವರಿಗೆ ವಚನ ಭಂಡಾರಿ ಎಂದು ಬಸವಣ್ಣನವರು ಕರೆಯುತ್ತಿದ್ದರು ಎಂದರು.



ವಿಜಯಪುರ: ನಗರದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಜಿಲ್ಲಾ ಘಟಕದವರು ವೀರಶೈವ ಸಭಾ ಭವನದಲ್ಲಿ ಏರ್ಪಡಿಸಲಾಗಿದ್ದ 'ವಚನ ಬಂಡಾಯ ಶಾಂತರಸ ಅವರ ಬದುಕು ಮತ್ತು ಸಾಧನೆ' ವಿಷಯದ ಗೋಷ್ಠಿ ನಡೆಯಿತು. ಡಾ.ಸೋಮಶೇಖರ ವಾಲಿ, ಅಪ್ಪಾಸಾಹೇಬ ಕೋರಿ, ಡಾ.ಸಂಗಮೇಶ ಮೇತ್ರಿ, ವಿಠ್ಠಲ ತೇಲಿ, ಸಾಹಿತಿ ಸಂಗಮೇಶ ಬದಾಮಿ, ಮ.ಗು.ಯಾದವಾಡ, ಬಸವರಾಜ ಒಂಟಗೊಡೆ, ನೂತನ ಬ್ಯಾಕೋಡ, ಸುಭಾಸ ಬೆಟಗೇರಿ, ಡಾ.ವಿ.ಡಿ.ಐಹೊಳ್ಳಿ, ಕಾಶೀನಾಥ ಅಣೆಪ್ಪನವರ, ವಿಶ್ರಾಂತ ಎ.ಎಸ್.ಐ.ಪಟ್ಟಣಶೆಟ್ಟಿ, ಈರಣ್ಣ ತೊಂಡಿಕಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಅವಶ್ಯಕ ಮುನ್ನೆಚ್ಚರಿಕಾ ಕ್ರಮ | ಜಿಲ್ಲಾಧಿಕಾರಿ ಡಾ.ಆನಂದ ಕೆ. ಹೇಳಿಕೆ

ಜಿಲ್ಲೆಯಲ್ಲಿ ನೀರಿನ ಸಮಸ್ಯೆಯಿಲ್ಲ

ವಿಜಯಪುರ: ಜಿಲ್ಲೆಯಲ್ಲಿ ವಿಪತ್ತು ನಿರ್ವಹಣೆ ಹಾಗೂ ಕುಡಿಯುವ ನೀರಿಗೆ ಅನುದಾನದ ಕೊರತೆಯಿಲ್ಲ. ಅದರಂತೆ, ಜಿಲ್ಲೆಯ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲ ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸಕ್ತ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉಲ್ಬಣಿಸಬಹುದಾದ 11 ತಾಲೂಕುಗಳ 38 ಗ್ರಾಮ ಪಂಚಾಯಿತಿ ವ್ಯಾಪ್ತಿಯ 65 ಗ್ರಾಮಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ನೀರಿನ ಯಾವುದೇ ಸಮಸ್ಯೆ ಉಂಟಾಗದಂತೆ ಅವಶ್ಯಕ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ಆಲಮಟ್ಟಿ ಜಲಾಶಯದಲ್ಲಿ ಕಳೆದ ವರ್ಷ 29.712 ಟಿಎಂಸಿ ನೀರಿತ್ತು, ಪ್ರಸ್ತುತ 34.895 ಟಿಎಂಸಿ ಅಂದರೆ ಅಂದಾಜು 5.183 ಟಿಎಂಸಿ ನೀರು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿದೆ. ನಾರಾಯಣಪುರ ಜಲಾಶಯದಲ್ಲಿ ಕಳೆದ ವರ್ಷ 19.595 ಟಿಎಂಸಿ, ಪ್ರಸ್ತುತ 21.269 ಟಿಎಂಸಿ ಅಂದರೆ ಅಂದಾಜು 1.674 ಟಿಎಂಸಿ ನೀರು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿದೆ. ಜಿಲ್ಲೆಯ ಬೇಡಿಕೆಯಂತೆ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರು ಇಂಡಿ ತಾಲೂಕಿನ ಜನ- ಜಾನುವಾರುಗಳಿಗೆ ಕುಡಿಯುವ ನೀರಿನ ಸಲುವಾಗಿ ಇಂಡಿ ಶಾಖಾ ಕಾಲುವೆಯಿಂದ 1.00 ಟಿಎಂಸಿ ನೀರನ್ನು ಏ. 11 ರಿಂದ ಏ. 23 ರವರೆಗೆ (12 ದಿನಗಳು) ನಿತ್ಯ ಒಂದು ಸಾವಿರ ಕ್ಯೂಸೆಕ್ ನಂತೆ ಹರಿಸಲು ಆದೇಶಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 160 ಕೆರೆಗಳಿದ್ದು, ಅವುಗಳಲ್ಲಿ 66 ಕೆರೆಗಳು ಶೇ. 30 ರಷ್ಟು, 43 ಕೆರೆಗಳು ಶೇ. 31 ರಿಂದ 50 ರವರೆಗೆ ಹಾಗೂ 51 ಕೆರೆಗಳು ಶೇ. 51 ರಿಂದ 99 ರವರೆಗೆ ಭರ್ತಿಯಾಗಿವೆ. ಜಿಲ್ಲೆಯಲ್ಲಿ 40 ಬಹುಹಳ್ಳಿ ಕುಡಿಯುವ ನೀರಿನ ಯೋಜನೆಗಳಿದ್ದು, ಆಲಮಟ್ಟಿ ಜಲಾಶಯದ ಮೇಲೆ 10, ನಾರಾಯಣಪುರ ಜಲಾಶಯದ ಮೇಲೆ 8, ಭೀಮಾ ನದಿ ಮೂಲಕ 5 ಹಾಗೂ ಕಾಲುವೆ ಮುಖಾಂತರ 17 ಬಹುಹಳ್ಳಿ ಕುಡಿಯುವ ನೀರಿನ ಯೋಜನೆ (ಎಂವಿಎಸ್) ಗಳು ಅವಲಂಬಿತವಾಗಿವೆ ಎಂದರು. ಜನಗಣತಿಯು ದೇಶದ ಜನಸಂಖ್ಯೆಯ ಗಣತಿಯ ಜೊತೆಗೆ, ದೇಶದ ಸಾಮಾಜಿಕ, ಆರ್ಥಿಕ ಸ್ಥಿತಿಗಳು ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ದಾಖಲಿಸುವ ವೈಜ್ಞಾನಿಕ ಪ್ರಕ್ರಿಯೆಯಾಗಿದ್ದು, ಹಾಗಾಗಿ ಜನಗಣತಿ-2027ರ ಮೇಲ್ವಿಚಾರಕರ ಮತ್ತು ಗಣತಿದಾರರಿಗೆ ಹಮ್ಮಿಕೊಳ್ಳಲಾದ ತರಬೇತಿಯನ್ನು ಸರಿಯಾಗಿ ಪಡೆದುಕೊಂಡು, ಗಣತಿ ಕಾರ್ಯಕ್ಕೆ ತೆರಳಿದಾಗ ಸಾರ್ವಜನಿಕರಿಗೆ ಸೂಕ್ತ ತಿಳುವಳಿಕೆ ನೀಡಿ, ಗಣತಿ ಕಾರ್ಯಕ್ಕೆ ಒಳಪಡಿಸುವ ಮೂಲಕ ಜನಗಣತಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಜಿಪಂ ಸಿಇಒ ರಿಷಿ ಆನಂದ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲಾಗುತ್ತಿಲ್ಲ. ಗ್ರಾಮೀಣ ಭಾಗದಲ್ಲಿ ಯಾವುದೇ ನೀರಿನ ಸಮಸ್ಯೆ ಇಲ್ಲ ಎಂದರು.



ಜಿಲ್ಲೆಯ ನಗರ ಪ್ರದೇಶಗಳಿಗೆ ಸರಬರಾಜು ಮಾಡುತ್ತಿರುವ ನೀರಿನ ಮೂಲಗಳಲ್ಲಿ ಪ್ರಸ್ತುತ ಸಾಕಷ್ಟು ನೀರು ಲಭ್ಯವಿದ್ದು, ಹಾಗಾಗಿ ಎಲ್ಲಿಯೂ ನೀರಿನ ಸಮಸ್ಯೆಯಿಲ್ಲ.
■ ಡಾ.ಆನಂದ ಕೆ. ಜಿಲ್ಲಾಧಿಕಾರಿ

ಸಹಾಯವಾಣಿಗೆ ಕರೆ ಮಾಡಿ

ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನಿಗದಿತ ಸಮಯದಲ್ಲಿ ಪರಿಹರಿಸಲು ಜಿಲ್ಲಾ ಪಂಚಾಯತ್ ಕಚೇರಿ, ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಭಾಗದ ಕಚೇರಿ ಮತ್ತು ಜಿಲ್ಲೆಯ ಎಲ್ಲ ತಾಲೂಕು ಪಂಚಾಯಿತಿಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಆರಂಭಿಸಲಾಗಿದೆ ಎಂದು ಜಿಪಂ ಸಿಇಒ ರಿಷಿ ಆನಂದ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಜಿಲ್ಲಾ ಪಂಚಾಯತಿ ಕಚೇರಿಯ ಸಹಾಯವಾಣಿ ಸಂಖ್ಯೆ 08352-277293, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಚೇರಿ 08352-244971 ಸಂಖ್ಯೆಗೆ ಕರೆ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ.

ಭೂಸ್ವಾಧೀನ ರೈತರಿಗೆ ಪರಿಹಾರ ನೀಡಿ

ಆಲಮಟ್ಟಿ: ಚಿಮ್ಮಲಗಿ ಏತ ನೀರಾವರಿಯ ಪೂರ್ವ ಕಾಲುವೆಗೆ ತಾಳಿಕೋಟೆ ತಾಲೂಕಿನ ಮುಕಿಹಾಳ ಗ್ರಾಮದ ರೈತರ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿದ್ದು ಹಲವಾರು ವರ್ಷಗಳು ಗತಿಸಿದರು ಇನ್ನು ರೈತರಿಗೆ ಬಿಡಿಗಾಸು ಪರಿಹಾರ ಬಂದಿಲ್ಲ ಶೀಘ್ರದಲ್ಲಿ ಪರಿಹಾರ ಹಣ ಒದಗಿಸಬೇಕೆಂದು ಆಗ್ರಹಿಸಿ ಇಲ್ಲಿನ ವಿಶೇಷ ಭೂಸ್ವಾಧೀನ ಅಧಿಕಾರಿ ಎಂ.ಬಿನಾಗಠಾಣ ಅವರಿಗೆ ಅಖಂಡ ಕರ್ನಾಟಕ ರೈತ ಸಂಘದ ವತಿಯಿಂದ ಮುಕಿಹಾಳ ರೈತರೊಂದಿಗೆ ಗುರುವಾರ ಮನವಿ ಸಲ್ಲಿಸಲಾಯಿತು.

ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ಕೃಷ್ಣಾ ಮೇಲ್ದಂಡೆ ಯೋಜನೆ ಲಾಲ ಬಹದ್ದೂರ್ ಶಾಸ್ತ್ರೀ ಜಲಾಶಯ ವ್ಯಾಪ್ತಿಗೆ ಬರುವ ಚಿಮ್ಮಲಗಿ ಪೂರ್ವ ಕಾಲುವೆಗೆ ಭೂಮಿ ಕಳೆದಕೊಂಡ ರೈತರಿಗೆ ಶೀಘ್ರದಲ್ಲಿ ಪರಿಹಾರ ಹಣ ಕೊಡಬೇಕು ಈ ಜಮೀನುಗಳು ಹೆಚ್ಚುವರಿಯಾಗಿ ಸ್ವಾಧಿನಪಡಿಸಿಕೊಳ್ಳಲಾಗಿದೆ. ಇರುವ ಅಲ್ಪ ಸ್ವಲ್ಪ ಜಮೀನಿನಲ್ಲಿ ಕಾಲುವೆಗೆ ಸ್ವಾಧೀನಪಡಿಸಿಕೊಂಡಾಗ ಭೂಮಿಗೆ ಪರಿಹಾರ ಕೊಡದಿದ್ದರೆ. ರೈತರು ಬದುಕುವದಾದರು ಹೇಗೆ ಎಂದು ಕಾರವಾಗಿ ಪ್ರಶ್ನಿಸಿದರು ಕೂಡಲೆ ಪರಿಹಾರ ನೀಡಲು ಕ್ರಮಕೈಗೊಳ್ಳಬೇಕು ಇಲ್ಲದಿದ್ದರೆ. ಆಲಮಟ್ಟಿ ಎಸ್‌ಎಲ್‌ಒ ಕಛೇರಿ ಮುಂದೆ ಮೂಕಿಹಾಳ ರೈತರು ಸೇರಿದಂತೆ ಇನ್ನೂಳಿದ ಏತ ನೀರಾವರಿ ವ್ಯಾಪ್ತಿಗೆ ಬರುವ ಕಾಲುವೆಗಳಿಗೆ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಪರಿಹಾರ ನೀಡಲು ವಿಳಂಬ ಮಾಡಿದರೆ ಧರಣಿ ಹಮ್ಮಿಕೊಳಬೇಕುಗುತ್ತದೆಂದು ಅರವಿಂದ ಕುಲಕರ್ಣಿ ಎಚ್ಚರಿಸಿದ್ದಾರೆ.

ಪರಿಹಾರಕ್ಕಾಗಿ ಸೂಕ್ತ ದಾಖಲೆಗಳನ್ನು ರೈತರಿಂದ ಸಂಗ್ರಹಿಸಿ ಮುಂದಿನ ಪರಿಹಾರಕ್ಕಾಗಿ ದಾಖಲೆಗಳನ್ನು ರವಾನಿಸಲು ಏ.12ರಂದು ಮೂಕಿಹಾಳ ಗ್ರಾಮದಲ್ಲಿ ರೈತರ ಸಭೆ ಸೇರಿಸಿ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವದೆಂದು ಎಸ್‌ಎಲ್‌ಒ ರೈತರಿಗೆ ಭರವಸೆ ನೀಡಿದರು. ಸಿದ್ದನಗೌಡ ಇಸ್ಲಾಂಪೂರ, ಪರಮಣ್ಣ ಹೊಕ್ರಾಣಿ, ಮೈಬೂಬ ಪಟೇಲ ಬೇವಿನ ಗಿಡಾ, ಅಮೀನ ಪಟೇಲ ಬಿರಾದಾರ, ಜಾಕೀರ ಮಕಾಶಿ, ಸಾಹೇಬ ಪಟೇಲ ಮಕಾಶಿ, ಕಾಶಿಂ ಪಟೇಲ ಪಾಟೀಲ, ಸಿವಪ್ಪ ಚಿಗರಿ, ಎಮುನಪ್ಪ ಚಿಗರಿ, ಯಲ್ಲಪ್ಪ ಚಿಗರಿ, ಶಿವಪ್ಪ ಶಿವಣಗಿ, ಸೋಮಪ್ಪ ಚಿಗರಿ ಇದ್ದರು.




ಕನ್ನಡದ ಜೊತೆ ಇಂಗ್ಲಿಷ್ ಕಲಿಕೆ ಅಗತ್ಯ

ಇಂಡಿ: ಸರ್ಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿಸಿ ಮಕ್ಕಳಲ್ಲಿ ಜಾಗತಿಕ ಸ್ಪರ್ಧಾತ್ಮಕತೆ ಒದಗಿಸಲು ಕನ್ನಡದೊಂದಿಗೆ ಇಂಗ್ಲಿಷ್ ದ್ವಿಭಾಷಾ ಮಾಧ್ಯಮ ಕಲಿಕೆ ಅತ್ಯಗತ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸೈಯಿದಾ ಅನ್ನಿಸ್ ಮುಜಾವರ ಹೇಳಿದರು.

ನಗರದ ಆದರ್ಶ ವಿದ್ಯಾಲಯದಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವಿಜಯಪುರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಇಂಡಿ ಇವರ ಸಹಯೋಗದಲ್ಲಿ ಜರುಗಿದ 1-5 ನೇ ವರ್ಗದ ಶಿಕ್ಷಕರ ದ್ವಿಭಾಷಾ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. 2026-27ನೇ ಸಾಲಿನಲ್ಲಿ, 1-5ನೇ ತರಗತಿ ಸರ್ಕಾರಿ ಶಾಲಾ ಮಕ್ಕಳಿಗೆ ಕನ್ನಡದ ಜತೆಗೆ ಇಂಗ್ಲಿಷ್ ಕಲಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ಈ ದ್ವಿಭಾಷಾ ಮಾಧ್ಯಮವನ್ನು ಶಿಕ್ಷಕರು ಪರಿಣಾಮಕಾರಿಯನ್ನಾಗಿಸಬೇಕು ಎಂದರು.

ಡಯಟ್ ಉಪನ್ಯಾಸಕ ಶಿವಚಂದ್ರ ಕಣ್ಣಳ್ಳಿ ಮಾತನಾಡಿ, ನಮ್ಮ ಜಿಲ್ಲೆಯಲ್ಲಿ 4967 ಶಿಕ್ಷಕರಿಗೆ ಈ ದ್ವಿಭಾಷಾ ಮಾಧ್ಯಮ ತರಬೇತಿ ನೀಡಲಾಗುತ್ತಿದೆ. ಸರಕಾರಿ ಶಾಲೆಗಳ ದಾಖಲಾತಿ ಹೆಚ್ಚಳ ಮಾಡಿ, ಬಲವರ್ಧನೆಗಾಗಿ ದ್ವಿಭಾಷಾ ಮಾಧ್ಯಮ ಅಗತ್ಯ. ಈ ಪದ್ಧತಿಯ ಯಶಸ್ಸಿಗೆ ಶಿಕ್ಷಕರಲ್ಲಿ ಇಚ್ಛಾಶಕ್ತಿ ಅವಶ್ಯ ಎಂದು ಹೇಳಿದರು.

ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಆರ್.ನಡುಗಡ್ಡಿ ಮಾತನಾಡಿ, ಈ ದ್ವಿಭಾಷಾ ಮಾಧ್ಯಮವು ವಿಷಯದ ಪರಿಕಲ್ಪನೆಗಳನ್ನು ಮಾತೃ ಭಾಷೆಯಲ್ಲಿ ಅರ್ಥಮಾಡಿಕೊಂಡು, ಅದನ್ನು ಇಂಗ್ಲಿಷ್ನಲ್ಲಿ ಅಭಿವ್ಯಕ್ತಗೊಳಿಸುವುದರಿಂದ ಕಲಿಕೆ ಪರಿಣಾಮಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರು ಪರಿಣಾಮಕಾರಿ ಅನುಷ್ಠಾನಕ್ಕೆ ಮುಂದಾಗಬೇಕು ಎಂದರು. ತರಬೇತಿ ನೋಡಲ್ ಅಧಿಕಾರಿ ಅಶೋಕ ರಾಠೋಡ ಮಾತನಾಡಿದರು. ಬಿಆರ್‌ಪಿಗಳಾದ ಆಂಜನೇಯ ಸ್ವಾಮಿ ಹೊಸಮನಿ, ರಂಗರಾವ ಕುಲಕರ್ಣಿ, ಮುಖ್ಯೋಪಾಧ್ಯಾಯ ಬನಸೋಡೆ, ಸಂತೋಷ ಬಂಡೆ, ದಾದಾ ಶ್ಯಾಮನವರ, ಎಸ್.ಎ.ಮೊಮಿನ್, ಆರ್.ಎಸ್.ಸುರಗಿಹಳ್ಳಿ, ಜಟ್ಟೆಪ್ಪ ಮಾಡಗಿ, ಶಿವಾನಂದ ಡಬ್ಬಗಾರ, ಎಚ್.ಆರ್.ಪೂಜಾರಿ, ರಾಹುಲ ಭೀಮನಗರ, ಶಿವಲೀಲಾ ಹತ್ತಿ, ಸಂಜೀವ ಗುಡಿಮನಿ, ಕಂಪರಾಜು ಇದ್ದರು.



ಪದ್ಮರಾಜ ಮಹಿಳಾ ಪಪೂ ಕಾಲೇಜು ವಿದ್ಯಾರ್ಥಿನಿಯರ ಸಾಧನೆ

ಸಿಂದಗಿ: ನಗರದ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆಯ ಅಂಗ ಸಂಸ್ಥೆಯಾದ ಪದ್ಮರಾಜ ಮಹಿಳಾ ಸ್ವತಂತ್ರ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪಪೂ ಮಹಾವಿದ್ಯಾಲಯದ 2025-2026ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-1ರ ಫಲಿತಾಂಶ ಕಲಾ ವಿಭಾಗದಿಂದ ಪರೀಕ್ಷೆಗೆ ಹಾಜರಾದ ಒಟ್ಟು 108 ಜನ ವಿದ್ಯಾರ್ಥಿನಿಯರಲ್ಲಿ 37 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿ, 60 ವಿದ್ಯಾರ್ಥಿನಿಯರು ಪ್ರಥಮ ಶ್ರೇಣಿ, 04 ವಿದ್ಯಾರ್ಥಿನಿಯರು ದ್ವಿತೀಯ ಶ್ರೇಣಿಯಲ್ಲಿ, ವಾಣಿಜ್ಯ ವಿಭಾಗದಿಂದ ಪರೀಕ್ಷೆಗೆ ಹಾಜರಾದ ಒಟ್ಟು 21 ವಿದ್ಯಾರ್ಥಿನಿಯರಲ್ಲಿ 09 ಅತ್ಯುನ್ನತ ಶ್ರೇಣಿ, 11 ವಿದ್ಯಾರ್ಥಿನಿಯರು ಪ್ರಥಮ ಶ್ರೇಣಿ, ವಿಜ್ಞಾನ ಭಾಗದಿಂದ ಪರೀಕ್ಷೆಗೆ ಹಾಜರಾದ 26 ವಿದ್ಯಾರ್ಥಿನಿಯರಲ್ಲಿ 06 ಅತ್ಯುನ್ನತ ಶ್ರೇಣಿ, 19 ಪ್ರಥಮ ಶ್ರೇಣಿ, ಒಬ್ಬ ವಿದ್ಯಾರ್ಥಿನಿ ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕಲಾ ವಿಭಾಗ: ಮಾಯಮ್ಮ ಮಲಕಪ್ಪ 600 ಅಂಕಗಳಿಗೆ 589 (ಶೇ.98.16) ಪಡೆದು ಕಾಲೇಜಿಗೆ ಪ್ರಥಮ ಸ್ಥಾನ, ರಕ್ಷಿತಾ ತಳವಾರ 587 (ಶೇ.97.83) ದ್ವಿತೀಯ ಸ್ಥಾನ, ಸಾವಿತ್ರಿ ಕುಂಬಾರ 586 (ಶೇ.97.66) ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗ: ರಕ್ಷಿತಾ ನೀಲಕಂಠ 600 ಅಂಕಗಳಿಗೆ 567 (ಶೇ.94.5) ಪ್ರಥಮ ಸ್ಥಾನ, ಶ್ರೀ ಕಲಬುರಗಿ 566 (ಶೇ.94.33) ದ್ವಿತೀಯ ಸ್ಥಾನ, ಕುಮಸಗಿ 556 (ಶೇ.92.66) ತೃತೀಯ ಸ್ಥಾನ ಪಡೆದಿದ್ದಾರೆ.



ವಿಜ್ಞಾನ ವಿಭಾಗ: ಶರಣಮ್ಮ 600 ಅಂಕಗಳಿಗೆ 560 (ಶೇ.93.33) ಪ್ರಥಮ ಸ್ಥಾನ, ತೇಜಸ್ವಿನಿ ಪಾಟೀಲ 532 (ಶೇ.88.66) ಭೂಮಿಕಾ ಬಿರಾದಾರ 524 (ಶೇ.87.33) ಪಡೆದಿದ್ದಾರೆ.

ಕನ್ನಡ ವಿಷಯದಲ್ಲಿ 02 ವಿದ್ಯಾರ್ಥಿನಿಯರು, ಭೂಗೋಳಶಾಸ್ತ್ರ ವಿಷಯದಲ್ಲಿ 09 ವಿದ್ಯಾರ್ಥಿನಿಯರು, ಶಿಕ್ಷಣಶಾಸ್ತ್ರ ವಿಷಯದಲ್ಲಿ 04 ವಿದ್ಯಾರ್ಥಿನಿಯರು, ಇತಿಹಾಸ ವಿಷಯದಲ್ಲಿ ಒಬ್ಬರು ವಿದ್ಯಾರ್ಥಿನಿ, 100ಕ್ಕೆ 100ರಷ್ಟು ಅಂಕಗಳನ್ನು ಪಡೆದಿರುತ್ತಾರೆ. ಕಾಲೇಜಿನ ಒಟ್ಟು ಫಲಿತಾಂಶ 98.68% ರಷ್ಟಾಗಿರುತ್ತದೆ. ವಿದ್ಯಾರ್ಥಿನಿಯರ ಈ ಸಾಧನೆಗೆ ಸಂಸ್ಥೆಯ ಚೇರಮನ್ನ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು, ಉತ್ತಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು, ಆಡಳಿತ ಮಂಡಳಿಯ ಸದಸ್ಯರು, ಪ್ರಾಚಾರ್ಯ ವಿ.ಡಿ.ಪಾಟೀಲ, ಸಿಬ್ಬಂದಿ ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ಎಲೈಟ್ ವಿಜ್ಞಾನ ಪಪೂ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಸಾಧನೆ



ಸಿಂದಗಿ: ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಿಂದಗಿ ಪಟ್ಟಣದ ಕಲಕೇರಿ ಬೈಪಾಸ್ ಹತ್ತಿರವಿರುವ ಎಲೈಟ್ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಒಟ್ಟು 257 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ.

ಅದರಲ್ಲಿ 18 ವಿದ್ಯಾರ್ಥಿಗಳು ಶೇ.95ರಷ್ಟು ಅಂಕ ಪಡೆದು ಅತ್ಯುನ್ನತ ಶ್ರೇಣಿ, 72 ವಿದ್ಯಾರ್ಥಿಗಳು ಶೇ.90 ಉನ್ನತ ಶ್ರೇಣಿ ಹಾಗೂ 129 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 38 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಪಾಸಾಗುವ ಮೂಲಕ ಒಟ್ಟಾರೆ ಕಾಲೇಜಿನ ಫಲಿತಾಂಶ 100ಕ್ಕೆ 100ರಷ್ಟು ಮಾಡುವ ಮೂಲಕ ಅತ್ಯುತ್ತಮ ಸಾಧನೆಯನ್ನು ಮಾಡಿ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ವಿಜ್ಞಾನ ವಿಭಾಗ: ಶ್ರುತಿ ಸಜ್ಜನ 600 ಅಂಕಗಳಿಗೆ 580 (ಶೇ.96.83) ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಶ್ವೇತಾ ಫತ್ತರಗಿ 579 (ಶೇ.96.5) ಅಂಕ ಪಡೆದು ದ್ವಿತೀಯ ಸ್ಥಾನ, ಭಾಗ್ಯಶ್ರೀ ದೊಡಮನಿ ಹಾಗೂ ಶ್ರೀಶೈಲ ಮರಡಿ ವಿದ್ಯಾರ್ಥಿಗಳು 578 (ಶೇ.96.33%) ಅಂಕ ಪಡೆದು ತೃತೀಯ ಸ್ಥಾನ, ಕಾವೇರಿ ಕೊರಬು ಮತ್ತು ಸಿದ್ದು ದಿಡ್ಡಿಮನಿ ವಿದ್ಯಾರ್ಥಿಗಳು 577 (ಶೇ.96.17) ಅಂಕಗಳನ್ನು ಪಡೆದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ವಿದ್ಯಾರ್ಥಿನಿಗಳ ಈ ಸಾಧನೆಗೆ ಸಂಸ್ಥೆಯ ವ್ಯವಸ್ಥಾಪಕ ಅಧ್ಯಕ್ಷ ಮಹಿಬೂಬ ಅಸಂತಾಪುರ, ಆಡಳಿತ ಮಂಡಳಿಯ ಸದಸ್ಯರು, ಪ್ರಾಚಾರ್ಯ ಇಜಾಜ ಜುಮನಾಳ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರು ಅಭಿನಂದನೆ ಸಲ್ಲಿಸಿದ್ದಾರೆ.

ಅಭ್ಯುದಯ ಪಿಯು ಕಾಲೇಜು ಅತ್ಯುತ್ತಮ ಸಾಧನೆ



ಮುದ್ದೇಬಿಹಾಳ: ನಗರದ ಅಹಿಲ್ಯಬಾಯಿ ಹೋಳ್ಕರ್ ಸಂಸ್ಥೆಯ ಅಭ್ಯುದಯ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಸಕ್ತ ವರ್ಷದ ಪಿಯುಸಿ ಪರೀಕ್ಷಾ ಫಲಿತಾಂಶ ಉತ್ತಮವಾಗಿದ್ದು, ವಿದ್ಯಾರ್ಥಿನಿ ಆಸಿಫ ಖಾಸಿಂ ಖತೀಬ್ ಕೆ 588 (98%) ಲಕ್ಷ್ಮಿ ಉಂಡಿ 586 (99%) ಅಂಕಗಳೊಂದಿಗೆ ಪಾಸಾಗಿದ್ದಾರೆ, ಉಳಿದಂತೆ ಒಟ್ಟು ಹನ್ನೊಂದು ಜನ ವಿದ್ಯಾರ್ಥಿಗಳು 95% ಅಂಕಗಳೊಂದಿಗೆ ಉತ್ತಮ ಫಲಿತಾಂಶ ಬಂದಿದೆ.

ಒಟ್ಟು 229 ವಿದ್ಯಾರ್ಥಿಗಳಲ್ಲಿ ಸಂಪೂರ್ಣ ಫಲಿತಾಂಶ ಲಭ್ಯವಾಗಿದ್ದು, 142 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ (70%) ಅಂಕಗಳೊಂದಿಗೆ ಪಾಸಾಗಿದ್ದಾರೆ. 76 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ ಉಳಿದ 11 ವಿದ್ಯಾರ್ಥಿಗಳು ದ್ವಿತೀಯ ದರ್ಜೆ ಪಾಸ್ ಆಗಿದ್ದಾರೆ. ಇದರಲ್ಲಿ ಗಣಿತದಲ್ಲಿ 54 ವಿದ್ಯಾರ್ಥಿಗಳು, ಜೀವಶಾಸ್ತ್ರ 48 ವಿದ್ಯಾರ್ಥಿಗಳು, ಭೌತಶಾಸ್ತ್ರ 32 ವಿದ್ಯಾರ್ಥಿಗಳು ಹಾಗೂ ಗಣಿತಶಾಸ್ತ್ರದಲ್ಲಿ ಆರು ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕಗಳನ್ನು ಪಡೆದು ಪಾಸಾಗಿದ್ದಾರೆ.

ಕಾಲೇಜಿನಲ್ಲಿ ಬಡ ಹಿಂದುಳಿದ ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಕರನ್ನು ನೇಮಕ ಮಾಡಿ ಫಲಿತಾಂಶವನ್ನು ಸುಧಾರಿಸಲಾಗಿದೆ ಎಂದು ತಿಳಿಸಿರುವ ಸಂಸ್ಥೆಯ ಆಡಳಿತಾಧಿಕಾರಿ ಕಿರಣ್ ಮದರಿ ಉತ್ತಮ ಸೌಕರ್ಯಗಳೊಂದಿಗೆ ಹೆಚ್ಚಿನ ಫಲಿತಾಂಶ ಪಡೆಯುವುದು ಒಂದು ಕಡೆಯಾದರೆ ಈ ಹಿಂದುಳಿದವರ್ಗದ ವಿದ್ಯಾರ್ಥಿಗಳ ಫಲಿತಾಂಶವನ್ನು ಹೆಚ್ಚಿಸಿರುವುದು ತಮಗೆ ಸಂತಸ ತಂದಿದೆ ಎಂದು ತಿಳಿಸಿದ್ದಾರೆ. ಸಂಸ್ಥೆಯ ಕಾರ್ಯದರ್ಶಿ, ಮಲ್ಲಿಕಾರ್ಜುನ್ ಮದರಿ, ಬಿ, ಜಿ ಬಿರಾದಾರ್, ಮಧುಚಂದ್ರ ದನ್ನೂರು ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚಿಗೆ ವ್ಯಕ್ತಪಡಿಸಿದ್ದಾರೆ.

ಆನ್‌ಲೈನ್ ಶಿಕ್ಷಣದತ್ತ ಗಮನಹರಿಸಿ

ಚಡಚಣ: ವಿಜಯಪುರ ಜಿಲ್ಲೆಯ ಚಡಚಣದಲ್ಲಿರುವ ಸಂಗಮೇಶ್ವರ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ತರಗತಿಯ ಆಚೆಗೆ ಮುಕ್ತ ಕೋರ್ಸ್‌ಗಳು ಕುರಿತು ಒಂದು ದಿನದ ಕಾರ್ಯಾಗಾರ ಯಶಸ್ವಿಯಾಗಿ ನಡೆಯಿತು. ಹಿರಿಯ ಗ್ರಂಥಪಾಲಕರು, ಬಿಎಲ್‌ಡಿಇ ಡಿಮ್ಡ್ ವಿಶ್ವವಿದ್ಯಾಲಯ, ಸಹಾಯಕ ಪ್ರಾಧ್ಯಾಪಕ ಡಾ.ಮಂಜುಳಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಎಂಒಒಸಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಆನ್‌ಲೈನ್ ಪ್ರಮಾಣಪತ್ರ ಕೋರ್ಸ ಹಾಗೂ ಕೌಶಲ್ಯ ಆಧಾರಿತ ಕಾರ್ಯಕ್ರಮಗಳ ಮಹತ್ವ ವಿವರಿಸಿದರು. ಡಾ.ಎಸ್.ಎಸ್.ಚೋರಗಿ ಮಾತನಾಡಿ, ಮುಕ್ತ ಕೋರ್ಸಗಳ ಸುಲಭ ಲಭ್ಯತೆ ಹಾಗೂ ಜಾಗತಿಕ ಮಾನ್ಯತೆ ಕುರಿತು ವಿವರಿಸಿ, ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಇಂತಹ ಅವಕಾಶ ಬಳಸಿಕೊಳ್ಳಬೇಕು ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಡಾ.ಎಸ್.ಬಿ.ರಾಥೋಡ ಮಾತನಾಡಿ, ವಿದ್ಯಾರ್ಥಿಗಳು ಪಠ್ಯಕ್ರಮದಾಚೆಗೆ ಕಲಿಕೆ ವಿಸ್ತರಿಸಿಕೊಳ್ಳಬೇಕೆಂದರು. ಸಂಘಟನಾ ಕಾರ್ಯದರ್ಶಿ ಮಹಾಂತೇಶ ಬಿರಾದಾರ, ಪ್ರೊ.ಸಂಜಯ್ ಕುಮಾರ್ ಅವಟಿ, ಐಕ್ಯೂಎಸಿ ಸಂಯೋಜಕ ಡಾ.ಎಸ್.ಎಸ್.ದೇಸಾಯಿ, ಪ್ರೊ.ಬಸವರಾಜ ಯಲ್ಲೂರ ಇದ್ದರು.



ಆರ್.ಡಿ.ಪಾಟೀಲ ಕಾಲೇಜಿಗೆ ಉತ್ತಮ ಫಲಿತಾಂಶ



ಸಿಂದಗಿ: ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಪಟ್ಟಣದ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆಯ ಆರ್.ಡಿ.ಪಾಟೀಲ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಕಲಾ ವಿಭಾಗ: ಕಾಲೇಜಿಗೆ ಪ್ರಥಮ ಸ್ಥಾನ ಪಡೆದ ಕಲಾ ವಿಭಾಗದಲ್ಲಿ ಕುಮಾರ ಗಣೇಶ ಬಿರಾದಾರ 588 (98%) ಪ್ರಥಮಸ್ಥಾನ ಮತ್ತು ವಿಷಯಗಳಾದ ಅಲ್ಲದೇ ಇತಿಹಾಸ, ರಾಜ್ಯಶಾಸ್ತ್ರ ಶಿಕ್ಷಣಶಾಸ್ತ್ರದಲ್ಲಿ 100ಕ್ಕೆ 100 ಅಂಕಗಳನ್ನು ಪಡೆದುಕೊಂಡಿದ್ದಾನೆ. ಕುಮಾರ ನಾಗರಾಜ 579 (96.5%), ದ್ವಿತೀಯಸ್ಥಾನ, ಕುಮಾರ ಶಿವಾನಂದ ಬ. ಬಜಂತ್ರಿ 574 (95.66%) ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಅತ್ಯುನ್ನತ ಶ್ರೇಣಿಯಲ್ಲಿ ಪಾಸಾದ ಒಟ್ಟು ಕಲಾ ವಿಭಾಗದಲ್ಲಿ 73 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ವಾಣಿಜ್ಯ ವಿಭಾಗ: ಅತ್ಯುನ್ನತ ಶ್ರೇಣಿಯಲ್ಲಿ ಪಾಸಾದ ಕುಮಾರಿ ಸುಪ್ರೀತಾ ಎ. ಮಾವೂರ 576 (96%), ಕುಮಾರ ಸಮರ್ಥ ಬ. ಜಂಬಗಿ 575 (95.83%), ಕುಮಾರ ಭೀಮಾಶಂಕರ ಬೋವರ್ 573 (95.5%) ಲೆಕ್ಕಶಾಸ್ತ್ರ ವಿಷಯದಲ್ಲಿ 100ಕ್ಕೆ 100 ಪಡೆದುಕೊಂಡಿದ್ದಾನೆ. ಸೇರಿದಂತೆ ವಾಣಿಜ್ಯ ವಿಭಾಗದಲ್ಲಿ 37 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ವಿಜ್ಞಾನ ವಿಭಾಗ: ಅತ್ಯುನ್ನತ ಶ್ರೇಣಿಯಲ್ಲಿ ಪಾಸಾದ ಲಕ್ಷ್ಮೀ ಉಮದಿ 564 94 %, ಸವಿತಾ ಹಿರೇಮಠ 545 (90.83%), ಸಂಜನಾ ಹೊಸಮನಿ 542 (90.33%) ಒಟ್ಟು ವಿಜ್ಞಾನ ವಿಭಾಗದಲ್ಲಿ 27 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ.



ಕಲಾ, ವಾಣಿಜ್ಯ, ವಿಜ್ಞಾನ ಸೇರಿದಂತೆ ಒಟ್ಟು 137 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಪಾಸಾಗಿ ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ. ಕಲಾ ವಿಭಾಗದಲ್ಲಿ 390 ವಿದ್ಯಾರ್ಥಿಗಳು ಹಾಜರಾಗಿದ್ದು ಅದರಲ್ಲಿ 363 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದಾರೆ ಪ್ರತಿಶತ 93.08%, ವಾಣಿಜ್ಯ ವಿಭಾಗದಲ್ಲಿ 125 ವಿದ್ಯಾರ್ಥಿಗಳು ಹಾಜರಾಗಿದ್ದು ಅದರಲ್ಲಿ 121 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದಾರೆ ಪ್ರತಿಶತ 96.08%, ವಿಜ್ಞಾನ ವಿಭಾಗದಲ್ಲಿ 283 ವಿದ್ಯಾರ್ಥಿಗಳು ಹಾಜರಾಗಿದ್ದು ಅದರಲ್ಲಿ 268 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದಾರೆ ಪ್ರತಿಶತ ಶೇ..94.7 ರಷ್ಟಾಗಿದೆ.

ಒಟ್ಟಾರೆ ಮಹಾವಿದ್ಯಾಲಯದಲ್ಲಿ 809 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಇದರಲ್ಲಿ 752 ವಿದ್ಯಾರ್ಥಿಗಳು ಪಾಸಾಗಿದ್ದು ಮಹಾವಿದ್ಯಾಲಯದ ಪರೀಕ್ಷೆ ಪರಿಣಾಮ ಶೇಕಡಾ 92.95 % ರಷ್ಟಾಗಿದೆ. ಇದರಲ್ಲಿ 137 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಮತ್ತು 493 ಪ್ರಥಮ, 108 ದ್ವಿತೀಯ, 14 ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ.

ಇವರ ಸಾಧನೆಗೆ ಸಂಸ್ಥೆಯ ಚೇರಮನ್ನರಾದ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು, ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು, ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಹಾಗೂ ಪ್ರಾಚಾರ್ಯ ಭೀಮನಗೌಡ ಸಿಂಗನಳ್ಳಿ ಸೇರಿದಂತೆ ಸಿಬ್ಬಂದಿ ಅಭಿನಂದಿಸಿದ್ದಾರೆ.

ಕಿರುಸುದ್ದಿ

ವಾರ್ಷಿಕ ಪ್ರಶಸ್ತಿಗೆ ಭಾಜನ

ಮಹಾಲಿಂಗಪುರ: ಕರ್ನಾಟಕ ಕಾರ್ಯನಿರತ ಪತ್ರಕರ್ತ ಸಂಘದಿಂದ ನೀಡುವ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಪಟ್ಟಣದ ಪತ್ರಕರ್ತ ಮಹೇಶ ಮನ್ನಯ್ಯನವರಮಠ ಭಾಜನರಾಗಿದ್ದಾರೆ. ಅತ್ಯುತ್ತಮ ಸ್ಕೂಪ್ ವರದಿಗಾಗಿ ನೀಡುವ ಬಿ.ಎಸ್.ವೆಂಕಟರಾಂ ಪ್ರಶಸ್ತಿಗೆ ಮಹೇಶ ಆಯ್ಕೆಯಾಗಿದ್ದಾರೆ. ಬೀದರನಲ್ಲಿ ಏ.12ರಂದು ನಡೆಯುವ ಸಂಘದ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.



ಚಿಕ್ಕಾಲಗುಂಡಿ ಕಾಲೇಜಿಗೆ ಸಮೀರ ದಂಡಿನ ಪ್ರಥಮ

ಬೀಳಗಿ: ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು 2025–26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ 29 ವಿದ್ಯಾರ್ಥಿಗಳಲ್ಲಿ 27 ಪಾಸಾಗುವ ಮೂಲಕ ಕಾಲೇಜಿನ ಒಟ್ಟು ಫಲಿತಾಂಶ ಶೇ 93.10ರಷ್ಟಾಗಿದೆ ಎಂದು ಪ್ರಾಚಾರ್ಯ ಡಾ.ಎಸ್.ಕೆ.ಬಂಗಾರಿ ತಿಳಿಸಿದ್ದಾರೆ. ಕಾಲೇಜಿಗೆ ಮತ್ತು ವಾಣಿಜ್ಯ ವಿಭಾಗದಿಂದ ಸಮೀರ ದಂಡಿನ 548 (ಶೇ.91.33) ಅಂಕಗಳನ್ನು ಪಡೆದು ಪ್ರಥಮ ಸ್ಥಾನ, ಗಂಗಾ ಹೋಳಿ 546 (ಶೇ.91) ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ, ಪ್ರೀತಿ ಜೋಗಿ 509 ಅಂಕಗಳನ್ನು ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ಕಲಾ ವಿಭಾಗದಿಂದ ಸಾವಿತ್ರಿ ಆಗೋಜಿ 428 ಅಂಕಗಳನ್ನು ಪಡೆದು ಪ್ರಥಮ, ಸುರೇಖಾ ನೆನ್ನಿ 427 ಅಂಕಗಳನ್ನು ಪಡೆದು ದ್ವಿತೀಯ, ಮಧು ಜೋಗಿ 425 ಅಂಕಗಳನ್ನು ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ಅತ್ಯುತ್ತಮ ಶ್ರೇಣಿ 4, ಪ್ರಥಮ ಶ್ರೇಣಿ 17, ದ್ವಿತೀಯ ಶ್ರೇಣಿ 3, ತೃತೀಯ ಸ್ಥಾನ 3 ವಿದ್ಯಾರ್ಥಿಗಳು ಪಡೆದಿದ್ದಾರೆ. ಉತ್ತಮ ಫಲಿತಾಂಶಕ್ಕಾಗಿ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಪ್ರಾಚಾರ್ಯರು ಮತ್ತು ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.





ಇಂದಿನಿಂದ ವಿಶೇಷ ಶಿಬಿರ

ಬೀಳಗಿ: ತಾಲೂಕಿನ ನಾಗರಾಳ ಗ್ರಾಮದ ಅವೋಘಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯ ಜಮಖಂಡಿ, ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಸ್ವಾಮಿ ವಿವೇಕಾನಂದ ಪ್ರಥಮ ದರ್ಜೆ ಮಹಾವಿದ್ಯಾಲಯ ಬೀಳಗಿ ಸಹಯೋಗದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ 2025–26 ಗ್ರಾಮೀಣ ಪರಿವರ್ತನೆಗಾಗಿ ಯುವಜನತೆ ಧ್ಯೇಯದೊಂದಿಗೆ ದತ್ತುಗ್ರಾಮ: ನಾಗರಾಳ ಗ್ರಾಮದಲ್ಲಿ ಏ.10ರಿಂದ 13ರ ವರೆಗೆ ಜರುಗಲಿದೆ. ಏ.10ರಂದು ಸಂಜೆ 4 ಗಂಟೆಗೆ ಶಿಬಿರದ ಉದ್ಘಾಟನಾ ಸಮಾರಂಭ ಜರುಗಲಿದ್ದು, ದಿಗಂಬರೇಶ್ವರ ಮಠದ ಶೇಷಪ್ಪಯ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಪ್ರಗತಿಪರ ಕೃಷಿಕ ಶ್ರೀಶೈಲ ಜತ್ತಿ ಉದ್ಘಾಟಿಸುವರು. ಎಸ್‌ವಿವಿ ಸಂಸ್ಥೆ ಆಡಳಿತಾಧಿಕಾರಿ ವಿ.ಎಸ್.ಮೇಟಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮುಖಂಡರಾದ ಹೇಮಾದ್ರಿ ಕೊಪ್ಪಳ, ರಾಜೇಂದ್ರ ದೇಶಪಾಂಡೆ, ವಾಣಿಜ್ಯ ತೆರಿಗೆ ಅಧಿಕಾರಿ ಗಿರೀಶ ಮಂಗಳೂರ, ಪಿಡಿಒ ಎನ್.ಬಿ.ದೇಶಂಗಿ, ವಿದ್ಯಾ ಸಂಸ್ಥೆ ಸದಸ್ಯರಾದ ವೈ.ಎಂ.ಬೋರ್ಜಿ, ಡಿ.ಎನ್.ಪಾಟೀಲ, ಆರ್.ಎಸ್.ಪಾಟೀಲ, ಬಿ.ಪಿ.ಪಾಟೀಲ, ಪತ್ರಕರ್ತ ಕೆ. ಎಸ್. ಸೋಮನಕಟ್ಟಿ ಸೇರಿದಂತೆ ಮತ್ತಿತರರು ಆಗಮಿಸುವರು. ಏ.11ರಂದು ಸಂಜೆ 5 ಗಂಟೆಗೆ ಜರುಗುವ ಉಪನ್ಯಾಸ ಕಾರ್ಯಕ್ರಮದಲ್ಲಿ ಕಾನೂನು ಅರಿವು ನೆರವು ವಿಷಯದ ಕುರಿತು ವಕೀಲ ಪಿ.ಎಂ.ವಸ್ತ್ರದ ಉಪನ್ಯಾಸ ನೀಡುವರು. ರಾಧಾಕೃಷ್ಣ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಿವನಪ್ಪ ವಾಲಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ, ಶಿವಯ್ಯ ಗಂಟಿ ಮತ್ತಿತರರು ಆಗಮಿಸುವರು ಎಂದು ಎಸ್‌ವಿಎಫ್‌ಜಿ ಕಾಲೇಜಿನ ಎನ್‌ಎಸ್‌ಎಸ್ ಘಟಕದ ಅಧ್ಯಕ್ಷರು ಹಾಗೂ ಪ್ರಾಚಾರ್ಯ ಎಲ್.ಎಚ್.ಕತ್ತಿ ತಿಳಿಸಿದ್ದಾರೆ.

ಅರಣ್ಯ ಪ್ರದೇಶದಲ್ಲಿ ಬೆಂಕಿ

ಜಮಖಂಡಿ: ಮುಧೋಳ ರಸ್ತೆಯ ಅಡಗಲ ಈರ ದರ್ಗಾ ಹತ್ತಿರದ ಅರಣ್ಯ ಪ್ರದೇಶದಲ್ಲಿ ಬೆಂಕಿ ಅವಘಡದಿಂದ ಸುಮಾರು 5 ಎಕರೆ ಅರಣ್ಯ ಪ್ರದೇಶವು ಸುಟ್ಟು ಕರಕಲಾಗಿದೆ. ಸ್ಥಳಕ್ಕೆ ಅಧಿಕರಿಗಳು ಧಾವಿಸಿದರೂ ಸಹ ಬೆಂಕಿಯು ಆರಲಿಲ್ಲ. ಬೇಸಿಗೆ ಆಗಿದ್ದರಿಂದ ಬಂಕಿಯ ಮೂಲ ತಿಳಿಯುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ ಎಂದು ಕೇಳಿ ಬರುತ್ತಿದೆ.



ಬಾಗಲಕೋಟೆ: ಜಿಲ್ಲಾ ಪಂಚಾಯತಿ ಸಿಇಒ ಶಶಿಧರ ಕುರೇರ ತಮ್ಮ ಪತ್ನಿಯೊಂದಿಗೆ ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಸ್ಥಾಪಿತವಾಗಿದ್ದ ಯುವ ಮತದಾರ ಕೇಂದ್ರದಲ್ಲಿ ಸರದಿಯಲ್ಲಿ ನಿಂತು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರು.

ದೇವಾಲಯ ಜೀರ್ಣೋದ್ಧಾರಕ್ಕೆ ಅನುದಾನ

ಮಹಾಲಿಂಗಪುರ: ಗುರುವಾರ ಮುಂಜಾನೆ ಶಾಸಕ ಸಿದ್ದು ಸವದಿ ಸ್ಥಳೀಯ ಕೆಲ ಬಡಾವಣೆಗಳಲ್ಲಿ ಸಂಚರಿಸಿ ಕುಂದು ಕೊರತೆಗ ಆಲಿಸಿ ಪರಿಹಾರದ ಭರವಸೆ ನೀಡಿದರು. ಮಹಾಲಿಂಗೇಶ್ವರ ದೇವಸ್ಥಾನದ ಹಿಂಭಾಗದಲ್ಲಿರುವ 20 ಮತ್ತು 21 ನೇ ವಾರ್ಡ್ ಗಳಿಗೆ ಭೇಟಿ ನೀಡಿ ಸ್ಥಳೀಯರು ಮತ್ತು ಮುಖಂಡರ ಜೊತೆ ಚರ್ಚೆ ನಡೆಸಿದರು. ಕಳೆದೆರಡು ವರ್ಷಗಳಿಂದ ಈ ವಾರ್ಡ್ ಗಳಲ್ಲಿ 24★7 ಶುದ್ಧ ಕುಡಿಯುವ ನೀರಿಗಾಗಿ ಗುತ್ತಿಗೆದಾರರು ರಸ್ತೆ ಅಗೆದು ದುರುಸ್ತಿ ಮಾಡದೆ ಹಾಗೆಯೇ ಬಿಟ್ಟಿರುವುದರಿಂದ ರಸ್ತೆ, ನೀರಿನ ಪೈಪ್ ಗಳು ಮತ್ತು ಚರಂಡಿಗಳು ಹಾಳಾಗಿ ನಮಗೆಲ್ಲ ಬಹಳ ತೊಂದರೆ ಉಂಟಾಗಿದ್ದು ಬೇಗ ಸರಿಪಡಿಸಲು ಜನ ಮನವಿ ಮಾಡಿದಾಗ ಅದಕ್ಕೆ ಸ್ಪಂದಿಸಿದ ಶಾಸಕರು ಅಧಿಕಾರಿಗಳಿಗೆ ಕೂಡಲೇ ಕೆಲಸ ಆರಂಭಿಸಲು ಸೂಚಿಸಿದರು. ನಂತರ ಚನ್ನಗಿರಿಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ ಶಾಸಕರು ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ 5 ಲಕ್ಷ ಮತ್ತು ಶರಣೆ ಸಿದ್ಧಾಯಿ ಮೂರ್ತಿ ನಿರ್ಮಾಣಕ್ಕೆ 5 ಲಕ್ಷ ಹಣ ನೀಡುವ ಭರವಸೆ ನೀಡಿದರು. ಪುರಸಭಾ ಮುಖ್ಯಾಧಿಕಾರಿ ಎನ್.ಎಂ.ಲಮಾಣಿ ಪ್ರಸ್ತುತ ವಾರ್ಡ್ ಗಳಲ್ಲಿ ಅವಶ್ಯಕ ಕಾಮಗಾರಿ ಕಾರ್ಯಗಳ ಬಗ್ಗೆ ಶಾಸಕರಿಗೆ ವಿವರಣೆ ನೀಡಿದರು. ಭಾಜಪ ನಗರ ಘಟಕದ ಅಧ್ಯಕ್ಷ ಶಂಕರಗೌಡ ಪಾಟೀಲ, ಶೇಖರ ಅಂಗಡಿ, ರವಿಗೌಡ ಪಾಟೀಲ, ಶಿವು ಅಂಗಡಿ, ಮಲ್ಲು ದಲಾಲ, ಚನ್ನಪ್ಪ ಪಟ್ಟಣಶೆಟ್ಟಿ, ಮಹೇಶ ಚಿಂಚಲಿ, ಚಂದ್ರು ನಾಯಕ, ಬಸವರಾಜ ಮಡಿವಾಳ, ಮಹೇಶ ಜಿಡ್ಡಿಮನಿ, ಶೇಖರ ಮಗದುಮ್ ಹಾಗೂ ಪುರಸಭೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.



ಮಹಾಲಿಂಗಪುರ: ಗುರುವಾರ ಮುಂಜಾನೆ ಶಾಸಕ ಸಿದ್ದು ಸವದಿ ಸ್ಥಳೀಯ ಕೆಲ ಬಡಾವಣೆಗಳಲ್ಲಿ ಸಂಚರಿಸಿ ಕುಂದು ಕೊರತೆಗ ಆಲಿಸಿ ಪರಿಹಾರದ ಭರವಸೆ ನೀಡಿದರು.ಮಹಾಲಿಂಗೇಶ್ವರ ದೇವಸ್ಥಾನದ ಹಿಂಭಾಗದಲ್ಲಿರುವ 20 ಮತ್ತು 21 ನೇ ವಾರ್ಡ್ ಗಳಿಗೆ ಭೇಟಿ ನೀಡಿ ಸ್ಥಳೀಯರು ಮತ್ತು ಮುಖಂಡರ ಜೊತೆ ಚರ್ಚೆ ನಡೆಸಿದರು.

ಆಕರ್ಷಿಸಿದ ವಿಶೇಷ ಮತಗಟ್ಟೆಗಳು | ಸಿಇಒ, ಎಡಿಸಿ ಮತ ಚಲಾವಣೆ

ಬಾಗಲಕೋಟೆಯಲ್ಲಿ ಶಾಂತಿಯುತ ಮತದಾನ

ಬಾಗಲಕೋಟೆ: ಜಿಲ್ಲೆಯಲ್ಲಿ ಗುರುವಾರ ನಡೆದ ಉಪ ಚುನಾವಣೆಯಲ್ಲಿ ಬೆಳಗ್ಗೆ 7ರಿಂದ ಸಂಜೆ 6ರ ವರೆಗೆ ಮತದಾನ ಪ್ರಕ್ರಿಯೆ ಸಂಪೂರ್ಣವಾಗಿ ಶಾಂತಿಯುತವಾಗಿ ಮತ್ತು ಯಶಸ್ವಿಯಾಗಿ ನಡೆಯಿತು.

ಬೆಳಗ್ಗೆಯಿಂದಲೇ ಮತಗಟ್ಟೆಗಳಲ್ಲಿ ಮತದಾರರು ಉತ್ಸಾಹದಿಂದ ಸರತಿ ಸಾಲಿನಲ್ಲಿ ನಿಂತು ತಮ್ಮ ಹಕ್ಕನ್ನು ಚಲಾಯಿಸುತ್ತಿರುವುದು ಕಂಡುಬಂದಿತು. ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಯುವ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದು ವಿಶೇಷವಾಗಿತ್ತು. ಬಹುತೇಕ ಮತಗಟ್ಟೆಗಳಲ್ಲಿ ಮಹಿಳಾ ಮತದಾರರಲ್ಲಿ ಹೆಚ್ಚಿನ ಉತ್ಸಾಹ ಕಂಡಿಬಂದಿತು. ಮತದಾನ ಕೇಂದ್ರಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒಗದಿಸಲಾಗಿದ್ದು, ಪುರುಷ ಮತದಾರರಕ್ಕಿಂತ ಮಹಿಳಾ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಸಾಲುಗಟ್ಟಿ ನಿಂತಿದ್ದರು.

ಶಿರೂರ, ಕಮತಗಿ, ಅಮೀನಗಡ, ಬಸರಿಕಟ್ಟಿ, ಬೆನಕಟ್ಟಿ, ರಾಂಪೂರ, ತಿಮ್ಮಾಪೂರ, ಭಗವತಿ, ಬೇವಿನಮಟ್ಟಿ,ಮುಚಖಂಡಿ, ಮುಚಖಂಡಿ ಎಲ್.ಟಿ., ಬೇವೂರ ಸೇರಿದಂತೆ ಅನೇಕ ಗ್ರಾಮಗಳ ಕೆಲ ಮತಗಟ್ಟೆಗೆ ತೆರಳಿದಾಗ ಪುರುಷ ಮತದಾರಕ್ಕಿಂತ ಮಹಿಳಾ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಸಾಲು ಗಟ್ಟಿ ನಿಂತಿರುವ ದೃಶ್ಯ ಕಂಡುಬಂದಿತು. ಬೆಳಿಗ್ಗೆ 7 ರಿಂದ 9 ಗಂಟೆಯಲ್ಲಿ ಶೇ.11.87 ರಷ್ಟು ಮತದಾನವಾದರೆ, 11 ಗಂಟೆಗೆ ಶೇ.27.82 ರಷ್ಟು, ಮಧ್ಯಾಹ್ನ 1 ಗಂಟೆಗೆ ಶೇ.43.75 ರಷ್ಟು, ಮಧ್ಯಾಹ್ನ 3 ಗಂಟೆಗೆ ಶೇ. 54.82 ರಷ್ಟು, ಸಂಜೆ 5 ವರೆಗೆ ಶೇ.68.74ರಷ್ಟು ಮತದಾನವಾಗಿತ್ತು.

ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ಸಂಗಪ್ಪ ಅವರು ಆರ್‌ಆರ್ ಕಚೇರಿಯಲ್ಲಿ ಸ್ಥಾಪಿಸಲಾದ ಮತಗಟ್ಟೆ ಸಂಖ್ಯೆ



221 ರಿಂದ 224 ವರೆಗಿನ ಮತಗಟ್ಟೆಗಳಿಗೆ ಹಾಗೂ ಅಂಬೇಡ್ಕರ ಭವನದಲ್ಲಿ ಸ್ಥಾಪಿಸಲಾದ ಪಿಂಕ್ ಮತ್ತು ಯುವ ಮತಗಟ್ಟೆಗಳಿಗೆ ತೆರಳಿ ಮತಗಟ್ಟೆ ಮತ್ತು ಮತದಾನ ಪ್ರಕ್ರಿಯೆಯನ್ನು ವೀಕ್ಷಿಸಿದರು. ಜಿ.ಪಂ ಸಿಇಒ ಶಶಿಧರ ಕುರೇರ ನವನಗರದ ಪಿಎಂಶ್ರೀ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ನಂ.7ರಲ್ಲಿ ಸ್ಥಾಪಿಸಲಾದ ಮತಗಟ್ಟೆಗೆ ಹಾಗೂ ಭಗವತಿ ಗ್ರಾಮದಲ್ಲಿ ಸ್ಥಾಪಿಸಲಾದ ಪಿಂಕ್ ಮತಗಟ್ಟೆ ಹಾಗೂ ಇತರೆ ಮತಗಟ್ಟೆಗಳಿಗೆ ಮತಗಟ್ಟೆಗಳಿಗೆ ಭೇಟಿ ನೀಡಿ ಮತದಾನ ಪ್ರಕ್ರಿಯೆ ವೀಕ್ಷಿಸಿದರು.

18 ವರ್ಷ ಪೂರೈಸಿ ಮೊದಲ ಬಾರಿಗೆ ಮತದಾನ ಮಾಡುತ್ತಿರುವ ಯುವಕರಲ್ಲಿ ಉತ್ಸಾಹ ಕಂಡುಬಂದಿತು. ತಮ್ಮ ಗುರುತಿನ ಚೀಟಿಯೊಂದಿಗೆ ಖುಷಿಯಿಂದ ಮತಗಟ್ಟೆಗೆ ಆಗಮಿಸಿದ ಮತದಾರರು ಮೊದಲ ಬಾರಿಗೆ ನಮ್ಮ ಹಕ್ಕನ್ನು ಚಲಾಯಿಸುತ್ತಿರುವುದು ಸಂತೋಷ ತಂದಿದೆ. ಜನಪ್ರತಿನಿಧಿಗಳ ಆಯ್ಕೆಯಲ್ಲಿ ನಮ್ಮದು ಇರುವ ಪಾತ್ರದ ಬಗ್ಗೆ ಅರಿತಿರುವುದಾಗಿ ಯುವ ಮತದಾರರಾದ ಭರಮಪ್ಪ, ಪವಿತ್ರ ಕಾಮತ ಸೇರಿದಂತೆ ಇತರರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.

ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರು ಆಗಿರುವ ಜಿ.ಪಂ ಸಿಇಒ ಶಶಿಧರ ಕುರೇರ ಪತ್ನಿ ಸುಚಿತಾ ಅವರ ಸಮೇತರಾಗಿನವನಗರದಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಸ್ಥಾಪಿಸಲಾದ ಮತಗಟ್ಟೆಯಲ್ಲಿ ಸರತಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು. ನಂತರ ಸಖಿ ಮತಗಟ್ಟೆಯಲ್ಲಿ ಇಡಲಾದ ಸೆಲ್ಫಿ ಕಾರ್ನರ್‌ದಲ್ಲಿ ಫೋಟೋ ತೆಗೆಸಿಕೊಂಡರು. ಅಪರ ಜಿಲ್ಲಾಧಿಕಾರಿ ಆಗಿರುವ ಅಶೋಕ ತೇಲಿ ಅವರು ಸಹ ತಮ್ಮ ಕುಟುಂಬ ಸಮೇತ ಅಂಬೇಡ್ಕರ ಭವನದಲ್ಲಿ ಸ್ಥಾಪಿಸಲಾದ ಮತ್ತೊಂದು ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ವೃದ್ದರು, ವಿಶೇಷ ಚೇತನರು ಹಾಗೂ ತೃತಿಯ ಲಿಂಗದ ಮತದಾರರು ಉತ್ಸುಕರಾಗಿ ಮತಗಟ್ಟೆಗೆ ತೆರಳಿ ಮತದಾನ ಮಾಡಿದರು.

ಶಿವಶರಣೆ ಅಕ್ಕಮಹಾದೇವಿ ಸ್ತ್ರೀ ಕುಲದ ಕಣ್ಮಣಿ

ತೇರದಾಳ: ಅಕ್ಕಮಹಾದೇವಿ ಶ್ರೇಷ್ಠ ಶಿವಶರಣೆ, ಕನ್ನಡ ವಚನಕಾರ್ತಿ, ಪ್ರಥಮ ಮಹಿಳಾ ಕವಿಯತ್ರಿ ಆ ಅಕ್ಕನ ಬಗ್ಗೆ ಹೇಳಬೇಕೆಂದರೆ ಶಬ್ದಗಳು ಸಾಲಲ್ಲ. ಕ್ರಿ.ಶ 12ನೇ ಶತಮಾನದಲ್ಲಿಯೇ ಸ್ತ್ರೀಯ ಗೌರವಯುತ ಸ್ಥಾನಮಾನದ ಬಗ್ಗೆ ಹೋರಾಟ ಮಾಡಿದವಳು. ಸ್ತ್ರೀಯು ಸಹ ಪುರುಷನಷ್ಟೇ ಸಮಾನಳು ಎಂದು ಹೋರಾಟ ಮಾಡಿದಳು. ಕಲ್ಯಾಣದ ಅನುಭವ ಮಂಟಪದಲ್ಲಿ ಪರಶಿವನ ಅವತಾರವಾಗಿದ್ದ ಶೂನ್ಯಸಿಂಹಾಸನಾಧೀಶ ಅಲ್ಲಮಪ್ರಭು ಹಾಗೂ ಕಲ್ಯಾಣದ ಅಣ್ಣ ಜಗಜ್ಯೋತಿ ಬಸವಣ್ಣನವರಿಂದ ಅಕ್ಕ ಎಂದು ಬಿರುದು ಪಡೆದು ಇಡಿ ನಾಡಿಗೆ ಅಕ್ಕಳಾಗಿರುವ ಅಕ್ಕಮಹಾದೇವಿ ಸ್ತ್ರೀ ಕುಲದ ಕಣ್ಮಣಿ ಎಂದು ಅಕ್ಕನ ಬಳಗದ ಕಮಲಕ್ಕ ವಾಲಿ ಹಾಗೂ ಸುನಿತಾ ಹಂಜಿ ಹೇಳಿದರು. ಪಟ್ಟಣದ ಮಲ್ಲಿಕಾರ್ಜುನ ಗುಡಿಯಲ್ಲಿ ಹುಣ್ಣಿಮೆ ದಿನದಂದು ಸಿದ್ದೇಶ್ವರ ಗಲ್ಲಿಯ ಎಲ್ಲಾ ತಾಯಂದಿರು ಸೇರಿ ಶರಣೆ ಅಕ್ಕಮಹಾದೇವಿ ಹುಟ್ಟಿದ ದಿನವನ್ನು ತೊಟ್ಟಿಲು ಕಟ್ಟಿ ವಿವಿಧ ರೀತಿಯ ಸಾಂಪ್ರದಾಯಿಕ ಜೋಗುಳ ಪದವನ್ನು ಹಾಡುವುದರ ಮೂಲಕ ಅತ್ಯಂತ ವಿಜೃಂಭಣೆಯಿಂದ ಆಚರಿಸಿದರು.

ಸಾಕ್ಷಾತ ಶಿವನನ್ನೇ ಒಲಿಸಿಕೊಂಡ ಶಿವಶರಣೆ ಅಕ್ಕಮಹಾದೇವಿ ಸುಮಾರು 430 ಹೆಚ್ಚು ವಚನಗಳನ್ನು ಈ ನಾಡಿಗೆ ಕೊಡುಗೆಯಾಗಿ ನೀಡಿದ್ದಾರೆ. ತನ್ನ ಸಂಪೂರ್ಣ ಜೀವನವನ್ನು ಶಿವನಿಗಾಗಿ ಮೀಸಲಿಟ್ಟವಳು. ಇವಳನ್ನು ದಕ್ಷಿಣ ಭಾರತದ ಮೀರಾಬಾಯಿಯಾಗಿದ್ದಾಳೆ ಎಂದರು. ಇದೇ ಸಂದರ್ಭದಲ್ಲಿ ಚಿಕ್ಕ ಮಗು ಶ್ರೇಯಾನ್ವಿ ಅಕ್ಕಮಹಾದೇವಿಯ ಹಲವಾರು ವಚನಗಳನ್ನು ಹೇಳಿ ಎಲ್ಲರನ್ನು ಆಶ್ಚರ್ಯಗೊಳಿಸಿದರು. ಶರಣ ವಾಸು ನೀಲನೂರ ಅಕ್ಕನ ಹಲವಾರು ವಚನಗಳನ್ನು ಬಿಡಿಸಿ ಹೇಳಿದರು.

ಸವಿತಾ ಮುಚ್ಚಂಡಿ,ಕಲಾವತಿ ಪಟ್ಟಣಶೆಟ್ಟಿ, ಮಂಜುಳಾ ಬಿಜ್ಜರಗಿ, ಮಧು ಮಹಾಬಳಶೆಟ್ಟಿ, ಗೀತಾ ಅವರಾದಿ, ಶಿವಲೀಲಾ ಮಂಗಸೂಳಿ, ಶಿಲ್ಪಾ ಮಂಗಸೂಳಿ, ಮಂಗಲಾ ಮಹಾಬಳಶೆಟ್ಟಿ, ರಾಣಿ ಹಂಜಿ, ರೂಪಾ ಪಟ್ಟಣಶೆಟ್ಟಿ, ಮಾನ್ವಿತಾ, ಮಾಲಾ ಸೇರಿದಂತೆ ಇನ್ನಿತರರು ಇದ್ದರು.



ದ್ವಿತೀಯ ಪಿಯು: ಶೇ.84.12ರಷ್ಟು ಫಲಿತಾಂಶ

ಬಾಗಲಕೋಟೆ: ದ್ವಿತೀಯ ಪಿಯುಸಿ ಫಲಿತಾಂಶ ಗುರುವಾರ ಘೋಷಣೆಯಾಗಿದ್ದು, ಬಾಗಲಕೋಟೆ ಜಿಲ್ಲೆಗೆ ಶೇ.84.12ರಷ್ಟು ಫಲಿತಾಂಶ ಬಂದಿದೆ. ಈ ಸಲವೂ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳೇ ಉತ್ತೀರ್ಣರಾಗಿದ್ದಾರೆ.

ಪರೀಕ್ಷೆಗೆ ಒಟ್ಟು 23,647 ವಿದ್ಯಾರ್ಥಿಗಳು ಹಾಜರಾಗಿದ್ದರು. ಅದರಲ್ಲಿ 19,892 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇದರೊಂದಿಗೆ ಜಿಲ್ಲೆಯ ಫಲಿತಾಂಶ ಶೇ.84.12ರಷ್ಟಾಗಿದೆ. 2025–26ನೇ ಸಾಲಿನಲ್ಲಿ ಜಿಲ್ಲೆಯ ಫಲಿತಾಂಶ 72.83ರಷ್ಟಿತ್ತು. ಕಲಾ, ವಾಣಿಜ್ಯ, ವಿಜ್ಞಾನ ವಿಷಯದಲ್ಲಿ 11,986 ವಿದ್ಯಾರ್ಥಿನಿಯರು ಪಾಸಾಗಿದ್ದರೆ, 8771 ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಕಲಾ ವಿಭಾಗದಲ್ಲಿ: ಜಮಖಂಡಿಯ ಬಿ.ಎಚ್.ಎಸ್. ಕಲಾ ಮತ್ತು ಟಿಜಿಪಿ ವಿಜ್ಞಾನ ಮಹಾವಿದ್ಯಾಲಯದ ಮಹಮ್ಮದ ಆಯಾನ್ ನದಾಫ್ 595 ಅಂಕಗಳೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ. ಬಾಗಲಕೋಟೆಯ ಶಂಕ್ರಪ್ಪ ಸಕ್ರಿ ಪದವಿ ಪೂರ್ವ ಕಾಲೇಜ್ನ ದ್ಯಾಮವ್ವ ಯಡಹಳ್ಳಿ 594 ಅಂಕದೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಸರಕಾರಿ ಪದವಿ ಪೂರ್ವ ಕಾಲೇಜ್ ತುಂಗಳದ ಯೋಗಿತಾ ಸುರೇಂದ್ರ ಯಾದವರ 592 ಅಂಕದೊಂದಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ವಾಣಿಜ್ಯ ವಿಭಾಗ: ಜೆ.ವಿ.ಮಂಡಳಿ ಪದವಿ ಪೂರ್ವ ಕಾಲೇಜ್ ತೇರದಾಳದ ಸಂಗೀತಾ ಗಡದರ 593 ಪ್ರಥಮ, ಗುರುಚೈತನ್ಯ ಪದವಿ ಪೂರ್ವ ಕಾಲೇಜ್ ಇಳಕಲ್ಲ ವಾಣಿಶ್ರೀ ಶಂಕರಗೌಡ ಆದಾಪೂರ 592 ದ್ವಿತೀಯ ಸ್ಥಾನ ಪಡೆದಿದ್ದಾರೆ. ಬಸವೇಶ್ವರ ಮಹಿಳಾ ಪದವಿ ಪೂರ್ವ ಕಾಲೇಜ್ ಲೋಕಾಪೂರದ ಸೃಷ್ಟಿ ವಿಠ್ಠಲ ಉಪ್ಪಾರ 589 ತೃತೀಯ ಸ್ಥಾನ ಪಡೆದಿದ್ದಾರೆ.

ವಿಜ್ಞಾನ ವಿಭಾಗ: ತುಂಗಳ ವಿಜ್ಞಾನ ಪದವಿ ಪೂರ್ವ ಕಾಲೇಜ್ ಬಾಗಲಕೋಟೆಯ ಶ್ರೇಯಾ ವೀರಣ್ಣ ಯಾವಗಲ್ 595 ಪ್ರಥಮ, ಬಸವೇಶ್ವರ ಸ್ವತಂತ್ರ ಪದವಿ ಪೂರ್ವ ಕಾಲೇಜ್ ಬಾಗಲಕೋಟೆಯ ಸಾಕ್ಷಿ ಮಲ್ಲಯ್ಯ ಮಠಪತಿ 593 ದ್ವಿತೀಯ, ತೇಜಸ್ ಅಂತರಾಷ್ಟ್ರೀಯ ಪದವಿ ಪೂರ್ವ ಕಾಲೇಜ್ ನವನಗರದ ತರುಣ ಹನಮಪ್ಪ ಕಕರಡ್ಡಿ 593 ಅಂಕದೊಂದಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಕಾರಿಗೆ ಬೆಂಕಿ: ಪ್ರಾಣಾಪಾಯದಿಂದ ಚಾಲಕ ಪಾರು

ಜಮಖಂಡಿ: ತಾಲೂಕಿನ ಸಿದ್ದಾಪುರ ಗ್ರಾಮದ ಹತ್ತಿರ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆಯ ಹತ್ತಿರ ರೆನಾಲ್ಟ್ ಕಾರಿಗೆ ಆಕಸ್ಮಿಕ ಬೆಂಕಿ ತಗುಲಿ ಕಾರು ಸಂಪೂರ್ಣವಾಗಿ ಭಸ್ಮವಾದ ಘಟನೆ ನಡೆದಿದೆ. ಬೆಂಕಿ ಆವರಿಸುತ್ತಿದ್ದಂತೆಯೇ ಕಾರಿನ ಚಾಲಕ ಅಶೋಕ ಬರಗಿ ಕಾರಿನಿಂದ ಇಳಿದು ಜೀವಾಪಾಯದಿಂದ ಪಾರಾಗಿದ್ದಾನೆ. ಸ್ಥಳಕ್ಕೆ ಅಗ್ನಿ ಶಾಮಕ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸಿದ್ದಾರೆ.

ಮತಕ್ಷೇತ್ರದ ಜನ, ಬಿಜೆಪಿ ನಾಯಕರಿಗೆ ಕೃತಜ್ಞತೆ: ಚರಂತಿಮಠ

ಬಾಗಲಕೋಟೆ: ಮತಕ್ಷೇತ್ರದ ಉಪಚುನಾವಣೆಯ ಮತದಾನದಲ್ಲಿ ಅತಿ ಹೆಚ್ಚು ಜನ ಭಾಗವಹಿಸಿ ಮತದಾನ ಮಾಡಿ ಯಶಸ್ವಿಗೊಳಿಸಿದ್ದಕ್ಕೆ ಎಲ್ಲ ಜನತೆಗೆ ತುಂಬು ಹೃದಯದ ಧನ್ಯವಾದಗಳನ್ನು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ತಿಳಿಸಿದ್ದಾರೆ.



ಚುನಾವಣಾ ಪ್ರಚಾರ ಕಾರ್ಯದಲ್ಲಿ ಬೆನ್ನೆಲುಬಾಗಿ ನಿಂತು ಪಕ್ಷದ ಹಿರಿಯರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ವಿ.ಸೋಮಣ್ಣ, ಮಾಜಿ ಉಪಮುಖ್ಯಮಂತ್ರಿಗಳಾದ, ಗೋವಿಂದ ಕಾರಜೋಳ, ರಾಜ್ಯಾಧ್ಯಕ್ಷ ವಿಜೆಯೇಂದ್ರ ಯಡಿಯೂರಪ್ಪ, ಆರ್.ಅಶೋಕ, ಚಲುವಾದಿ ನಾರಾಯಣಸ್ವಾಮಿ, ಎನ್. ಮಹೇಶ, ಬಿ.ಶ್ರೀರಾಮುಲು, ಸಿ.ಟಿ.ರವಿ, ವಿ. ಸುನೀಲಕುಮಾರ, ಸ್ನೇಹಿತರಾದ ಬಸನಗೌಡ ಪಾಟೀಲ ಯತ್ನಾಳ, ಪ್ರತಾಪ ಸಿಂಹ, ಮಾಜಿ ಸಚಿವರಾದ ಮುರಗೇಶ ನಿರಾಣಿ,ಸಿ. ಸಿ. ಪಾಟೀಲ, ರಮೇಶ ಕತ್ತಿ, ಸಂಸದರಾದ ಪಿ.ಸಿ.ಗದ್ದಿಗೌಡರ, ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ,ಹನಮಂತ ನಿರಾಣಿ, ಪಿ.ರಾಜೀವ್, ಜನಾರ್ಧನ್ ರೆಡ್ಡಿ, ಜಗದೀಶ ಗುಡಗುಂಟಿ, ಸಿದ್ದು ಸವದಿ, ಎಂ.ಕೆ.ಪಟ್ಟಣಶೆಟ್ಟಿ, ಎ.ಎಸ್.ಪಾಟೀಲ ಪಡಹಳ್ಳಿ, ಅಭಯ ಪಾಟೀಲ್, ಸಂಜಯ ಪಾಟೀಲ, ದೊಡ್ಡನಗೌಡ ಪಾಟೀಲ, ಕುಷ್ಟಗಿ ಶಾಸಕ ದೊಡ್ಡನಗೌಡ ಪಾಟೀಲ, ಬಾಲಚಂದ್ರ ಜಾರಕಿಹೊಳಿ, ಚಂದ್ರಶೇಖರ ಕವಟಗಿಮಠ, ಪ್ರಭು ಚವ್ಹಾಣ, ಅಪ್ಪು ಪಟ್ಟಣಶೆಟ್ಟಿ,

ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವೀನಮರದ, ಸೇರಿದಂತೆ ರಾಜ್ಯದ ಹಾಗೂ ಜಿಲ್ಲೆಯ ಎಲ್ಲ ಮುಖಂಡರು, ಗ್ರಾಮೀಣ, ನಗರ ಮಂಡಲ ಪದಾಧಿಕಾರಿಗಳು, ಸಂಘ ಪರಿವಾರ ಹಿರಿಯರು, ಮುಖಂಡರು, ಕಾರ್ಯಕರ್ತರು, ಸೇರಿದಂತೆ ಮತಕ್ಷೇತ್ರ ಎಲ್ಲ ಜನತೆಗೆ ತುಂಬು ಹೃದಯದ ಧನ್ಯವಾದ ಸಲ್ಲಿಸಿದ್ದಾರೆ.

ರೈತರ ಮನೆಗೆ ವಿದ್ಯಾರ್ಥಿಗಳು ಭೇಟಿ

ಜಮಖಂಡಿ: ತಾಲೂಕಿನ ಮಧುರಖಂಡಿಯ ರೈತರಾದ ಪದ್ಮಾವತಿ ಖಿಳೆಗಾವಿ ಅವರ ಮನೆಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳು ಭೇಟಿ ನೀಡಿ ಬಾಳೆ ಚಿಪ್ಸ್ ಮತ್ತು ಆಲೂಗಡ್ಡೆ ಚಿಪ್ಸ್ ತಯಾರಿಕಾ ಪ್ರದರ್ಶನ ನಡೆಸಿದರು.

ಬಾಳೆ ಹಾಗೂ ಆಲೂಗಡ್ಡೆಯನ್ನು ಸರಿಯಾದ ರೀತಿಯಲ್ಲಿ ಕತ್ತರಿಸುವುದು, ಎಣ್ಣೆಯಲ್ಲಿ ಹುರಿಯುವ ವಿಧಾನ, ಉಪ್ಪು ಮತ್ತು ಮಸಾಲೆಗಳನ್ನು ಸೇರಿಸುವ ತಂತ್ರಗಳನ್ನು ವಿವರವಾಗಿ ತೋರಿಸಲಾಯಿತು.

ಡಾ.ಜಮೀಲ್ ಝೂಲೆಗಾರ್ ಅವರು ಮೌಲ್ಯವರ್ಧನೆಯ ಮಹತ್ವ ವಿವರಿಸಿ ರೈತರಿಗೆ ಹೆಚ್ಚುವರಿ ಆದಾಯ ಪಡೆಯುವ ಮಾರ್ಗಗಳನ್ನು ತಿಳಿಸಿದರು. ಹಾಗೂ ಡಾ.ಬಸವರಾಜ ಪಡಶೆಟ್ಟಿ ಅವರು ಮಹಿಳಾ ಸಂಘಗಳ ಪಾತ್ರದ ಬಗ್ಗೆ ಹಾಗೂ ಸಣ್ಣ ಮಟ್ಟದ ಉದ್ಯಮ ಆರಂಭಿಸುವ ಕುರಿತು ಮಾರ್ಗದರ್ಶನ ನೀಡಿದರು. ಮಹಿಳಾ ಸ್ವಸಹಾಯ ಸಂಘದ ಸದಸ್ಯೆಯರು ಸಕ್ರಿಯವಾಗಿ ಭಾಗವಹಿಸಿದ್ದರು.



ರೇಣುಕಾಚಾರ್ಯರ ಜಯಂತ್ಯುತ್ಸವ ನಾಳೆ: ಮಳಿಮಠ

ಗುಳೇದಗುಡ್ಡ: ತಾಲೂಕು ವೀರಶೈವ ಜಂಗಮ ಕ್ಷೇಮಾಭಿವೃದ್ಧಿ ಸಂಸ್ಥೆ ವತಿಯಿಂದ ರೇಣುಕಾಚಾರ್ಯರು, ಬಸವೇಶ್ವರರು ಹಾಗೂ ಹಾನಗಲ್ಲ ಕುಮಾರ ಶಿವಯೋಗಿಗಳ ಗುಳೇದಗುಡ್ಡ ತಾಲೂಕುಮಟ್ಟದ ಜಯಂತ್ಯೋತ್ಸವ ಹಾಗೂ ಸನ್ಮಾನಸಮಾರಂಭಏ.11ರಂದುನಗರದಮುರುಘಾಮಠದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವೀರಶೈವ ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಾನಂದ ಮಳಿಮಠ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಏ.11ರಂದು ಬೆಳಗ್ಗೆ 10 ಗಂಟೆಗೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಮುರುಘಾಮಠದ ಕಾಶೀನಾಥ ಶ್ರೀಗಳು, ಒಪ್ಪತ್ತೇಶ್ವರಮಠದ ಅಭಿನವ ಒಪ್ಪತ್ತೇಶ್ವರ ಶ್ರೀಗಳು, ಹುಚ್ಚೇಶ್ವರಮಠದ ಹೊಳೆಹುಚ್ಚೇಶ್ವರ ಶ್ರೀಗಳು, ಅಮರೇಶ್ವರಮಠದ ಡಾ.ನೀಲಕಂಠ ಶ್ರೀಗಳು, ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಶ್ರೀಗಳು ಕೆರೂರಿನ ಚರಂತಿಮಠದ ಶಿವಕುಮಾರ ಶ್ರೀಗಳು, ಬಾಗಲಕೋಟೆಯ ಚೆಂಗಿನಮಠದ ಮಲ್ಲಿಕಾರ್ಜುನ ಶ್ರೀಗಳು ಸಾನ್ನಿಧ್ಯ ವಹಿಸುವರು. ಸಂಸ್ಥೆಯ ಅಧ್ಯಕ್ಷ ಶಿವಾನಂದ ಮಳಿಮಠ ಅಧ್ಯಕ್ಷತೆ ವಹಿಸುವರು.

ಶಾಸಕ ಭೀಮಸೇನ ಚಿಮ್ಮನಕಟ್ಟಿ, ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಜಗದೀಶ ಗುಡಗುಂಟಿ, ಎಸ್.ಆರ್.ನವಲಿಹಿರೇಮಠ, ಮುಚಗಂಡಯ್ಯ ಹಂಗರಗಿ, ಮಾಜಿ ಶಾಸಕ ವೀರಣ್ಣ ಚರಂತಿಮಠ, ಎಸ್.ಜಿ. ನಂಜಯ್ಯನಮಠ, ಎಂ.ಕೆ.ಪಟ್ಟಣಶೆಟ್ಟಿ, ರಾಜಶೇಖರ ಶೀಲವಂತ, ಪ್ರಭುಸ್ವಾಮಿ ಗಣಾಚಾರಿ, ಕುಮಾರಗೌಡ ಜನಾಲಿ, ಮಹಾಂತೇಶ ಮಮದಾಪೂರ,



ತಹಶೀಲ್ದಾರ ಎಸ್.ಎಫ್.ಬೊಮ್ಮಣ್ಣವರ, ಕಾಂಗ್ರೆಸ್ ಮುಖಂಡ ಹೊಳಬಸು ಶೆಟ್ಟರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಂಜಯ ಬರಗುಂಡಿ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಪಿಎಸ್ಐ ಸಿದ್ದಣ್ಣ ಯಡಹಳ್ಳಿ, ಕಮತಗಿಯ ಜಂಗಮ ಸಮಾಜದ ಅಧ್ಯಕ್ಷ ಮುಪ್ಪಯ್ಯ ಘಂಟಿಮಠ ಮತ್ತಿತರರು ಉಪಸ್ಥಿತರಿರುವರು. ಬಸವರಾಜ ಸಿಂದಗಿಮಠ, ಚಿದಾನಂದ ಕಾಟವಾ, ಶಂಕರ ಮುಂದಿನಮನಿ ತಂಡದಿಂದ ಸಂಗೀತ ಕಾರ್ಯಕ್ರಮ ನೀಡುವರು.

ವಿಶ್ವನಾಥ ಹಿರೇಮಠ, ಉಮೇಶ ಶಿವನಗೌಡರ, ಪ್ರಭು ತಟ್ಟಿಮಠ, ಸಂಗಯ್ಯ ಗವಿಮಠ, ಶಿವಕುಮಾರ ಸಾವಳಗಿಮಠ, ಪಡದಯ್ಯ ಕಕ್ಕಯ್ಯನಮಠ, ಜಗದೀಶ ಕಾರುಡಗಿಮಠ, ಸಿದ್ದು ಸಂಕಿನಮಠ, ವಿಶ್ವನಾಥ ಹಿರೇಮಠ, ರಾಚಯ್ಯ ಸ್ಥಾವರಮಠ, ವಿ.ಬಿ.ಹಿರೇಮಠ, ನಿಜಗುಣಯ್ಯ ಹಿರೇಮಠ, ಮಲ್ಲಯ್ಯ ಭಂಡಾರಿ, ಬಸವರಾಜ ಸಿಂದಗಿಮಠ ಇದ್ದರು.

ಕಮತಗಿಯಲ್ಲಿ ಶಾಂತಿಯುತ ಮತದಾನ

ಕಮತಗಿ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ನಿಮಿತ್ತ ಪಟ್ಟಣದಲ್ಲಿ ಗುರುವಾರದಂದು ನಡೆದ ಚುನಾವಣೆಯು ಶಾತಿಯುವಾಗಿ ನಡೆಯಿತು.

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯ ನಿಮಿತ್ತವಾಗಿ ಬೆಳಿಗ್ಗೆ 7 ಗಂಟೆಗೆ ಆರಂಭವಾದ ಮತದಾನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು,ಮದ್ಯಾಹ್ನದ ಸುಡು ಬಿಸಿಲಿನಲ್ಲು ಕೂಡಾ ಮತದಾರರು ಮತದಾನ ಕೇಂದ್ರದ ಮುಂದೆ ಸಾಲಾಗಿ ನಿಂತು ಮತದಾನ ಮಾಡಿದರು. ಪ್ರಥಮ ಬಾರಿಗೆ ಮತ ಚಲಾಯಿಸಲು ಬಂದ ಯುವ ಮತದಾರರು ಮತದಾನ ಕೇಂದ್ರಕ್ಕೆ ತೆರಳಿ ಸಂತೋಷದಿಂದಲೇ ಮತದಾನ ಮಾಡಿ ಹೊರಬಂದರು, ಇನ್ನೂ ವೃದ್ಧರು, ವಿಕಲಚೇತನರು ವಿಲ್ ಚೇರನಲ್ಲಿ ಆಗಮಿಸಿ ಮತದಾನ ಮಾಡಿದರು. ಕಮತಗಿ ಪಟ್ಟಣದಲ್ಲಿ ಒಟ್ಟು 18 ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು, ಒಟ್ಟು 13.860 ಮತದಾರರಲ್ಲಿ 10.254 ಮತದಾರರು ಮತಚಲಾಯಿಸಿದರು.



ವಿದ್ಯಾರ್ಥಿಗಳ ಉತ್ತಮ ಸಾಧನೆ

ಬೀಳಗಿ: ತಾಲೂಕಿನ ಅನಗವಾಡಿ ಗ್ರಾಮದ ಬನಶಂಕರಿದೇವಿ ವಿದ್ಯಾ ಸಂಸ್ಥೆಯ ಬಿ.ಎನ್.ಖೋತ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು 2025–26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವುದರ ಮೂಲಕ ಅಮೋಘ ಸಾಧನೆಗೈದಿದ್ದಾರೆ.

ವಿಜ್ಞಾನ–81 ಹಾಗೂ ವಾಣಿಜ್ಯ–42 ಒಟ್ಟು 123 ವಿದ್ಯಾರ್ಥಿಗಳು ಪಾಸಾಗುವುದರೊಂದಿಗೆ ಕಾಲೇಜಿನ ಫಲಿತಾಂಶ ನೂರಕ್ಕೆ ನೂರರಷ್ಟಾಗಿದೆ. ವಿಜ್ಞಾನ ವಿಭಾಗದಲ್ಲಿ 37 ಡಿಸ್ಟಿಂಕ್ಷನ್, 37 ಪ್ರಥಮ ದರ್ಜೆ, 2 ದ್ವಿತೀಯ ದರ್ಜೆಯಲ್ಲಿ ಹಾಗೂ ವಾಣಿಜ್ಯ ವಿಭಾಗದಲ್ಲಿ 21 ಡಿಸ್ಟಿಂಕ್ಷನ್, 20 ಪ್ರಥಮ ದರ್ಜೆ, 1 ದ್ವಿತೀಯ ದರ್ಜೆಯಲ್ಲಿ ಪಾಸಾಗಿರುವರು. ವಿಜ್ಞಾನ ವಿಭಾಗದಲ್ಲಿ ಚಂದ್ರಿಕಾ ಮೇತ್ರಿ 585 (97.5%), ಸೃಷ್ಟಿ ಬಡಿಗೇರ 576 (96%), ಶ್ರೀಧರ ನಾವಿ 571 (95.16%) ಅಂಕಗಳನ್ನು ಪಡೆದಿದ್ದು, ವಾಣಿಜ್ಯ ವಿಭಾಗದಲ್ಲಿ ಸುದರ್ಶನ ಮಲಕಗೊಂಡ 578 (96.33%), ಶಬಾನಾ ದಳವಾಯಿ 569 (94.83%), ತೇಜಶ್ವಿನಿ ನಸಗುನ್ನಿ 565 (94.17%) ಅಂಕಗಳನ್ನು ಪಡೆದು ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಬಸವರಾಜ ಖೋತ ಮತ್ತು ಆಡಳಿತ ಮಂಡಳಿಯ ಸದಸ್ಯರು ಹಾಗೂ ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕರು, ಸಿಬ್ಬಂದಿ ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿರುತ್ತಾರೆ.





ಕಿರುಸುದ್ದಿ

ಎಸ್.ಕೆ.ಆರ್ ಕಾಲೇಜು ವಿದ್ಯಾರ್ಥಿಗಳ ಉತ್ತಮ ಸಾಧನೆ

◆**ಗಂಗಾವತಿ:** ನಗರದ ಎಸ್.ಕೆ.ಆರ್ ಕಾಲೇಜಿನ ಪಿಯು ಪರೀಕ್ಷೆ ಯಲ್ಲಿ ವಾಣಿಜ್ಯ ವಿಭಾಗದಲ್ಲಿ ಶೇ 100ರಷ್ಟು ವಿಜ್ಞಾನ ವಿಭಾಗದಲ್ಲಿ ಶೇ, 96 ಫಲಿತಾಂಶ ತರುವ ಮೂಲಕ ವಿದ್ಯಾರ್ಥಿಗಳು ಉತ್ತಮ ಸಾಧನೆಗೈದಿದ್ದಾರೆ.



ವಿಜ್ಞಾನ ವಿಭಾಗದಲ್ಲಿ ಪ್ರಥಮ ಸ್ಥಾನದಲ್ಲಿ ಸುಪ್ರಜಾ ಕಾರಂತ 567(94.5), ದ್ವಿತಿಯ ಸ್ಥಾನ ಮೇದಾಪಾಟಿ ವೆನೆಲ್ಲಾ ರೆಡ್ಡಿ (564– 94%), ತೃತೀಯ – ರೋಹಿಣಿ ಗಡದ (558– 93%),ವಾಣಿಜ್ಯ ವಿಭಾಗದಲ್ಲಿ ಪ್ರಥಮ – ಆಯೇಶಾ ಮಹೆಕ್ (583– 97.16%), ದ್ವಿತೀಯ – ಪ್ರಿಯಾ ಪಿ ಮೆಟ್ರಾಣಿ (562– 93.66%), ತೃತೀಯ – ಐಶ್ವರ್ಯ ಹಿರೇಮಠ (561– 93.5%) ಇವರು ಅತಿ ಹೆಚ್ಚು ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಪರೀಕ್ಷೆಗೆ ಹಾಜರಾದ ಒಟ್ಟು 85 ವಿದ್ಯಾರ್ಥಿಗಳಲ್ಲಿ 28 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 53 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಹಾಗೂ 02 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿತೇರ್ಗಡೆಯಾಗುವ ಮೂಲಕ ಕಾಲೇಜಿಗೆ ಗೌರವ ತಂದಿದ್ದಾರೆ.

ಈ ವೇಳೆ ಯಲ್ಲಿ ವಿದ್ಯಾರ್ಥಿಗಳ ಈ ಅಮೋಘ ಸಾಧನೆಗೆ ಎಸ್.ಕೆ.ಆರ್ ಶಿಕ್ಷಣ ಸಮೂಹ ಸಂಸ್ಥೆಯ ಅಧ್ಯಕ್ಷರಾದ ಶ್ರೀನಿವಾಸ್ ರಾವ್ ಕಲ್ಯಾಣಿ ಹಾಗೂ ಕಾರ್ಯದರ್ಶಿಗಳಾದ ರಾಮ್ ಮೋಹನ್ ಪ್ರಾಚಾರ್ಯರಾದ ಶಿವಾನಂದ ಮೇಟಿ ಅವರು ಸಂತಸ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳ ಉತ್ತಮ ಸಾಧನೆ

◆**ಕುಷ್ಟಗಿ:** ಪಟ್ಟಣದ ಎಸ್‌ವಿಸಿ ಪಿಯು ಕಾಲೇಜು ದ್ವಿತೀಯ ಪಿಯುಸಿ (ವಿಜ್ಞಾನ) ಪರೀಕ್ಷಾ ಫಲಿತಾಂಶದಲ್ಲಿ ಕುಷ್ಟಗಿ ತಾಲೂಕಿಗೆ ಪ್ರಥಮ ಸ್ಥಾನವನ್ನು ಗಳಿಸಿ ಉನ್ನತ ಸಾಧನೆ ದಾಖಲಿಸಿದೆ ಎಂದು ಸಂಸ್ಥೆಯ ಅಧ್ಯಕ್ಷ ಸಿ.ವಿ. ಚಂದ್ರಶೇಖರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ವಿಜ್ಞಾನ ವಿಭಾಗದಲ್ಲಿ ತಾಲೂಕಿನ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಎಸ್ ವಿಸಿ ಸಂಸ್ಥೆಯ ವೀರೇಶ್ (94.33%), ಕಿರಣ್ (92.83%) ಹಾಗೂ ವಿನೋದ್ (91.83%) ತಮ್ಮದಾಗಿಸಿಕೊಂಡಿದ್ದಾರೆ. ಐದು ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಹಾಗೂ 13 ವಿದ್ಯಾರ್ಥಿಗಳು ಪ್ರಥಮ ದರ್ಜೆ ಮತ್ತು ಇಬ್ಬರು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕಳೆದ 2024 ಶೈಕ್ಷಣಿಕ ವರ್ಷದಲ್ಲಿ ಆರಂಭಗೊಂಡ ಕಾಲೇಜು ಪ್ರಥಮ ಪರೀಕ್ಷಾ ಫಲಿತಾಂಶದಲ್ಲಿ ಐತಿಹಾಸಿಕ ಸಾಧನೆ ದಾಖಲಿಸಿರುವುದು ಕುಷ್ಟಗಿ ಪಟ್ಟಣಕ್ಕೆ ಹೆಮ್ಮೆ ತಂದಿದೆ. ಇಂತಹ ಸಾಧನೆ ಕೊಪ್ಪಳ ಜಿಲ್ಲೆಯ ಇತಿಹಾಸದಲ್ಲಿಯೇ ಪ್ರಥಮ ಎಂದು ತಿಳಿಸಿದ್ದಾರೆ.ಉನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳನ್ನು ಸಿ.ವಿ. ಚಂದ್ರಶೇಖರ್, ಸಂಸ್ಥೆಯ ಸಿಇಓ ಡಾ. ಜಗದೀಶ್ ಅಂಗಡಿ, ಪ್ರಾಂಶುಪಾಲ ಭೀಮಸೇನ್ ಆಚಾರ್ ಹಾಗೂ ಉಪನ್ಯಾಸಕರು ಅಭಿನಂದಿಸಿದ್ದಾರೆ.



ನವೋದಯ ಪರೀಕ್ಷೆ ಯಶೋಧ ಆಯ್ಕೆ

◆**ಸುರಪುರ:** ಜವಾಹರ್ ನವೋದಯ ವಿದ್ಯಾಲಯದ ನಡೆಸುವ ಪ್ರಸಕ್ತ ಸಾಲಿನ ಪ್ರವೇಶ ಪರೀಕ್ಷೆ ಯಲ್ಲಿ ಕುರುಬನ ತಳ್ಳಿ ಗ್ರಾಮದ ಬಾಲಕಿ ಯಶೋಧ ತಂದೆ ರಮೇಶ ನಾಯ್ಕೋಡಿ 100 ಅಂಕಗಳಿಗೆ ಪ್ರತಿಶತ 95 ಅಂಕಗಳನ್ನು ಪಡೆಯುವ ಮೂಲಕ ತಾಲ್ಲೂಕಿಗೆ ಹಾಗೂ ಸ್ವಗ್ರಾಮಕ್ಕೆ ಕೀರ್ತಿ ತಂದಿದ್ದಾಳೆ.



ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದಂಡಸೊಲ್ಲಾಪುರದ ಶಾಲೆಯಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಸಂಕೇಶ್ವರಹಾಳದ ಶ್ರೀ ಕೆ.ಆರ್.ನವೋದಯ ತರಬೇತಿ ಕೇಂದ್ರದಲ್ಲಿ ಉತ್ತಮ ತರಬೇತಿ ಪಡೆದು ಉತ್ತೀರ್ಣಳಾಗಿದ್ದಾಳೆ. ವಿದ್ಯಾರ್ಥಿನಿಯ ಈ ಸಾಧನೆಗೆ ಕೆ. ತಳ್ಳಿ ಗ್ರಾಮಸ್ಥರು ಹಾಗೂ ದಂಡಸೊಲ್ಲಾಪುರ ಶಾಲೆಯ ಶಿಕ್ಷಕರು ಮತ್ತು ಬಾಲಕಿಗೆ ಉತ್ತಮ ತರಬೇತಿ ನೀಡಿದ ಸಂಕೇಶ್ವರಹಾಳ ಶಾಲೆಯ ಶಿಕ್ಷಕ ವೃಂದ ಹಾಗೂ ಆಡಳಿತ ಮಂಡಳಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.



ಕೊಟ್ಟೂರು: ದ್ವಿತೀಯ ಪಿಯುನಲ್ಲಿ ಮೊದಲ ರ್‍ಯಾಂಕ್ ಪಡೆದಿದ್ದಕ್ಕೆ ಅರ್ಚನ ದೊಡ್ಡಮನಿ ಅವರಿಗೆ ತಂದೆ-ತಾಯಿ ಸಿಹಿ ತಿನ್ನಿಸಿ ಸಂಭ್ರಮಿಸಿದರು.

ಪರಿಣಾಮಕಾರಿ ಬೋಧನೆಗೆ ತರಬೇತಿ ಅಗತ್ಯ

◆**ಹನುಮಸಾಗರ:** ತರಬೇತಿಯು ನಿತ್ಯ ಹಾಗೂ ನಿರಂತರವಾಗಿರಬೇಕು. ಎಷ್ಟೇ ಅನುಭವ ಇದ್ದರೂ ತರಗತಿಗಳಿಗೆ ಸೂಕ್ತ ತಯಾರಿಯೊಂದಿಗೆ ಹೋಗಬೇಕು. ಉತ್ತಮ ಸಂವಹನ ಕೌಶಲಗಳೊಂದಿಗೆ ಸ್ಪಷ್ಟವಾಗಿ ಮತ್ತು ಪರಿಣಾಮ ಕಾರಿಯಾಗಿ ಬೋಧನೆ ಮಾಡಬೇಕು ಎಂದು ಕ್ಷೇತ್ರ ಸಮನ್ವಯಾಧಿಕಾರಿ ಎಂ.ಜಗದೀಶಪ್ಪ ಹೇಳಿದರು.

ಪಟ್ಟಣದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ನಡೆದ ಹನುಮಸಾಗರ ವಲಯ ಮಟ್ಟದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಿಆರ್‌ಪಿ ಲೆಂಕಪ್ಪ ವಾಲಿಕಾರ ಮಾತನಾಡಿ, 2026–27ನೇ ಸಾಲಿನಲ್ಲಿ ಪಠ್ಯ ಪುಸ್ತಕಗಳು ದ್ವಿಭಾಷಾ ಮಾಧ್ಯಮಗಳಲ್ಲಿ ಬರುತ್ತಿವೆ. ಕನ್ನಡ ಹಾಗೂ ಇಂಗ್ಲಿಷ್ ಎರಡು ಭಾಷೆಯಲ್ಲಿ ಬೋಧಿಸುವ ಶಿಕ್ಷಕರು ಸಂಪನ್ಮೂಲ ವ್ಯಕ್ತಿಗಳು ನೀಡುವ ತರಬೇತಿಯನ್ನು ಅಚ್ಚುಕಟ್ಟಾಗಿ ಪಡೆಯಬೇಕು. ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಸರಳ ಬೋಧನೆ,ಇಂಗ್ಲಿಷ್ ಅನ್ನು ಸಂವಹನ ಭಾಷೆಯಾಗಿ ಕಲಿಸುವುದು,ಕನ್ನಡ,ಇಂಗ್ಲಿಷ್ ವ್ಯಾಕರಣದ ಅರಿವು,ಆಟ ಮತ್ತು ಚಟುವಟಿಕೆಗಳ ಮೂಲಕ ಮಕ್ಕಳಿಗೆ ಇಂಗ್ಲಿಷ್ ಕಲಿಸುವ ವಿಧಾನಗಳ ಮೂಲಕ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡಬೇಕು ಎಂದು ತಿಳಿಸಿದರು. ಪ್ರಮುಖರಾದ ಕೆಪಿಎಸ್ ಶಾಲೆಯ ಎಸ್ ಡಿ ಎಂ ಸಿ ಉಪಾಧ್ಯಕ್ಷ ಬಸವರಾಜ ದ್ಯಾವಣ್ಣನವರ, ಶರಣಪ್ಪ ಬೋದುರ, ತಾಲೂಕು ನೋಡಲ್ ಅಧಿಕಾರಿ ಉಮೇಶ ಮೇಲಸಕ್ರಿ, ಮುಖ್ಯಶಿಕ್ಷಕರಾದ ಎಚ್.ಎಚ್. ಇಳಕಲ್, ವಸಂತ ರಾಜೂರಮಲ್ಲಣ್ಣ ಹುಲಿ ಇತರರು ಇದ್ದರು.



ಹನುಮಸಾಗರ: ಪಟ್ಟಣದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ನಡೆದ ಹನುಮಸಾಗರ ವಲಯ ಮಟ್ಟದ ಕಾರ್ಯಾಗಾರಕ್ಕೆ ಕ್ಷೇತ್ರ ಸಮನ್ವಯಾಧಿಕಾರಿ ಎಂ.ಜಗದೀಶಪ್ಪ, ಸಿಆರ್‌ಪಿ ಲೆಂಕಪ್ಪ ವಾಲಿಕಾರ,ಪ್ರಮುಖರಾದ ಕೆಪಿಎಸ್ ಶಾಲೆಯ ಎಸ್ ಡಿ ಎಂ ಸಿ ಉಪಾಧ್ಯಕ್ಷ ಬಸವರಾಜ ದ್ಯಾವಣ್ಣನವರ, ಶರಣಪ್ಪ ಬೋದುರ, ತಾಲೂಕು ನೋಡಲ್ ಅಧಿಕಾರಿ ಉಮೇಶ ಮೇಲಸಕ್ರಿ, ಮುಖ್ಯಶಿಕ್ಷಕರಾದ ಎಚ್.ಎಚ್. ಇಳಕಲ್, ವಸಂತ ರಾಜೂರಮಲ್ಲಣ್ಣ ಹುಲಿ ಇತರರು ಇದ್ದರು.

ದ್ವಿತೀಯ ಪಿಯುಸಿ ಫಲಿತಾಂಶ | 32ನೇ ಸ್ಥಾನದಿಂದ 29ಕ್ಕೆ ಜಿಗಿತ

ಕಲಬುರಗಿ ಫಲಿತಾಂಶ ಶೇ.21ರಷ್ಟು ಸುಧಾರಣೆ

◆**ಕಲಬುರಗಿ:** 2025–26ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು, ಕಲಬುರಗಿ ಜಿಲ್ಲೆಯು ಶೈಕ್ಷಣಿಕ ಕ್ಷೇತ್ರದಲ್ಲಿ ಕೊಂಚ ಸುಧಾರಣೆ ಕಂಡು ಹೊಸ ಭರವಸೆ ಮೂಡಿಸಿದೆ. ಜಿಲ್ಲೆಯ ಪ್ರತಿಭೆ ಸೃಷ್ಟಿ ಮಲ್ಲಿನಾಥ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದರೆ,ವಿಜ್ಞಾನ ವಿಭಾಗದಲ್ಲಿ ಸಿಮ್ರನ್ ಭಾನು ಜಿಲ್ಲೆಗೆ ಅತಿ ಹೆಚ್ಚು ಅಂಕ ಗಳಿಸಿ ಸಾಧನೆ ಮಾಡಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಜಿಲ್ಲೆಯ ಒಟ್ಟಾರೆ ಫಲಿತಾಂಶದಲ್ಲಿ ಶೇ. 21ಕ್ಕಿಂತ ಹೆಚ್ಚಿನ ಸುಧಾರಣೆ ಕಂಡು, 32ನೇ ಸ್ಥಾನದಿಂದ 29ನೇ ಸ್ಥಾನಕ್ಕೆ ಜಿಗಿದಿದೆ.



ಫಲಿತಾಂಶದಲ್ಲಿ ಶೇ. 21.27ರಷ್ಟು ಪ್ರಗತಿ: ಜಿಲ್ಲೆಯು ಈ ಬಾರಿ 76.97% ಫಲಿತಾಂಶ ದಾಖಲಿಸುವ ಮೂಲಕ ಗಮನಾರ್ಹ ಪ್ರಗತಿ ಸಾಧಿಸಿದೆ. 2025ರಲ್ಲಿ ಜಿಲ್ಲೆಯ ಫಲಿತಾಂಶ ಕೇವಲ 55.70% ಇತ್ತು. ಆದರೆ, ಈ ವರ್ಷ ಶಿಕ್ಷಣ ಇಲಾಖೆಯ ನಿರಂತರ ಪ್ರಯತ್ನ ಹಾಗೂ ವಿದ್ಯಾರ್ಥಿಗಳ ಪರಿಶ್ರಮದಿಂದ ಫಲಿತಾಂಶದಲ್ಲಿ 21.27% ರಷ್ಟು ಭಾರಿ ಏರಿಕೆ ಕಂಡಿದೆ. ರಾಜ್ಯ ಮಟ್ಟದ ಸ್ಥಾನದಲ್ಲಿ ಜಿಲ್ಲೆ 29ನೇ ಸ್ಥಾನದಲ್ಲಿದ್ದರೂ, ಕಳೆದ ಬಾರಿಗೆ ಹೋಲಿಸಿದರೆ ಅತಿ ವೇಗವಾಗಿ ಸುಧಾರಣೆ ಕಾಣುತ್ತಿರುವ ಜಿಲ್ಲೆಗಳಲ್ಲಿ ಒಂದಾಗಿದೆ.

ವಿಜ್ಞಾನ ವಿಭಾಗದಲ್ಲಿ ಸಿಮ್ರನ್ ಭಾನು ಜಿಲ್ಲೆಗೆ ಪ್ರಥಮ: ನಗರದ ಶರಣಬಸವೇಶ್ವರ ವಸತಿ ಕಾಲೇಜಿನ (ಎಸ್‌ಬಿಆರ್) ವಿದ್ಯಾರ್ಥಿನಿ ಸಿಮ್ರನ್ ಭಾನು 596 ಅಂಕಗಳೊಂದಿಗೆ (99.33%) ವಿಜ್ಞಾನ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಚಿತ್ತಾಪುರ ಮೂಲದ ಇವರು ಶ್ರೀ ದೊಡ್ಡಪ್ಪ ಅಪ್ಪ ಅವರ ಹೆಸರಿನಲ್ಲಿ ನೀಡಲಾಗುವ ವಿದ್ಯಾರ್ಥಿ ವೇತನದ ಅಡಿ ಉಚಿತ ಶಿಕ್ಷಣ ಪಡೆದು ಈ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿಯಾಗಿದೆ.

ಬಾಲಕಿಯರ ಭರ್ಜರಿ ಮೇಲುಗೈ: ಜಿಲ್ಲೆಯ ಪಿಯು ಫಲಿತಾಂಶದಲ್ಲಿ ಬಾಲಕಿಯರು ಬಾಲಕರಿಗಿಂತ ಶೇ. 10.28 ರಷ್ಟು ಅಧಿಕ ಸಾಧನೆ ಮಾಡುವ ಮೂಲಕ ಪಾರುಪತ್ಯ ಮೆರೆದಿದ್ದಾರೆ. ಪರೀಕ್ಷೆಗೆ ಹಾಜರಾದ 16,392 ಬಾಲಕಿಯರಲ್ಲಿ 11,689 ಮಂದಿ (71.31%) ಉತ್ತೀರ್ಣರಾಗಿದ್ದಾರೆ. ಬಾಲಕರು ಶೇ. 61.03 ರಷ್ಟು ಫಲಿತಾಂಶ ದಾಖಲಿಸಿದ್ದಾರೆ. ಈ ಸಾಧನೆಯು ಜಿಲ್ಲೆಯಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಪ್ರಗತಿ ಹಾಗೂ ಸಮಾಜದಲ್ಲಿ ಬದಲಾಗುತ್ತಿರುವ ಶೈಕ್ಷಣಿಕ ಮನೋಭಾವಕ್ಕೆ ಸಾಕ್ಷಿಯಾಗಿದೆ.

ಒಟ್ಟಾರೆಯಾಗಿ, ಕಲಬುರಗಿ ಜಿಲ್ಲೆಯು ತನ್ನ ಶೈಕ್ಷಣಿಕ ದಾರಿಯಲ್ಲಿ ಒಂದು ಗಟ್ಟಿ ಹೆಜ್ಜೆಯನ್ನು ಇಟ್ಟಿದೆ. ರಾಜ್ಯ ಸರಾಸರಿ 86.48% ತಲುಪಲು ಇನ್ನೂ ದಾರಿಯಿದ್ದರೂ, ಈ ವರ್ಷದ 21% ಏರಿಕೆಯು ಮುಂದಿನ ವರ್ಷಗಳಲ್ಲಿ ಜಿಲ್ಲೆಯು ಅಗ್ರ 10ರ ಪಟ್ಟಿಯಲ್ಲಿ ಕಾಣಿಸಿಕೊಳ್ಳಲು ಬೇಕಾದ ವಿಶ್ವಾಸವನ್ನು ನೀಡಿದೆ. ಜಿಲ್ಲೆಯಾದ್ಯಂತ ವಿದ್ಯಾರ್ಥಿಗಳ ಸಾಧನೆಗೆ ಸಾಮಾಜಿಕ ಜಾಲತಾಣಗಳಲ್ಲಿ ಅಭಿನಂದನೆಗಳ ಮಹಾಪೂರವೇ ಹರಿದುಬರುತ್ತಿದೆ.



ಕಳೆದ ಬಾರಿಯ ಫಲಿತಾಂಶಕ್ಕಿಂತ ಈ ಬಾರಿ ಫಲಿತಾಂಶದಲ್ಲಿ 21.27 ಪ್ರತಿಶತ ಸುಧಾರಣೆ ಕಂಡಿದ್ದು ನಿಜಕ್ಕೂ ಜಿಲ್ಲೆಗೆ ಹೆಮ್ಮೆಯ ಸಂಗತಿ.ವಿಶೇಷವಾಗಿ ಕಲಬುರಗಿಯ ವಿದ್ಯಾರ್ಥಿನಿ ಸೃಷ್ಟಿ ಮಲ್ಲಿನಾಥ ಕಲಾ ವಿಭಾಗದಲ್ಲಿ 598 ಅಂಕಗಳಿಂದ ರಾಜ್ಯ ಮಟ್ಟಕ್ಕೆ ಪ್ರಥಮ ಸ್ಥಾನ ಪಡೆದಿದ್ದು ಅತ್ಯಂತ ಖುಷಿ ನೀಡಿದೆ.ಅಭಿನಂಧನೆಗಳು ಸಲ್ಲಿಸುತ್ತೇನೆ.
■ ಫೌಜಿಯಾ ತರನ್ನುಮ್.ಡಿಸಿ

ಕಲ್ಯಾಣ ಕರ್ನಾಟಕದ ಫಲಿತಾಂಶ
- ◆ಕೊಪ್ಪಳ,17ನೇ ಸ್ಥಾನ 86.08
- ◆ಬೀದರ್,20ನೇ ಸ್ಥಾನ-84.61
- ◆ಬಳ್ಳಾರಿ,28ನೇ ಸ್ಥಾನ -78.69
- ◆ಕಲಬುರಗಿ,29ನೇ ಸ್ಥಾನ-76.97
- ◆ರಾಯಚೂರು,31ನೇ ಸ್ಥಾನ -74.09
- ◆ಯಾದಗಿರಿ,32ನೇ ಸ್ಥಾನ -71.21 (ಕೊನೆ ಸ್ಥಾನ)

ವಸತಿ ನಿಲಯದಲ್ಲಿ ಮೊಬೈಲ್ ಮುಕ್ತ ಶಿಕ್ಷಣ ಮತ್ತು ಉಪನ್ಯಾಸಕರ ನಿರಂತರ ಮಾರ್ಗದರ್ಶನ ನನ್ನ ಯಶಸ್ಸಿಗೆ ಕಾರಣ. ನಾನು ಎಂದಿಗೂ ಓದನ್ನು ಒತ್ತಡ ಎಂದು ಭಾವಿಸಲಿಲ್ಲ. ಶಿಕ್ಷಕರ ಬೋಧನೆ ಮತ್ತು ನಿಗಾ ಇದ್ದಿದ್ದರಿಂದ ಹೆಚ್ಚಿನ ಅಂಕ ಪಡೆಯಲು ಸಾಧ್ಯವಾಯಿತು.
■ ಸಿಮ್ರನ್ ಭಾನು, ಜಿಲ್ಲೆಗೆ ಪ್ರಥಮ (ವಿಜ್ಞಾನ ವಿಭಾಗ)

ಮಕ್ಕಳಿಗೆ ಪೋಕ್ಸೋ ಕಾನೂನು ಅರಿವು ಅಗತ್ಯ

◆**ಕೊಪ್ಪಳ:** ಮಕ್ಕಳಿಗೆ ಪೋಕ್ಸೋ ಕಾನೂನು ಕುರಿತು ಅರಿವು ಅಗತ್ಯವಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾಂತೇಶ್ ಎಸ್ ದರಗದ ಅವರು ಹೇಳಿದರು.

ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಬುಧುವಾರದಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕೊಪ್ಪಳ, ಜಿಲ್ಲಾ ವಕೀಲರು ಸಂಘ, ಕೊಪ್ಪಳ ಹಾಗೂ ಕಾಲೇಜಿನ ಮಹಿಳಾ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಕಾನೂನು ಅರಿವು -ನೆರವು ಹಾಗೂ ಕಾನೂನು ವಿದ್ಯಾ ಪ್ರಸಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪೋಕ್ಸೋ ಕಾಯ್ದೆ ಎಂಬುದು 18 ವರ್ಷದೊಳಗಿನ ಮಕ್ಕಳನ್ನು ಲೈಂಗಿಕ ದೌರ್ಜನ್ಯ, ಶೋಷಣೆ ಮತ್ತು ಅಶ್ಲೀಲತೆಯಿಂದ ರಕ್ಷಣೆ ಮಾಡುವ ಉದ್ದೇಶದಿಂದ ಜಾರಿಗೆ ತಂದಿದೆ. ಬಾಲ್ಯ ವಿಹಾಗಳಿಂದ ಮಹಿಳೆಯರ ಮಾನಸಿಕ ಮತ್ತು ದೈಹಿಕ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ. ಮಹಿಳಾ ಸಹಾಯವಾಣಿದಿಂದ ಬಾಲ್ಯ ವಿವಾಹಗಳನ್ನು ತಡೆಗಟ್ಟಬಹುದು ಎಂದರು.

ಅವಿಭಕ್ತ ಕುಟುಂಬಗಳು ವ್ಯವಸ್ಥೆ ಕಡಿಮೆ ಆಗಿವೆ. ಎಲ್ಲರೂ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಸೌಲಭ್ಯಗಳನ್ನು ಉಪಯೋಗ ಮಾಡಿಕೊಂಡು ಸ'ಬಲೀಕ'ರ'ಣವಾ'ಗ'ಬೇ'ಕ'ು. ಮಹಿಳೆಯರಿಗೆ ಕಾನೂನಿನ ಅರಿವು ಅಗತ್ಯವಿದೆ. ಬಾಲ್ಯ ವಿವಾಹಗಳನ್ನು ತಡೆಗಟ್ಟುವ ಸಾಮಾಜಿಕ ಜವಾಬ್ದಾರಿ ಎಲ್ಲರ ಮೇಲಿದೆ. ಅಂತರ್ಜಾಲ ಮತ್ತು ಸಾಮಾಜಿಕ ಮಾಧ್ಯಮಗಳು ಬಳಸುವಾಗ ಜಾಗೃತಿ ವಹಿಸಬೇಕು ಎಂದು ತಿಳಿಸಿದರು.

ಪ್ರಾಚಾರ್ಯ ಡಾ. ಗಣಪತಿ ಲಮಾಣಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ರಾದ ಡಾ. ಗವಿಸಿದ್ದಪ್ಪ ಮುತ್ತಾಳ, ಡಾ. ಹುಲಿಗೆಮ್ಮ, ಡಾ. ನರಸಿಂಹ, ಡಾ. ಗೀತಾ ಮುತ್ತಾಳ, ಡಾ. ಸುಧಾಕರ್, ಅಕ್ಕಮ್ಮ, ಮಾರುತಿ, ಇಮಾಮ್ ಸಾಬ ಹಾಗೂ ಇತರರು ಉಪಸ್ಥಿತರಿದ್ದರು.



ಏ.11ರಿಂದ 40ನೇ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನ: ಗುರುನಾಥ



◆**ರಾಯಚೂರು:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಬೀದರ್‌ನಲ್ಲಿ ಏ.11, 12ರಂದು 40ನೇ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಆರ್.ಗುರುನಾಥ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೀದರ್‌ನ ಝಿರಾ ಕನ್ವೆನ್ಷನ್ ಹಾಲ್‌ನಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಮ್ಮೇಳನ ಉದ್ಘಾಟಿಸುವರು. ವಸ್ತು ಪ್ರದರ್ಶನಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಚಾಲನೆ ನೀಡುವರು ಎಂದರು.

ಬಸವಕಲ್ಯಾಣದ ಹಾರಕೂಡ ಹಿರೇಮಠದ ಡಾ.ಚನ್ನವೀರ ಶಿವಾಚಾರ್ಯರು, ಬಸವ ಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರು ಸಾನ್ನಿಧ್ಯ ವಹಿಸುವರು. ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಪ್ರಧಾನ ಭಾಷಣ ಮಾಡುವರು. ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸುವರು ಎಂದು ಹೇಳಿದರು.

ಹಿಂದೆ ಸಮ್ಮೇಳನವನ್ನು ಕೇವಲ ಒಂದು ದಿನ ಮಾತ್ರ ನಡೆಸಲಾಗುತ್ತಿತ್ತು. ಈಗ ಎರಡು ದಿನ ಮಾಡಲಾಗುತ್ತಿದೆ. ಸಮ್ಮೇಳನದಲ್ಲಿ ಪತ್ರಕರ್ತರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಕೆಲಸವಾಗುತ್ತಿದೆ. ಈ ಬಾರಿಯೂ ಸಮ್ಮೇಳನದಲ್ಲಿ ಅನೇಕ ಗೋಷ್ಠಿಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ್, ಪ್ರಜಾವಾಣಿ ಸಂಪಾದಕ ರವೀಂದ್ರ ಭಟ್, ಕನ್ನಡಪ್ರಭ ಪ್ರಧಾನ ಸಂಪಾದಕ ರವಿ ಹೆಗಡೆ, ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಆಯುಕ್ತರಾದ ರುದ್ರಣ್ಣ ಹರ್ತಿಕೋಟೆ, ಬದ್ರುದ್ದೀನ್ ಹಾಗೂ ಆಯೋಗದ ಕಲಬುರಗಿ ವಿಭಾಗದ ಆಯುಕ್ತ ಬಿ.ವೆಂಕಟಸಿಂಗ್ ಸೇರಿದಂತೆ ವಿವಿಧ ಜನಪ್ರತಿನಿಧಿಗಳು, ಗಣ್ಯರು ಸೇರಿದಂತೆ ಅನೇಕರು ಪಾಲ್ಗೊಳ್ಳುವರು ಎಂದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ಧಯ್ಯ ಸ್ವಾಮಿ ಕುಕನೂರು, ರಾಜ್ಯ ಸಮಿತಿ ಸದಸ್ಯರಾದ ಬಸವರಾಜ ನಾಗಡದಿನ್ನಿ, ಅರವಿಂದಕುಲಕರ್ಣಿ, ಉಪಾಧ್ಯಕ್ಷಮಹಾನಂದ ನಾಯಕ, ಖಜಾಂಚಿ ಮಲ್ಲಿಕಾರ್ಜುನಯ್ಯ ಗೋಷ್ಠಿಯಲ್ಲಿದ್ದರು.

ಹಡಪದ ಅಪ್ಪಣನವರ ಮೂರ್ತಿ ಪುನಃ ಪ್ರತಿಷ್ಠಾಪಿಸಲು ಆಗ್ರಹ

◆**ಯಲಬುರ್ಗಾ:** ಬೀದರ ಜಿಲ್ಲೆಯ ಬಸವ ಕಲ್ಯಾಣದ ಅನುಭವ ಮಂಟಪದ ತ್ರಿಪುರಾಂತಕ ಕೆರೆ ಹತ್ತಿರ ಇರುವ ಹಡಪದ ಅಪ್ಪಣನವರ ಅರಿವಿನ ಗವಿಯಲ್ಲಿ ಅಪ್ಪಣನವರ ಮೂರ್ತಿ ಮನಃ ಪ್ರತಿಷ್ಠಾಪನೆ ಮಾಡುವಂತೆ ಒತ್ತಾಯಿಸಿ ಮಂಗಳವಾರ ತಾಲೂಕು ಹಡಪದ ಅಪ್ಪಣ ಕ್ಷೌರಿಕ ಸಮಾಜ ಸೇವಾ ಸಂಘ ಪಟ್ಟಣದ ತಹಶೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದರು.

ಹಡಪದ ಅಪ್ಪಣ ಸಮಾಜಯ ತಾಲೂಕಾಧ್ಯಕ್ಷ ಈರಣ್ಣ ಹಡಪದ ಪ್ರತಿಭಟನೆ ನೇತೃತ್ವ ವಹಿಸಿ ಮಾತನಾಡಿದ ಅವರು, ಬೀದರ ಜಿಲ್ಲೆ ಬಸವ ಕಲ್ಯಾಣದಲ್ಲಿರುವ ಅನುಭವ ಮಂಟಪದ ತ್ರಿಪುರಾಂತಕ ಕೆರೆಹತ್ತಿರ 12ನೇ ಶತಮಾನದ ಅನೇಕ ಬಸವಾದಿ ಶರಣರ ಅರಿವಿನ ಗವಿಗಳು ಇರುವುದಾಗಿ ಇತಿಹಾಸವೇ ಇದೆ. ಬಸವಣ್ಣನವರು ಇದ್ದಲ್ಲಿ ಹಡಪದ ಅಪ್ಪಣನವರು ಇರುತ್ತಿದ್ದರು.ಅವರ ಆಪ್ತ ಕಾರ್ಯದರ್ಶಿಯಾಗಿ ಹಿತೈಷಿಯಾಗಿ ಅವರೊಂದಿಗೆ ವಾಸಿಸುತ್ತಿದ್ದರು. ಹೀಗಾಗಿಯೆ ನಗರದ ಬಸವಣ್ಣನವರ ಅರಿವಿನ ಮನೆ ಪಕ್ಕದಲ್ಲಿಯೇ ಅಪ್ಪಣನವರ ಗವಿಯಿದೆ.ಆದರೂ ಈಚೆಗೆ ಅಲ್ಲಿನ ನಾಮಫಲಕ ತಗೆದು ಅನ್ಯಾಯ ಮಾಡಲಾಗಿದೆ.ಪುನ:ಅಲ್ಲಿಯೇ ಫಲಕ ಅಳವಡಿಸಿ ಗವಿಯ ಅಭಿವೃದ್ಧಿ ಕೈಗೊಳ್ಳಬೇಕು ಎಂದರು.



ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಲ್ಲಿಕಾರ್ಜುನ ಹಡಪದ, ಗೌರವಾಧ್ಯಕ್ಷ ಶಿವಪ್ಪ ಶಾಸ್ತ್ರೀ ಹಾಗೂ ದೇವಪ್ಪ ಶಾಸ್ತ್ರೀ ಮಾತನಾಡಿದರು.ಬಳಿಕ ಕುಕನೂರು ಉಪತಹಶೀಲ್ದಾರ್ ಮುರುಳಿಧರಾವ್ ಕುಲಕರ್ಣಿ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಈ ವೇಳೆಯಲ್ಲಿ ಸಮಾಜದ ಮುಖಂಡರಾದ ಶರಣಪ್ಪ ಹಡಪದ, ಪ್ರಭುರಾಜ ಮಾರನಾಳ, ಬಸವರಾಜ ಹಡಪದ, ಬಸಪ್ಪ ರಾಟಿ, ರೇವಣೆಪ್ಪ ಕೋನಸಾಗರ, ಮಹಾಂತೇಶ ಹಡಪದ, ನೀಲಪ್ಪ ಹಡಪದ, ಶರಣಪ್ಪ ಮ್ಯಾಗೇರಿ, ಚನ್ನಪ್ಪ ನಿಡಶೇಷಿ, ವಿರೇಶ ಹಡಪದ,ಸಿದ್ದು, ಪ್ರಭುರಾಜ ಕಲ್ಲೂರ, ಶಿವಕುಮಾರ, ಆನಂದ ಹಡಪದ, ಪುಭ್ರಾಜ ತಲ್ಲೂರ, ದೇವರಾಜ ಹೊಸೂರ,ಬಾಳಪ್ಪ ಹಡಪದ ಮತ್ತಿತರರು ಇದ್ದರು.

ಸಂಕಲ್ಪ ಮಹಿಳಾ ಮಹಾವಿದ್ಯಾಲಯಕ್ಕೆ ಎರಡು ಚಿನ್ನದ ಪದಕ

◆**ಗಂಗಾವತಿ:** ರಾಷ್ಟ್ರೀಯ ಶಿಕ್ಷಣ ನೀತಿಯ ಎರಡನೆಯ ಬ್ಯಾಚ್‌ನಲ್ಲಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಪ್ರಕಟಿಸಿದ 2024–25ನೇ ಸಾಲಿನ ಬಿ.ಎ ವಿಭಾಗದಲ್ಲಿ ಚಿನ್ನದ ಪದಕ ವಿಜೇತರ ಪಟ್ಟಿ ಬಿಡುಗಡೆಯಾಗಿದ್ದು, ನಮ್ಮ ಸಂಕಲ್ಪ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದ ಒಟ್ಟು ಇಬ್ಬರು ವಿದ್ಯಾರ್ಥಿನಿಯರು ಚಿನ್ನದ ಪದಕ ಗಳಿಸಿದ್ದಾರೆ.





ಕಾಲೇಜಿನ ವಿದ್ಯಾರ್ಥಿನಿಯರಾದ ತಿರುಮಲ ಪಾಮಣ್ಣ ಪೂಜಾರಿ ಶೇಕಡಾ 92.70% ಅಂಕ ಪಡೆದು ಬಿ.ಎ ವಿಭಾಗದಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಚಿನ್ನದ ಪದಕ ಪಡೆದಿದ್ದಾರೆ. ರೇವತಿ ಜಯಣ್ಣ ಹೆಬ್ಬಾಳ ಮುಸ್ಟೂರು ಐಚ್ಚಿಕ ಕನ್ನಡದಲ್ಲಿ ಶೇಕಡಾ 95.50% ಅಂಕ ಪಡೆಯುವುದರ ಮೂಲಕ ಚಿನ್ನದ ಪದಕ ಪಡೆದಿದ್ದಾರೆ. ಈ ಮೂಲಕ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಐಚ್ಚಿಕ ಕನ್ನಡ ವಿಭಾಗದಲ್ಲಿ ಸತತ 3ನೇ ಬಾರಿಗೆ ಚಿನ್ನದ ಪದಕ ಪಡೆಯುವುದರ ಮೂಲಕ ನಮ್ಮ ಕಾಲೇಜಿಗೆ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಈ ಸಂದರ್ಭದಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಹೇಮಂತರಾಜ ಜಿ. ಕಲ್ಮಂಗಿ, ಕಾರ್ಯಾಧ್ಯಕ್ಷರಾದ ನಾಗರಾಜ ಎಸ್ ಗುತ್ತೇದಾರ, ಉಪಾಧ್ಯಕ್ಷರಾದ ಡಾ. ಎಂ.ಆರ್ ಮಂಜುಸ್ವಾಮಿ, ಕಾರ್ಯದರ್ಶಿಗಳಾದ ಬಸವರಾಜ ಎಲ್ ಕೇಸರಹಟ್ಟಿ, ಕೋಶಾಧ್ಯಕ್ಷರಾದ ಮಲ್ಲಿಕಾರ್ಜುನ ಸಿಂಗನಾಳ, ನಿರ್ದೇಶಕರಾದ ಡಾ. ಅಮಿತ್ ಕುಮಾರ್ ರೆಡ್ಡಿ, ಹಾಗೂ ಪ್ರಾಚಾರ್ಯರಾದ ಬಸಪ್ಪ ಶಿರಿಗೇರಿ ಹಾಗೂ ಮಹಾವಿದ್ಯಾಲಯದ ಎಲ್ಲಾ ಪ್ರಾಧ್ಯಾಪಕರು ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿ, ಅವರ ಭವಿಷ್ಯ ಉಜ್ವಲವಾಗಲೆಂದು ಶುಭಹಾರೈಸಿದರು.

ಸಿಎಂ ಕಾರ್ಯಕ್ರಮ: ಸೂಗೂರು ಗ್ರಾಮಕ್ಕೆ ಸಚಿವ ಭೇಟಿ ಪರಿಶೀಲನೆ



◆**ಕಲಬುರಗಿ:** ಇದೇ ಏ.11ರಂದು ಜಿಲ್ಲೆಯ ಚಿತ್ತಾಪುರ ತಾಲೂಕಿನ ಎನ್.ಸೂಗೂರು ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡಿರಯುವ ಶ್ರೀ ಭೋಜಲಿಂಗೇಶ್ವರ ದೇವಾಲಯ ಹಾಗೂ ಬೆಳ್ಳಿ ಲೇಪಿತ ರಥವನ್ನು ಸಿಎಂ ಸಿದ್ದರಾಮಯ್ಯ ನವರು ಉದ್ಘಾಟಿಸಲಿದ್ದು,ಈ ಹಿನ್ನೆಲೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಸೂಗೂರು ಗ್ರಾಮಕ್ಕೆ ತೆರಳಿ ಸಮಾರಂಭ ನಡೆಯುವ ಸ್ಥಳದ ವೀಕ್ಷಣೆ ಮಾಡಿದರು.

ಅಂದಿನ ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರ ಆಸನದ ವ್ಯವಸ್ಥೆ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಆಸನದ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಇತರ ಸೌಲಭ್ಯಗಳನ್ನು ವೀಕ್ಷಿಸಿದರು.ಗಣ್ಯರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸೂಕ್ತ ಬಂದೋಬಸ್ತ್ ಸೇರಿದಂತೆ ಇತರೆ ವಿಷಯಗಳ ಕುರಿತಂತೆ ಸಚಿವರ ಅಧಿಕಾರಿಗಳೊಂದಿಗೆ ಚರ್ಚಿಸಿ ಶಿಷ್ಟಾಚಾರದಲ್ಲಿ ಯಾವುದೇ ಲೋಪವಾಗದಂತೆ ಅಗತ್ಯ ಹಾಗೂ ಕಟ್ಟುನಿಟ್ಟಿನ ಕ್ರಮವಹಿಸುವಂತೆ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ಎಸ್ ಪಿ ಅಡ್ಡೂರು ಶ್ರೀನಿವಾಸಲು, ಸಿಇಓ ಭಂವರ್ ಸಿಂಗ್ ಮೀನಾ ಸೇರಿದಂತೆ ಇತರೆ ಅಧಿಕಾರಿಗಳಿದ್ದರು.

ಪಿಯು ಉತ್ತಮ ಸಾಧನೆ

◆**ಕುಕನೂರು:** ದ್ವಿತೀಯ ಪಿ.ಯು. ಪರೀಕ್ಷೆಯ ಫಲಿತಾಂಶ ಗುರುವಾರ ತೆರೆಕಂಡಿದ್ದು ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜುನಲ್ಲಿ ವಾಣಿಜ್ಯ ಮತ್ತು ಕಲಾ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 102 ವಿದ್ಯಾರ್ಥಿಗಳ ಪೈಕಿ 59 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ 59% ಉತ್ತೀರ್ಣರಾಗಿದ್ದಾರೆ. ಪರೀಕ್ಷೆಯಲ್ಲಿ ವಾಣಿಜ್ಯ ಮತ್ತು ಕಲಾ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ ವಿಭಾಗದಲ್ಲಿ ವಾಣಿಜ್ಯ ವಿಭಾಗದಲ್ಲಿ ಶೇ. 77% ಫಲಿತಾಂಶ ದಾಖಲಾಗಿದೆ ಕಲಾ ವಿಭಾಗದಲ್ಲಿ 55% ವಿಜ್ಞಾನ ವಿಭಾಗದಲ್ಲಿ 42.85% ಸೇರಿ ಉತ್ತಮವಾದ ಫಲಿತಾಂಶವನ್ನು ಕಂಡಿದ್ದಾರೆ.

ಒಟ್ಟಾರೆಯಾಗಿ ಎಲ್ಲಾ ವಿಭಾಗದಲ್ಲಿ ಸೇರಿ 4 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, ಪ್ರಥಮ ಶ್ರೇಣಿಯಲ್ಲಿ 35 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ 14 ಹಾಗೂ ತೃತಿಯ ಶ್ರೇಣಿಯಲ್ಲಿ 6 ವಿದ್ಯಾರ್ಥಿಗಳು ತೇರ್ಗಡೆ ಗೊಂಡಿದ್ದಾರೆ. ಕಲಾ ವಿಭಾಗದಲ್ಲಿ ಮಲಕ್ ಸಮುದ್ರದ ಗ್ರಾಮದ ಮಾರುತಿ ವಿದ್ಯಾರ್ಥಿ 600 ಕ್ಕೆ 557 ಅಂಕ ಪಡೆದು ಕಾಲೇಜಿಗೆ ಟಾಪರ್ ಎನಿಸಿಕೊಂಡಿದ್ದಾನೆ. ಉತ್ತಮವಾಗಿ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಉಪನ್ಯಾಸಕರಿಗೆ ಪ್ರಾಚಾರ್ಯರಾದ ಈಶಪ್ಪ ಮಳಿಗೆಯವರು ಉತ್ತಮ ಸಾಧನೆಗೆ ಶ್ರಮವಿಸಿದ್ದಾರೆ ನಿಮ್ಮ ಶ್ರಮ ಹೀಗೆ ಇರಲಿ ಎಂದು ಶುಭ ಹಾರೈಸಿದ್ದಾರೆ.

ಪಿಯುಸಿಯಲ್ಲಿ ಪ್ರತಿಶತ 86.08ರಷ್ಟು ಫಲಿತಾಂಶ ದಾಖಲು: ಡಾ.ಸುರೇಶ ಇಟ್ನಾಳ

◆**ಕೊಪ್ಪಳ:** 2025–26ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಏಪ್ರೀಲ್ 9ರಂದು ಪ್ರಕಟವಾಗಿದ್ದು, ಕೊಪ್ಪಳ ಜಿಲ್ಲೆಯು ಪ್ರತಿಶತ 86.08ರಷ್ಟು ಫಲಿತಾಂಶ ದಾಖಲಿಸಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ ಇಟ್ನಾಳ ತಿಳಿಸಿದ್ದಾರೆ.

ಹಿಂದಿನ ಶೈಕ್ಷಣಿಕ ವರ್ಷದಲ್ಲಿ 23ನೇ ಸ್ಥಾನದಲ್ಲಿದ್ದ ಕೊಪ್ಪಳ ಜಿಲ್ಲೆಯು 2025–26ನೇ ಶೈಕ್ಷಣಿಕ ವರ್ಷದಲ್ಲಿ 17ನೇ ಸ್ಥಾನಕ್ಕೇರಿ ಉತ್ತಮ ಸಾಧನೆ ತೋರಿದೆ.

ಕೊಪ್ಪಳ ಸೇರಿದಂತೆ ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ ಒಳಗೊಂಡ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕೊಪ್ಪಳಕ್ಕೆ ಮೊದಲನೇ ಸ್ಥಾನ ಲಭಿಸಿದ್ದು ಸಂತಷ ತಂದಿದೆ ಎಂದು ಅವರು ತಿಳಿಸಿದ್ದಾರೆ.

ಹೊಸದಾಗಿ ಪರೀಕ್ಷೆ ಬರೆದಿದ್ದ ಒಟ್ಟು 13,312 ವಿದ್ಯಾರ್ಥಿಗಳ ಪೈಕಿ 11,555 ವಿದ್ಯಾರ್ಥಿಗಳು ಪಾಸಾಗಿ ಶೇ.86.08ರಷ್ಟು ಫಲಿತಾಂಶ ದಾಖಲಾಗಿ, ಈ ಬಾರಿಯ ಫಲಿತಾಂಶದಲ್ಲಿ ಕೊಪ್ಪಳ ಜಿಲ್ಲೆಯು ಉತ್ತಮ ಸ್ಥಾನ ಕಾಯ್ದುಕೊಂಡಿದೆ. ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು, ಹೊಸಬರು ಹಾಗೂ ಖಾಸಗಿ ಮತ್ತು ರಿಪೀಟರ್ಸ್ ಸೇರಿ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 15,503 ಅಭ್ಯರ್ಥಿಗಳ ಪೈಕಿ 12,189 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ. ಪ್ರಥಮ ಬಾರಿಗೆ ಪರೀಕ್ಷೆ ಬರೆದ ಅಭ್ಯರ್ಥಿಗಳ ಪೈಕಿ ಕಲಾ ವಿಭಾಗದಲ್ಲಿ ಶೇ.78.36., ವಾಣಿಜ್ಯ ವಿಭಾಗದಲ್ಲಿ ಶೆ.90.39., ವಿಜ್ಞಾನ ವಿಭಾಗದಲ್ಲಿ ಶೇ.92.72ರಷ್ಟು ಫಲಿತಾಂಶ ದಾಖಲಾಗಿದೆ. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸೇರಿ ನಗರ ಪ್ರದೇಶದಲ್ಲಿ ಶೇ.84.64 ಹಾಗೂ ಗ್ರಾಮೀಣ ಪ್ರದೇಶದಲ್ಲಿ ಶೇ.89.99.02ರಷ್ಟು ಫಲಿತಾಂಶ ದಾಖಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

» ಕಲ್ಯಾಣ ಕರ್ನಾಟಕದಲ್ಲಿ ಕೊಪ್ಪಳಕ್ಕೆ ಮೊದಲನೇ ಸ್ಥಾನ

» ಹಿಂದಿನ ವರ್ಷ 23ನೇ ಸ್ಥಾನದಲ್ಲಿದ್ದ ಕೊಪ್ಪಳಕ್ಕೆ ಈ ಬಾರಿ 17ನೇ ಸ್ಥಾನದ ಸಾಧನೆ

ತಾತ್ಕಾಲಿಕ ಪಟ್ಟಿ ಪ್ರಕಟ ಆಕ್ಷೇಪಣೆಗೆ ಏ.13ರ ವರೆಗೆ ಅವಕಾಶ: ಲಿಂಗನಗೌಡ

◆**ಸಿಂಧನೂರು:** ಸಿಂಧನೂರು ಶಿಶು ಅಭಿವೃದ್ಧಿ ಯೋಜನೆಯಡಿ ಈ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ 1 ಹಾಗೂ 7 ಸಹಾಯಕಿಯರ ಹುದ್ದೆಗಳಿಗೆ ಭರ್ತಿ ಮಾಡಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟವಾಗಿದ್ದು, ಆಕ್ಷೇಪಣೆಗಳಿದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಸಿಂಧನೂರು ಶಿಶು ಅಭಿವೃದ್ಧಿ ಯೋಜನೆ ಕಛೇರಿಗೆ ಸಲ್ಲಿಸಿ ಎಂದು ಸಿಡಿಪಿಓ ಲಿಂಗನಗೌಡ ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದರು.



ತಾಲೂಕಿನ ಸತ್ಯವತಿ ಕ್ಯಾಂಪ್ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಮರಿಯಮ್ಮ ಗಂಡ ಯೇಸುರತ್ನ (ಪ.ಜಾ) ಹಾಗೂ ಅಂಗನವಾಡಿ ಸಹಾಯಕಿ ಹುದ್ದೆಗೆ ತಾಲೂಕಿನ ಸಿದ್ರಾಂಪುರ-1 ಚೈತ್ರಾ ತಂದೆ ರುದ್ರಮುನಿ(ಪ.ಜಾ),ಈರಣ್ಣಕ್ಯಾಂಪ್ ನ ಮಂಜುಳ ಕುರಿ ಗಂಡ ಅಯ್ಯಪ್ಪ (ಇತರೆ),ಸಿಂಗಾಪುರ-1 ಚೈತ್ರಾ ತಂದೆ ಉಮೇಶ (ಇತರೆ),ಸಿಂಧನೂರು ನಗರದ ಇಂದಿರಾ ಕಾಲೋನಿಯ ದೌಲಬೀ ದಿ.ಸುಭಾನ್ ಪಾಷಾ(ಇತರೆ),ಗಾಂಧಿನಗರ-5 ಪಾತಿಮಾ ಗಂಡ ಲಾಲ್ ಮಹ್ಮದ್ ಹಾಗೂ ರೌಡಕುಂದ ಗ್ರಾಮ ಪ'ಂಚಾಯತಿಯ ಅಂಬಾ ನಗರ ಕ್ಯಾಂಪ್ (ಇತರೆ) ಅಕ್ಕಮ್ಮಡಿ. ಸಗರಪ್ಪ, (ಇತರೆ) ಸತ್ಯವತಿ ಕ್ಯಾಂಪ್ ಗಿರಿಜಾ ಕವಿತಾ ಗಂ ರವಿಕುಮಾರ್ (ಪ.ಜಾ) ಖಾಲಿ ಹುದ್ದೆಗಳಿಗೆ ಅರ್ಜಿ,ಅರ್ಹತೆ,ಅಂಕಗಳನ್ನು ಆಧರಿಸಿ ಆಯ್ಕೆ ಮಾಡಿ ತಾತ್ಕಾಲಿಕ ಪಟ್ಟಿ ಪ್ರಕಟಣೆ ಮಾಡಲಾಗಿದೆ.

ಇವುಗಳಿಗೆ ಸಂಬಂಧಿಸಿದಂತೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಏಪ್ರಿಲ್ 13 2026ರೊಳಗಾಗಿ ಅರ್ಜಿ ಸಲ್ಲಿಸಿ ಎಂದು ತಿಳಿಸಿದರು.

ಕಿರುಸುದ್ದಿ

ಮುದ್ದಿ ಬಸವೇಶ್ವರ ಸ್ವಾಮಿ ರಥೋತ್ಸವ

ಹಗರಿಬೊಮ್ಮನಹಳ್ಳಿ: ತಾಲೂಕಿನ ಮಾಲವಿ ಗ್ರಾಮದ ಶ್ರೀ ಮುದ್ದಿ ಬಸವೇಶ್ವರ ಸ್ವಾಮಿ ರಥೋತ್ಸವ ವೈಭವದಿಂದ ನಡೆಯಿತು.

ಗುರುವಾರ ಶ್ರೀ ಮುದ್ದಿ ಬಸವೇಶ್ವರ ಸ್ವಾಮಿ ರಥೋತ್ಸವ ಅಂಗವಾಗಿ ವಿಶೇಷ ಪೂಜಾ ಕೈಂಕರ್ಯಗಳು ವಿಜೃಂಭಣೆಯಿಂದ ನಡೆಯಿತು.

ಸಂಜೆ ಬಣಕಾರ ಮನೆಯಿಂದ ಬಲ ಬುತ್ತಿ ತರಲಾಯಿತು.ಬಳಿಕ ರಥೋತ್ಸವಕ್ಕೆ ಪೂಜೆ ಸಲ್ಲಿಸಿ ಶ್ರೀ ಮುದ್ದಿ ಬಸವೇಶ್ವರ ಸ್ವಾಮಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ರಥೋತ್ಸವ ಸುತ್ತುವರಿಯಲಾಯಿತು. ಬಳಿಕ ನಡೆದ ಪಟಾಕ್ಷಿ ಹರಾಜಿನಲ್ಲಿ ಭಲವಾದಿ ರವಿಕುಮಾರ್ ಯಮುನಪ್ಪ ಎಂಬುವರು 1 ಲಕ್ಷ 20 ಸಾವಿರ 101 ರೂ.ಗಳಿಗೆ ಪಡೆದರು.ನಂತರ ಶ್ರೀ ಮುದ್ದಿ ಬಸವೇಶ್ವರ ಸ್ವಾಮಿ ರಥೋತ್ಸವ ಸಮಾಳ ನಂದಿಕೋಲು ಸಕಲ ವಾದ್ಯ ಮೇಳದೊಂದಿಗೆ ಭಕ್ತರ ಜಯಘೋಷಗಳ ಮಧ್ಯೆ ಅದ್ದೂರಿಯಾಗಿ ನಡೆಯಿತು.ಭಕ್ತರು ಬಾಳೆ ಹಣ್ಣು ಉತ್ತುತ್ತಿ ರಥೋತ್ಸವಕ್ಕೆ ಎಸೆದು ಭಕ್ತಿ ಸಮರ್ಪಿಸಿದರು.

ಸಂದರ್ಭದಲ್ಲಿ ಮಾಲವಿ ಗ್ರಾಮದ ಗುರು ಹಿರಿಯರು ದೈವಸ್ಥರು,ಸುತ್ತಮುತ್ತಲಿನ ಗ್ರಾಮಗಳ ನಾಗರಿಕರು ಮಹಿಳೆಯರು ಮಕ್ಕಳು ಯುವಕರು ಪಾಲ್ಗೊಂಡಿದ್ದರು.

ಉತ್ತಮ ಫಲಿತಾಂಶ

ಹೂವಿನಹಡಗಲಿ: ತಾಲೂಕಿನ ಸೋಗಿ ಗ್ರಾಮದ ಪಟ್ಟೇದ ಸಿದ್ಧಮಲ್ಲಪ್ಪ ಸರಕಾರಿ ಪದವಿಪೂರ್ವ ಕಾಲೇಜು ದ್ವಿತೀಯ ಪಿಯುಸಿಯಲ್ಲಿ ಶೇ 86 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ. ಪರೀಕ್ಷೆಗೆ ಹಾಜರಾದ



ಒಟ್ಟು 27 ವಿದ್ಯಾರ್ಥಿಗಳಲ್ಲಿ 06 ಡಿಸ್ಟಿಂಕ್ಷನ್, 14 ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಸಂಗೀತ 558– 93%, ನಂದಿನಿ 537–89.5%, ಎಸ್.ಪವಿತ್ರ 527–87.8%, ವಿಜಯಲಕ್ಷ್ಮೀ 526–87.6%, ನಾಗರತ್ನ 516–86% ಪಡೆದು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಕನ್ನಡ, ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಶಿಕ್ಷಣಶಾಸ್ತ್ರ, ಸಮಾಜಶಾಸ್ತ್ರ ವಿಷಯದಲ್ಲಿ ಪರೀಕ್ಷೆಗೆ ಹಾಜರಾದ ಎಲ್ಲ ವಿದ್ಯಾರ್ಥಿಗಳು ಪಾಸಾಗಿರುವುದು ವಿಶೇಷವಾಗಿದೆ. ವಿದ್ಯಾರ್ಥಿಗಳ ಈ ಸಾಧನೆಯನ್ನು ಪ್ರಾಚಾರ್ಯರಾದ ಎಸ್.ಜ್ಯೋತಿ, ಉಪನ್ಯಾಸಕರಾದ ವೆಂಕಟೇಶ್, ಪರಶುರಾಮ ನಾಗೋಜಿ, ಶಬೀನ, ನರೇಶ್, ಜಯಪ್ರಕಾಶ್, ನಟರಾಜ್ ಹಾಗೂ ಕಾಲೇಜ್ ಅಭಿವೃದ್ಧಿ ಸಮಿತಿಯ ಎಲ್ಲ ಸದಸ್ಯರು, ಗ್ರಾಮಸ್ಥರು ಅಭಿನಂದಿಸಿದ್ದಾರೆ.

ಏ.30ರವರೆಗೆ ಶೇ.5ರಷ್ಟು ತೆರಿಗೆ ರಿಯಾಯಿತಿ

ಸಿರುಗುಪ್ಪ: 2026–27ನೇ ಸಾಲಿಗೆ ವಸತಿ, ವಾಣಿಜ್ಯ, ಕೈಗಾರಿಕಾ ನಿವೇಶನ ಮತ್ತು ಕಟ್ಟಡಗಳ ಆಸ್ತಿ ತೆರಿಗೆಯನ್ನು ಏ.30ರ ಒಳಗಾಗಿ ಪಾವತಿಸಿದರೆ, ಆಸ್ತಿ ತೆರಿಗೆಯ ಒಟ್ಟು ಮೊತ್ತದಲ್ಲಿ ಶೇ.5ರಷ್ಟು ರಿಯಾಯಿತಿ ಸಿಗಲಿದೆ.



ಪೌರಾಡಳಿತ ನಿರ್ದೇಶನಾಲಯದ ಅಧೀನದ ಸಿರುಗುಪ್ಪ ನಗರಸಭೆಯ ವ್ಯಾಪ್ತಿಯಲ್ಲಿರುವ ವಸತಿ, ವಾಣಿಜ್ಯ, ಕೈಗಾರಿಕಾ ನಿವೇಶನ ಮತ್ತು ಕಟ್ಟಡಗಳ ಆಸ್ತಿಯ ಮಾಲೀಕರು ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿ ಈ ಸೌಲಭ್ಯವನ್ನು ಪಡೆಯಬಹುದು ಎಂದು ನಗರಸಭೆಯ ಪೌರಾಯುಕ್ತ ಗಂಗಾಧರ ಅವರು ತಿಳಿಸಿದ್ದಾರೆ. ಮೇ ಹಾಗೂ ಜೂನ್ ತಿಂಗಳಲ್ಲಿ ಆಸ್ತಿ ತೆರಿಗೆ ಪಾವತಿಸುವವರಿಗೆ ಯಾವುದೇ ರಿಯಾಯಿತಿ ಇರುವುದಿಲ್ಲ ಹಾಗೂ ದಂಡವೂ ಇರುವುದಿಲ್ಲ, ಪೂರ್ಣ ಆಸ್ತಿ ತೆರಿಗೆ ಪಾವತಿ ಮಾಡಬೇಕಾಗುತ್ತದೆ.ಜುಲೈ ತಿಂಗಳಿನಿಂದ ಆಸ್ತಿ ತೆರಿಗೆ ಪಾವತಿಸುವವರು ಪ್ರತಿ ತಿಂಗಳಿಗೆ ಶೇ 2ರಷ್ಟು ದಂಡ ಶುಲ್ಕ ಸೇರಿಸಿ ಆಸ್ತಿ ತೆರಿಗೆ ಪಾವತಿ ಮಾಡಬೇಕಾಗುತ್ತದೆ. ಒಂದು ವರ್ಷದ ವಿಳಂಬಕ್ಕೆ ಆಸ್ತಿ ತೆರಿಗೆ ಪಾವತಿಗೆ ಶೇ. 18ರಷ್ಟು ದಂಡ ಪಾವತಿಸಬೇಕಾಗುತ್ತದೆ. ಮೂಲೆ ನಿವೇಶನಗಳ ಆಸ್ತಿ (ನಿವೇಶನ ಮತ್ತು ಕಟ್ಟಡ) ಮಾಲೀಕರು ಒಟ್ಟು ತೆರಿಗೆಯ ಶೇ 10ರಷ್ಟು ಹೆಚ್ಚಿನ ತೆರಿಗೆ ಪಾವತಿ ಮಾಡಬೇಕಾಗಿರುತ್ತದೆ.

ಆಸ್ತಿಗಳ ಮಾಲೀಕರು ಸಕಾಲದಲ್ಲಿ ಆಸ್ತಿ ತೆರಿಗೆ ಪಾವತಿಸುವ ಮೂಲಕ ನಗರದ ಸಾರ್ವಜನಿಕರಿಗೆ ಉತ್ತಮ ಮೂಲಸೌಕರ್ಯಗಳನ್ನು ಒದಗಿಸಲು ಸಹಕರಿಸಿ. ಇ–ಸ್ವೀಕೃತಿ ತಂತ್ರಾಂಶದಲ್ಲಿ ಲಾಗಿನ್ ಆಗಿ, ಪ್ರಾಪರ್ಟಿ ಐಡೆಂಟಿಫಿಕೇಶನ್ ನಂಬರ್ (ಪಿಐಡಿ/ ಪಿಯುಐಡಿ) ನಮೂದಿಸಿ ಪಾವತಿಸಬಹುದು ಅಥವಾ ಕಚೇರಿಗೆ ಭೇಟಿ ನೀಡಿ ಪಾವತಿಸಬಹುದು ಎಂದು ತಿಳಿಸಿದ್ದಾರೆ.



ಹಗರಿಬೊಮ್ಮನಹಳ್ಳಿ: ತಾಲೂಕಿನ ಮಾಲವಿ ಗ್ರಾಮದ ಶ್ರೀ ಮುದ್ದಿ ಬಸವೇಶ್ವರ ಸ್ವಾಮಿ ರಥೋತ್ಸವ ವೈಭವದಿಂದ ನಡೆಯಿತು.

ಸಿದ್ಧಲಿಂಗೇಶ್ವರ ಶಿವಯೋಗಿಗಳು ಐತಿಹಾಸಿಕ ಪುರುಷರು

ಸಿರುಗುಪ್ಪ: ಎಡೆಯೂರು ತೋಂಟದ ಸಿದ್ಧಲಿಂಗೇಶ್ವರ ಶಿವಯೋಗಿಗಳು ಐತಿಹಾಸಿಕ ಪುರುಷರು ಎಂದು ಪಾಲ್ತೂರು ಕಲ್ಲುಹೊಳೆ ಸಂಸ್ಥಾನ ಮಠದ ಚನ್ನವೀರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತಾಲೂಕಿನ ನಾಗರಹಾಳು ಗ್ರಾಮದ ಶ್ರೀಬೃಹನ್ಮಠದಲ್ಲಿ ಏಕೀಕರಣ ಹೋರಾಟಗಾರರಾದ ಲಿಂಗೈಕ್ಯ ಶರಣ ದೊಡ್ಡಯ್ಯಶಾಸ್ತ್ರಿಗಳ ಮತ್ತು ಲಿಂಗೈಕ್ಯ ಬಸವಮ್ಮ ಅವ್ವನವರ ಪುಣ್ಯಾರಾಧನೆ ಮತ್ತು ರಥೋತ್ಸವ ನಿಮಿತ್ತ ಗುರುವಾರ ಹಮ್ಮಿಕೊಂಡಿದ್ದ ಎಡೆಯೂರು ತೋಂಟದ ಸಿದ್ಧಲಿಂಗೇಶ್ವರ ಶಿವಯೋಗಿಗಳ ಪುರಾಣ ಪ್ರವಚನದಲ್ಲಿ ಮಾತನಾಡಿದರು. ಲೋಕದ ಜನರ ಅಧರ್ಮ, ಅನ್ಯಾಯಗಳನ್ನು ತಿದ್ದುವುದಕ್ಕೋಸ್ಕರ ಸಿದ್ಧಲಿಂಗೇಶ್ವರರು ಉದಯಿಸಿದರು ಎಂದು ಅಭಿಪ್ರಾಯಪಟ್ಟರು. ನೈತಿಕ, ಧಾರ್ಮಿಕ, ತಾತ್ವಿಕ ಚಿಂತನೆಗಳನ್ನು ಜಾಗೃತಗೊಳಿಸಿದವರು ಸಿದ್ಧಲಿಂಗೇಶ್ವರರು ಎಂದು ಆಂಧ್ರಪ್ರದೇಶದ ಆದೋನಿಯ ಮಂಡಗಿರಿ ಕಲ್ಮಠದ ಗುರುಸಿದ್ಧದೇವರು ತಿಳಿಸಿದರು.

ಗಡಿನಾಡ ಸಾಹಿತಿ ನಾ.ಮ. ಮರುಳಾರಾಧ್ಯರ ಪುರಾಣ ಪ್ರವಚನ, ನಾ.ಮ. ಜಗದೀಶ್ ಗವಾಯಿಗಳ ಪುರಾಣ ವಾಚನ, ಧಾರವಾಡ ಪ್ರಸನ್ನಕುಮಾರ ಹಿರೇಮಠ ವಾಯೋಲಿನ್ಗೆ ವಂದಲಿ ಬಸವರಾಜ ಹೂಗಾರ್ ತಬಲಾಸಾಥ್ ನೀಡಿದರು.

ಶರಣ ಬಸವರಾಜಯ್ಯತಾತ, ಶ್ರೀಕಂಠಯ್ಯತಾತ, ಎನ್.ಎಂ. ಕಲಿಗಣನಾಥ, ಚಂದ್ರಗೌಡ, ಹುಸೇನಪ್ಪ, ಹೊನ್ನೂರಸಾಬ್, ಶ್ರೀಮಠದ ಭಕ್ತರು, ಗ್ರಾಮಸ್ಥರು ಭಾಗವಹಿಸಿದ್ದರು.



ಸಿರುಗುಪ್ಪ: ತಾಲೂಕಿನ ನಾಗರಹಾಳು ಗ್ರಾಮದ ಶ್ರೀಬೃಹನ್ಮಠದಲ್ಲಿ ಏಕೀಕರಣ ಹೋರಾಟಗಾರರಾದ ಲಿಂಗೈಕ್ಯ ಶರಣ ದೊಡ್ಡಯ್ಯಶಾಸ್ತ್ರಿಗಳ ಮತ್ತು ಲಿಂಗೈಕ್ಯ ಬಸವಮ್ಮ ಅವ್ವನವರ ಪುಣ್ಯಾರಾಧನೆ ಮತ್ತು ರಥೋತ್ಸವ ನಿಮಿತ್ತಎಡೆಯೂರು ತೋಂಟದ ಸಿದ್ಧಲಿಂಗೇಶ್ವರ ಶಿವಯೋಗಿಗಳ ಪುರಾಣ ಪ್ರವಚನ ನಡೆಯಿತು.

ಗ್ರಾಮೀಣ ಕುಡಿಯುವ ನೀರು, ನೈರ್ಮಲ್ಯ ಪ್ರಗತಿ ಪರಿಶೀಲನಾ ಸಭೆ

ಕುಡಿಯುವ ನೀರಿಗೆ ಸಮಸ್ಯೆಯಾಗದಿರಲಿ

ವಿಜಯನಗರ: ಬೇಸಿಗೆಆರಂಭವಾಗಿರುವುದರಿಂದ ಜಿಲ್ಲೆಯಾದ್ಯಂತ ಸಾರ್ವಜನಿಕರಿಗೆ, ಅದರಲ್ಲೂ ಗ್ರಾಮೀಣ ಭಾಗದ ಜನ, ಜಾನುವಾರುಗಳಿಗೆ ಬೇಸಿಗೆಯ ಅವಧಿಯಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು ಎಂದು ಜಿಪಂ ಸಿಇಒ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಮ್ ಷಾ ಸೂಚಿಸಿದರು.

ಹೊಸಪೇಟೆ ನಗರದ ಜಿ.ಪಂ. ಕಚೇರಿಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಜಲ ಜೀವನ್ ಮಿಷನ್ ಯೋಜನೆಯಡಿ ಪ್ರತಿ ಮನೆಗೆ ನಳದ ಸಂಪರ್ಕ ಕಲ್ಪಿಸುವ ನೀರು ಪೂರೈಕೆ ಮಾಡಲಾಗುತ್ತದೆ. ವಿವಿಧ ತಾಂತ್ರಿಕ ಕಾರಣಗಳಿಂದ ಕಾಮಗಾರಿ ಅಪೂರ್ಣಗೊಂಡಿದ್ದಲ್ಲಿ ತ್ವರಿತವಾಗಿ ಪೂರ್ಣಗೊಳಿಸಿ ಸಮರ್ಪಕವಾಗಿ ನೀರು ಸರಬರಾಜು ಮಾಡಬೇಕು. ಬಾಕಿ ಇರುವ ಪೈಪ್‌ಲೈನ್ ಅಳವಡಿಕೆ ಹಾಗೂ ಟ್ಯಾಂಕ್ ನಿರ್ಮಾಣ ಕಾರ್ಯವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಬೇಸಿಗೆ ಆರಂಭವಾಗಿರುವುದರಿಂದ ಅಂತರ್ಜಲ ಮಟ್ಟ ಕುಸಿದಿರುವ ಹಳ್ಳಿಗಳನ್ನು ಗುರುತಿಸಿ, ಅಂತಹ ಕಡೆಗಳಲ್ಲಿ ಖಾಸಗಿ ಕೊಳವೆ ಬಾವಿ ಬಾಡಿಗೆಗೆ ಪಡೆದು ಅಥವಾ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು. ದುರಸ್ತಿಗೆ ಬಂದ ಕೈಪಂಪುಗಳನ್ನು ನಿರ್ಲಕ್ಷ್ಯವಹಿಸದೇ ತ್ವರಿತವಾಗಿ ದುರಸ್ತಿಗೊಳಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶಿಸಿದರು.

ನಗರ ಮತ್ತು ಗ್ರಾಮೀಣ ಭಾಗದಲ್ಲಿ ಸ್ಥಾಪಿಸಲಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದು. ತಾಂತ್ರಿಕ ದೋಷದಿಂದ ಸ್ಥಗಿತಗೊಂಡಿರುವ ಘಟಕಗಳ ವಸ್ತುಸ್ಥಿತಿ ಪರಿಶೀಲಿಸಿ ಸಮಗ್ರ ವರದಿ ನೀಡಬೇಕು. ದುರಸ್ತಿಗೆ ಬಂದಿರುವ ಘಟಕಗಳನ್ನು ತಕ್ಷಣವೇ ಸರಿಪಡಿಸಿ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವಂತೆ ತಿಳಿಸಿದ ಅವರು, ಮುಂದಿನ ದಿನಗಳಲ್ಲಿ ಮಳೆಗಾಲವೂ ಸಮೀಪಿಸುತ್ತಿರುವುದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಸಂಭವ ಹೆಚ್ಚಿರುತ್ತದೆ. ಆದ್ದರಿಂದ ನೀರಿನ ಮೂಲಗಳ ಸ್ವಚ್ಛ ಮತ್ತು ಶುಚಿತ್ವ ಕಾಪಾಡಿಕೊಳ್ಳಬೇಕು. ಗ್ರಾಮ ಮಟ್ಟದಲ್ಲಿ ನೀರಿನ ಗುಣಮಟ್ಟ ಪರೀಕ್ಷಿಸಲು ನೀಡಲಾಗಿರುವ ಫೀಲ್ಡ್ ಟೆಸ್ಟ್ ಕಿಟ್ ಬಳಸಿ ಕಾಲಕಾಲಕ್ಕೆ ನೀರಿನ ಮಾದರಿ ಪರೀಕ್ಷಿಸಬೇಕು ಮತ್ತು ಕಡ್ಡಾಯವಾಗಿ ಇದರ ದಾಖಲೆಯನ್ನು ಗ್ರಾಮ ಪಂಚಾಯತಿಯಲ್ಲಿ ನಿರ್ವಹಿಸಬೇಕು. ನಿರ್ಲಕ್ಷ್ಯ ವಹಿಸುವ ಅಥವಾ ಕರ್ತವ್ಯ ಲೋಪ ಎಸಗುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಜಿ.ಪಂ. ಉಪ ಕಾರ್ಯದರ್ಶಿ ಕೆ.ತಿಮ್ಮಪ್ಪ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಎಸ್.ದೀಪಾ, ಡಿಡಿಪಿಐ ವೆಂಕಟೇಶ್ ರಾಮಚಂದ್ರಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



24/7 ಸಹಾಯವಾಣಿ ಆರಂಭ

ಜಿಲ್ಲೆಯ 6 ತಾಲ್ಲೂಕುಗಳಲ್ಲಿ ಮುಂಜಾಗೃತ ಕ್ರಮವಾಗಿ ಸಾರ್ವಜನಿಕರಿಗೆ ನೀರಿನ ಸಮಸ್ಯೆ ಉಂಟಾಗದಂತೆ ಈಗಾಗಲೇ ಸಾಕಷ್ಟು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಆದಾಗ್ಯೂ ಕೂಡ ನೀರಿನ ಸಮಸ್ಯೆ ಉಲ್ಬಣಗೊಂಡಲ್ಲಿ ಸಾರ್ವಜನಿಕರ ಸಮಸ್ಯೆ ಅಥವಾ ದೂರು ದಾಖಲಿಸಿಕೊಂಡು ನಿವಾರಿಸಲು ಹಾಗೂ ಬರಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು, ಜಿಲ್ಲಾ ಪಂಚಾಯಿತಿಯಲ್ಲಿ 24/7 ಕಾರ್ಯಾಚರಣೆಯ ಕಂಟ್ರೋಲ್ ರೂಮ್ ತೆರೆಯಲಾಗಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ನೀರಿನ ಸಮಸ್ಯೆ ಉಂಟಾದಲ್ಲಿ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ9480837823ಗೆ ಕರೆ ಮಾಡಿ ದೂರು ದಾಖಲಿಸಬಹುದು ಎಂದು ತಿಳಿಸಿದರು.

ರಾಚಪ್ಪಯ್ಯ ಕಡ್ಲಪ್ಪಯ್ಯ ಜಾತ್ರಾ ಮಹೋತ್ಸವ

ಯಾದಗಿರಿ: ಸೂರ್ಯನ ಶಕೆಗೆ ಸ್ಪರ್ಧೆ ಒಡ್ಡುವಂತೆ ಚೌಕಾಕರದಲ್ಲಿ ಹರಡಿದ ಕೆಂಡದ ಮಧ್ಯದಲ್ಲಿ ಉತ್ಸವ ಮೂರ್ತಿಯನ್ನು ಹೊತ್ತ ಪಲ್ಲಕ್ಕಿ, ಮಂಗಳವಾದ್ಯಗಳು, ಪುರವಂತರು, ಕಳಸಹಿಡಿದ ಸುಮಂಗಲಿಯರು, ಅನೇಕ ಭಕ್ತರು ಕೆಂಡವನ್ನು ಹಾಯುವ ಭಕ್ತಿ ಪರಾಕಾಷ್ಠೆಯ ದೃಶ್ಯ ಗುರುಮಠಕಲ್ ತಾಲೂಕಿನ ಗಾಜರಕೋಟ ಗ್ರಾಮದ ರಾಚಪ್ಪಯ್ಯ ಕಡ್ಲಪ್ಪಯ್ಯನವರ ಜಾತ್ರೆಯಲ್ಲಿ ಕಂಡುಬಂದಿತು.

ಗಾಜರಕೋಟ ಗ್ರಾಮದಲ್ಲಿ ರಾಚಪ್ಪಯ್ಯ ಕಡ್ಲಪ್ಪಯ್ಯನವರ ಜಾತ್ರಾ ಮಹೋತ್ಸವವು ಬಹು ವಿಜೃಂಭಣೆಯಿಂದ ಜರುಗಿತು. ಬೆಳಗ್ಗೆ ರಾಚಪ್ಪಯ್ಯ ಕಡ್ಲಪ್ಪಯ್ಯನವರ ಗದ್ದುಗೆಗೆ ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆಯು ಮಂತ್ರ ಘೋಷಗಳ ಮಧ್ಯೆ ನಡೆಯಿತು.

ಮಧ್ಯಾಹ್ನ ರಾಚಪ್ಪಯ್ಯ ಕಡ್ಲಪ್ಪಯ್ಯನವರ ಉತ್ಸವ ಮೂರ್ತಿಗಳನ್ನು ಹೊತ್ತ ಹೊತ್ತ ಪಲ್ಲಕ್ಕಿಯ ಮೆರವಣಿಗೆಯು ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದಿಂದ ಚಾಲನೆ ನೀಡಲಾಯಿತು.

ಸುಮಂಗಲೆಯರ ಕುಂಭ ಕಳಸ, ಪುರವಂತರ ಕುಣಿತ ಮೆರವಣಿಗೆಗೆ ಹೆಚ್ಚಿನ ಕಳೆ ತಂದುಕೊಟ್ಟವು. ಪಲ್ಲಕ್ಕಿ ಮೆರವಣಿಗೆ ಬಸವಣ್ಣ ದೇವಸ್ಥಾನ, ಮಹಾದೇವ ದೇವಸ್ಥಾನ ಮಾರ್ಗವಾಗಿ ರಾಚಪ್ಪಯ್ಯ ಕಡ್ಲಪ್ಪಯ್ಯ ದೇವಸ್ಥಾನದ ಆವರಣದ ಅಗ್ನಿಕುಂಡ ಸ್ಥಳಕ್ಕೆ ಬಂದು ತಲುಪಿತು. ನಂತರ ಅಗ್ನಿಕುಂಡದ ಸುತ್ತ ಪಲ್ಲಕ್ಕಿಯನ್ನು ಐದು ಸುತ್ತು ಪ್ರದಕ್ಷಿಣೆ ಹಾಕಿ ಭಕ್ತಿ ಪರಾಕಾಷ್ಠೆಯಿಂದ ಅಗ್ನಿಕುಂಡವನ್ನು ಹಾಯ್ದು ದೇವಸ್ಥಾನ ಪ್ರವೇಶಿಸುವ ಮೂಲಕ ಪಲ್ಲಕ್ಕಿ ಮೆರವಣಿಗೆಯು ಸಂಪನ್ನವಾಯಿತು.

ಮೆರವಣಿಗೆಯುದ್ದಕ್ಕೂ ಪುರುವಂತರು ವೀರಭದ್ರದೇವರ ಒಡಪುಗಳನ್ನು ಹೇಳುತ್ತಾ, ಶಸ್ತ್ರಗಳನ್ನು ಹಾಕಿಕೊಳ್ಳುವ ದೃಶ್ಯ ಕಂಡುಬಂದಿತು. ಸಂಜೆ ಅಪಾರ ಭಕ್ತ ಸಮೂಹದ ಜಯಘೋಷಗಳೊಂದಿಗೆ ರಾಚಪ್ಪಯ್ಯ ಕಡ್ಲಪ್ಪಯ್ಯನವರ ಭವ್ಯ ರಥೋತ್ಸವವು ವೈಭವದಿಂದ ಜರುಗಿತು.

ರಥೋತ್ಸವದಲ್ಲಿ ಪಾಲ್ಗೊಂಡು ರಥಕ್ಕೆ ಉತ್ತತ್ತಿ, ಭಾಳೆಹಣ್ಣನ್ನು ಬೀಸಿ ನಮಸ್ಕರಿಸಿದರು. ಈ ಸಂದರ್ಭದಲ್ಲಿ ಊರಿನ ಗಣ್ಯರು, ದೇವಸ್ಥಾನದ ಅರ್ಚಕರು, ಸುತ್ತಲಿನ ಗ್ರಾಮದ ಭಕ್ತರು ಪಾಲ್ಗೊಂಡಿದ್ದರು.



ಇಂದಿನ ಸಮಾಜಕ್ಕೆ ಸಂದೇಶ ನೀಡಿದ ವಚನಗಳು



ಹೂವಿನಹಡಗಲಿ: ವಚನಗಾರ್ತಿಯರ ವಚನಗಳು ಸಾಮಾಜಿಕ ದೃಷ್ಟಿಕೋನ ಮಹಿಳಾ ಸಬಲೀಕರಣ, ಸಮಾನತೆ, ಸ್ವಾತಂತ್ರ್ಯ ಮಾನವೀಯ ಮೌಲ್ಯಗಳನ್ನು ಉತ್ತೇಜಿಸಿ ಇಂದಿನ ಸಮಾಜಕ್ಕೆ ಅವರ ಸಂದೇಶಗಳು ಬಹಳ ಪ್ರಸ್ತುತವಾಗಿವೆ. ಎಂದು ಮರಿಯಮ್ಮನಹಳ್ಳಿಯ ಉಪನ್ಯಾಸಕ ಸೊಮೇಶ ಉಪ್ಪಾರ ಹೇಳಿದರು.

ಪಟ್ಟಣದ ಗವಿಸಿದ್ದೇಶ್ವರ ಶಾಖಾಮಠದಲ್ಲಿ ಭಾನುವಾರ ಆಯೋಜಿಸಿದ್ದ 214ನೇ ಮಾಸಿಕ ಶಿವಾನುಭವ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಅವರು ಮಾತನಾಡಿದರು. ವಚನಗಾರ್ತಿಯರ ಸಾಮಾಜಿಕ ದೃಷ್ಟಿಕೋನವು ಸಮಾನತೆ, ಮಾನವೀಯತೆ, ಧರ್ಮದ ನೈಜ ಅರ್ಥಮತ್ತುಮಹಿಳೆಯರಸ್ವಾತಂತ್ರ್ಯದಮೇಲೆ ಆಧಾರಿತವಾಗಿತ್ತು. 12ನೇ ಶತಮಾನದ ಶರಣ ಚಳವಳಿಯಲ್ಲಿ ಮಹಿಳಾ ವಚನಗಾರ್ತಿಯರು ಸಮಾಜದಲ್ಲಿದ್ದ ಅನ್ಯಾಯ, ಜಾತಿ ಭೇದ, ಲಿಂಗ ಅಸಮಾನತೆ ಹಾಗೂ ಮೂಢನಂಬಿಕೆಗಳನ್ನು ತೀವ್ರವಾಗಿ ವಿರೋಧಿಸಿದರು.

ಅಕ್ಕ ಮಹಾದೇವಿ ತಮ್ಮ ವಚನಗಳಲ್ಲಿ ಮಹಿಳೆಯರಿಗೆ ಪುರುಷರಷ್ಟೇ ಹಕ್ಕುಗಳಿರಬೇಕು ಎಂದು ಒತ್ತಿ ಹೇಳಿದರು. ಅವರು ದೇಹದ ಅಲಂಕಾರಕ್ಕಿಂತ ಆತ್ಮಶುದ್ಧಿ ಮತ್ತು ಭಕ್ತಿಗೆ ಮಹತ್ವ ನೀಡಿದರು. ಮಹಿಳೆಯರು ಕೇವಲ ಮನೆಗೆ ಸೀಮಿತವಾಗಬಾರದು, ಸಮಾಜದಲ್ಲಿ ತಮ್ಮದೇ ಆದ ಗುರುತು ಹೊಂದಬೇಕು ಎಂಬ ಸಂದೇಶವನ್ನು ನೀಡಿದರು ಎಂದರು.

ಸಮಾರಂಭದ ಅಧ್ಯಕ್ಷತೆಯನ್ನ ವಹಿಸಿ ಮಾತನಾಡಿದ ಹಡಗಲಿ ಗವಿಸಿದ್ದೇಶ್ವರ ಮಠದ ಪೀಠಾಧಿಪತಿಗಳಾದ ಡಾ.ಮನಿಪ್ರ ಹಿರಿಶಾಂತವೀರ ಮಾಹಾಸ್ವಾಮಿಗಳುಮಾತನಾಡಿ ಭಕ್ತಿಯು ಮನಸ್ಸಿಗೆ ಶಾಂತಿ ನೀಡುತ್ತದೆ. ಕಷ್ಟಗಳು ಬಂದಾಗ ಭಕ್ತಿಯು ಧೈರ್ಯ ಮತ್ತು ಆಶೆಯನ್ನು ನೀಡುತ್ತದೆ. ದೇವರ ಮೇಲಿನ ನಂಬಿಕೆ ವ್ಯಕ್ತಿಗೆ ಆತ್ಮಸ್ಥೈರ್ಯವನ್ನು ಹೆಚ್ಚಿಸಿ ಜೀವನವನ್ನು ಸರಿಯಾದ ದಾರಿಯಲ್ಲಿ ಸಾಗಿಸಲು ಸಹಾಯ ಮಾಡುತ್ತದೆ.

ಆದ್ದರಿಂದ ಭಕ್ತಿಭಾವದಿಂದ, ಸತ್ಯ ಮತ್ತು ನೀತಿಯ ಮಾರ್ಗದಲ್ಲಿ ನಡೆದರೆ ಜೀವನವು ನೆಮ್ಮದಿ, ಸಂತೋಷ ಮತ್ತು ಸಮಾಧಾನದಿಂದ ಕೂಡಿರುತ್ತದೆ ಎಂದರು.

ಸಂದರ್ಭದಲ್ಲಿ ಕೃಷಿ ಇಲಾಖೆಯ ನಿವೃತ್ತ ಅಧೀಕ್ಷಕ ರಮೇಶ ತಾರಿಕೊಪ್ಪ, ಹಡಗಲಿ ಪೊಲೀಸ್ ಇಲಾಖೆಯ ಎ.ಎಸ್.ಬಿ ಸಿದ್ದಪ್ಪ, ನಿವೃತ್ತ ಶಿಕ್ಷಕರಾದ ಬಿ.ಎಂ. ವಾಮದೇವಯ್ಯ, ವಕೀಲರಾದ ಎಸ್. ಗುರುಬಸವರಾಜ ಸೇರಿದಂತೆ ಇತರರು ಇದ್ದರು. ಎಸ್. ವಿರುಪಾಕ್ಷಪ್ಪ, ಕೋಗಳಿ ಮಲ್ಲಪ್ಪ, ಎಂ. ಮಂಜುನಾಥ ಸೇರಿದಂತೆ ಶ್ರೀಮಠದ ಸೇವಾರ್ಥಿಗಳನ್ನು ಗುರುರಕ್ಷೆ ನೀಡಿ ಗೌರವಿಸಲಾಯಿತು.

ಜಿಲ್ಲಾ ನ್ಯಾಯಾಧೀಶೆ ಕೆ.ಜಿ. ಶಾಂತಿ ಅವರಿಂದ ಸ್ವಯಂ ಗಣತಿ

ಬಳ್ಳಾರಿ: ಭಾರತ ಸರ್ಕಾರದ ಮಹತ್ವದ ಯೋಜನೆಯಾದ 'ಜನಗಣತಿ' ಪ್ರಕ್ರಿಯೆಯು ಅತ್ಯಂತ ಯಶಸ್ವಿಯಾಗಿ ಆರಂಭಗೊಂಡಿದ್ದು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಕೆ.ಜಿ.ಶಾಂತಿ ಅವರು, ಬುಧವಾರ ಜಿಲ್ಲಾ ನ್ಯಾಯಾಲಯದ ತಮ್ಮ ಕಚೇರಿಯಲ್ಲಿ 'ಸ್ವಯಂ ಗಣತಿ' ಮಾಡುವ ಮೂಲಕ ಸಾರ್ವಜನಿಕರಿಗೆ ಮಾದರಿಯಾದರು.

ಈ ಬಾರಿಯ ಜನಗಣತಿಯಲ್ಲಿ ಡಿಜಿಟಲ್ ಪದ್ಧತಿಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ನ್ಯಾಯಾಧೀಶರು ಜನಗಣತಿ ಇಲಾಖೆಯ ಅಧಿಕೃತ ಪೋರ್ಟಲ್ ಮೂಲಕ ತಮ್ಮ ವಿವರಗಳನ್ನು ತಾವೇ ಆನ್‌ಲೈನ್‌ನಲ್ಲಿ ದಾಖಲಿಸಿದರು.



ದೇಶದ ಅಭಿವೃದ್ಧಿ ಮತ್ತು ಭವಿಷ್ಯದ ಯೋಜನೆಗಳ ರೂಪಿಸುವಲ್ಲಿ ಜನಗಣತಿಯು ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬ ನಾಗರಿಕರು ಯಾವುದೇ ತಪ್ಪು ಮಾಹಿತಿಯನ್ನು ನೀಡದೆ, ನಿಖರವಾದ ವಿವರಗಳನ್ನು ಒದಗಿಸುವುದು ಕರ್ತವ್ಯವಾಗಿದೆ ಎಂದು ಹೇಳಿದರು.

ಡಿಜಿಟಲ್ ಗಣತಿಯಿಂದ ಸಮಯ ಉಳಿತಾಯವಾಗುವುದಲ್ಲದೆ, ದತ್ತಾಂಶದ ನಿಖರತೆ ಹೆಚ್ಚುತ್ತದೆ. ಸಾರ್ವಜನಿಕರು ಆನ್‌ಲೈನ್ ಮೂಲಕ 'ಸ್ವಯಂ ಗಣತಿ' ಮಾಡಿಕೊಳ್ಳಲು ಮುಕ್ತ ಅವಕಾಶವಿದೆ. ಗಣತಿ ಕಾರ್ಯಕ್ಕೆ ಸಾರ್ವಜನಿಕರು ಪೂರ್ಣ ಸಹಕಾರ ನೀಡಬೇಕು ಎಂದು ಅವರು ತಿಳಿಸಿದರು. ಇದೇ ವೇಳೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಸಹ ಸ್ವಯಂ ಗಣತಿ' ಪ್ರಕ್ರಿಯೆಯಲ್ಲಿ ಭಾಗವಹಿಸಿ ಮಾಹಿತಿ ನೋಂದಾಯಿಸಿದರು.

ಮುದ್ದಿ ಬಸವೇಶ್ವರ ಸ್ವಾಮಿ ಅಗ್ನಿಕುಂಡ ಹಾರಿದ ಭಕ್ತ ಸಮೂಹ

ಹಗರಿಬೊಮ್ಮನಹಳ್ಳಿ: ತಾಲೂಕಿನ ಮಾಲವಿ ಗ್ರಾಮದ ಶ್ರೀ ಮುದ್ದಿ ಬಸವೇಶ್ವರ ಸ್ವಾಮಿ ರಥೋತ್ಸವ ಅಂಗವಾಗಿ ಪ್ರತಿ ವರ್ಷದಂತೆ ಅಗ್ನಿಕುಂಡದ ಬೆಂಕಿಯ ಕೆಂಡದಲ್ಲಿ ನಡೆದುಕೊಂಡು ಹೋಗುವ ಮೂಲಕ ಭಕ್ತರು ಭಕ್ತಿ ಸಮರ್ಪಿಸಿದರು.

ಬಳಿಕ ಶ್ರೀ ಮುದ್ದಿ ಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಅಭಿಷೇಕ, ಮಹಾ ಮಂಗಳಾರತಿ, ಜಯಘೋಷ, ಘಂಟಾನಾದ ವಿಶೇಷ ಪೂಜಾ ಕೈಂಕರ್ಯಗಳು ವಿಜೃಂಭಣೆಯಿಂದ ಜರುಗಿದವು.

ಭಕ್ತರು ಹೂವು ಹಣ್ಣು ಕಾಯಿಯೊಂದಿಗೆ ಭಕ್ತಿ ಸಮರ್ಪಿಸಿದರು.ಇದಕ್ಕೂ ಮುನ್ನ ಶ್ರೀ ಮುದ್ದಿ ಬಸವೇಶ್ವರ ಸ್ವಾಮಿ ಹುಚ್ಚಯ್ಯ ಉತ್ಸವ ಸಮಾಳ ನಂದಿಕೋಲು ವಿವಿಧ ವಾದ್ಯ ಮೇಳದೊಂದಿಗೆ ಗ್ರಾಮದ ಪ್ರಮುಖ ಬೀದಿಯಲ್ಲಿ ಅದ್ದೂರಿಯಾಗಿ ನೆಡೆಯಿತು ಶ್ರೀ ವೀರಭದ್ರಸ್ವಾಮಿ ಪುರಂತರ ಕುಣಿತ



ನೆರೆದಿದ್ದ ಭಕ್ತರ ಗಮನ ಸೆಳೆಯಿತು.

ದೇವಸ್ಥಾನ ನಿರ್ಮಾಣ ಸಮಿತಿಯ ಅಧ್ಯಕ್ಷ ನೆರೆಗಲ್ಲು ಕೊಟ್ರೇಶ್, ಚಿನಿವಾಲರ ಕೊಟ್ರೇಶ್ ,ಕೆ.ಎಂ ಅಜ್ಜೇಶ್ವರಯ್ಯ,ಹಿರಿಯರಾದ ಎಸ್ ಎಂ ಕೊಟ್ರಯ್ಯ ಸ್ವಾಮಿ, ಕೆ.ಎಂ ಶಿವಾನಂದಯ್ಯ, ನೆರೆಗಲ್ಲು ತಾರನಾಥ ಅಡೂರು ಪಂಪಣ್ಣ,ಕಮ್ಮರ ಗಣೇಶಣ್ಣ ಬೀರಪ್ಪ ಸಿ,ಮಾಲವಿ ಗ್ರಾಮದ ದೈವಸ್ಥರಾದ ಗೌಡ್ರು ಕೊಟ್ರಯ್ಯ ಸ್ವಾಮಿ, ಚಿಮನಹಳ್ಳಿ ನಾಗಪ್ಪ, ಚಿಂತ್ರಪಳ್ಳಿ ದುರುಗಪ್ಪ, ಸಾರಾಯಿ ಶ್ರೀನಿವಾಸ, ನೆರಗಲ್ ವೀರಣ್ಣ, ಕಾತ್ರಿಕೆ ಶಂಕ್ರಪ್ಪ, ಕಟುಗುಳಿ ರಂಗಪ್ಪ, ಬಣಕಾರ ದೇವಪ್ಪ, ಕೆ.ಎಮ್. ಗುರುಪಾದಗೌಡ, ಬಣವಿಕಲ್ಲು ಮಲ್ಲಿಕಾರ್ಜುನ, ಪಿಚ್ಚಿ ಕೊಟ್ರೇಶಣ್ಣ, ಕಮ್ಮಾರ್ ಆಲಗಜ್ಜ, ಹಾಲು ಉತ್ಪಾದಕರ ಸಂಘದ ಉಪಾಧ್ಯಕ್ಷ ಬಣವಿಕಲ್ ಪತ್ರೆಪ್ಪ, ಅರ್ಚಕರಾದ ಅರ್ಕಸಾಲಿ ರಮೇಶ್, ಪೂಜಾರ್ ಆನಂದ್ ಸೇರಿದಂತೆ ಮಾಲವಿ ಗ್ರಾಮದ ಗುರುಹಿರಿಯರು ದೈವಸ್ಥರು ಸುತ್ತಮುತ್ತಲಿನ ನಾಗರಿಕರು ಮಹಿಳೆಯರು ಮಕ್ಕಳು ಯುವಕರು ಪಾಲ್ಗೊಂಡಿದ್ದರು.

ಸಮಾಜ ಸೇವೆ ಮನೋಭಾವದೊಂದಿಗೆ ಕೆಲಸ ಮಾಡಿ: ರಾಜುಗೌಡ

ಹುಣಸಗಿ: ಪ್ರಶಿಕ್ಷಣ ವರ್ಗಗಳು ಕಾರ್ಯಕರ್ತರ ಸಾಮರ್ಥ್ಯವನ್ನು ಹೆಚ್ಚಿಸುವುದರ ಜೊತೆಗೆ ಪಕ್ಷದ ಮೂಲಭೂತ ಸಿದ್ಧಾಂತಗಳನ್ನು ಜನತೆಗೆ ತಲುಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಪ್ರತಿಯೊಬ್ಬ ಕಾರ್ಯಕರ್ತನು ಸಮಾಜ ಸೇವೆಯ ಮನೋಭಾವದೊಂದಿಗೆ ಕೆಲಸ ಮಾಡಬೇಕು ಎಂದು ಮಾಜಿ ಸಚಿವ ರಾಜ್ಯ ಬಿಜೆಪಿ ಉಪಾಧ್ಯಕ್ಷ ನರಸಿಂಹ ನಾಯಕ್ ರಾಜುಗೌಡ ಹೇಳಿದರು.

ಪಟ್ಟಣದ ನೀಲಕಂಠೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಭಾರತೀಯ ಜನತಾ ಪಾರ್ಟಿ ಸುರಪುರ ವಿಧಾನಸಭಾ ಕ್ಷೇತ್ರ ಹಾಗೂ ಹುಣಸಗಿ ಮಂಡಲ ವತಿಯಿಂದ ಹಮ್ಮಿಕೊಂಡಿದ್ದ ಪಂಡಿತ ದೀನದಯಾಳ್ ಉಪಾಧ್ಯಾಯರ ಪ್ರಶಿಕ್ಷಣ ಅಭಿಯಾನ 2026 ಮಂಡಲ ಪ್ರಶಿಕ್ಷಣ ವರ್ಗ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪಕ್ಷದ ಕಾರ್ಯಕರ್ತರು, ಮುಖಂಡರು ತಮ್ಮ ಭೂತ್‌ಗಳಲ್ಲಿ ಬಿಜೆಪಿ ಪಕ್ಷದ



ತತ್ವ ಸಿದ್ಧಾಂತಗಳು ಹಾಗೂ ನರೇಂದ್ರ ಮೋದಿಜಿ ಅವರ ಅಭಿವೃದ್ಧಿ ಹಾಗೂ ರಾಜ್ಯದಲ್ಲಿನ ಬಿಜೆಪಿ ಪಕ್ಷದ ಅಧಿಕಾರದ ಅವಧಿಯ ಜನಪರ ಅಭಿವೃದ್ಧಿ ಕಾರ್ಯಗಳನ್ನು ಜನರಿಗೆ ತಿಳಿಸಿ, ಪಕ್ಷದ ಸಂಘಟನೆಗೆ ಬದ್ಧರಾಗಬೇಕು ಎಂದು ಹೇಳಿದರು.

ಪಕ್ಷದ ಮುಖಂಡರಾದ ಬಸವರಾಜಪ್ಪ ವಿಭೂತಿಹಳ್ಳಿ, ಮೇಲಪ್ಪ ಗುಳಗಿ ಕಾರ್ಯಕ್ರಮದ ಕುರಿತು ಮಾತನಾಡಿದರು.

ನಂತರ ಏಳು ಅವಧಿಯ ಕಾರ್ಯಗಾರ ನಡೆಸಲಾಯಿತು.

ಕಾರ್ಯ ವಿಸ್ತರಣೆ ಮತ್ತು ನಮ್ಮ ದೃಷ್ಟಿಕೋನ ಕುರಿತು ಮೌನೇಶ್ ಶಹಾಪುರ, ಇತಿಹಾಸ ಮತ್ತು ವಿಕಾಸ ಕುರಿತು ವೇಣುಗೋಪಾಲ್ ಜೇವರ್ಗಿ, ಸೈದ್ಧಾಂತಿಕ ಅಡಿಪಾಯ ಲಕ್ಷ್ಮಿಕಾಂತ್ ಬಿರಾದಾರ್, ನಮ್ಮ ಕಾರ್ಯ ಪದ್ಧತಿ ಕುರಿತು ಎಚ್ ಸಿ ಪಾಟೀಲ್, ನಮ್ಮ ಸರ್ಕಾರದ ಸಾಧನೆಗಳು ಕುರಿತು ಶ್ರೀನಿವಾಸ್ ಮಡ್ಡಿ, ಬೂತ್ ನಿರ್ವಹಣೆ ಕುರಿತು ನಿಂಗಾನಾಯ್ಕ ರಾಠೋಡ, ಸಾಮಾಜಿಕ ಜಾಲತಾಣ ಕುರಿತು ಆನಂದ್ ಬಾರಿಗಿಡದ ಮಾಹಿತಿಯನ್ನು ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ, ಪ್ರಧಾನ ಕಾರ್ಯದರ್ಶಿ ಶಿವರಾಜ್ ದೇಶಮುಖ್, ಬಸವರಾಜ್ ಸ್ವಾಮಿ ಸ್ಥಾವರಮಠ, ಸಂಗಣ್ಣ ವೈಲಿ, ವೀರೇಶ್ ಚಿಂಚೋಳಿ, ಮೇಲಪ್ಪ ಗುಳಗಿ, ಹೆಚ್ ಸಿ ಪಾಟೀಲ್, ವೆಂಕಟೇಶ್ ಸಾಹುಕಾರ್, ಸಿದ್ದನಗೌಡ ಕರಿಭಾವಿ, ಹಣಮರೆಡ್ಡಿ ಕುಪ್ಪಿ, ನಂದಪ್ಪ ಪೀರಾಪುರ, ಬಸವರಾಜ ಮೇಲಿನಮನಿ, ಮಹೇಶ ಸ್ಥಾವರಮಠ, ರುದ್ರೇಶ ದೇಸಾಯಿ, ಕೃಷ್ಣಾರೆಡ್ಡಿ ಮುದನೂರ, ಮಹೇಶ ಸ್ಥಾವರಮಠ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಮಾಜಿ ಸದಸ್ಯರು, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳು, ಮತಗಟ್ಟೆಯ ಅಧ್ಯಕ್ಷರುಗಳು ಹಾಗೂ ಮತಗಟ್ಟೆಯ ಬಿಎಲ್ಎ2ಗಳು, ಪಕ್ಷದ ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾ ಮೋರ್ಚ ಪದಾಧಿಕಾರಿಗಳು, ಮಂಡಲ್ ಪದಾಧಿಕಾರಿಗಳು ಮತ್ತು ಮಂಡಲ ಮೋರ್ಚ ಪದಾಧಿಕಾರಿಗಳು, ಪಕ್ಷದ ಮುಖಂಡರುಗಳು ಉಪಸ್ಥಿತರಿದ್ದರು. ಉಪೇಂದ್ರ ದೇಶಪಾಂಡೆ ವಂದೇ ಮಾತರಂ ಗೀತೆಯನ್ನು ಪ್ರಸ್ತುತಪಡಿಸಿದರು. ಆನಂದ ಬಾರಿಗಿಡದ ಸ್ವಾಗತಿಸಿ, ನಿರೂಪಿಸಿದರು.

ಬಳ್ಳಾರಿ ಜಿಲ್ಲೆ ರಾಜ್ಯಕ್ಕೆ 27 ಸ್ಥಾನ

ಬಳ್ಳಾರಿ: ಪಿಯು ಕಾಲೇಜು ವಿದ್ಯಾರ್ಥಿಗಳ ಫಲಿತಾಂಶ ಗುರುವಾರ ಪ್ರಕಟಗೊಂಡಿದ್ದು, ಅಖಂಡ ಬಳ್ಳಾರಿ ಜಿಲ್ಲೆಗೆ ಶೇ.78.92 ರಷ್ಟು ಫಲಿತಾಂಶ ಬಂದಿದ್ದು, ರಾಜ್ಯಕ್ಕೆ 27ನೇ ಸ್ಥಾನ ಪಡೆದಿದೆ.

ಬಳ್ಳಾರಿ ಹಾಗೂ ವಿಜಯನಗರ ಉಭಯ ಜಿಲ್ಲೆಯಲ್ಲಿ 25,664 ಮಕ್ಕಳು ನೋಂದಾಯಿಸಿದ್ದರು. ಅದರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ 5580 ಬಾಲಕರು ಹಾಗೂ 7706 ಬಾಲಕಿಯರು ಸೇರಿ ಒಟ್ಟು 13,286 ಮಕ್ಕಳು ಹಾಗೂ ವಿಜಯನಗರ ಜಿಲ್ಲೆಯಲ್ಲಿ 5143 ಬಾಲಕರು ಹಾಗೂ 7235 ಬಾಲಕಿಯರು ಸೇರಿ ಒಟ್ಟು 12,378 ಮಕ್ಕಳು ಪರೀಕ್ಷೆಗೆಹಾಜರಾಗಿದ್ದರು. ಅದರಲ್ಲಿ ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆ ಸೇರಿ ಒಟ್ಟು 19,975 ಮಕ್ಕಳು ಉತ್ತೀರ್ಣರಾಗಿದ್ದಾರೆ. ಕಲಾವಿಭಾಗದಲ್ಲಿ 5638 ಮಕ್ಕಳು ಉತ್ತೀರ್ಣರಾಗಿದ್ದು, ಶೇ.66.35 ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದಲ್ಲಿ 8945 ಮಕ್ಕಳು ಉತ್ತೀರ್ಣರಾಗಿದ್ದು, ಶೇ.87.61 ರಷ್ಟು ಫಲಿತಾಂಶ ಬಂದಿದೆ. ಕಾಮರ್ಸ್ 5392 ಮಕ್ಕಳು ಉತ್ತೀರ್ಣರಾಗಿದ್ದು, ಶೇ.81.68 ರಷ್ಟು ಫಲಿತಾಂಶ ಬಂದಿದೆ.

ದ್ವಿತೀಯ ಪಿಯುಸಿ ಫಲಿತಾಂಶ: ಉತ್ತಮ ಸಾಧನೆ



ಹಗರಿಬೊಮ್ಮನಹಳ್ಳಿ: ಪಟ್ಟಣದ ಶ್ರೀ ವಿದ್ಯಾನಿಕೇತನ ಪದವಿ ಪೂರ್ವ ಸೈನ್ಸ್ ಕಾಲೇಜ್ ವಿದ್ಯಾರ್ಥಿಗಳು 2025–26 ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಶೇ 98.28% ರಷ್ಟು ಗಣನೀಯ ಸಾಧನೆ ಮಾಡಿದ್ದಾರೆ.

ವಿಜಯನಗರ ಜಿಲ್ಲೆಯಲ್ಲಿಯೇ ನಮ್ಮ ಹಗರಿಬೊಮ್ಮನಹಳ್ಳಿಯ ಶ್ರೀ ವಿದ್ಯಾನಿಕೇತನ ಪಿಯು ಸೈನ್ಸ್ ಕಾಲೇಜ್ ಪ್ರಥಮ ಸ್ಥಾನ ಪಡೆದಿದೆ.

ಶ್ರೀ ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜು ಒಟ್ಟು 582 ವಿದ್ಯಾರ್ಥಿಗಳ ಪೈಕಿ 283 ಡಿಸ್ಟಿಂಗ್ ಬಂದಿದ್ದಾರೆ.266 ವಿದ್ಯಾರ್ಥಿಗಳು ಫಸ್ಟ್ ಕ್ಲಾಸ್ ನಲ್ಲಿ ಪಾಸ್ ಆಗಿದ್ದಾರೆ.ಒಟ್ಟಾರೆಯಾಗಿ 98.28 ರಷ್ಟು ಪರಿತಾಂಶ ಬಂದಿದೆ.

ತಲಾ 600 ಅಂಕಗಳಿಗೆ ಬೇವಿನ ಮರದ ಭಾರ್ಗವಿ 592,ರೂಪಶ್ರೀ ಎಸ್ 591,ಹರ್ಶಲಾ ಪ್ರೀತಿ ಆರ್ ಹೆಚ್ 588,ಭರತ್ ಕಣವಿ 586, ಜಿ. ಹೆಚ್ ಗಣೇಶ್ 584,ಸಿ.ಮಂಜುನಾಥ 582,ಜಿ. ಎಸ್ ಜೀವನ್ 582,ಸಾತ್ವಿಕ್ ಆರ್ ಎನ್ 581, ಉಜೋಲಾ ಪಲ್ಲವಿ 581,ಅಂಜುಮ .ಬಿ 580 ಈ ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕ ಪಡೆಯುವ ಮೂಲಕ ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನ ಪಡೆದ ಹೆಗ್ಗಳಿಕೆಗೆ ನಮ್ಮ ಕಾಲೇಜ್ ಪಾತ್ರವಾಗಿದೆ. ಗಣನೀಯ ಸಾಧನೆ ಮಾಡಿದ ಎಲ್ಲಾ ವಿದ್ಯಾರ್ಥಿಗಳನ್ನು ಅಭಿನಂದಿಸುತ್ತೇವೆ ಮಕ್ಕಳ ಮುಂದಿನ ಜೀವನ ಉಜ್ವಲವಾಗಿ ಬೆಳೆಯಲಿ ಎಂದು ವಿದ್ಯಾನಿಕೇತನ ಕಾಲೇಜ್ ಮುಖ್ಯಸ್ಥರಾದ ಶರತ್ ಚಂದ್ರ ಪತ್ರಿಕೆಯೊಂದಿಗೆ ಸಂತಸ ಹಂಚಿಕೊಂಡರು. ಕಾಲೇಜಿನ ಶಿವಕುಮಾರ್ ಬೋಧಕ ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.